ಮಂಗಳವಾರ, ಏಪ್ರಿಲ್ 19, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ

ಬಾಲಿವುಡ್ ನಟ ಅಜಯ್ ದೇವಗನ್ ಹಾಗೂ ನಟಿ ರಕುಲ್ ಪ್ರೀತ್ ಅವರು ಮುಂಬೈಯಲ್ಲಿ ಸೋಮವಾರ ತಮ್ಮ ಹೊಸ ಸಿನಿಮಾ 'ರನ್‌ವೇ 34'ರ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿದರು

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

*Accessories and features shown in the pictures may not be part of the standard equipment and may vary according to the variant. Images are for illustration purpose only. Colours shown may vary from actual body colours due to printing on paper. Terms and conditions apply. The black glass on the vehicle is due to lighting effect. Creative visualization.

ಮಂಗಳವಾರ, ಏಪ್ರಿಲ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 108 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಮನುಷ್ಯಪ್ರಾಣಿಯನ್ನು ಮನುಷ್ಯನನ್ನಾಗಿಸುವುದೇ ಶಿಷ್ಟಾಚಾರ. ಇದು ಇಡೀ ನಮ್ಮ ವ್ಯಕ್ತಿತ್ವಕ್ಕೇ ಸೌರಭವನ್ನು ಒದಗಿಸುತ್ತದೆ.



ಆಳ-ಅಗಲ ಹಣದುಬ್ಬರ ಹೊಣೆಗಾರಿಕೆ ನುಣುಚಿಕೊಂಡ ಆರ್‌ಬಿಐ

ಚುನಾವಣಾ ಅಖಾಡಕ್ಕೆ 50 ಸನ್ಯಾಸಿಗಳು 4

ಸಕ್ಕರೆ ರಫ್ತು 90 ಲಕ್ಷ ಟನ್‌ಗೆ ತಲುಪುವ ನಿರೀಕ್ಷೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,166	17,173	₹55,460 (ಬೆಂಗಳೂರು)	₹72,800 (ಬೆಂಗಳೂರು)	76.29

ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ: ಜ್ಞಾನಜ್ಯೋತಿ ಶಾಲೆಗೆ ಬಂಧಿತರ ಕರೆತಂದು ಪರಿಶೀಲನೆ

ತನಿಖೆ ಚುರುಕು, ದಿವ್ಯಾ ಪತಿ ಸೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕುರಿತಂತೆ ಇಲ್ಲಿನ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮೇಲೆ ಸೋಮವಾರ ಮತ್ತೆ ದಾಳಿ ಮಾಡಿದ ಸಿಐಡಿ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಶಾಲೆಯ ಮುಖ್ಯಸ್ಥೆ ಹಾಗೂ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರ ಪತಿ ರಾಜೇಶ ಅವರನ್ನು ಅಧಿಕಾರಿಗಳು ಭಾನುವಾರ ತಡರಾತ್ರಿ ಬಂಧಿಸಿದ್ದು, ಅವರ ವಾಹನ ವಶಪಡಿಸಿಕೊಂಡಿದ್ದಾರೆ.

ಇವರೊಂದಿಗೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಎಂಟಕ್ಕೆ ಏರಿದೆ.

ಈಗಾಗಲೇ ಬಂಧಿತರಾಗಿರುವ ಮೂವರು ಅಭ್ಯರ್ಥಿಗಳು ಹಾಗೂ ಪರೀಕ್ಷೆ ಮೇಲ್ವಿಚಾರಕಿಯರಾಗಿ ಕಾರ್ಯ-ನಿರ್ವಹಿಸಿದ್ದ ಮೂವರು ಶಿಕ್ಷಕಿಯ-ರನ್ನು ಸ್ಥಳಕ್ಕೆ ಕರೆತಂದು, ವಿಚಾರಣೆ ನಡೆಸಿದರು. ದಿವ್ಯಾ ಅವರ ಮನೆ ಮೇಲೆ ಭಾನುವಾರ ದಾಳಿ ನಡೆದಿತ್ತು.

‘ರಾಜೇಶ ಅವರು ತನಿಖೆ ವೇಳೆ ಸರಿಯಾಗಿ ಉತ್ತರ ನೀಡಲಿಲ್ಲ. ಆರೋಪಿಯನ್ನು ತಮ್ಮ ಕಾರಿನಲ್ಲಿ ಬೇರೆ ಸ್ಥಳಕ್ಕೆ ಕಳುಹಿಸಿ ತಲೆಮರೆಸಿಕೊಳ್ಳಲು ನೆರವಾಗಿದ್ದಾರೆ. ಈ ಆರೋಪದಡಿ ಬಂಧಿಸಲಾಗಿದೆ. ಈಗ ಅವರಿಂದ ಮತ್ತಷ್ಟು ಉಪಯುಕ್ತ ಮಾಹಿತಿ ಸಿಕ್ಕಿವೆ. ಇದರಲ್ಲಿ ಶಾಮೀಲಾಗಿರುವವರು ತಪ್ಪಿಸಿ-ಕೊಳ್ಳಲು ಸಾಧ್ಯವಿಲ್ಲ’ ಎಂದು ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿತರಾದ ಅಭ್ಯರ್ಥಿಗಳನ್ನು ಮತ್ತು ಪರೀಕ್ಷಾ ಕೇಂದ್ರದ ಮೇಲ್ವಿಚಾರಕಿಯರನ್ನು ಸೋಮವಾರ ಸಿಐಡಿ ಪೊಲೀಸರು ಕಲಬುರಗಿಯ ಜ್ಞಾನಜ್ಯೋತಿ ಶಾಲೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದರು —ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

> **‘ಪ್ರಾಮಾಣಿಕವಾಗಿ ಪರೀಕ್ಷೆ ಬರೆದವರಿಗೆ ಅನ್ಯಾಯವಾಗಿದೆ. ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಿಜೆಪಿ ನಾಯಕರೇ ಶಾಮೀಲಾಗಿದ್ದಾರೆ. ಭ್ರಷ್ಟ ಸರ್ಕಾರ ರಾಜ್ಯವನ್ನು ಭ್ರಷ್ಟಾಚಾರದ ರಾಜಧಾನಿ ಮಾಡುತ್ತಿದೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ನಾಪತ್ತೆ: ಬಂಧಿತ ಮೂವರು ಅಭ್ಯ-ರ್ಥಿಗಳಲ್ಲಿ ಒಬ್ಬರು ಈ ಶಾಲೆಯ ಕೆಳಮಹಡಿ, ಇಬ್ಬರು ಎರಡನೇ ಮಹಡಿಯಲ್ಲಿ ಪರೀಕ್ಷೆಗೆ ಹಾಜರಾಗಿದ್ದರು. ಈ ಮೂರೂ ಕೋಣೆಗಳು, ದಿವ್ಯಾ ಹಾಗರಗಿ ಅವರ ಕಚೇರಿ, ಮುಖ್ಯಶಿಕ್ಷಕರ ಕೋಣೆಯನ್ನು ಪರಿಶೀಲಿಸಿದರು. ಸಿಸಿಟಿವಿ ಕ್ಯಾಮೆರಾಗಳು ಸರಿಯಾದ ಡೈರೆಕ್ಷನ್‌ನಲ್ಲಿ ಇವೆಯೇ ಎಂದು ಪರಿಶೀಲಿಸಿ ಫೋಟೊ ಸಮೇತ ದಾಖಲಿಸಿಕೊಂಡರು.

ದಿವ್ಯಾ ಹಾಗರಗಿ, ಮುಖ್ಯ ಶಿಕ್ಷಕ ಹಾಗೂ ಇನ್ನಿಬ್ಬರು ಮೇಲ್ವಿಚಾರಕರು ಪ್ರಕರಣ ಬಯಲಿಗೆ ಬಂದಾಗಿನಿಂದಲೂ ತಲೆಮರೆಸಿಕೊಂಡಿದ್ದಾರೆ. ಸಿಸಿಟಿವಿ ಕ್ಯಾಮೆರಾದ ದಾಖಲೆಗಳನ್ನು ಅಳಿಸಲಾಗಿದೆ. ಹೀಗಾಗಿ, ಕೆಲ ಉಪಕರ-ಣಗಳನ್ನು ಮಾತ್ರ ವಶಕ್ಕೆ ಪಡೆಯಲಾಗಿದೆ.

ಅಭ್ಯರ್ಥಿಗಳಾದ ಕಲಬುರಗಿಯ ವೀರೇಶ ನಿಡಗುಂದ, ಅರುಣ ಪಾಟೀಲ, ರಾಯಚೂರಿನ ಕೆ.ಪ್ರವೀಣಕುಮಾರ, ಚೇತನ ನಂದಗಾಂವ, ಪರೀಕ್ಷಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದ ಶಿಕ್ಷಕಿಯರಾದ ಸುಮಾ, ಸಿದ್ದಮ್ಮ ಹಾಗೂ ಸಾವಿತ್ರಿ ಅವರನ್ನು ಇದೇ 20ರ ವರೆಗೆ ಸಿಐಡಿ ಪೊಲೀಸರ ವಶಕ್ಕೆ ನೀಡಲಾಗಿದೆ.

ಸಿಐಡಿ ಹೆಚ್ಚುವರಿ ಎಸ್‌ಪಿ ರಾಘವೇಂದ್ರ ಹೆಗಡೆ, ಡಿವೈಎಸ್‌ಪಿ-ಗಳಾದ ಶಂಕರಗೌಡ ಪಾಟೀಲ, ಪ್ರಕಾಶ ರಾಠೋಡ ನೇತೃತ್ವದ ತಂಡ ತನಿಖೆಯನ್ನು ಚುರುಕುಗೊಳಿಸಿದೆ.

ನ್ಯಾಯಾಂಗ ಬಂಧನಕ್ಕೆ: ಬಂಧಿತ ರಾಜೇಶ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಕೋರ್ಟ್ ಆದೇಶಿಸಿದೆ.

ಅಂತರ ಕಾಯ್ದುಕೊಂಡ ಬಿಜೆಪಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧನದ ಭೀತಿ ಎದುರಿ-ಸುತ್ತಿರುವ, ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರಿಂದ ಬಿಜೆಪಿಯು ಅಂತರ ಕಾಯ್ದುಕೊಂಡಿದೆ.

ಈ ಕುರಿತು ಪತ್ರಿಕಾ ಹೇಳಿಕೆಯಲ್ಲಿ ಪಕ್ಷದ ರಾಜ್ಯ ವಕ್ತಾರ, ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ, ‘ದಿವ್ಯಾ ಹಾಗರಗಿ ಅವರಿಗೂ ಬಿಜೆಪಿಗೂ ಸಂಬಂಧವಿಲ್ಲ. ಅವರು ಪಕ್ಷದ ನಾಯಕಿಯಲ್ಲ’ ಎಂದು ತಿಳಿಸಿದ್ದಾರೆ.

‘ದಿವ್ಯಾ ಹಾಗರಗಿ ಅಥವಾ ಯಾರೇ ಅಕ್ರಮದಲ್ಲಿ ಭಾಗವಹಿಸಿದ್ದರೆ ಅದನ್ನು ಪಕ್ಷ ಮತ್ತು ಸರ್ಕಾರ ಸಹಿಸಿಕೊಳ್ಳುವುದಿಲ್ಲ. ಅಕ್ರಮ ನಡೆದಿರುವುದು ಸಾಬೀತಾದರೆ ಶಿಕ್ಷೆ ಆಗಲಿದೆ’ ಎಂದಿದ್ದಾರೆ.

10ನೇ ಪುಟ ನೋಡಿ

ಸಿಐಡಿಗೆ ಮುಕ್ತ ಅವಕಾಶ: ಸಿ.ಎಂ

ಬೆಂಗಳೂರು: ‘ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಕುರಿತು ಗೃಹ ಸಚಿವರ ಗಮನಕ್ಕೆ ಬಂದ ತಕ್ಷಣ ನಿಷ್ಪಕ್ಷಪಾತ ತನಿಖೆಗಾಗಿ ಸಿಐಡಿಗೆ ವಹಿಸಲಾಗಿದೆ. ತನಿಖೆಗೆ ನಾವು ಮುಕ್ತ ಅವಕಾಶ ನೀಡಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

10ನೇ ಪುಟ ನೋಡಿ

ಹೊಸ ಯೋಜನೆಯಡಿ 2 ಲಕ್ಷ ಮನೆ ನಿರ್ಮಾಣ

ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ: ಜೆ.ಸಿ. ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಮನೆಗಳಿಗಾಗಿ ಅರ್ಜಿ ಸಲ್ಲಿಸಿ ಮನೆಗಳನ್ನು ಪಡೆಯಲು ಸಾಧ್ಯವಾಗದ ಸುಮಾರು 2 ಲಕ್ಷ ಫಲಾನುಭವಿಗಳಿಗೆ ಹೊಸ ಯೋಜನೆಯಡಿ ಮನೆ ಕಟ್ಟಿಸಿಕೊಡಲು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಂಪುಟ ಸಭೆಯ ಬಳಿಕ ಸುದ್ದಿ-ಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ‘₹5 ಸಾವಿರ ಮೊತ್ತದಲ್ಲಿ ಒಂದು ಮನೆ ಕಟ್ಟಿಕೊಡುವ ವಸತಿ ಯೋಜನೆ ಇದ್ದಾಗಿನ ಕಾಲದಿಂದಲೂ ವಿವಿಧ ಕಾರಣಗಳಿಂದಾಗಿ ಫಲಾನುಭವಿಗಳು ಮನೆಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಅತ್ಯಂತ ಕಡಿಮೆ ಮೊತ್ತದ ವಸತಿ ಯೋಜನೆಗಳಡಿ ಮನೆ ಕಟ್ಟಿಸುವು-ದಕ್ಕೂ ಸಾಧ್ಯವಿರಲಿಲ್ಲ. ಹೀಗಾಗಿ ಫಲಾನುಭವಿಗಳು ಮನೆಗಳನ್ನು ಕಟ್ಟಿಸಿ-ಕೊಂಡಿರಲಿಲ್ಲ. ಕೆಲವು ಯೋಜನೆಗಳಡಿ ಮನೆಗಳು ಅಪೂರ್ಣವಾಗಿವೆ, ಇನ್ನು ಕೆಲವು ಯೋಜನೆಗಳಲ್ಲಿ ಮನೆಗಳ ನಿರ್ಮಾಣವೇ ಆರಂಭವಾಗಿಲ್ಲ. ಆದ್ದರಿಂದ ಇವೆಲ್ಲವನ್ನೂ ರದ್ದು ಮಾಡಿ ಹೊಸದಾಗಿ ಅರ್ಜಿ ಕರೆಯಲಾಗುವುದು. ಈ ರೀತಿ ಸುಮಾರು 2 ಲಕ್ಷ ಫಲಾನುಭವಿಗಳಿಗೆ ಮನೆ ಕಟ್ಟಿಸಿ ಕೊಡಲಾಗುವುದು’ ಎಂದರು.

ಠೇವಣಿದಾರರ ಹಿತಾಸಕ್ತಿ ಕಾಯ್ದೆ: ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಠೇವಣಿದಾರರ ಎಲ್ಲ ಪ್ರಕರಣಗಳನ್ನು ಒಂದುಗೂಡಿಸಿ ವಿಚಾರಣೆ ನಡೆಸಲು ಅನುಕೂಲವಾ-ಗುವಂತೆ ಠೇವಣಿದಾರರ ಹಿತಾಸಕ್ತಿ ಕಾಯ್ದೆಗೆ ತಿದ್ದುಪಡಿ ತರಲು ಒಪ್ಪಿಗೆ ನೀಡಲಾಯಿತು ಎಂದು ಅವರು ತಿಳಿಸಿದರು.

ಕೆಲವು ಪ್ರಕರಣಗಳಲ್ಲಿ 5 ರಿಂದ 10 ದೂರುಗಳು ದಾಖಲಾ-ಗಿರುತ್ತವೆ. ಇವೆಲ್ಲದರ ವಿಚಾರಣೆ ಪ್ರತ್ಯೇಕವಾಗಿ ನಡೆಸುವುದಕ್ಕಿಂತ ಒಂದೇ ಪ್ರಕರಣವಾಗಿ ವಿಚಾರಣೆ ನಡೆಸಲು ಕಾಯ್ದೆಗೆ ತಿದ್ದುಪಡಿಯ ಅಗತ್ಯವಿತ್ತು ಎಂದು ಅವರು ಹೇಳಿದರು.

ಇಂದಿರಾ ಕ್ಯಾಂಟೀನ್ ಸ್ಥಳಾಂತರಕ್ಕೆ ಸಮೀಕ್ಷೆ

ಇಂದಿರಾ ಕ್ಯಾಂಟೀನ್‌ಗಳನ್ನು ಜನನಿಬಿಡ ಪ್ರದೇಶಕ್ಕೆ ಸ್ಥಳಾಂತರ ಮಾಡುವ ಸಂಬಂಧ ನಗರಾಭಿವೃದ್ಧಿ ಇಲಾಖೆಯಿಂದ ಸಮೀಕ್ಷೆ ನಡೆಸಲು ಸಂಪುಟ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ಸಚಿವ ಮಾಧುಸ್ವಾಮಿ ಹೇಳಿದರು.

ಇಂದಿರಾ ಕ್ಯಾಂಟೀನ್ ನಡೆಸಲು ಶೇ 30 ರಷ್ಟು ಅನುದಾನ ನೀಡುವಂತೆ ಬಿಬಿಎಂಪಿ ಕೇಳುತ್ತಿದೆ. ಅಷ್ಟು ಹಣ ಅವರಿಗೆ ಕೊಟ್ಟು ನಡೆಸುವುದಕ್ಕಿಂತ ರಾಜ್ಯ ಸರ್ಕಾರವೇ ನಡೆಸುವುದು ಸೂಕ್ತ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ಜನರೇ ಇಲ್ಲದ ಕಡೆಗಳಲ್ಲಿ ನಷ್ಟದಲ್ಲಿ ನಡೆಸುವುದಕ್ಕಿಂತ ಜನನಿಬಿಡ ಪ್ರದೇಶಗಳಿಗೆ ಸ್ಥಳಾಂತರಿಸುವುದಕ್ಕೆ ಸಮೀಕ್ಷೆ ನಡೆಸಲು ನಿರ್ಧರಿಸಲಾಯಿತು ಎಂದರು.

ಎಸ್‌ಬಿಐ: ಸಾಲದ ಬಡ್ಡಿ ಹೆಚ್ಚಳ

ನವದೆಹಲಿ: ಎಸ್‌ಬಿಐ ಸಾಲದ ಬಡ್ಡಿದರವನ್ನು (ಎಂಸಿಎಲ್‌ಆರ್) ಏಪ್ರಿಲ್ 15ರಿಂದ ಅನ್ವಯವಾಗುವಂತೆ ಶೇ 0.10ರಷ್ಟು ಹೆಚ್ಚಿಸಿದೆ. ಈ ಕ್ರಮದಿಂದಾಗಿ ಗೃಹ, ವಾಹನ ಮತ್ತು ವೈಯಕ್ತಿಕ ಸಾಲದ ಮೇಲಿನ ಬಡ್ಡಿ ಜಾಸ್ತಿ ಆಗಲಿದೆ. ಇದು ಈಗಾಗಲೇ ಸಾಲ ಪಡೆ-ದಿರುವವರಿಗೂ ಅನ್ವಯವಾಗಲಿದೆ.

ಎಲ್ಲ ಅವಧಿಯ ಸಾಲಗಳಿಗೂ ಇದು ಅನ್ವಯವಾಗುತ್ತದೆ ಎಂದು ಬ್ಯಾಂಕ್ ತಿಳಿಸಿದೆ. ಆರ್‌ಬಿಐ ಈ ತಿಂಗಳ ಆರಂಭದಲ್ಲಿ ರೆಪೊ ದರದಲ್ಲಿ ಬದಲಾವಣೆ ಮಾಡದೆ ಇದ್ದರೂ ಎಸ್‌ಬಿಐ ಈ ಕ್ರಮ ಕೈಗೊಂಡಿದೆ.

ಈ ಮಧ್ಯೆ ಬ್ಯಾಂಕ್ ಆಫ್ ಬರೋಡ ಕೂಡ ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಇದು ಏಪ್ರಿಲ್ 12ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿದೆ. ಸರ್ಕಾರಿ ಸ್ವಾಮ್ಯದ ಇತರ ಬ್ಯಾಂಕ್‌ಗಳು ಕೂಡ ಬಡ್ಡಿ ದರ ಹೆಚ್ಚಿಸುವ ನಿರೀಕ್ಷೆ ಇದೆ. ಮೂರು ವರ್ಷಗಳಿಗಿಂತ ಕಡಿಮೆ ಅವಧಿಯ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಎಸ್‌ಬಿಐ ಎರಡು ತಿಂಗಳ ಹಿಂದೆ ಶೇ 0.15ರವರೆಗೆ ಹೆಚ್ಚಿಸಿತ್ತು. ಈಗ ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿದೆ.

ಸದ್ಯಕ್ಕಿಲ್ಲ ಸಂಪುಟ ಪುನರ್‌ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟದ ಪುನರ್‌ರಚನೆಯ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆಯಾದರೂ, ಸದ್ಯಕ್ಕೆ ಅದು ಈಡೇರುವ ಸಾಧ್ಯತೆ ಇಲ್ಲ.

ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಮಾಡುವ ಬಗ್ಗೆ ಬಿಜೆಪಿ ವರಿಷ್ಠರು ಸದ್ಯವೇ ಸ್ಪಷ್ಟ ನಿರ್ಧಾರ ಕೈಗೊಳ್ಳಲಿದ್ದಾರೆ ಎಂಬ ಚರ್ಚೆ ವಿಜಯ-ನಗರದಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯ ನಂತರ ಶುರುವಾಗಿದೆ. ‘ಈ ತಿಂಗಳ ಕೊನೆಯ ವಾರ ಅಥವಾ ಮೇ ಮೊದಲ ವಾರದೊಳಗೆ ಪುನರ್‌ರಚನೆ ಕಸರತ್ತು ಪೂರ್ಣಗೊಳ್ಳಲಿದೆ’ ಎಂದು ಪಕ್ಷದ ಒಂದು ಗುಂಪು ಪ್ರತಿಪಾದಿಸು-ತ್ತಿದೆ.

‘ಪಕ್ಷ ಎದುರಿಸುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಅಂತಹ ಸಾಧ್ಯತೆ ವಿರಳ’ ಎಂಬುದು ಮತ್ತೊಂದು ಗುಂಪಿನ ಅಭಿಪ್ರಾಯವಾಗಿದೆ.

ಈ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ, ‘ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ದೆಹಲಿಯಲ್ಲಿ ವಿಶೇಷ ಸಭೆಯನ್ನು ಕರೆಯುವುದಾಗಿ ತಿಳಿಸಿದ್ದಾರೆ. ಸಭೆಯ ನಂತರ ದೆಹಲಿಗೆ ಬರುವಂತೆ ನಡ್ಡಾ ನನಗೆ ತಿಳಿಸಿದ್ದಾರೆ. ಸಂಪುಟ ವಿಸ್ತರಣೆಯೋ ಅಥವಾ ಪುನರ್‌ರಚನೆಯೋ ಎಂಬುದು ಅಲ್ಲಿಯೇ ತೀರ್ಮಾನ ಆಗಲಿದೆ’ ಎಂದರು.

‘ದೆಹಲಿ ಸಭೆಗೆ ಸಮಯ ನಿಗದಿಯಾದ ಬಳಿಕವಷ್ಟೇ ಸಂಪುಟ ಪುನರ್‌ರಚನೆಯ ಪ್ರಕ್ರಿಯೆಗೆ ಚಾಲನೆ ಸಿಗಬಹುದು. ಸಂಪುಟದಲ್ಲಿ ಖಾಲಿ ಇರುವ ಐದು ಸಚಿವ ಸ್ಥಾನಗಳ ಜತೆಗೆ ಇನ್ನೂ ಐವರು ಸಚಿವರನ್ನು ಸಂಪುಟದಿಂದ ಕೈಬಿಟ್ಟು, ಒಟ್ಟು 10 ಹೊಸ ಮುಖಗಳಿಗೆ ಸಂಪುಟದಲ್ಲಿ ಸ್ಥಾನ ಕಲ್ಪಿಸುವ ಚಿಂತನೆ ನಡೆದಿದೆ’ ಎಂದೂ ಬಿಜೆಪಿ ಮೂಲಗಳು ಹೇಳುತ್ತಿವೆ.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹ 4940 /-gm
ಬೆಳ್ಳಿ ₹ 66,000/- *CA
ಚಿಕ್ಕಪೇಟೆ: 41300355
Gangothri

ಮನೋಜ್ ಪಾಂಡೆ ಮುಂದಿನ ಭೂಸೇನಾ ಮುಖ್ಯಸ್ಥ

ನವದೆಹಲಿ (ಪಿಟಿಐ): ಸೇನಾ ಮುಖ್ಯಸ್ಥರಾದ ಜನರಲ್ ಎಂ.ಎಂ. ನರವಣೆ ಅವರ ಅಧಿಕಾರ ಅವಧಿ ಈ ತಿಂಗಳ ಅಂತ್ಯಕ್ಕೆ ಕೊನೆಗೊ-ಳ್ಳಲಿದ್ದು, ಅವರ ಉತ್ತರಾಧಿಕಾ-ರಿಯಾಗಿ ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಲೆಫ್ಟಿನೆಂಟ್ ಜನರಲ್ ಪಾಂಡೆ ಅವರು ಸದ್ಯ ಸೇನೆಯ ಉಪ ಮುಖ್ಯಸ್ಥರಾಗಿದ್ದಾರೆ. ಇದಕ್ಕೂ ಮೊದಲು ಅವರು, ಸಿಕ್ಕಿಂ ಮತ್ತು ಅರುಣಾಚಲಪ್ರದೇಶ ವಲಯಗಳಲ್ಲಿ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಕಾಯುವ ಪೂರ್ವ ಸೇನಾ ಕಮಾಂಡ್‌ನ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ನರವಣೆ ಅವರ ಅಧಿಕಾರಾವಧಿ ಇದೇ 30ರಂದು ಕೊನೆಗೊಳ್ಳಲಿದೆ. ಪಾಂಡೆ ಅವರು ಮೇ 1ರಂದು ಅಧಿಕಾರ ವಹಿಸಿಕೊಳ್ಳುವ ನಿರೀಕ್ಷೆ ಇದೆ.

ಆರೋಪಿಗಳು ಕೋರ್ಟ್‌ಗೆ ಹಾಜರು: ಏ. 30ರವರೆಗೆ ನ್ಯಾಯಾಂಗ ಬಂಧನ

ಗಲಭೆ: ಸಹಜ ಸ್ಥಿತಿಗೆ ಹುಬ್ಬಳ್ಳಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿವಾದಾತ್ಮಕ ವಾಟ್ಸ್‌ಆ್ಯಪ್ ಸ್ಟೇಟಸ್‌ನಿಂದಾಗಿ ಉದ್ವಿಗ್ನಗೊಂಡಿದ್ದ ಹುಬ್ಬಳ್ಳಿಯಲ್ಲಿ ಪರಿಸ್ಥಿತಿ ಈಗ ತಣ್ಣಗಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿದೆ.

ಗಲಭೆ ನಡೆದಿದ್ದ ಹಳೇ ಹುಬ್ಬಳ್ಳಿಯಲ್ಲಿ ನಿರ್ಮಾಣವಾಗಿದ್ದ ಅಘೋಷಿತ ಬಂದ್ ವಾತಾವರಣ ಸಂಪೂರ್ಣ ತಿಳಿಯಾಗಿದ್ದು, ನಗರದಾದ್ಯಂತ ಸೋಮವಾರ ವ್ಯಾಪಾರ-ವಹಿವಾಟು ಎಂದಿನಂತೆ ನಡೆಯಿತು.

ಜನನಿಬಿಡ ಇಂಡಿ ಪಂಪ್ ವೃತ್ತ ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ಅಂಗಡಿ ಮಳಿಗೆಗಳು ತೆರೆದಿದ್ದವು. ವಾಹನಗಳ ಸಂಚಾರವು ಎಂದಿನಂತಿತ್ತು.

ಹುಬ್ಬಳ್ಳಿಯಲ್ಲಿ ಗಲಭೆ ನಡೆದ ಇಂಡಿ ಪಂಪ್ ವೃತ್ತದಲ್ಲಿ ಸೋಮವಾರ ಜನಜೀವನ ಸಹಜ ಸ್ಥಿತಿಗೆ ಮರಳಿದ್ದು, ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಎದುರು ವಾಹನಗಳ ಸಂಚಾರ ಸರಾಗವಾಗಿತ್ತು – ಪ್ರಜಾವಾಣಿ ಚಿತ್ರ

ವೃತ್ತಕ್ಕೆ ಹೊಂದಿಕೊಂಡಂತಿರುವ ಫತೇಶಾವಲಿ ದರ್ಗಾಕ್ಕೆ ಬರುವವರ ಸಂಖ್ಯೆಯಲ್ಲೂ ವ್ಯತ್ಯಾಸವಿರಲಿಲ್ಲ. ನಿಷೇಧಾಜ್ಞೆ ಹಿನ್ನೆಲೆಯಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಘಟನಾ ಪ್ರದೇಶದ ಸುತ್ತಮುತ್ತ-ಲಿನ ಪ್ರದೇಶಗಳ ಸಿಸಿಟಿವಿ ಕ್ಯಾಮೆರಾ ದೃಶ್ಯಗಳು ಹಾಗೂ ನಾಗರಿಕರು ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ವಿಡಿಯೊಗಳನ್ನು ಆಧರಿಸಿ ಸೋಮವಾರ ಇನ್ನೂ 15 ಮಂದಿಯನ್ನು ಬಂಧಿಸಿದ್ದು, ಗಲಭೆಯಲ್ಲಿ ಬಂಧನಕ್ಕೊಳಗಾದವರ ಸಂಖ್ಯೆ 104ಕ್ಕೆ ಏರಿಕೆಯಾಗಿದೆ.

ಮತ್ತೆ 5 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದ್ದು, ಘಟನೆ ಸಂಬಂಧ ಒಟ್ಟು 12 ಎಫ್‌ಐಆರ್‌ಗಳು ದಾಖಲಾದಂತಾಗಿದೆ.

ಪೊಲೀಸರು ಮತ್ತಷ್ಟು ಶಂಕಿತರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸುತ್ತಿದ್ದಾರೆ.

10ನೇ ಪುಟ ನೋಡಿ

ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ ಆಧರಿಸಿದ ಹಣದುಬ್ಬರ ದರವು ಮಾರ್ಚ್ ತಿಂಗಳಲ್ಲಿ ಶೇಕಡ 14.55ಕ್ಕೆ ಏರಿಕೆ ಆಗಿದೆ. ಇದು ನಾಲ್ಕು ತಿಂಗಳ ಗರಿಷ್ಠ ಮಟ್ಟ. ಕಚ್ಚಾ ತೈಲ ಹಾಗೂ ಇತರ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳ ಈ ಏರಿಕೆಗೆ ಮುಖ್ಯ ಕಾರಣ.

ಸಗಟು ಹಣದುಬ್ಬರ ದರವು ಜಾಸ್ತಿ ಆಗಿರುವ ಕಾರಣ, ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಹೆಚ್ಚಳ ಮಾಡುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಫೆಬ್ರುವರಿ ತಿಂಗಳಿನಲ್ಲಿ ಸಗಟು ಹಣದುಬ್ಬರ ದರವು ಶೇ 13.11ರಷ್ಟು ಇತ್ತು. ಹಿಂದಿನ ವರ್ಷದ ಮಾರ್ಚ್‌ನಲ್ಲಿ ಇದು ಶೇ 7.89ರಷ್ಟು ಆಗಿತ್ತು. 2021–22ನೆಯ ಹಣಕಾಸು ವರ್ಷದುದ್ದಕ್ಕೂ ಸಗಟು ಹಣದುಬ್ಬರ ದರವು ಎರಡಂಕಿ ಮಟ್ಟದಲ್ಲಿಯೇ ಇತ್ತು. ನವೆಂಬರ್ ತಿಂಗಳಿನಲ್ಲಿ ಇದು ಶೇ 14.87ಕ್ಕೆ ತಲುಪಿತ್ತು. ಕಚ್ಚಾ ತೈಲ ಬೆಲೆ ಹೆಚ್ಚಾಗಿದ್ದು ಸಗಟು ಹಣದುಬ್ಬರ ದರ ಹೆಚ್ಚಾಗಲು ಅತಿಮುಖ್ಯ ಕಾರಣ ಎಂಬುದನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಆಹಾರ ವಸ್ತುಗಳ ಸಗಟು ಹಣದುಬ್ಬರ ಪ್ರಮಾಣವು ಮಾರ್ಚ್‌ನಲ್ಲಿ ತುಸು ತಗ್ಗಿದೆ. ತರಕಾರಿ ಮತ್ತು ಧಾನ್ಯಗಳ ಬೆಲೆಯಲ್ಲಿ ಇಳಿಕೆ ಆಗಿದೆ. ಆದರೆ, ಗೋಧಿ, ಭತ್ತ, ಆಲೂಗಡ್ಡೆ, ಹಾಲು, ಮೊಟ್ಟೆ, ಮಾಂಸ ಮತ್ತು ಮೀನಿನ ಬೆಲೆ ಹೆಚ್ಚಾಗಿದೆ.

ಮಾರ್ಚ್‌ನಲ್ಲಿ ಆಹಾರ ವಸ್ತುಗಳ ಸಗಟು ಹಣದುಬ್ಬರ ಪ್ರಮಾಣವು ಶೇ 8.06ಕ್ಕೆ ತಗ್ಗಿದೆ. ಇದು ಫೆಬ್ರುವರಿಯಲ್ಲಿ ಶೇ 8.19ರಷ್ಟು ಇತ್ತು. ತರಕಾರಿಗಳ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 19.88ರಷ್ಟು ಇತ್ತು. ಫೆಬ್ರುವರಿಯಲ್ಲಿ ಇದು ಶೇ 26.93 ಆಗಿತ್ತು.

ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 6.95ಕ್ಕೆ ತಲುಪಿದೆ. ಇದು ಹದಿನೇಳು ತಿಂಗಳ ಗರಿಷ್ಠ ಪ್ರಮಾಣ. ಆರ್‌ಬಿಐ ಸಾಮಾನ್ಯವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣ ಆಧರಿಸಿ ರೆಪೊ ದರ ತೀರ್ಮಾನ ಮಾಡುತ್ತದೆ.

ತಜ್ಞರ ಅಭಿಮತ 11

ಸಿಸಿಬಿ ಕಾರ್ಯಾಚರಣೆ: ನಾಲ್ವರ ಬಂಧನ, 44 ಖಾತೆ ವ್ಯವಹಾರಕ್ಕೆ ತಡೆ

‘ಕ್ರಿಪ್ಟೊ’ ವಂಚನೆ: ₹17 ಕೋಟಿ ಮೌಲ್ಯದ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಿಪ್ಟೊ’ ಕರೆನ್ಸಿ ಹೂಡಿಕೆ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಸಂಗ್ರಹಿಸಿ ವಂಚಿಸಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ₹ 78 ಲಕ್ಷ ನಗದು ಸೇರಿ ₹ 17 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

‘ಶೇರ್‌ಹ್ಯಾಷ್’ ಹೆಸರಿನ ಆ್ಯಪ್ ಮೂಲಕ ವಂಚನೆ ಮಾಡಿದ್ದ ಬಗ್ಗೆ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡ ಸಿಸಿಬಿ ಅಧಿಕಾರಿಗಳು, ವಂಚನೆ ಜಾಲ ಭೇದಿಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

‘ಶೀತಲ್ ಬಸ್ತವಾಡ್, ಇಮ್ರಾನ್ ರಿಯಾಜ್, ರೆಹಮತ್‌ಉಲ್ಲಾ ಖಾನ್ ಹಾಗೂ ಜಬೀವುಲ್ಲಾ ಖಾನ್ ಬಂಧಿತರು. ಇವರಿಂದ 1 ಕೆ.ಜಿ 650 ಗ್ರಾಂ ಚಿನ್ನಾಭರಣ, ₹ 78 ಲಕ್ಷ ನಗದು, 44 ಡಿಎಸ್‌ಸಿ (ಡಿಜಿಟಲ್ ಸಹಿ ಪ್ರಮಾಣ ಪತ್ರ) ಟೋಕನ್‌ಗಳು, 5 ಮೊಹರುಗಳು, ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ಕಂಪನಿ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳ 44 ಖಾತೆಗಳಲ್ಲಿ ₹ 15 ಕೋಟಿ ಹಣವಿದ್ದು, ವ್ಯವಹಾರವನ್ನು ತಡೆ ಹಿಡಿಯಲಾಗಿದೆ’ ಎಂದೂ ಹೇಳಿದರು.

ಐದು ಕಂಪನಿ ಹೆಸರಿನಲ್ಲಿ ವ್ಯವಹಾರ: ‘ಹೂಡಿಕೆ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸುವ ಉದ್ದೇಶ ಇಟ್ಟುಕೊಂಡಿದ್ದ ಆರೋಪಿಗಳು, ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ‘ಶೇರ್‌ಹ್ಯಾಷ್’ ಆ್ಯಪ್ ಅಭಿವೃದ್ಧಿಪಡಿಸಿದ್ದರು. ಇದರ ಮೂಲಕ ಹಣದ ವ್ಯವಹಾರ ನಡೆಸಲು ಐದು ಕಂಪನಿಗಳನ್ನು ಸೃಷ್ಟಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಕೋಟ್ಯಾಟ್ ಟೆಕ್ನಾಲಜಿ, ಸಿರಲೇನಾ ಟೆಕ್ ಸೆಲ್ಯೂಷನ್ಸ್, ನೈಲೇನ್ ಇನ್ಫೊಟೆಚ್, ಮೊಲ್ಟ್ರೀಸ್ ಎಕ್ಸಿಮ್ ಹಾಗೂ ಕ್ರ್ಯಾಂಪಿಂಗ್‌ಟನ್ ಟೆಕ್ನಾಲಜಿ ಕಂಪನಿಗಳ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಆರೋಪಿಗಳು ಖಾತೆ ತೆರೆದಿದ್ದರು. ಈ ಖಾತೆಗಳಿಗೆ ಸಾರ್ವಜನಿಕರು ಹಣ ಜಮೆ ಮಾಡಿದ್ದರು. ಅದೇ ಖಾತೆಗಳನ್ನು ಇದೀಗ ಜಪ್ತಿ ಮಾಡಲಾಗಿದೆ’ ಎಂದೂ ವಿವರ ನೀಡಿದರು.

900 ವಾಟ್ಸ್‌ಆ್ಯಪ್ ಗ್ರೂಪ್: ‘ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿದರೆ, ಪ್ರತಿ ದಿನವೂ ಲಾಭಾಂಶ ನೀಡುತ್ತೇವೆ’ ಎಂಬುದಾಗಿ ಆರೋಪಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ನೀಡಿದ್ದರು.

10ನೇ ಪುಟ ನೋಡಿ

ಏನಿದು ‘ಕ್ರಿಪ್ಟೊ’ ಮೈನಿಂಗ್?

‘ಕ್ರಿಪ್ಟೊ’ ಎನ್ನುವುದು ರೂಪಾಯಿ ಹಾಗೂ ಡಾಲರ್ ರೀತಿಯಲ್ಲೇ ಒಂದು ನಾಣ್ಯ. ಇದರಲ್ಲಿ ಬಿಟ್ ಕಾಯಿನ್ ಸೇರಿದಂತೆ ಹಲವು ವಿಧಗಳಿವೆ. ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಷ್ಟೇ ಇದನ್ನು ನೋಡಬಹುದು. ಇಂಥ ‘ಕ್ರಿಪ್ಟೊ’ ಕರೆನ್ಸಿಯನ್ನು ಬಳಕೆದಾರರೇ ಸೃಷ್ಟಿಸಬೇಕು. ಈ ಪ್ರಕ್ರಿಯೆಗೆ ಮೈನಿಂಗ್ ಎನ್ನಲಾಗುತ್ತದೆ.

ಮೈನಿಂಗ್ ಮಾಡಲು ಕಂಪ್ಯೂಟರ್‌ನಲ್ಲಿ ಕೆಲ ಗಣಿತದ ಸಮಸ್ಯೆಗಳನ್ನು ಬಗೆ ಹರಿಸಬೇಕಾಗುತ್ತದೆ. ಇದಕ್ಕೆ ‘ಹ್ಯಾಷ್ ಫಂಕ್ಷನ್’ ಎನ್ನಲಾಗುತ್ತದೆ. ಈ ಹಂತ ಪ್ರವೇಶಿಸಿದರೆ, ಕರೆನ್ಸಿ ವ್ಯವಹಾರ ಆರಂಭವಾಗುತ್ತದೆ. ವೈಯಕ್ತಿಕ ವಿವರದ ಅಗತ್ಯವಿಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ವಹಿವಾಟು ನಡೆಸಬಹುದಾಗಿದೆ.

‘ತನಿಖಾ ತಂಡಕ್ಕೆ ₹70 ಸಾವಿರ ಬಹುಮಾನ’

‘ಕ್ರಿಪ್ಟೊ ಕರೆನ್ಸಿ ಹೂಡಿಕೆ ವಂಚನೆ ಜಾಲವನ್ನು ಪತ್ತೆ ಮಾಡಿರುವ ಸಿಸಿಬಿಯ ತನಿಖಾ ತಂಡಕ್ಕೆ ₹ 70 ಸಾವಿರ ಬಹುಮಾನ ಘೋಷಿಸಲಾಗಿದೆ’ ಎಂದು ಕಮಲ್ ಪಂತ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ
ಮುಳಬಾಗಲು, ಕೋಲಾರ ಜಿಲ್ಲೆ.
Phone: 08159-298914 Email: amomulbagal@gmail.com
(ಎಂ.ಸಿ.ರೋಡ್, ಮುಳಬಾಗಲು, ಕೋಲಾರ ಜಿಲ್ಲೆ)
ಸಂ.: ಸಾಆಮು/ಪಥ್ಯಾಹಾರ/ಟೆಂಡರ್/04/2021-22 ದಿನಾಂಕ: 12.04.2022

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮುಳಬಾಗಿಲು ಇಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಆಸ್ಪತ್ರೆಗಳಿಗೆ ಗ್ರೂಪ್–ಡಿ ಸಿಬ್ಬಂದಿಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರ ಹೆಚ್ಚಿನ ಮಾಹಿತಿಗಾಗಿ eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮುಳಬಾಗಲು.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 22/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಾಮನಗರ ವಿಭಾಗ
ಸಂಖ್ಯೆ:01/ಕಾಅ/ಗ್ರಾ.ಕು.ನೀ&ನೈವಿ/ರಾ/ಟೆಂಡರ್/ಸ.ಇಂ–1/14–23/2022–23
ದಿನಾಂಕ: 12–04–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿಭಾಗ ಕಛೇರಿಗೆ 1 ಹವಾನಿಯಂತ್ರಣ – AC ಹಾಗೂ 3 ಉಪ–ವಿಭಾಗಗಳಿಗೆ (ರಾಮನಗರ, ಕನಕಪುರ ಮತ್ತು ಮಾಗಡಿ) 3 ಹವಾನಿಯಂತ್ರಣ ರಹಿತ – NON-AC ವಾಹನಗಳನ್ನು** ಅಧಿಕೃತ ಸರ್ಕಾರಿ ಕೆಲಸಕ್ಕಾಗಿ 12 ತಿಂಗಳ ಅವಧಿಗೆ ಹೊರಗುತ್ತಿಗೆ ಮತ್ತು ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕ ಸಹಿತ ಉತ್ತಮ ಕಾರ್ಯನಿರ್ವಹಣೆಯಲ್ಲಿರುವ ಹವಾನಿಯಂತ್ರಣ – AC ಹಾಗೂ ಹವಾನಿಯಂತ್ರಣ ರಹಿತ – NON-AC **(ಟಾಟಾ–ಇಂಡಿಗೊ / ಬೊಲೆರೋ / ಇಟಿಯೋಸ್ / ಲೋಗಾನ್/ ವೆರಿಟೋ / ಮಾರುತಿ–ಡಿಜೈರ್)** ವಾಹನವನ್ನು ಪಡೆಯಲು ಏಪ್ರಿಲ್–2023 ವರೆಗಿನ ಅವಧಿಗೆ ಟೆಂಡರ್ ನಿಯಮಾವಳಿಗಳಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವೆಬ್‌ಸೈಟ್: **https://www.eproc.karnataka.gov.in** ಮೂಲಕ ಸಲ್ಲಿಸಬಹುದು. 1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: **26–04–2022ರ ಸಂಜೆ 5.00 ಘಂಟೆವರೆಗೆ.** 2) ಟೆಂಡರ್‌ನ್ನು ತೆರೆಯುವ ದಿನಾಂಕ: **28–04–2022ರ ಬೆಳಿಗ್ಗೆ 11.00 ಘಂಟೆಯ ನಂತರ.** ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.
ವಾಸಾಸಂಇ/ರಾನ/ಅಡ್ವರ್ಟೋರ್/24/2022–23

ನಗರದ ಸ್ವಚ್ಛತೆ: ಆಮೂಲಾಗ್ರ ಬದಲಾವಣೆ ತರಲು ಮುಂದಾಗಿದೆ ಬಿಬಿಎಂಪಿ

ವಿವಿಧ ಬಗೆಯ ಕಸ ವಿಲೇವಾರಿ ಒಂದೇ ಏಜೆನ್ಸಿಗೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕಸ ವಿಲೇವಾರಿ ವ್ಯವಸ್ಥೆಯಲ್ಲಿ ಮತ್ತೆ ಆಮೂಲಾಗ್ರ ಬದಲಾವಣೆ ತರಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ಮನೆ ಮನೆಯಿಂದ ಹಸಿ ಕಸ ಮತ್ತು ಒಣ ಕಸ ಸಂಗ್ರಹಿಸಿ ವಿಲೇವಾರಿ ಮಾಡುವ ಹೊಣೆಯನ್ನು ಬೇರೆ ಬೇರೆ ಗುತ್ತಿಗೆದಾರರಿಗೆ ವಹಿಸಿದ್ದ ಬಿಬಿಎಂಪಿ, ಇನ್ನು ಮುಂದೆ ವಾರ್ಡ್‌ನ ಹಸಿ ಕಸ, ಒಣ ಕಸ, ನೈರ್ಮಲ್ಯ ಕಸಗಳ ವಿಲೇವಾರಿಯ ಹೊಣೆಯನ್ನು ಒಂದೇ ಏಜೆನ್ಸಿಗೆ ವಹಿಸಲು ಮುಂದಾಗಿದೆ.

ಮೂರು ವರ್ಷಗಳ ಹಿಂದೆ ಬಿಬಿಎಂಪಿ 100 ವಾರ್ಡ್‌ಗಳಲ್ಲಿ ಕಸ ವಿಲೇವಾರಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿತ್ತು. ಈ ಗುತ್ತಿಗೆಗಳ ಅವಧಿಯೂ ಮುಗಿದಿದೆ.

‘ಎಲ್ಲ 198 ವಾರ್ಡ್‌ಗಳಲ್ಲೂ ಕಸ ವಿಲೇವಾರಿಗೆ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಿ ಗುತ್ತಿಗೆ ನೀಡಲು ಸಿದ್ಧತೆ ನಡೆಸಿದ್ದೇವೆ. ಯಾವುದೇ ಸ್ಥಾಪಿತ ಹಿತಾಸಕ್ತಿಗಳಿಗೆ ಅವಕಾಶ ಸಿಗಬಾರದು ಎಂಬ ಉದ್ದೇಶದಿಂದ ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸುವುದಕ್ಕೆ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಬಿಬಿಎಂಪಿ ಅಧಿಕಾರಿಗಳಿಲ್ಲ. ಕಸ ವಿಲೇವಾರಿ ವ್ಯವಸ್ಥೆಯ ಪಾಲುದಾರರು, ತಜ್ಞರು ಈ ಸಮಿತಿಯಲ್ಲಿದ್ದಾರೆ. ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯವೂ ಬಹುತೇಕ ಪೂರ್ಣಗೊಂಡಿದೆ. ಈ ಪ್ರಸ್ತಾವಕ್ಕೆ ಬೆಂಗಳೂರು ನಗರ ಅಭಿವೃದ್ಧಿ ಸಚಿವರು ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದಲೇ ಅನುಮೋದನೆ ಪಡೆದು ಶೀಘ್ರವೇ ಟೆಂಡರ್ ಆಹ್ವಾನಿಸಲಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಬದಲಾವಣೆ ಏಕೆ?: ‘ಹಸಿ ಕಸ ಮತ್ತು ಒಣ ಕಸ ವಿಲೇವಾರಿಯ ಹೊಣೆಗಳನ್ನು ಬೇರೆ ಬೇರೆ ಏಜೆನ್ಸಿಗಳಿಗೆ ವಹಿಸಿದರೆ ‘ಮಿಶ್ರ ಕಸ’ ಉತ್ಪತ್ತಿಯಾಗುವ ಸಮಸ್ಯೆಯನ್ನು ನಿಯಂತ್ರಿಸಬಹುದು ಎಂಬುದು ನಮ್ಮ ಲೆಕ್ಕಾಚಾರವಾಗಿತ್ತು. ಆದರೆ, ಈ ವ್ಯವಸ್ಥೆ ಜಾರಿಗೊಳಿಸಿದ ವಾರ್ಡ್‌ಗಳಲ್ಲೂ ಮಿಶ್ರ ಕಸ ಉತ್ಪಾದನೆ ಪ್ರಮಾಣ ಕಡಿಮೆ ಆಗಿಲ್ಲ. ಈಗಲೂ ಅನೇಕ ವಾರ್ಡ್‌ಗಳಲ್ಲಿ ಕಸ ರಾಶಿ ಹಾಕುವ (ಬ್ಲ್ಯಾಕ್ ಸ್ಪಾಟ್) ಪರಿಪಾಠ ಮುಂದುವರಿದಿದೆ’ ಎನ್ನುತ್ತಾರೆ ಬಿಬಿಎಂಪಿ ಅಧಿಕಾರಿಗಳು.

ಉತ್ತರದಾಯಿತ್ವ ಇಲ್ಲ: ‘ಯಾವುದೇ ವಾರ್ಡ್‌ನಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗದಿದ್ದರೂ ಅದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಏಜೆನ್ಸಿಯನ್ನು ಹೊಣೆ ಮಾಡಲು ಸಾಧ್ಯವಾಗುತ್ತಿಲ್ಲ. ಕಸ ವಿಲೇವಾರಿ ಸಮರ್ಪಕವಾಗಿ ಆಗದ ಬಗ್ಗೆ ಪ್ರಶ್ನಿಸಿದರೆ ಹಸಿ ಕಸ ಹಾಗೂ ಒಣ ಕಸ ಸಂಗ್ರಹಿಸುವವರು ಪರಸ್ಪರರನ್ನು ದೂಷಿಸುತ್ತಿದ್ದಾರೆಯೇ ಹೊರತು ಇದಕ್ಕೆ ಸಂಬಂಧಿಸಿದ ಉತ್ತರದಾಯಿತ್ವ ತೋರಿಸುತ್ತಿಲ್ಲ. ಕಸ ವಿಂಗಡಣೆ ಮಾಡಿ ಬೇರೆ ಬೇರೆ ಏಜೆನ್ಸಿಗಳಿಗೆ ಕೊಡುವ ವ್ಯವಸ್ಥೆಯಿಂದ ಜನರಿಗೂ ಸಮಸ್ಯೆ ಆಗುತ್ತಿದೆ’ ಎಂದು ಬಿಬಿಎಂಪಿಯ ಅಧಿಕಾರಿಯೊಬ್ಬರು ವಿವರಿಸಿದರು.

‘ಈ ಹಿಂದೆ ಕಸ ವಿಲೇವಾರಿ ವ್ಯವಸ್ಥೆಯನ್ನು ಸರಿದಾರಿಗೆ ತರಲು ಟೆಂಡರ್ ಕರೆದಾಗಲೆಲ್ಲ ಗುತ್ತಿಗೆದಾರರು ಏನಾದರೂ ತಕರಾರು ತೆಗೆದು ಹೈಕೋರ್ಟ್ ಮೊರೆ ಹೋಗುತ್ತಿದ್ದರು. ಇದರಿಂದ ಪ್ರಕ್ರಿಯೆ ವಿಳಂಬವಾಗುತ್ತಿತ್ತು. ಈ ಬಾರಿ ಗುತ್ತಿಗೆದಾರರನ್ನೂ ವಿಶ್ವಾಸಕ್ಕೆ ಪಡೆದು ಟೆಂಡರ್ ಪ್ರಕ್ರಿಯೆ ನಡೆಸುವ ಪ್ರಯತ್ನಕ್ಕೆ ಕೈ ಹಾಕಿದ್ದೇವೆ. ಎಲ್ಲ ವಾರ್ಡ್‌ಗಳಲ್ಲೂ ಟೆಂಡರ್ ಕರೆದು ಕಸ ವಿಲೇವಾರಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದರೆ ನಗರದ ಸ್ವಚ್ಛತೆ ಕಾಪಾಡುವ ಸವಾಲುಗಳನ್ನು ಇನ್ನಷ್ಟು ಸಮರ್ಥವಾಗಿ ನಿಭಾಯಿಸಲು ಸಾಧ್ಯ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ವಿಶೇಷ ಆಯುಕ್ತ (ಕಸ ವಿಲೇವಾರಿ) ಡಾ.ಕೆ.ಹರೀಶ್ ಕುಮಾರ್, ‘ಬಹುತೇಕ ವಾರ್ಡ್‌ಗಳಲ್ಲಿ ಕಸ ವಿಲೇವಾರಿ ಟೆಂಡರ್ ಅವಧಿ ಮುಕ್ತಾಯವಾಗಿದೆ. ಹಾಗಾಗಿ ಎಲ್ಲ ವಾರ್ಡ್‌ಗಳಿಗೂ ಒಟ್ಟಿಗೆ ಟೆಂಡರ್ ಆಹ್ವಾನಿಸಲು ಚಿಂತನೆ ನಡೆಸಿದ್ದೇವೆ. ಎಲ್ಲ ಪಾಲುದಾರರನ್ನು ವಿಶ್ವಾಸಕ್ಕೆ ಪಡೆದು ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸಲಾಗುತ್ತಿದೆ’ ಎಂದರು.

ಪ್ರಜಾವಾಣಿ ವಿಶೇಷ

‘ಕಸ ಪಡೆಯಲು ಬರುತ್ತಿಲ್ಲ– ಬಿಸಾಡಿದರೆ ತೆರಬೇಕು ದಂಡ’

‘ಕಸ ಸಂಗ್ರಹ ಮಾಡುವವರು ಇತ್ತೀಚಿನ ದಿನಗಳಲ್ಲಿ ನಮ್ಮ ಮನೆ ಬಾಗಿಲಿಗೇ ಬರುತ್ತಿಲ್ಲ. ಕಸವನ್ನು ಎಷ್ಟು ದಿನ ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯ? ಸಮೀಪದಲ್ಲಿ ಎಲ್ಲಾದರೂ ಬಿಸಾಡಿದರೆ, ಮಾರ್ಷಲ್‌ಗಳು ದಂಡ ಹಾಕುತ್ತಾರೆ’ ಎಂದು ಉಲ್ಲಾಳು ವಾರ್ಡ್‌ನ ನಿವಾಸಿಯೊಬ್ಬರು ಅಹವಾಲು ತೋಡಿಕೊಂಡರು.

‘ಕಸ ವಿಲೇವಾರಿ ಗುತ್ತಿಗೆ ಅವಧಿ ಮುಗಿದಿರುವುದರಿಂದ ಕೆಲವು ಕಡೆ ಕಸ ವಿಲೇವಾರಿ ಸಮಸ್ಯೆ ಆಗುತ್ತಿರುವುದು ನಿಜ. ಹೊಸ ವ್ಯವಸ್ಥೆ ಜಾರಿಗೆ ಬಂದ ಬಳಿಕ ಈ ಸಮಸ್ಯೆಗಳು ನೀಗಲಿವೆ’ ಎಂದು ಕಸ ವಿಲೇವಾರಿ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಎಂಟು ವಿಧದ ಕಸ ವಿಲೇವಾರಿಗೆ ಕ್ರಮ

ನಗರದಲ್ಲಿ ಉತ್ಪತ್ತಿಯಾಗುವ ಕಸವನ್ನು ಹಸಿಕಸ, ಒಣ ಕಸ, ಪ್ರಾಣಿಗಳ ತ್ಯಾಜ್ಯ, ನೈರ್ಮಲ್ಯ ಕಸ, ಕಟ್ಟಡ ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ, ಕೈಗಾರಿಕಾ ತ್ಯಾಜ್ಯ, ಇ–ತ್ಯಾಜ್ಯ ಎಂದು ವಿಂಗಡಿಸಲಾಗುತ್ತದೆ. ಅದರಲ್ಲಿ ಹಸಿ ಕಸ, ಒಣ ಕಸ ಹಾಗೂ ನೈರ್ಮಲ್ಯ ತ್ಯಾಜ್ಯಗಳನ್ನು ಮನೆ ಮನೆಗೆ ಬಂದು ಸಂಗ್ರಹ ಮಾಡುವ ವ್ಯವಸ್ಥೆಯನ್ನು ಬಿಬಿಎಂಪಿ ಹೊಂದಿದೆ. ಪ್ರಾಣಿಗಳಿಂದ ಉತ್ಪತ್ತಿಯಾಗುವ ಕಸ ಮತ್ತು ಕಟ್ಟಡ ತ್ಯಾಜ್ಯಗಳ ವಿಲೇವಾರಿಗೆ ಪ್ರತ್ಯೇಕ ಏಜೆನ್ಸಿ ಗುರುತಿಸಿ ವ್ಯವಸ್ಥೆ ಕಲ್ಪಿಸಲಾಗಿದೆ.

ಕೈಗಾರಿಕಾ ತ್ಯಾಜ್ಯ, ಇ–ತ್ಯಾಜ್ಯ ಹಾಗೂ ವೈದ್ಯಕೀಯ ತ್ಯಾಜ್ಯಗಳನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ಹೊಣೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅವರದು. ಮಂಡಳಿಯೇ ಈ ಮೂರು ವಿಧದ ಕಸಗಳ ವಿಲೇವಾರಿಗೆ ಏಜೆನ್ಸಿಯನ್ನು ಗೊತ್ತುಪಡಿಸುತ್ತದೆ.

ಸಗಟು ಕಸ (ನಿತ್ಯ 100 ಕೆ.ಜಿ.ಗಿಂತ ಹೆಚ್ಚು ಕಸವನ್ನು ಉತ್ಪಾದಿಸುವ) ಉತ್ಪಾದಕರು, ಅದರ ವಿಲೇವಾರಿಗೆ ಸ್ವತಃ ವ್ಯವಸ್ಥೆ ಮಾಡಿಕೊಳ್ಳಬೇಕು. ಸಗಟು ಕಸವಿಲೇವಾರಿ ಮೇಲೆ ಬಿಬಿಎಂಪಿಯು ನಿಗಾ ವಹಿಸುತ್ತದೆ.

ಇಂದು ನಾಗನಾಥೇಶ್ವರನ ಬ್ರಹ್ಮರಥೋತ್ಸವ

ಬೊಮ್ಮನಹಳ್ಳಿ: ಬೇಗೂರು ನಾಗನಾಥೇಶ್ವರ ಬ್ರಹ್ಮರಥೋತ್ಸವವು ಮಂಗಳವಾರ ನಡೆಯಲಿದೆ. ರಥದ ಚಕ್ರಗಳಿಗೆ ಕೊರಡು ಕಟ್ಟುವ ಮೂಲಕ ರಥೋತ್ಸವದ ಪೂಜಾ ಕಾರ್ಯಗಳು ಆರಂಭವಾಗಲಿದೆ ಎಂದು ದೇವಸ್ಥಾನ ಟ್ರಸ್ಟ್ ಮುಖ್ಯಸ್ಥರು ತಿಳಿಸಿದ್ದಾರೆ.

ರಥೋತ್ಸವಕ್ಕೆ ಬಂದವರಿಗೆ ಎಲ್ಲರಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಸುರಿಯುವ ಮಳೆಯಲ್ಲೇ ಕಾರ್ಮಿಕರು ತೆರೆದ ವಾಹನದಲ್ಲಿ ತೆರಳಿದರು (ಎಡಚಿತ್ರ) ಮಳೆಯಲ್ಲೇ ಸಾರ್ವಜನಿಕರು ಕೊಡೆ ಹಿಡಿದು ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರಗಳು

ಕಾಲುವೆಗಳು ಭರ್ತಿ: ರಸ್ತೆಯಲ್ಲಿ ಹರಿದ ನೀರು– ಪಾರಾದ ಬಿಎಂಟಿಸಿ ಪ್ರಯಾಣಿಕರು

ಮುಂದುವರಿದ ಮಳೆ: ಉರುಳಿಬಿದ್ದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಸಂಜೆ ಹಾಗೂ ರಾತ್ರಿ ಜೋರು ಮಳೆ ಸುರಿಯಿತು. ಗಾಳಿಯೂ ವೇಗವಾಗಿ ಬೀಸಿದ್ದರಿಂದ ಹಲವೆಡೆ ಮರಗಳು ಉರುಳಿಬಿದ್ದಿದ್ದವು.

ನಗರದಲ್ಲಿ ಕೆಲದಿನಗಳಿಂದ ಮೋಡ ಕವಿದ ವಾತಾವರಣ ಕಂಡುಬರುತ್ತಿದ್ದು, ಬಿಡುವು ಕೊಡುತ್ತಲೇ ಮಳೆಯೂ ಸುರಿಯುತ್ತಿದೆ.

ಸೋಮವಾರ ಬೆಳಿಗ್ಗೆ ಕೆಲ ಹೊತ್ತು ಬಿಸಿಲು ಇತ್ತು. ಮಧ್ಯಾಹ್ನದ ನಂತರ, ಮೋಡ ಕವಿದು ತಂತುರು ಮಳೆ ಬರಲಾರಂಭಿಸಿತು. ಸಂಜೆ ಹಾಗೂ ರಾತ್ರಿ ವೇಳೆ ಗುಡುಗು–ಸಿಡಿಲು ಜೊತೆ ಮಳೆ ಅಬ್ಬರವಿತ್ತು. ಜೋರಾದ ಗಾಳಿಯೂ ಬೀಸಿತು.

ಪೀಣ್ಯ, ಯಶವಂತಪುರ, ರಾಜಾಜಿನಗರ, ವಿಜಯನಗರ, ಮಲ್ಲೇಶ್ವರ, ಶೇಷಾದ್ರಿಪುರ, ಸಂಪಂಗಿರಾಮನಗರ, ಇಂದಿರಾನಗರ, ಹಲಸೂರು, ವಿಲ್ಸನ್ ಗಾರ್ಡನ್, ಶಾಂತಿನಗರ, ವೈಟ್‌ಫೀಲ್ಡ್, ಬೆಳ್ಳಂದೂರು, ಈಜಿಪುರ, ಕೆ.ಆರ್.ಪುರ, ನಾಗವಾರ, ವಿದ್ಯಾರಣ್ಯಪುರ, ಯಲಹಂಕ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಆಲಿಕಲ್ಲು ಸಹಿತ ಮಳೆ ಆಯಿತು.

ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬನಶಂಕರಿ, ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ, ಬಸವನಗುಡಿ, ಚಾಮರಾಜಪೇಟೆ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ಜೆ.ಸಿ.ನಗರ, ವಸಂತನಗರ, ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸುತ್ತಮುತ್ತಲೂ ಮಳೆ ಸುರಿದಿದೆ.

ಉರುಳಿಬಿದ್ದ ಮರಗಳು: ನಗರದ ಹಲವೆಡೆ ಮರಗಳು ಹಾಗೂ ಕೊಂಬೆಗಳು ಉರುಳಿ ಬಿದ್ದಿದ್ದವು. ಇದರಿಂದಾಗಿ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

ನಂದಿನಿ ಲೇಔಟ್‌ಗೆ ಹೊಂದಿಕೊಂಡಿರುವ ಹೊರವರ್ತುಲ ರಸ್ತೆಯಲ್ಲಿ ಬಿಎಂಟಿಸಿ ಬಸ್ ಮೇಲೆ ಮರವೊಂದು ಬಿದ್ದಿತ್ತು. ಬಸ್ಸಿನಲ್ಲಿ 50ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು. ಅದೃಷ್ಟವಶಾತ್ ಯಾರಿಗೂ ಪೆಟ್ಟಾಗಿಲ್ಲ.

‘ದೀಪಾಂಜಲಿ ನಗರ ಡಿಪೊದ ಬಸ್, ಗೊರಗುಂಟೆಪಾಳ್ಯದಿಂದ ಹೊರವರ್ತುಲ ರಸ್ತೆ ಮೂಲಕ ಲಗ್ಗೆರೆ ಕಡೆ ಹೊರಟಿತ್ತು. ರಾಜ್‌ಕುಮಾರ್ ಸಮಾಧಿ ಬಳಿಯ ರಸ್ತೆ ಪಕ್ಕದಲ್ಲಿದ್ದ ಮರ, ಮಳೆ ಹಾಗೂ ಗಾಳಿಯಿಂದ ಸಡಿಲಗೊಂಡಿತ್ತು. ಅದೇ ರಸ್ತೆಯಲ್ಲಿ ಚಲಿಸುತ್ತಿದ್ದ ಬಸ್ ಮೇಲೆ ಮರ ಬಿದ್ದಿತ್ತು. ಬಸ್ಸಿನ ಚಾವಣಿ ಜಖಂಗೊಂಡಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ನವರಂಗ ವೃತ್ತ ಬಳಿಯ ಮೋದಿ ಆಸ್ಪತ್ರೆ ರಸ್ತೆಯಲ್ಲೂ ವಾಹನಗಳ ಮೇಲೆ ಮರವೊಂದು ಉರುಳಿಬಿದ್ದಿತ್ತು. ಎರಡು ಕಾರು, ಎರಡು ದ್ವಿಚಕ್ರ ವಾಹನ ಹಾಗೂ ಆಟೊ ಜಖಂಗೊಂಡಿವೆ. ಮರ ಬಿದ್ದಿದ್ದರಿಂದ ವಿಪರೀತ ಸಂಚಾರ ದಟ್ಟಣೆ ಉಂಟಾಗಿತ್ತು.

ಮಾರುಕಟ್ಟೆ ಪ್ರದೇಶದಲ್ಲಿ ನೀರು: ಕೆ.ಆರ್. ಮಾರುಕಟ್ಟೆ, ಚಿಕ್ಕಪೇಟೆ, ಸುಲ್ತಾನ್ ಪೇಟೆ, ಬಿ.ವಿ.ಕೆ ಅಯ್ಯಂಗಾರ್ ರಸ್ತೆ, ತರಗುಪೇಟೆ ಸೇರಿದಂತೆ ಹಲವು ಮಾರುಕಟ್ಟೆ ಪ್ರದೇಶಗಳಲ್ಲಿ ರಸ್ತೆ ಮೇಲೆಯೇ ನೀರು ಹರಿಯಿತು. ಅದರಲ್ಲೇ ವಾಹನಗಳು ಓಡಾಡಿದವು.

ನಗರದ ಬಹುತೇಕ ಕಡೆ ಸ್ಮಾರ್ಟ್ ಸಿಟಿ ಯೋಜನೆ ಹಾಗೂ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಅಲ್ಲಲ್ಲ ಗುಂಡಿಯಲ್ಲಿ ನೀರು ನಿಂತುಕೊಂಡಿತ್ತು. ರಾಜಕಾಲುವೆ ಕಾಮಗಾರಿ ಸ್ಥಳದಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ಸಂಕ್ಷಿಪ್ತ ಸುದ್ದಿ

ಏ.21ರಿಂದ ಅಂತರರಾಷ್ಟ್ರೀಯ ವೈದ್ಯರ ಸಮ್ಮೇಳನ

ಬೆಂಗಳೂರು: ‘ಬೊಜ್ಜು ಮತ್ತು ಸ್ಥೂಲಕಾಯ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಲು ಇದೇ 21ರಿಂದ 23ರವರೆಗೆ ಅಂತರರಾಷ್ಟ್ರೀಯ ತಜ್ಞ ವೈದ್ಯರ ಸಮ್ಮೇಳನವನ್ನು ನಗರದ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ’ ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ಡಾ.ಎಚ್.ವಿ.ಶಿವರಾಂ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,‘ದೇಶ ಮತ್ತು ವಿದೇಶಗಳ ತಜ್ಞ ವೈದ್ಯರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಏ.21ರ ಸಂಜೆ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಭಾರತೀಯ ಶಸ್ತ್ರಚಿಕಿತ್ಸಕರ ಸಂಘದ ಅಧ್ಯಕ್ಷ ಜಿ.ಸಿದ್ಧೇಶ್ ಭಾಗವಹಿಸಲಿದ್ದಾರೆ’ ಎಂದರು.

‘ದೇಶದಲ್ಲಿ ಶೇ 43.3ರಷ್ಟು ಮಂದಿಗೆ ಸ್ಥೂಲಕಾಯ ಸಮಸ್ಯೆಯಿದೆ. ನಗರ ಪ್ರದೇಶದಲ್ಲಿ ಶೇ 44.17ರಷ್ಟು ಮತ್ತು ಗ್ರಾಮೀಣ ಭಾಗದಲ್ಲಿ ಶೇ 36ರಷ್ಟು ಮಂದಿ ಸ್ಥೂಲಕಾಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇದಕ್ಕಾಗಿ ಆಧುನಿಕ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆಗಳೂ ಲಭ್ಯ’ ಎಂದರು.

21ಕ್ಕೆ ರೈತ ಸಮಾವೇಶ, ಕೇಜ್ರಿವಾಲ್ ಭಾಗಿ

ಬೆಂಗಳೂರು: ‘ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಇದೇ 21ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ. ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ನಡೆಯಲಿರುವ ರೈತರ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಮಾವೇಶಕ್ಕೆ ರಾಜ್ಯ ರೈತ ಸಂಘವು ಅರವಿಂದ ಕೇಜ್ರಿವಾಲ್ ಅವರನ್ನು ವಿಶೇಷವಾಗಿ ಆಹ್ವಾನಿಸಿತ್ತು. ಕೇಜ್ರಿವಾಲ್ ಅವರು ಸಮಾವೇಶದಲ್ಲಿ ರೈತರು ಮತ್ತು ಜನಸಾಮಾನ್ಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ’ ಎಂದರು.

ಕನ್ನಡ ಸಂಘದ ಸುವರ್ಣ ಮಹೋತ್ಸವ ಇಂದು

ಬೆಂಗಳೂರು: ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘವು 50 ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಏ.19ರಂದು ಸಂಜೆ 4.30 ಗಂಟೆಗೆ ಸಂಘದ ಸುವರ್ಣ ಮಹೋತ್ಸವ ಸಮಾರಂಭವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಯಾಗಿ ವಿಮರ್ಶಕ ಕೆ.ಮರುಳಸಿದ್ಧಪ್ಪ ಭಾಗವಹಿಸಲಿದ್ದು, ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಸಚಿವ ಅನಿಲ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸಂಘದ ಸಂಚಾಲಕಿ ಎಂ.ಟಿ.ರತಿ ತಿಳಿಸಿದ್ದಾರೆ.

ವಿಳಾಸ: ಸಿಂಡಿಕೇಟ್ ಸಭಾಂಗಣ, ಕ್ರೈಸ್ಟ್ ವಿಶ್ವವಿದ್ಯಾಲಯದ ಸೆಂಟ್ರಲ್ ಕ್ಯಾಂಪಸ್, ಹೊಸೂರು ರಸ್ತೆ.

22ರಿಂದ ‘ಶೇಕ್ಸ್‌ಪಿಯರನ ಶ್ರೀಮತಿ’ ನಾಟಕ

ಬೆಂಗಳೂರು: ಕವಿ ವಿಲಿಯಂ ಶೇಕ್ಸ್‌ಪಿಯರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಕ್ರಿಯೇಟಿವ್ ಥಿಯೇಟರ್ ವತಿಯಿಂದ ‘ಶೇಕ್ಸ್‌ಪಿಯರನ ಶ್ರೀಮತಿ’ ನಾಟಕ ಪ್ರದರ್ಶನವನ್ನು ಇದೇ 22 ಮತ್ತು 23ರಂದು ರಂಗಶಂಕರದಲ್ಲಿ ಏರ್ಪಡಿಸಲಾಗಿದೆ.

ಕಲಾವಿದೆ ಲಕ್ಷ್ಮಿ ಚಂದ್ರಶೇಖರ್ ಅವರು ಅಭಿನಯಿಸಲಿದ್ದಾರೆ. 22ರಂದು ಸಂಜೆ 7.30ಕ್ಕೆ, 23ರಂದು ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ ನಾಟಕ ಪ್ರದರ್ಶನಗೊಳ್ಳಲಿದೆ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಧ್ವಜ ದಿನಾಚರಣೆ: ಅತಿಥಿಗಳು–ಗೃಹ ಸಚಿವ ಆರಗ ಜ್ಞಾನೇಂದ್ರ, ರಜನೀಶ್ ಗೋಯಲ್, ಅಮರ್ ಕುಮಾರ್ ಪಾಂಡೆ, ಕೆ.ಟಿ. ಬಾಲಕೃಷ್ಣ, ಸ್ಥಳ–ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕೇಂದ್ರ ಕಚೇರಿ ಆವರಣ, ಹಲಸೂರು ಕೆರೆ ಹತ್ತಿರ, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಳಿಗ್ಗೆ 9

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ದೀಪಿಕ ಶ್ರೀಕಾಂತ್, ಬಾಲು ಮಾಸ್ತಿ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5.30ರಿಂದ

ಬಾಲು ಮಾಸ್ತಿ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ–ಸಂಗೀತಾ ಶಿವಕುಮಾರ್, ವಾದ್ಯ ಸಹಕಾರ–ಹೇಮಲತಾ, ತುಮಕೂರು ಬಿ.ರವಿಶಂಕರ್, ಶರತ್ ಕೌಶಿಕ್, ಆಯೋಜನೆ–ಶ್ರೀವಾಣಿ ಕಲಾ ಕೇಂದ್ರ, ಸ್ಥಳ–ವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಚಿತ್ರಾವಳಿ

ಬೆಂಗಳೂರಿನಲ್ಲಿ ಸೋಮವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ಆಯೋಜಿಸಿದ ಮಾಸ್ತಿ ಭವನ ಶಿಲಾನ್ಯಾಸ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಸ್ತಿ ಭವನ ನಿರ್ಮಾಣಕ್ಕೆ ಚಾಲನೆ ನೀಡಿದರು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ, ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ಹಾಗೂ ಇತರರು ಇದ್ದರು

ಬೆಂಗಳೂರಿನಲ್ಲಿ ಸೋಮವಾರ 'ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟ'ದ (ಎಫ್‌ಐಇಒ) ಕರ್ನಾಟಕ ಘಟಕ ಆಯೋಜಿಸಿದ್ದ ‘ಯುಎಇನ ಸೈಫ್ ವಲಯದೊಂದಿಗೆ ಜಾಗತಿಕವಾಗಿ ವಹಿವಾಟು ವಿಸ್ತರಿಸುವ ಕುರಿತು ಕಾರ್ಯಾಗಾರ'ದಲ್ಲಿ ಸೈಫ್ ವಲಯದ ಮಾರಾಟ ವಿಭಾಗದ ನಿರ್ದೇಶಕ ಮಹಮದ್ ಸಲೀಂ ಅಲಿ ಮೊಮ್ಮದ್ ಮಾತನಾಡಿದರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

URGENTLY REQUIRED Experience Marketing executive & Field officer for (security agency) Contact 9845044293/ 9611607618

Multiple Vacancy

REQUIRED TEAMLEADER, Telecaller, & Field Executive for For Banking Loan collection (salary 15,000-to-20,000). Direct recruitment to Company Contact: 9620206756, 9620200756.

Wanted

WANTED VISA EXECUTIVE for a Travel Agency in Kammanahalli, Banaswadi area. Contact Bose, 9844108690, Yeskay World Tours Blr Pvt. Ltd.

BUSINESS

Business Offers

Finance

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/9606701007

RENTAL PROPERTIES

Accommodation Available

Industrial And Factory

14500 SQFT. Industrial Godown for rent in Doddaballapur. Call: 9986716677.

REAL ESTATE SELLING

Flat

General

SALE 2 BHK Flat for sale at Palace Garden Apartment Compound, Palace Cross Road. East facing as per vastu. One covered car park. 1.10 cr. Negotiable. Contact: 9845493251, 9449009325

PERSONAL

Change of Name

I, YASHPAL SINGH, residing at Shashank Anutham 109, 2nd main Sir M.V. Layout Thindlu, Vidyaranyapura, Bangalore- 560097, have changed my name to YASHPAL JAYARAM SINGH vide affidavit dated 18.04.2022 before Notary P.N. Nagesha, Bangalore. Henceforth I shall be called YASHPAL JAYARAM SINGH only.

I, SANTHOSH KUMAR SADASHIVA, residing at #13, 8th Cross, Shivananda Nagar, Nagarabgavi, Bangalore-560072 have changed my name to SANTHOSH SHETTY SADASHIVA vide affidavit dated 11.04.2022 notary V.Anjanappa, Bangalore.

GOURI BEN W/O 14824942M HAV KHARADI SHANKARBHAI R/a MOJALIYA PADELA VIJAYNAGAR SABARKANTHA GUJARAT, my name GOURI BEN to KHARADI GOURIBEN SHANKARBHAI Notary KV MANI, Bangalore

KAMAL KISHORE SINGH, Son/o JC674980Y, NB SUB, SHANKAR KUMAR SINGH, Vill- Kheraihia Akbar Nagar Sultan Ganj Bhagalpur Bihar changed name from KAMAL KISHORE SINGH to KAMAL KISHOR SINGH, 18/04/2022, Notary K.V. Mani, Bangalore

I, P.JAGADEESHAN R/at No. 15/A, 12th Main Road, Shivanagar, Rajajinagar, Bangalore- 560010 have changed my name to JAKADEESHAN.P vide affidavit dated: 18/4/2022 Before Notary Onkarappa N.R Bangalore.

14816291M HAV/MT DILLIP KUMAR SAWN 2ATC my Mother Name records MANORAMMA SAWN Instead of MANORAMA SAWN Notary KV MANI, Bangalore

LAXMI DEVI Mother/o 6498468A, SEP DEEPAK CHAND, Vill- Bunga (Ath Gaon Shilling), Shilling Pithoragarh Uttarakhand, changed name from LAXMI DEVI to LAXMI CHAND, 18/04/2022, Notary K.V. Mani, Bangalore

I, NARASHIMAIAH BANAHALLY, residing at Bengaluru Rural-99 have changed my namas NARASIMHAIAH BANAHALLY vide affidavit dated 18/4/2022 before Notary P.C.Ramaiah, Bengaluru

JC673416X NB/SUB PRAKASH CHANDRA BUNKAR 2ATC my Son Name records KARAN KUMAR BUNKAR Instead of KARAN KUMAR Notary KV MANI, Bangalore

I, SHAHAJAHAJAN, residing at Bengaluru-37 have changed my name as SHAHJAHAN, Vide affidavit dated 18/4/2022 before Notary P.C.Ramaiah, Bengaluru

14824942M HAV KHARADI SHANKARBHAI 2ATC my Daughter Name records SONUBEN Instead of KHARADI SONUBEN SHANKARBHAI Notary KV MANI, Bangalore

JC673293W NB/SUB UDAY SHANKAR TRIPATHI 2ATC my Father Name records BAGISH CHANDRA TRIPATHY Instead of BAGISH CHANDRA TRIPATHI Notary KV MANI, Bangalore

I, NANDHINI. D.K residing at Bengaluru Rural-99 have changed my name as NANDINI. D.K vide affidavit dated 18/4/2022 before Notary P.C.Ramaiah, Bengaluru

JC673115N NB/SUB MAHENDRA KUMAR 2ATC My Daughter Name records PRITH SIKA Instead of PREET SHIKHA Notary KV MANI, Bangalore

REKHA W/O 14824772N HAV SAJAN BORO R/a BARAJAN LAKHIPATHER DHEMAJI ASSAM, my Name REKHA to REKHA BORO Notary KV MANI, Bangalore

JC673293W NB/SUB UDAY SHANKAR TRIPATHI 2ATC my Name records UDAY SHANKER TRIPATHY Instead of UDAY SHANKAR TRIPATHI Notary KV MANI, Bangalore

14824942M HAV KHARADI SHANKARBHAI 2ATC my Son Name records MEETKUMAR Instead of KHARADI MEETKUMAR SHANKARBHAI Notary KV MANI, Bangalore

DH DECCAN HERALD ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಬೆಂಗಳೂರಿನಲ್ಲಿ 'ವಿ ಸ್ಪೀಕ್ ಟೂ' ಸಂವಾದ: ನೋವು ಸಹಿಸಿ ಛಲದ ಬದುಕು ಕಟ್ಟಿಕೊಂಡವರ ಮನದಾಳದ ಮಾತು

'ದನಗಳಿಗೆ ಹಾಕುತ್ತಿದ್ದ ಅನ್ನ ತಿಂದು ಬದುಕು ಕಟ್ಟಿಕೊಂಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡಾಡಿ ದನಗಳಿಗಾಗಿ ರಸ್ತೆ ಬದಿ ಹಾಗೂ ಮನೆಗಳ ಎದುರು ಹಾಕಿರುತ್ತಿದ್ದ ಆಹಾರ ಸಂಗ್ರಹಿಸಿ ಸೇವಿಸುತ್ತಿದ್ದೆ. ಅನಾರೋಗ್ಯದಿಂದ ಬಳಲುತ್ತಿದ್ದ ಇಬ್ಬರು ಎಳೆಯ ಮಕ್ಕಳಿಗೂ ಅದನ್ನೇ ತಿನ್ನಿಸುತ್ತಿದ್ದೆ. ಆದರೆ, ಈಗ ನಾನೇ ನೂರಾರು ಮಂದಿಗೆ ಊಟ ಹಾಕುವ ಮಟ್ಟಿಗೆ ಬೆಳೆದಿದ್ದೇನೆ'...

ಒಣ ಕಸ ಸಂಗ್ರಹ ಕೇಂದ್ರದ ನಿರ್ವಾಹಕಿ ಇಂದುಮತಿ ಅವರ ನೋವು ಹಾಗೂ ಆತ್ಮವಿಶ್ವಾಸ ಭರಿತ ಮಾತುಗಳಿವು.

ಭಾರತೀಯ ಮಾನವ ವಸಾಹತುಗಳ ಸಂಸ್ಥೆ (ಐಐಎಚ್‌ಎಸ್), ಅಲಯನ್ಸ್ ಆಫ್ ಇಂಡಿಯನ್ ವೇಸ್ಟ್ ಪಿಕರ್ಸ್, ಹಸಿರು ದಳ, ಸಿಡಿಡಿ ಹಾಗೂ ಸೆಂಟರ್ ಫಾರ್ ಅಡ್ವೊಕಸಿ ಆ್ಯಂಡ್ ರಿಸರ್ಚ್ ಸಂಸ್ಥೆಗಳು ಜಂಟಿಯಾಗಿ ಹಮ್ಮಿಕೊಂಡಿದ್ದ 'ವಿ ಸ್ಪೀಕ್ ಟೂ' (ನಾವೂ ಮಾತನಾಡಬಲ್ಲೆವು) ಸಂವಾದ ಕಾರ್ಯಕ್ರಮದಲ್ಲಿ ಅಂತರಂಗದ ಭಾವನೆಗಳನ್ನು ಬಿಚ್ಚಿಟ್ಟರು.

'ಎಂಟನೇ ವಯಸ್ಸಿನಲ್ಲೇ ಅಮ್ಮ ತೀರಿಕೊಂಡರು. ಮತ್ತೊಂದು ಮದುವೆಯಾದ ಅಪ್ಪ ನಮ್ಮಿಂದ ದೂರ ಹೋದರು. ಬದುಕು ಕಟ್ಟಿಕೊಳ್ಳಲು ಅಜ್ಜಿಯ ಜೊತೆ ಅನಿವಾರ್ಯವಾಗಿ ತಮಿಳುನಾಡಿನಿಂದ ಬೆಂಗಳೂರಿಗೆ ಬಂದೆ. 17ನೇ ವಯಸ್ಸಿನಲ್ಲಿ ಮದುವೆಯಾದೆ. ಜನಿಸಿದ ಇಬ್ಬರು ಮಕ್ಕಳು ಬುದ್ಧಿ ಭ್ರಮಣೆಯಿಂದ ಬಳಲುತ್ತಿದ್ದರು. ಅವರ ಚಿಕಿತ್ಸೆ, ಜೀವನ ನಿರ್ವಹಣೆಗಾಗಿ ಸಾಲ ಮಾಡುವುದು ಅನಿವಾರ್ಯವಾಯಿತು. ಸಾಲಕ್ಕೆ ಹೆದರಿ ಪತಿ ಆತ್ಮಹತ್ಯೆ ಮಾಡಿಕೊಂಡರು. ಅದರ ಬೆನ್ನಲ್ಲೇ ಮಕ್ಕಳೂ ತೀರಿಕೊಂಡರು. ಹೀಗಿದ್ದರೂ ಎದೆಗುಂದದೆ 'ಸ್ಕ್ರಾಪ್' ಅಂಗಡಿ ಹಾಕಿಕೊಂಡೆ. ಹಸಿರು ದಳದವರು ಒಣ ಕಸ ಸಂಗ್ರಹಣೆಯ ಪರವಾನಗಿ ನೀಡಿದರು. ಬಳಿಕ ನನ್ನ ಬದುಕೇ ಬದಲಾಯಿತು' ಎಂದು ಭಾವುಕರಾದರು.

ಚಿಂದಿ ಆಯುವ ಇಂದಿರಾ, 'ಲಾಕ್‌ಡೌನ್ ಸಮಯದಲ್ಲಿ ಕೆಲಸವೇ ಇಲ್ಲದೆ ಮನೆಯಲ್ಲಿ ಕೂರಬೇಕಾಯಿತು. ಆಗ ಹೊತ್ತಿನ ಊಟಕ್ಕೂ ಪರದಾಡುವಂತಾಗಿತ್ತು. ಮನೆ ಬಾಡಿಗೆ ಕಟ್ಟಲಾಗದೆ ಪರಿತಪಿಸುವಂತಾಗಿತ್ತು. ಇಂತಹ ಸಾಕಷ್ಟು ನೋವುಗಳನ್ನು ಸಹಿಸಿಕೊಂಡು ಮೂರು ಮಕ್ಕಳಿಗೂ ಶಿಕ್ಷಣ ಕೊಡಿಸಿದ್ದೇನೆ. ದೊಡ್ಡ ಮಗಳು ಪಿಎಚ್.ಡಿ ವ್ಯಾಸಂಗ ಮಾಡುತ್ತಿದ್ದಾಳೆ. ಮಗ ಪದವಿ ಪೂರೈಸಿದ್ದಾನೆ. ಅವರಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಸರ್ಕಾರ ನಮ್ಮಂತಹ ಕೊಳೆಗೇರಿ ನಿವಾಸಿಗಳು, ಬಡವರಿಗೆ ಉದ್ಯೋಗದ ಭದ್ರತೆ ಒದಗಿಸಬೇಕು. ವಸತಿ ಸೌಕರ್ಯ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

ಎಫ್‌ಎಸ್‌ಟಿಪಿ ಆಪರೇಟರ್ ರಾಜಕುಮಾರ್, 'ಮಾನವ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಕೆಲಸ ಮಾಡುತ್ತಿರುವುದಕ್ಕೆ ಮನೆಯವರು ವಿರೋಧಿಸಿದರು. ಸ್ನೇಹಿತರು ಹೀಯಾಳಿಸಿದರು. ಆ ನೋವುಗಳನ್ನೆಲ್ಲಾ ಸಹಿಸಿಕೊಂಡು ಗೌರವಯುತ ಬದುಕು ಕಟ್ಟಿಕೊಂಡಿದ್ದೇನೆ. ನೀನು ನಮ್ಮ ಪಾಲಿಗೆ ಸತ್ತೇ ಹೋದೆ ಎಂದು ಹೇಳಿದ್ದ ಅಪ್ಪ, ಅಮ್ಮ ಈಗ ಪ್ರೀತಿಯಿಂದ ಮಾತನಾಡಿಸುತ್ತಾರೆ' ಎಂದು ಸಂತಸ ವ್ಯಕ್ತಪಡಿಸಿದರು.

ಸಾರ್ವಜನಿಕ ಶೌಚಾಲಯ ನಿರ್ವಹಣೆ ಮಾಡುವ ಚಿತ್ರಾ, 'ಕೋವಿಡ್ ಸಮಯದಲ್ಲಿ ಸಹೋದರರಿಬ್ಬರು ಮರಣ ಹೊಂದಿದ್ದರು. ಅವರ ಶವ ಹಸ್ತಾಂತರಿಸಲೂ ಆಸ್ಪತ್ರೆಯವರು ಹಣ ಕೇಳಿದ್ದರು' ಎಂದು ಬೇಸರ ವ್ಯಕ್ತಪಡಿಸಿದರು.

ಪೌರ ಕಾರ್ಮಿಕರಾದ ವಲ್ಲಿ, 'ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಿದ್ದೆವು. ಕುಡಿಯಲು ನೀರು ಕೊಡಲು ಜನ ಹಿಂದೇಟು ಹಾಕುತ್ತಿದ್ದರು. ನೀರು ತುಂಬಿದ ಬಾಟಲಿಯನ್ನು ದೂರದಿಂದಲೇ ನಮ್ಮತ್ತ ಬಿಸಾಕುತ್ತಿದ್ದರು. ಇಂತಹ ಸಾಕಷ್ಟು ಅವಮಾನಗಳನ್ನು ಸಹಿಸಿಕೊಂಡೇ ಜೀವನ ನಡೆಸುತ್ತಿದ್ದೇವೆ. ಬಿಬಿಎಂಪಿಯವರು ನೀಡುವ ವೇತನದಿಂದ ಬದುಕು ಕಟ್ಟಿಕೊಳ್ಳುವುದು ಕಷ್ಟ. ವೇತನ ಹೆಚ್ಚಿಸಿದರೆ ಹೆಚ್ಚು ಅನುಕೂಲ' ಎಂದು ಹೇಳಿದರು.

ಕರ್ನಾಟಕ ದತ್ತಾಂಶ ಕೇಂದ್ರ ನೀತಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದತ್ತಾಂಶ ಕೇಂದ್ರ ಉದ್ಯಮಗಳ ಉತ್ತೇಜನಕ್ಕಾಗಿ 'ಕರ್ನಾಟಕ ದತ್ತಾಂಶ ಕೇಂದ್ರ ನೀತಿ–2022' ಕ್ಕೆ ಸೋಮವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಈ ಮಾಹಿತಿ ನೀಡಿದರು. ದೇಶದಲ್ಲಿ ದತ್ತಾಂಶ ಕೇಂದ್ರ ಉದ್ಯಮ (ಡೇಟಾ ಸೆಂಟರ್ ಇಂಡಸ್ಟ್ರಿ) ಸ್ಥಾಪನೆಗೆ ಕರ್ನಾಟಕ ನೆಚ್ಚಿನ ತಾಣವಾಗಿದೆ. ದೇಶದ ದತ್ತಾಂಶ ಕೇಂದ್ರ ಉದ್ಯಮಗಳ ಪ್ರಮುಖ ಐದು ತಾಣಗಳಲ್ಲಿ ಬೆಂಗಳೂರು ಪ್ರಮುಖವಾದುದು ಎಂದು ಅವರು ಹೇಳಿದರು.

ಈ ನೀತಿಯನ್ನು 5 ವರ್ಷಗಳ ಅವಧಿಯಲ್ಲಿ ಜಾರಿ ಮಾಡಲಾಗುವುದು. ಇದಕ್ಕಾಗಿ ₹100.50 ಕೋಟಿ ಅಗತ್ಯವಿದೆ ಎಂದು ಹೇಳಿದ ಮಾಧುಸ್ವಾಮಿ, ಬಂಡವಾಳ ಸಹಾಯಧನ, ಭೂ ಸಹಾಯಧನ, ಹಸಿರು ಇಂಧನ ದರ ಮರುಪಾವತಿಯಂತಹ ಅಂಶಗಳನ್ನು ನೀತಿ ಒಳಗೊಂಡಿದೆ. ವಿದ್ಯುತ್ ದರ, ವಿದ್ಯುತ್ ಶುಲ್ಕ, ಮುದ್ರಾಂಕ ಶುಲ್ಕ, ಭೂಪರಿವರ್ತನೆ ಶುಲ್ಕ ಮುಂತಾದ ರಿಯಾಯ್ತಿಗಳನ್ನು ನೀಡಲು 5 ವರ್ಷಗಳಿಗೆ ₹1467.43 ಕೋಟಿ ಬೇಕಾಗುತ್ತದೆ ಎಂದರು.

ಹೊಸ ನೀತಿಯ ಮೂಲಕ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದತ್ತಾಂಶ ಕೇಂದ್ರ ಉದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುವುದು. ಅಲ್ಲದೆ, ಈ ಉದ್ಯಮ ಬೆಳವಣಿಗೆಗೆ ಅನುಕೂಲವಾಗುವ ವ್ಯವಸ್ಥೆಯನ್ನೂ ರೂಪಿಸಲಾಗುವುದು. ಈ ಕ್ಷೇತ್ರದಲ್ಲಿನ ಹೂಡಿಕೆಗೆ ದೇಶದಲ್ಲಿ ಕರ್ನಾಟಕವೇ ಮೊದಲ ಆದ್ಯತೆ ಆಗುವಂತೆ ಪೂರಕ ವ್ಯವಸ್ಥೆ ಅಭಿವೃದ್ಧಿಪಡಿಸಲಾಗುವುದು ಎಂದರು.

ಕರ್ನಾಟಕವು ಜಾಗತಿಕ ದತ್ತಾಂಶ ಕೇಂದ್ರಗಳ ವ್ಯವಸ್ಥೆ ಮತ್ತು ಡಿಜಿಟಲ್ ಪೂರೈಕೆ ವ್ಯವಸ್ಥೆ ಭಾಗವಾಗಬೇಕು. ಇದಕ್ಕಾಗಿ ಸುಮಾರು ₹10 ಸಾವಿರ ಕೋಟಿ ಹೂಡಿಕೆ ನಿರೀಕ್ಷಿಸಲಾಗಿದೆ. 2025 ರ ವೇಳೆಗೆ 250 ಮೆ.ವ್ಯಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರಗಳ ಉದ್ಯಮ ರಾಜ್ಯದಲ್ಲಿ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಸಂಪುಟ ಸಭೆಯ ಪ್ರಮುಖ ತೀರ್ಮಾನ

- ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆಗೆ ₹136 ಕೋಟಿ ಅಂದಾಜಿಗೆ ಒಪ್ಪಿಗೆ
- ಶಿಗ್ಗಾವಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ ₹25 ಕೋಟಿ ಅನುದಾನ
- ದಾವಣಗೆರೆ ಮತ್ತು ಹರಿಹರದ ಮಧ್ಯೆ ರೈಲ್ವೇ ಮೇಲ್ಸೇತುವೆ ಮತ್ತು ರಸ್ತೆ ನಿರ್ಮಾಣಕ್ಕೆ ₹ 36.36 ಕೋಟಿಗೆ ಅನುಮೋದನೆ.
- ಹಾವೇರಿ ಜಿಲ್ಲೆಯಲ್ಲಿ ಕೆರೆಗಳನ್ನು ತುಂಬಿಸಲು ₹105 ಕೋಟಿಗೆ ಅನುಮೋದನೆ

ಈಜಿಪುರ ಮೇಲ್ಸೇತುವೆ: ಟೆಂಡರ್ ರದ್ದು

ಬೆಂಗಳೂರು: ನಗರದ ಈಜಿಪುರ ಮೇಲ್ಸೇತುವೆ ನಿರ್ಮಾಣಕ್ಕಾಗಿ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಈ ಕಾಮಗಾರಿ ತೀರಾ ಮಂದಗತಿಯಲ್ಲಿ ಸಾಗಿತ್ತು. ಎರಡು ವರ್ಷಗಳಿಂದ ಪ್ರಗತಿಯೇ ಆಗಿರಲಿಲ್ಲ. ಆದ್ದರಿಂದ ಗುತ್ತಿಗೆಯನ್ನು ರದ್ದುಪಡಿಸುವಂತೆ ಬಿಬಿಎಂಪಿಯೂ ಶಿಫಾರಸು ಮಾಡಿತ್ತು ಎಂದು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಚಿನ್ನ ₹ 542, ಬೆಳ್ಳಿ ₹ 993ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹ 542ರಷ್ಟು ಹೆಚ್ಚಾಗಿ ₹ 53,461ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 993ರಷ್ಟು ಏರಿಕೆ ಕಂಡು ₹ 69,932ರಂತೆ ಮಾರಾಟವಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಹಾಗೂ ರೂಪಾಯಿ ಮೌಲ್ಯ ಇಳಿಕೆ ಆಗಿರುವುದರಿಂದ ದೇಶದಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಕಾಸು ಕೊಟ್ಟು ಪೊರಕೆ, ಮೊರದಲ್ಲಿ ಏಟು ತಿಂದ ಭಕ್ತರು

ಪ್ರಜಾವಾಣಿ ವಾರ್ತೆ

ಆನೇಕಲ್: 'ಪೊರಕೆ, ಮೊರದಲ್ಲಿ ಹೊಡೆಯುತ್ತೇನೆ' ಎಂಬ ಬೈಗುಳ ಕೇಳಿರಬಹುದು. ಆದರೆ, ಕಾಸು ಕೊಟ್ಟು ಪೊರಕೆ, ಮೊರದಲ್ಲಿ ಹೊಡೆಸಿಕೊಳ್ಳುವ ವಿಶಿಷ್ಟ ಆಚರಣೆಯು ಪಟ್ಟಣದ ಧರ್ಮರಾಯಸ್ವಾಮಿ ದ್ರೌಪದಿ ದೇವಿ ಕರಗ ಮಹೋತ್ಸವ ನಡೆಯುತ್ತದೆ. ಇದಕ್ಕೆ 'ಕೋಟೆ ಜಗಳ' ಎಂದು ಕಡೆಯುವುದು ವಾಡಿಕೆ.

ಇಲ್ಲಿನ ಸಂತೆ ಮಾಳದಲ್ಲಿ ಹಸೀ ಕರಗದ ನಂತರ ಎರಡನೇ ದಿನವಾದ ಸೋಮವಾರ ಈ ವಿಶಿಷ್ಟ ಧಾರ್ಮಿಕ ಆಚರಣೆ ನಡೆಯಿತು. ಸಂತೆ ಮಾಳದ ಮರವೊಂದರ ಕಟ್ಟೆಯ ಸುತ್ತಲೂ ಕೋಟೆ ಜಗಳಕ್ಕಾಗಿ ಜನರು ಜಮಾಯಿಸಿದ್ದರು.

ಕೋಟೆ ಜಗಳದಲ್ಲಿ ಕಾಳಿ ದೇವಿಯ ಆವಾಹನೆಗೊಳಗಾದ ವ್ಯಕ್ತಿಯು ಕರಗದ ಗುಡಿಯಲ್ಲಿ ಗುಡಿಸಿದ ಪೊರಕೆ, ಮೊರವನ್ನು ಹಿಡಿದು ಗಡಿಯ ಸುತ್ತಲೂ ಸುತ್ತುತ್ತಾರೆ. ಇವರಿಂದ ದೇವಾಲಯ ಗುಡಿಸಿದ ಪೊರಕೆ, ಮೊರಗಳಿಂದ ಹೊಡೆಸಿಕೊಂಡರೇ ಒಳ್ಳೆಯದಾಗುವುದು ಮತ್ತು ನಕಾರಾತ್ಮಕ ಅಂಶಗಳು ನಾಶವಾಗುತ್ತದೆ ಎಂಬುದು ಭಕ್ತರ ನಂಬಿಕೆ.

ಆನೇಕಲ್ ಕರಗ ಮಹೋತ್ಸವದಲ್ಲಿ ನಡೆದ ಕೋಟೆ ಜಗಳದಲ್ಲಿ ಪೊರಕೆ, ಮೊರದಿಂದ ಹೊಡೆಯುತ್ತಿರುವ ಕಾಳಿ ವೇಷಧಾರಿ

ಹಾಗಾಗಿ, ಈ ವ್ಯಕ್ತಿಯು ಸುತ್ತು ಹಾಕುತ್ತಾ ಬರುತ್ತಿದ್ದಂತೆ ಗಡಿಯ ಹೊರಗಡೆ ನಿಂತಿದ್ದ ಮಹಿಳೆಯರು, ಮಕ್ಕಳು ಸೇರಿದಂತೆ ಎಲ್ಲರೂ ಕಾಳಿ ವೇಷಧಾರಿಗೆ ಹಣ ನೀಡಿ ಪೊರಕೆ, ಮೊರದಲ್ಲಿ ಹೊಡೆಸಿಕೊಳ್ಳಲು ಮುಗಿಬಿದ್ದರು. ಜನರನ್ನು ನಿಭಾಯಿಸಲು ಕರಗ ಸಮಿತಿ ಪದಾಧಿಕಾರಿಗಳು ಹರಸಾಹಸಪಟ್ಟರು.

ಗಡಿಯ ಸುತ್ತಲೂ ಸುತ್ತುವ ಸಂದರ್ಭದಲ್ಲಿ ದೇವರ ಉತ್ಸವ ಮೂರ್ತಿಗಳ ಮೆರವಣಿಗೆ ಹಾಗೂ ಗಂಟೆಯ ನೀನಾದ ನಿರಂತರವಾಗಿ ನಡೆಯುತ್ತಿತ್ತು. ದ್ರೌಪದಿ ದೇವಿಯೇ ಕಾಳಿ ವೇಷದಲ್ಲಿ ಆವಾಹನೆಗೊಳ್ಳುತ್ತಾಳೆ ಎಂಬುದು ಭಕ್ತರ ನಂಬಿಕೆ.

ಈ ವ್ಯಕ್ತಿಯು ಇದೇ ಸಂದರ್ಭದಲ್ಲಿ ಬಲಿ ನೀಡಲಾದ ಮೇಕೆಯ ಶ್ವಾಸಕೋಶವನ್ನು ಬಾಯಿಯಲ್ಲಿ ಕಚ್ಚಿಕೊಂಡು ಸಿಕ್ಕ ಸಿಕ್ಕವರಿಗೆ ಪೊರಕೆ, ಮೊರದಲ್ಲಿ ಹೊಡೆಯುವ ಸನ್ನಿವೇಶ ಸ್ಥಳದಲ್ಲಿದ್ದವರಿಗೆ ರೋಮಾಂಚನ ಮೂಡಿಸಿತು.

80 ಅಡಿ ಅಗಲ ರಸ್ತೆ 20 ಅಡಿಗೆ ಪರಿವರ್ತಿಸುವ ಯೋಜನೆ: ಬಸವನಗುಡಿ ಪರಂಪರೆ ಉಳಿಸಲು ಆಗ್ರಹ

ಕುಗ್ಗಲಿದೆ ಗಾಂಧಿ ಬಜಾರ್ ಮುಖ್ಯ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ಪರಂಪರೆ ಹೊಂದಿರುವ ಗಾಂಧಿ ಬಜಾರ್‌ಗೆ ಆಧುನೀಕರಣದ ಸ್ಪರ್ಶ ನೀಡುವ ಯೋಜನೆ ಸ್ಥಳೀಯರ ಟೀಕೆಗೆ ಒಳಗಾಗಿದೆ.

'ಸ್ಮಾರ್ಟ್ ಸಿಟಿ' ಅಡಿಯಲ್ಲಿ ಗಾಂಧಿ ಬಜಾರ್‌ನ ಮುಖ್ಯ ರಸ್ತೆಯನ್ನು ಕುಗ್ಗಿಸಿ ಪಾದಚಾರಿ ಮಾರ್ಗವನ್ನು ವಿಸ್ತರಿಸುವ ನಗರ ಭೂಸಾರಿಗೆ ನಿರ್ದೇಶನಾಲಯದ (ಡಲ್ಟ್) ಯೋಜನೆಗೆ ವಿರೋಧ ವ್ಯಕ್ತವಾಗಿದೆ.

ಬಸವನಗುಡಿ ವ್ಯಾಪಾರಿಗಳ ವೇದಿಕೆ, ಬಸವನಗುಡಿ ನಿವಾಸಿಗಳ ಕ್ಷೇಮಾಭಿವೃದ್ಧಿ ವೇದಿಕೆ, ಬಸವನಗುಡಿ ವರ್ತಕರ ಮಂಡಳಿ, ಗಾಂಧಿ ಬಜಾರ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆ, ಬೆಂಗಳೂರು ಪ್ರಜಾ ವೇದಿಕೆ ಸದಸ್ಯರು ಸೋಮವಾರ 'ಡಲ್ಟ್' ಯೋಜನೆ ವಿರೋಧಿಸಿ ಪ್ರತಿಭಟನೆ ನಡೆಸಿದರು. ವಿಶ್ವ ಪರಂಪರೆಯ ದಿನವಾದ ಸೋಮವಾರವೇ ಈ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು.

ಇಲ್ಲಿನ ಆಹ್ಲಾದಕರ ಮತ್ತು ಶಾಂತಿಯ ವಾತಾವರಣಕ್ಕೆ ಧಕ್ಕೆ ತರುವ ಪ್ರಯತ್ನ ಇದಾಗಿದೆ. ಈ ಯೋಜನೆಯನ್ನು ಕೈಬಿಡುವ ಮೂಲಕ ಬಸವನಗುಡಿಯ ಸಾಂಸ್ಕೃತಿಕ ಪರಂಪರೆ ಉಳಿಸಬೇಕು. ಈ ಯೋಜನೆಯನ್ನು ಬಲವಾಗಿ ವಿರೋಧಿಸುತ್ತೇವೆ ಎಂದು ಹೇಳಿದರು.

ಈಗಿರುವ 80 ಅಡಿ ಅಗಲದ ಮುಖ್ಯ ರಸ್ತೆಯನ್ನು 20 ಅಡಿ ರಸ್ತೆಗೆ ಕುಗ್ಗಿಸಿ ಪಾದಚಾರಿ ಮಾರ್ಗವನ್ನು ವಿಸ್ತರಿಸುವ ಯೋಜನೆಯು ಸಂಪೂರ್ಣ ಅವೈಜ್ಞಾನಿಕವಾಗಿದೆ. ಗಾಂಧಿ ಬಜಾರ್ ಮತ್ತು ಡಿವಿಜಿ ರಸ್ತೆಯಲ್ಲಿ ಪಾರ್ಕಿಂಗ್ ನಿಷೇಧಿಸಲು ಉದ್ದೇಶಿಸಲಾಗಿದೆ. ಗಾಂಧಿ ಬಜಾರ್ ಮುಖ್ಯ ರಸ್ತೆಯನ್ನು ಪಾದಚಾರಿಗಳಿಗೆ ಮಾತ್ರ ನಿಗದಿಪಡಿಸಲಾಗುತ್ತಿದೆ. ಈ ರೀತಿಯ ಕ್ರಮಗಳಿಂದ ಸಂಚಾರ ದಟ್ಟಣೆ ಹೆಚ್ಚಾಗಲಿದೆಯೇ ಹೊರತು ಸಮಸ್ಯೆಗಳು ಕಡಿಮೆಯಾಗುವುದಿಲ್ಲ ಎಂದು ದೂರಿದರು.

'ಆಧುನೀಕರಣಗೊಳಿಸುವ ಬದಲು ಈಗಿರುವ ಮೂಲಸೌಕರ್ಯಗಳನ್ನು ಉತ್ತಮ ಪಡಿಸಬೇಕು. ಇದರಿಂದ ವ್ಯಾಪಾರಿಗಳಿಗೂ ಮತ್ತು ನಾಗರಿಕರಿಗೂ ಅನುಕೂಲವಾಗುತ್ತದೆ' ಎಂದು ಬಸವನಗುಡಿ ವರ್ತಕರ ಮಂಡಳಿ ಅಧ್ಯಕ್ಷ ಎಂ. ವೆಂಕಟೇಶ್ ಹೇಳಿದರು.

ಪ್ರತಿಭಟನೆಯಲ್ಲಿ ಬಸವನಗುಡಿ ನಿವಾಸಿಗಳ ಸಂಘದ ಅಧ್ಯಕ್ಷ ಗುರುಪ್ರಸಾದ್, ಆಮ್ ಆದ್ಮಿ ಪಕ್ಷದ ಮುಖಂಡ ಭಾಸ್ಕರ್ ರಾವ್, ಸುಧೀಂದ್ರ, ಕ್ರಿಕೆಟ್ ತರಬೇತುದಾರ ಮುರಳೀಧರ್ ಪಾಲ್ಗೊಂಡಿದ್ದರು.

ಐರೋಪ್ಯ ಶೈಲಿಯ ಆಧುನೀಕರಣವನ್ನು ಗಾಂಧಿ ಬಜಾರ್ ಪ್ರದೇಶದಂತಹ ಹಳೆಯ ಬೆಂಗಳೂರಿನಲ್ಲಿ ಕೈಗೊಳ್ಳಬಾರದು ಎಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

'ಗಾಂಧಿ ಬಜಾರ್‌ವನ್ನು ಹಾಗೆ ಬಿಡಿ ಎಂದು ನಾವು ಪ್ರತಿಪಾದಿಸುತ್ತಿದ್ದೇವೆ. ಚರ್ಚ್‌ಸ್ಟ್ರೀಟ್‌ನಂತಹ ಪ್ರದೇಶಗಳಲ್ಲಿ ಆಧುನೀಕರಣದ ಕಾಮಗಾರಿ ಕೈಗೊಳ್ಳಬಹುದು. ಆದರೆ, ಬಸವನಗುಡಿ, ಮಲ್ಲೇಶ್ವರ ಮತ್ತು ಚಾಮರಾಜಪೇಟೆಗಳಲ್ಲಿ ಸರಿ ಹೊಂದುವುದಿಲ್ಲ. ಆಧುನೀಕರಣದಿಂದ ಹೊಸ ಸಂಚಾರ ಸಮಸ್ಯೆಗಳು ಹೆಚ್ಚಾಗುತ್ತವೆ.' ಎಂದು ಇತಿಹಾಸಕಾರ ಸುರೇಶ್ ಮೂನ ಪ್ರತಿಪಾದಿಸಿದ್ದಾರೆ.

ಗಾಂಧಿ ಬಜಾರ್‌ನಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯದ(ಡಲ್ಟ್) ರೂಪಿಸಿರುವ ಯೋಜನೆಯ ನೀಲ ನಕಾಶೆಯನ್ನು ಸ್ಥಳೀಯರು ಸೋಮವಾರ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಯೋಜನೆಯಲ್ಲಿರುವ ಪ್ರಮುಖ ಅಂಶಗಳು

- ಬಹು ಹಂತದ ವಾಹನಗಳ ಪಾರ್ಕಿಂಗ್ ಸಂಕೀರ್ಣ ನಿರ್ಮಾಣ
- ಗಾಂಧಿ ಬಜಾರ್ ಮುಖ್ಯ ರಸ್ತೆಯಲ್ಲಿ ಬಸ್, ಆ್ಯಂಬುಲೆನ್ಸ್, ಅಗ್ನಿಶಾಮಕ ವಾಹನ ಹೊರತುಪಡಿಸಿ ಇತರ ವಾಹನಗಳ ಪ್ರವೇಶಕ್ಕೆ ನಿಷೇಧ.
- ಗಾಂಧಿ ಬಜಾರ್ ಮತ್ತು ಡಿವಿಜಿ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧ
- ವೈಟ್ ಟ್ಯಾಪಿಂಗ್ ರಸ್ತೆ ನಿರ್ಮಾಣಕ್ಕೆ ಪ್ರಸ್ತಾವ
- ಸರಕು ವಾಹನಗಳಿಗೆ ರಾತ್ರಿ 9ರಿಂದ ಬೆಳಿಗ್ಗೆ 7ಗಂಟೆಯವರೆಗೆ ಪ್ರವೇಶ

ಅವೈಜ್ಞಾನಿಕ ಯೋಜನೆ: ವೆಂಕಟೇಶ್

'ಗಾಂಧಿ ಬಜಾರ್ ಆಧುನೀಕರಣಗೊಳಿಸುವ ಯೋಜನೆ ಮೂಲಕ ಇಲ್ಲಿನ ಪರಂಪರೆಗೆ ಧಕ್ಕೆ ತರಲಾಗುತ್ತಿದೆ. ಇದೊಂದು ಅವೈಜ್ಞಾನಿಕ ಮತ್ತು ಅನಗತ್ಯ ಯೋಜನೆ' ಎಂದು ಬಸವನಗುಡಿ ವರ್ತಕರ ಮಂಡಳಿ ಅಧ್ಯಕ್ಷ ಎಂ. ವೆಂಕಟೇಶ್ ಅಸಮಾಧಾನ ವ್ಯಕ್ತಪಡಿಸಿದರು.

'ಈ ಯೋಜನೆ ರೂಪಿಸುವ ಮುನ್ನ ಸ್ಥಳೀಯ ನಾಗರಿಕರು ಮತ್ತು ವ್ಯಾಪಾರಿಗಳು ಸೇರಿದಂತೆ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಸಮಾಲೋಚನೆ ಕುರಿತಾದ ಮೊದಲ ಸಭೆಯಲ್ಲಿ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದಕ್ಕೆ ಉಳಿದ ಸಭೆಗಳಿಗೆ ನಮ್ಮನ್ನು ಆಹ್ವಾನಿಸಲಿಲ್ಲ' ಎಂದರು.

'ಗಾಂಧಿ ಬಜಾರ್‌ನಲ್ಲಿ ಶನಿವಾರ, ಭಾನುವಾರ ಮತ್ತು ಹಬ್ಬದ ಸಮಯದಲ್ಲಿ ಮಾತ್ರ ಸಂಚಾರ ದಟ್ಟಣೆ ಹೆಚ್ಚಾಗುತ್ತದೆ. ಸದ್ಯ ಉಭಯ ಪಥದ ರಸ್ತೆ ಇರುವುದರಿಂದ ಸಂಚಾರ ಸಮಸ್ಯೆ ಇಲ್ಲ. ಹೊಸ ಯೋಜನೆ ಅನ್ವಯ ಈ ಮಾರ್ಗದಲ್ಲಿ ಸಂಚಾರಕ್ಕೆ ನಿರ್ಬಂಧ ವಿಧಿಸಿದರೆ ಇತರ ರಸ್ತೆಗಳಲ್ಲಿ ದಟ್ಟಣೆಯಾಗಲಿದೆ. ಆದರೆ, ಈ ರಸ್ತೆಗಳು ಕಿಷ್ಕಿಂಧೆಯಾಗಿರುವುದರಿಂದ ವಾಹನಗಳ ಸುಗಮ ಸಂಚಾರ ಹೇಗೆ ಸಾಧ್ಯ' ಎಂದರು.

'ಗಾಂಧಿ ಬಜಾರ್ ಬಗ್ಗೆ ಜರ್ಮನಿಯ ಜಿಐಝಡ್ ಕಂಪನಿಯಿಂದ ಸಮೀಕ್ಷೆ ಮಾಡಿಸಲಾಗಿದೆ. ಡಲ್ಟ್ ರೂಪಿಸಿರುವ ಯೋಜನೆಯನ್ನು ಬಿಬಿಎಂಪಿ ಅನುಷ್ಠಾನಗೊಳಿಸುತ್ತಿದೆ. ಮೋಟಾರು ವಾಹನಗಳಿಗೆ ಮುಖ್ಯ ರಸ್ತೆಯಲ್ಲಿ ನಿರ್ಬಂಧ ವಿಧಿಸಲಾಗಿದೆ. ತಳ್ಳುಗಾಡಿಗಳ ಮೂಲಕ ಸರಕುಗಳನ್ನು ತರಲು ಸಾಧ್ಯವೇ? ಎಲ್ಲ ವ್ಯಾಪಾರಸ್ಥರು ತಳ್ಳುಗಾಡಿಗಳನ್ನು ಇಟ್ಟುಕೊಳ್ಳುವ ಪರಿಸ್ಥಿತಿಯನ್ನು ಸೃಷ್ಟಿಸಲಾಗುತ್ತಿದೆ' ಎಂದರು.

'ನಮ್ಮ ಸಂಘದಿಂದಲೇ ಇಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಬಗ್ಗೆ ಎಂಜಿನಿಯರ್‌ಗಳು, ಸಂಚಾರ ತಜ್ಞರ ಮೂಲಕ ಯೋಜನೆ ರೂಪಿಸಿ ಬಿಬಿಎಂಪಿಗೆ ಸಲ್ಲಿಸಲಾಗಿತ್ತು. ಆದರೆ, ನಮ್ಮ ಯೋಜನೆಯನ್ನು ಸರ್ಕಾರ ಪರಿಗಣಿಸಲಿಲ್ಲ' ಎಂದು ದೂರಿದರು.

ಸುದ್ದಿ 2 ನಿಮಿಷ

ಲಂಚ: ಬೆಸ್ಕಾಂ ಎ.ಇ ಬಂಧನ

ಬೆಂಗಳೂರು: ಬಡಾವಣೆಯೊಂದಕ್ಕೆ ಅಳವಡಿಸಿರುವ 280 ಕೆ.ವಿ. ಸಾಮರ್ಥ್ಯದ ವಿದ್ಯುತ್ ಪರಿವರ್ತಕಕ್ಕೆ ಚಾಲನೆ ನೀಡಲು ₹ 20,000 ಲಂಚ ಪಡೆಯುತ್ತಿದ್ದ ಬೆಸ್ಕಾಂ ಕಾರ್ಯ ಮತ್ತು ಪಾಲನೆ ಘಟಕದ ನಾಲ್ಕನೇ ಪೂರ್ವ ಉಪ ವಿಭಾಗ (ವರ್ತೂರು) ಕಚೇರಿಯ ಸಹಾಯಕ ಎಂಜಿನಿಯರ್ (ಎ.ಇ) ನವೀನ್ ಡಿ. ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ವರ್ತೂರಿನ ಬಳಗೆರೆ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಬಡಾವಣೆಯೊಂದರ ವಿದ್ಯುತ್ ಕಾಮಗಾರಿಗಳ ಗುತ್ತಿಗೆ ಪಡೆದಿದ್ದ ಬೆಳ್ಳಂದೂರು ನಿವಾಸಿಯೊಬ್ಬರು ವಿದ್ಯುತ್ ಪರಿವರ್ತಕಕ್ಕೆ ಚಾಲನೆ ನೀಡುವಂತೆ ಮನವಿ ಸಲ್ಲಿಸಿದ್ದರು. ₹ 25,000 ಲಂಚ ನೀಡಿದರೆ ವಿದ್ಯುತ್ ಪರಿವರ್ತಕಕ್ಕೆ ಚಾಲನೆ ನೀಡುವುದಾಗಿ ನವೀನ್ ಬೇಡಿಕೆ ಇಟ್ಟಿದ್ದರು. ನಂತರ ನಡೆದ ಮಾತುಕತೆಯಲ್ಲಿ ₹ 20,000 ನೀಡುವಂತೆ ಸೂಚಿಸಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು.

ದೂರುದಾರರಿಂದ ಸೋಮವಾರ ₹ 20,000 ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ನವೀನ್ ಅವರನ್ನು ಬಂಧಿಸಿದ್ದಾರೆ ಎಂದು ಎಸಿಬಿ ತಿಳಿಸಿದೆ.

ಪಂ. ವಿನಾಯಕ ತೊರವಿಗೆ ಪ್ರಶಸ್ತಿ

ಬೆಂಗಳೂರು: ಪಂಡಿತ್ ವಿನಾಯಕ ತೊರವಿ ಅವರಿಗೆ 2022ರ ನಿರ್ಮಾಣ್-ಪುರಂದರ ಸಂಗೀತರತ್ನ ಪ್ರಶಸ್ತಿಯನ್ನು ಭಾನುವಾರ ಪ್ರದಾನ ಮಾಡಲಾಯಿತು.

ನಿರ್ಮಾಣ್ ಶೆಲ್ಟರ್ಸ್ ಮತ್ತು 'ವಿಎಲ್‌ಎನ್-ನಿರ್ಮಾಣ್-ಪುರಂದರ ಪ್ರತಿಷ್ಠಾನ'ವು ನಿಸರ್ಗ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಪುರಂದರದಾಸರ ಆರಾಧನಾ ಮಹೋತ್ಸವದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಪಂಡಿತ್ ವಿನಾಯಕ ತೊರವಿ ಮತ್ತು ತಂಡದವರಿಂದ ದಾಸವಾಣಿ ಕಾರ್ಯಕ್ರಮವೂ ಜರುಗಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪಂಡಿತ್ ವಿನಾಯಕ ತೊರವಿ ಅವರು, 'ಈ ಪ್ರಶಸ್ತಿಯನ್ನು ತಮ್ಮ ಗುರುಗಳಾದ ದಿ. ಭೀಮಸೇನ ಜೋಷಿ ಅವರ ಪಾದಕ್ಕೆ ಸಮರ್ಪಿಸಲಾಗುವುದು' ಎಂದರು.

ಇದೇ ಸಂದರ್ಭದಲ್ಲಿ ಡಾ. ವೆಂಕಟೇಶ ನವಲಿ ಸಂಪಾದಿತ ಕೃತಿ ದಾಸಸಾಹಿತ್ಯ ಸಾಧಕ ಪಾರ್ಥಸಾರಥಿ ವಿಠಲದಾಸರು ಮತ್ತು ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಅವರ ಜೀವನ-ಚೇತನ-ಸಾಧನ ಕುರಿತಾದ ಕೃತಿ ಲೋಕಾರ್ಪಣೆ ಮಾಡಲಾಯಿತು.

ಸಮಾರಂಭದಲ್ಲಿ ವ್ಯಾಸರಾಜ ಮಠದ ವಿದ್ಯಾಶ್ರೀಶ ತೀರ್ಥ ಶ್ರೀಪಾದರು, ಅರಳುಮಲ್ಲಿಗೆ ಪಾರ್ಥಸಾರಥಿ, ವಿದ್ಯಾಭೂಷಣ, ನಿರ್ಮಾಣ್ ಶೆಲ್ಟರ್ಸ್‌ನ ನಿರ್ದೇಶಕ ಎಸ್. ಎಂ. ಪಾಟೀಲ್, ಆರ್. ಮೋಹನ್ ಹಾಗೂ ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ವಿ. ಲಕ್ಷ್ಮೀನಾರಾಯಣ್ ಇದ್ದರು.

ಪುರಂದರ ದಾಸರ ಹೆಸರಿನಲ್ಲಿ ಪ್ರತಿವರ್ಷವೂ ಒಂದು ಪ್ರಶಸ್ತಿಯನ್ನು ಸಂಗೀತ ವಿದ್ವಾಂಸರೊಬ್ಬರಿಗೆ, ಅದರಲ್ಲೂ ಭಕ್ತಿಗಾಯನ ಪ್ರಸರಣದಲ್ಲಿ ಸೇವೆ ಮಾಡಿರುವ ಕಲಾವಿದರಿಗೆ ನೀಡಿ ಭಕ್ತಿ ಸಂಗೀತ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಯೋಜನೆಯನ್ನು ನಿರ್ಮಾಣ್ ಸಮೂಹ ಸಂಸ್ಥೆ ಕೈಗೊಂಡಿದೆ.

'ವಿಎಲ್‌ಎನ್-ನಿರ್ಮಾಣ್-ಪುರಂದರ ಪ್ರತಿಷ್ಠಾನ' ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ವಿ. ಲಕ್ಷ್ಮೀನಾರಾಯಣ್ ಆರಂಭಿಸಿದ್ದಾರೆ.

ಕಾರು ಬೆನ್ನಟ್ಟಿ ಗಾಜು ಒಡೆದು ಸುಲಿಗೆ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಕಾರೊಂದರ ಮಾಲೀಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಹೊಸಕೋಟೆ ಬೂದಿಗೆರೆಯ ಅಸ್ಲಂ ಪಾಷಾ (32) ಹಾಗೂ ಕೆ.ಜಿ.ಹಳ್ಳಿ ವೆಂಕಟೇಶಪುರದ ಸೈಯದ್ ಇಮ್ರಾನ್ (25) ಬಂಧಿತರು' ಎಂದು ಪೊಲೀಸರು ಹೇಳಿದರು.

'ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ನಗರದಲ್ಲಿ ಸುತ್ತಾಡಿ ಸುಲಿಗೆ ಮಾಡುತ್ತಿದ್ದರು. ಸಂಪಿಗೆಹಳ್ಳಿ, ಹೆಣ್ಣೂರು, ಕೊತ್ತನೂರು, ಸೋಲದೇವನಹಳ್ಳಿ, ಕೆ.ಜಿ.ಹಳ್ಳಿ ಹಾಗೂ ಬಾಗಲೂರು ಠಾಣೆಗಳ ವ್ಯಾಪ್ತಿಗಳಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

'ದೂರುದಾರ ಕೆ.ವಿಜೀಶ್, ಚಾಲಕ, ಸ್ನೇಹಿತರ ಜೊತೆ ಏಪ್ರಿಲ್ 9ರಂದು ಫಾರ್ಚೂನರ್ ಕಾರಿನಲ್ಲಿ ಬಾಗಲೂರು ವೃತ್ತದಿಂದ ರೇವಾ ಕಾಲೇಜು ಕಡೆ ಹೊರಟಿದ್ದರು. ಅದೇ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಆರೋಪಿಗಳು ಕಾರು ಅಡ್ಡಗಟ್ಟಿದ್ದರು.'

'ಕಾರಿನ ಬಲಭಾಗದ ಬಾಗಿಲಿನ ಗಾಜನ್ನು ಆರೋಪಿಗಳು ಒಡೆದಿದ್ದರು. ನಂತರ, ಚಾಕು ತೋರಿಸಿ ಬೆದರಿಸಿದ್ದರು. ದೂರುದಾರರ ಮೊಬೈಲ್, ₹ 5,000 ನಗದು ಕಿತ್ತುಕೊಂಡು ಪರಾರಿಯಾಗಿದ್ದರು' ಎಂದರು.

'ಘಟನೆ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ, ತನಿಖೆ ನಡೆಸಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದೂ ತಿಳಿಸಿದರು.

ಬಿಬಿಎಂಪಿ ಲಾರಿ ಡಿಕ್ಕಿ: 'ಎಸ್‌ಬಿಐ' ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಂಡಹಳ್ಳಿ ಬಳಿ ಬಿಬಿಎಂಪಿ ಕಸ ಸಾಗಣೆ ಲಾರಿಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಲಾರಿ ಚಕ್ರ ಮೈ ಮೇಲೆ ಹರಿದು ಪದ್ಮಿನಿ (40) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ರಾಜರಾಜೇಶ್ವರಿನಗರ ನಿವಾಸಿ ಪದ್ಮಿನಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಉದ್ಯೋಗಿ ಎಂಬುದಾಗಿ ಗೊತ್ತಾಗಿದೆ. ಪದ್ಮಿನಿ ಅವರು ಸೋಮವಾರ ರಾತ್ರಿ 7 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

'ಬಿಬಿಎಂಪಿ ಕಸ ಸಾಗಣೆ ಲಾರಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂದು ಗೊತ್ತಾಗಿದೆ. ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ' ಎಂದೂ ತಿಳಿಸಿದರು.

ರಕ್ತಸಿಕ್ತ ಸ್ಥಿತಿಯಲ್ಲಿ ಮೃತದೇಹ: 'ಪದ್ಮಿನಿ ಅವರು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಬಿಬಿಎಂಪಿ ಲಾರಿ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದಿದ್ದ ಪದ್ಮಿನಿ ಅವರ ಮೈ ಮೇಲೆಯೇ ಲಾರಿ ಚಕ್ರ ಹರಿದಿತ್ತು. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ವಿವರಿಸಿದರು.

'ತೀವ್ರ ಗಾಯಗೊಂಡು ಪದ್ಮಿನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಕ್ತಸಿಕ್ತ ಸ್ಥಿತಿಯಲ್ಲಿದ್ದ ಅವರ ಮೃತದೇಹವನ್ನು ಮರಣೋತ್ತರಪರೀಕ್ಷೆಗಾಗಿಆಸ್ಪತ್ರೆಯಲ್ಲಿಇರಿಸಲಾಗಿದೆ' ಎಂದೂ ಹೇಳಿದರು.

'ಲಾರಿ, ಅದರ ಚಾಲಕನ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಕುರಿತು ಬಿಬಿಎಂಪಿ ಅಧಿಕಾರಿಗಳನ್ನೂ ವಿಚಾರಣೆ ನಡೆಸಲಾಗುವುದು' ಎಂದರು.

ಬಿಬಿಎಂಪಿ ಲಾರಿಯಿಂದ ಇತ್ತೀಚೆಗೆ ಸಂಭವಿಸಿದ್ದ ಅಪಘಾತಗಳು

ಮಾರ್ಚ್ 31 : ಬಾಗಲೂರು ಬಳಿ ಬಿಬಿಎಂಪಿ ಕಸ ಸಾಗಣೆ ಲಾರಿಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ದ್ವಿಚಕ್ರ ವಾಹನ ಸವಾರ ರಾಮಯ್ಯ (76) ಮೃತಪಟ್ಟಿದ್ದರು. ಲಾರಿ ಚಾಲಕ ಆಂಜನಪ್ಪ ಅವರನ್ನು ಚಿಕ್ಕಜಾಲ ಸಂಚಾರ ಪೊಲೀಸರು ಬಂಧಿಸಿದ್ದರು.

ಮಾರ್ಚ್ 21: ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ಕಸ ಸಾಗಣೆ ಲಾರಿ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ (14) ಮೃತಪಟ್ಟಿದ್ದಳು. ಅಪಘಾತದಲ್ಲಿ ಸೌಮ್ಯಾ, ಸಂಧ್ಯಾ ಹಾಗೂ ವಿಕಾಸ್ ಎಂಬುವರು ಗಾಯಗೊಂಡಿದ್ದರು.

ಕಳ್ಳತನ: ಉತ್ತರ ಪ್ರದೇಶದ ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಉತ್ತರ ಪ್ರದೇಶದ ಇಬ್ಬರನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

'ಗಾಜಿಯಾಬಾದ್‌ನ ವಿಜಯ ನಗರದ ಅಕ್ಬರ್ (36) ಹಾಗೂ ಶಾದಬ್ ಖಾನ್ (28) ಬಂಧಿತರು. ಇವರಿಂದ ₹ 7 ಲಕ್ಷ ಮೌಲ್ಯದ 180 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಯಲಹಂಕ ಉಪನಗರದ ನಿವಾಸಿಯೊಬ್ಬರು 2020ರ ಫೆಬ್ರುವರಿ 13ರಂದು ಸಂಜೆ 5.30 ಗಂಟೆಗೆ ಹೊರ ಹೋಗಿದ್ದಾಗ ಮನೆಯಲ್ಲಿದ್ದ 400 ಗ್ರಾಂ ಚಿನ್ನಾಭರಣ ಹಾಗೂ ₹ 2 ಲಕ್ಷ ನಗದು ಕಳ್ಳತನವಾಗಿತ್ತು.'

'ಕಳ್ಳತನ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಆರಂಭಿಸಲಾಗಿತ್ತು. ಆದರೆ, ಆರೋಪಿಗಳ ಬಗ್ಗೆ ಮಾಹಿತಿ ಲಭ್ಯವಾಗಿರಲಿಲ್ಲ. ಆರೋಪಿ ಅಕ್ಬರ್ ಕಳ್ಳತನ ಮಾಡುವುದಕ್ಕಾಗಿ ಇತ್ತೀಚೆಗಷ್ಟೇ ನಗರಕ್ಕೆ ಬಂದಿದ್ದ. ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಯಿತು. ಆತ ನೀಡಿದ್ದ ಮಾಹಿತಿಯನ್ವಯ ಮತ್ತೊಬ್ಬ ಆರೋಪಿ ಶಾದಬ್ ಖಾನ್‌ನನ್ನು ಉತ್ತರಪ್ರದೇಶದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಇಬ್ಬರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದೂ ತಿಳಿಸಿದರು.

ಎಂಟು ಬಾರಿ ಜೈಲು: 'ಸುಲ್ತಾನ್ ಸೈಫಿ ಹಾಗೂ ರಜಿಯಾ ದಂಪತಿ ಮಗನೇ ಅಕ್ಬರ್. ಸುಲ್ತಾನ್ ಸೈಫಿ ಸಹ ಕಳ್ಳತನ ಮಾಡುತ್ತಿದ್ದ. ಆತ ಕದ್ದುಕೊಂಡು ಬರುತ್ತಿದ್ದ ಚಿನ್ನಾಭರಣವನ್ನು ರಜಿಯಾ ವಿಲೇವಾರಿ ಮಾಡುತ್ತಿದ್ದಳು. ಕೆಲ ವರ್ಷಗಳ ಹಿಂದೆ ದಂಪತಿ ಮೃತಪಟ್ಟಿದ್ದರು. ಐದನೇ ತರಗತಿಗೆ ಶಾಲೆ ಬಿಟ್ಟು ಸಣ್ಣಪುಟ್ಟ ಕೆಲಸ ಮಾಡುತ್ತಿದ್ದ ಅಕ್ಬರ್, 2004ರಿಂದ ಕಳ್ಳತನಕ್ಕೆ ಇಳಿದಿದ್ದ. ಕದ್ದ ವಸ್ತುಗಳನ್ನು ಮಾರಾಟ ಮಾಡಿ, ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಮಹಾರಾಷ್ಟ್ರ, ದೆಹಲಿ ಹಾಗೂ ಕರ್ನಾಟಕದ ಹಲವು ನಗರಗಳಿಗೆ ಆಗಾಗ ಸುತ್ತಾಡುತ್ತಿದ್ದ ಆರೋಪಿ, ಮನೆಗಳನ್ನು ಗುರುತಿಸಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ' ಎಂದೂ ತಿಳಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಹರಿದು ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯ ಅರಮನೆ ಮೈದಾನ ಬಳಿ ಸೋಮವಾರ ಅಪಘಾತ ಸಂಭವಿಸಿದ್ದು, ಕೆಎಸ್‌ಆರ್‌ಟಿಸಿ ಬಸ್ಸಿನ ಚಕ್ರ ಮೈ ಮೇಲೆ ಹರಿದು ಲಕ್ಷ್ಮಿ (50) ಎಂಬುವವರು ಮೃತಪಟ್ಟಿದ್ದಾರೆ.

'ಚಿಂತಾಮಣಿ ತಾಲ್ಲೂಕಿನ ಮಡಕರಿ ಗ್ರಾಮದ ಲಕ್ಷ್ಮಿ, ಸಹೋದರನ ಜೊತೆ ಬೈಕ್‌ನಲ್ಲಿ ಹೊರಟಿದ್ದರು. ಅದೇ ವೇಳೆ ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ' ಎಂದು ಸದಾಶಿವನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಬಸ್ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಾಲಕ ಯಮಣ್ಣ ಎಂಬುವವರನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಆಸ್ಪತ್ರೆಗೆ ಹೊರಟಿದ್ದ ಮಹಿಳೆ: 'ಆರೋಗ್ಯ ತಪಾಸಣೆ ಮಾಡಿಸಲೆಂದು ಲಕ್ಷ್ಮಿ ಅವರು ಬೆಂಗಳೂರಿಗೆ ಬಂದಿದ್ದರು. ಅರಮನೆ ಮೈದಾನದ ಪ್ರವೇಶ ದ್ವಾರ 7 ಹಾಗೂ 8ರ ನಡುವಿನ ಮುಖ್ಯರಸ್ತೆಯಲ್ಲಿ ಸಹೋದರ ಜತೆ ಬೈಕ್‌ನಲ್ಲಿ ಹೊರಟಿದ್ದರು. ಅದೇ ಮಾರ್ಗದಲ್ಲಿ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಲಕ್ಷ್ಮಿ ರಸ್ತೆಗೆ ಬಿದ್ದಿದ್ದರು. ಅವರ ಮೇಲೆ ಬಸ್ಸಿನ ಚಕ್ರ ಹರಿದಿತ್ತು. ತೀವ್ರ ರಕ್ತಸ್ರಾವದಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಮಾಂಗಲ್ಯ ಕಳ್ಳತನ ಬಂಧನ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಚಿನ್ನದ ಮಾಂಗಲ್ಯ ಸರ ಕಿತ್ತೊಯ್ದಿದ್ದ ಆರೋಪದಡಿ ನಾಗರಾಜ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ಏ. 12ರಂದು ರಾತ್ರಿ ಮಹಿಳೆಯ ಮಾಂಗಲ್ಯ ಸರವನ್ನು ಕಿತ್ತುಕೊಂಡು ಆರೋಪಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಮಹಿಳೆಯ ಪತಿ ಘಟನೆ ಬಗ್ಗೆ ದೂರು ನೀಡಿದ್ದರು. ಆರೋಪಿಯಿಂದ ₹ 3 ಲಕ್ಷ ಮೌಲ್ಯದ 58 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದರು.

ಜಂಟಿ ನಿರ್ದೇಶಕರ ಕಚೇರಿಗೆ ಮುತ್ತಿಗೆ

ಬೆಂಗಳೂರು: '60 ವರ್ಷ ವಯೋಮಿತಿ ನೆಪವೊಡ್ಡಿ ಏಕಾಏಕಿ ಕೆಲಸದಿಂದ ಅಮಾನವೀಯವಾಗಿ ಬಿಡುಗಡೆ ಮಾಡಲಾಗಿದೆ' ಎಂದು ಆರೋಪಿಸಿ ಬಿಸಿಯೂಟ ತಯಾರಿ ಮಹಿಳೆಯರು ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿಗೆ ಸೋಮವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿದ್ದ ಪ್ರತಿಭಟನಕಾರರು, ಮೈಸೂರು ಬ್ಯಾಂಕ್ ವೃತ್ತ ಬಳಿಯ ಜಂಟಿ ನಿರ್ದೇಶಕರ ಕಚೇರಿ (ಮಧ್ಯಾಹ್ನದ ಬಿಸಿಯೂಟ ಯೋಜನೆ) ಎದುರು ಸೇರಿ ಆಕ್ರೋಶ ವ್ಯಕ್ತಪಡಿಸಿದರು.

'ಬಿಸಿಯೂಟ ಯೋಜನೆ ಪ್ರಾರಂಭವಾದಾಗಿನಿಂದಲೂ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಅಡುಗೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳ ಶೈಕ್ಷಣಿಕ ಉನ್ನತಿಗೆ ಹಾಗೂ ಗೈರು ಹಾಜರಿ ತಡೆಗಟ್ಟಲು ಕೈ ಜೋಡಿಸುತ್ತಿದ್ದಾರೆ' ಎಂದರು.

'ಯೋಜನೆಯಡಿ 19 ವರ್ಷಕ್ಕೂ ಹೆಚ್ಚು ಕಾಲ ಕೆಲಸ ಮಾಡಿದ್ದ ಮಹಿಳೆಯರನ್ನು 60 ವರ್ಷ ವಯೋಮಿತಿ ನೆಪವೊಡ್ಡಿ ನಿವೃತ್ತಿ ಹೆಸರಿನಲ್ಲಿ ಕೆಲಸದಿಂದ ತೆಗೆದು ಹಾಕಲಾಗಿದೆ. ಆದರೆ, ಅಂಥ ಮಹಿಳೆಯರಿಗೆ ಯಾವುದೇ ನ್ಯಾಯಯುತ ಸೌಲಭ್ಯಗಳನ್ನು ನೀಡಿಲ್ಲ. ತಿಂಗಳ ಸಂಬಳ ಅವಲಂಬಿಸಿದ್ದ ಮಹಿಳೆಯರು, ಇದೀಗ ಬೀದಿಗೆ ಬಿದ್ದಿದ್ದಾರೆ' ಎಂದೂ ತಿಳಿಸಿದರು.

'ಕೆಲಸದಿಂದ ತೆಗೆದಿರುವ ಮಹಿಳೆಯರ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು. ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಚಿತ್ರ 4

ಚಿತ್ರಾವಳಿ

ಅಮೆರಿಕದ ನ್ಯಾಷನಲ್ ಸ್ಪೇಸ್ ಸೊಸೈಟಿ (ಎನ್‌ಎಸ್‌ಎಸ್) ಇತ್ತೀಚೆಗೆ ಏರ್ಪಡಿಸಿದ್ದ 'ಅಂತರರಾಷ್ಟ್ರೀಯ ಬಾಹ್ಯಾಕಾಶ ಸ್ಪರ್ಧೆ'ಯಲ್ಲಿ ವಿಜೇತರಾದ ನಗರದ ಚೈತನ್ಯ ಟೆಕ್ನೊ ಸಮೂಹ ಶಾಲೆಗಳ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅಭಿನಂದಿಸಿದರು. ಸ್ಪರ್ಧೆಯಲ್ಲಿ ಚೈತನ್ಯ ಶಾಲೆಗಳ 14 ವಿದ್ಯಾರ್ಥಿಗಳು ವಿಜೇತರಾಗಿದ್ದಾರೆ.

ಬಿಎಂಶ್ರೀ ಪ್ರತಿಷ್ಠಾನದಿಂದ ವಿಮರ್ಶಕಿ ಡಾ.ಬಿ.ಎನ್.ಸುಮಿತ್ರಾ ಬಾಯಿ ಅವರಿಗೆ 'ಪ್ರೊ.ಎಲ್.ಎಸ್.ಶೇಷಗಿರಿರಾವ್ ವಿಮರ್ಶಾ' ಪ್ರಶಸ್ತಿ ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಲೇಖಕ ಪಿ.ವಿ. ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಅಶ್ವತ್ಥನಾರಾಯಣ ಶಾಸ್ತ್ರಿ, ಪ್ರೊ. ಜಿ.ಅಬ್ದುಲ್ ಬಷೀರ್ ಹಾಗೂ ಗೌರವ ಕಾರ್ಯದರ್ಶಿ ಶಾಂತರಾಜು ಇದ್ದಾರೆ.

ಜಾನುವಾರು ಸಾಗಣೆ: ನಿಯಮ ಜಾರಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ-2020ರ ಕಲಂ 5 ಅಡಿಯಲ್ಲಿ ರೂಪಿಸಿರುವ ನಿಯಮಗಳ ಜಾರಿಗೆ ಸರ್ಕಾರಕ್ಕೆ ಅನುಮತಿ ನೀಡಿ ಹೈಕೋರ್ಟ್ ಆದೇಶಿಸಿದೆ.

ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಆರಿಫ್ ಜಮೀಲ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

'ನಿಯಮ ಜಾರಿಯು ಅರ್ಜಿ ಕುರಿತ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ' ಎಂದೂ ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

ಕಾಯ್ದೆ ಹೇಳುವುದೇನು?: 'ಕಾಯ್ದೆಯ ಕಲಂ 5ರ ಪ್ರಕಾರ ಯಾವುದೇ ವ್ಯಕ್ತಿ ಯಾವುದೇ ರೀತಿಯಲ್ಲೂ ರಾಜ್ಯ ಅಥವಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜಾನುವಾರುಗಳನ್ನು ಕೊಲ್ಲುವ ಉದ್ದೇಶಕ್ಕೆ ಸಾಗಿಸಬಾರದು, ಸಾಗಣೆಗೆ ಅವಕಾಶ ನೀಡಬಾರದು ಇಲ್ಲವೇ ಸಾಗಣೆಗೆ ಕಾರಣವಾದರೆ ಅದು ಅಪರಾಧ ಕೃತ್ಯವಾಗಲಿದೆ. ಆದರೆ, ಕೃಷಿ ಮತ್ತು ಪಶುಸಂಗೋಪನೆ ಉದ್ದೇಶಕ್ಕೆ ಕೇಂದ್ರ ಅಥವಾ ರಾಜ್ಯ ಸರ್ಕಾರವನ್ನು ನಿಗದಿಪಡಿಸಿರುವ ನಿಯಮಗಳ ಅನುಸಾರ ಜಾನುವಾರು ಸಾಗಣೆ ಮಾಡುವುದು ಅಪರಾಧ ಕೃತ್ಯವಾಗುವುದಿಲ್ಲ' ಎಂದು ವಿವರಿಸುತ್ತದೆ.

ದೆಹಲಿ ರೇಸ್

ಜಂಗಲ್ ವೇವ್ ಗೆಲ್ಲುವ ನಿರೀಕ್ಷೆ

ಕ್ಯಾನನ್ ಬೇಬಿ ಪ್ಲೇಟ್ ಮಂಗಳವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಂಗಲ್ ವೇವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 3.00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಾಸ್ಟರ್ ಆಫ್ ಜೆಂಜ್ಯಾಟ 1, ಸರ್ಕಲ್ ಆಫ್ ಗೋಲ್ಡ್ 3, ಎಕ್ಸಲೆಂಟ್ ಗರ್ಲ್ 2

2ನೇ ರೇಸ್: ಅಶ್ವ ಹೈದರ್ 1, ಮಾಸ್ಟರ್ ಟೊರ್ನಾಡೊ 2, ಆರ್ಗ್ಯಾನಿಕ್ ಮಾಂಕ್ 6

3ನೇ ರೇಸ್: ಮೊರಿಸಿಕಿ 1, ನಿಚೆ ಸ್ಟಾರ್ಮ್ 2, ರ್‍ಯಾಕ್ಸಿಯಾನ್ 4

4ನೇ ರೇಸ್: ಜಂಗಲ್ ವೇವ್ 1, ಅಡೋರಬಲ್ 3, ಶಿವಾಲಿಕ್ ಕ್ವೀನ್ 2

5ನೇ ರೇಸ್: ನೈಟ್‌ಹಾಕ್ 6, ಅಶ್ವ ಜೌಹಾರ್ 8, ಗರ್ಲ್ ಪವರ್ 3

6ನೇ ರೇಸ್: ಮಾಸ್ಟರ್ ವ್ಯಾನ್‌ಡೈಕ್ 2, ಸೂಪರ್ ಆರ್ಕ್ಟ್ 3, ಫಾಗೋರ್ 1

ಉತ್ತಮ ಬೆಟ್: ಮಾಸ್ಟರ್ ಆಫ್ ಜೆಂಜ್ಯಾಟ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಹೈಕೋರ್ಟ್‌ಗೆ ಬೆಸ್ಕಾಂ ಮಾಹಿತಿ ಸಲ್ಲಿಕೆ

5,659 ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿರುವ ಸುಮಾರು 5 ಸಾವಿರಕ್ಕೂ ಹೆಚ್ಚು ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಪ್ರಕ್ರಿಯೆ ಏಪ್ರಿಲ್ 1ರಿಂದಲೇ ಆರಂಭವಾಗಿದೆ' ಎಂದು ಬೆಸ್ಕಾಂ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

'ನಗರದಲ್ಲಿನ ಪಾದಚಾರಿ ಮಾರ್ಗ ಹಾಗೂ ರಾಜಕಾಲುವೆಗಳ ಮೇಲಿರುವ ಟ್ರಾನ್ಸ್‌ಫಾರ್ಮರ್ ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ನಿವೃತ್ತ ವಿಂಗ್ ಕಮಾಂಡರ್ ವಿ.ಜಿ. ಅತ್ರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಬೆಸ್ಕಾಂ ಪರ ವಕೀಲರಾದ ಎಸ್. ಶ್ರೀರಂಗ, 'ಹೈಕೋರ್ಟ್ ನಿರ್ದೇಶನದಂತೆ ಬೆಸ್ಕಾಂ ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ಒಳಗೊಂಡ ಸಮಿತಿ ಅಧ್ಯಯನ ನಡೆಸಿದೆ. ಸ್ಥಳಾಂತರಿಸಬೇಕಾದ 8,659 ಟ್ರಾನ್ಸ್‌ಫಾರ್ಮರ್‌ಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 3,000 ಟ್ರಾನ್ಸ್‌ಫಾರ್ಮರ್‌ಗಳನ್ನು ಈಗಾಗಲೇ ಸ್ಥಳಾಂತರ ಅಥವಾ ಎತ್ತರಿಸಲಾಗಿದೆ' ಎಂದು ತಿಳಿಸಿದರು.

'ಇನ್ನುಳಿದ 5,000 ಟ್ರಾನ್ಸ್‌ಫಾರ್ಮರ್ ಸ್ಥಳಾಂತರಕ್ಕೆ ಯೋಜನೆ ರೂಪಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಆ ಬಗ್ಗೆ ಕೋರ್ಟ್‌ಗೆ ವಿವರವಾದ ವರದಿ ಸಲ್ಲಿಸಲಾಗಿದೆ' ಎಂದು ಹೇಳಿದರು.

'ವಿದ್ಯುತ್ ಪರಿವರ್ತಕಗಳ ಸಂಪೂರ್ಣ ಸ್ಥಳಾಂತರ ಕಾರ್ಯಕ್ಕೆ ಸುಮಾರು ₹ 100 ಕೋಟಿ ಖರ್ಚಾಗುವ ಅಂದಾಜಿದೆ. ಈಗಾಗಲೇ ಟೆಂಡರ್ ಅಂತಿಮಗೊಳಿಸಿ ಕಾರ್ಯಾದೇಶ ನೀಡಲಾಗಿದೆ. ಇದೇ 1ರಿಂದ ಸ್ಥಳಾಂತರ ಕಾಮಗಾರಿಯೂ ಆರಂಭವಾಗಿದೆ. ವಿದ್ಯುತ್ ಪರಿವರ್ತಕಗಳ ಸಂಪೂರ್ಣ ಸ್ಥಳಾಂತರಕ್ಕೆ 18 ತಿಂಗಳ ಕಾಲಾವಕಾಶ ಬೇಕು' ಎಂದು ಶ್ರೀರಂಗ ಕೋರಿದರು.

'ವಿಚಾರಣೆಯನ್ನು ಜುಲೈಗೆ ಮುಂದೂಡಿದರೆ ಅಷ್ಟರಲ್ಲಿ ಕಾಮಗಾರಿ ಪ್ರಗತಿಯ ವರದಿ ಸಲ್ಲಿಸಲಾಗುವುದು' ಎಂದೂ ಅವರು ಇದೇ ವೇಳೆ ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಜುಲೈ ಮೊದಲ ವಾರಕ್ಕೆ ವಿಚಾರಣೆ ಮುಂದೂಡಿದೆ.

ದ್ವೇಷದ ಹೇಳಿಕೆ: ಪಿಐಎಲ್ ಆಗಿ ಪರಿವರ್ತಿಸಲು ಕೋರಿಕೆ

ಬೆಂಗಳೂರು: 'ಮುಸ್ಲಿಂ ಸಮುದಾಯದವರ ವಿರುದ್ಧ ದ್ವೇಷದ ಮತ್ತು ಪ್ರಚೋದನಾಕಾರಿ ಹೇಳಿಕೆ ನೀಡುತ್ತಿರುವ ಆಡಳಿತಾರೂಢ ಬಿಜೆಪಿಯ ಕೆಲ ಶಾಸಕರು, ಸಚಿವರು ಮತ್ತು ಸಂಸದರ ವಿರುದ್ಧ ಸ್ವಯಂ ಪ್ರೇರಿತ ಕ್ರಮ ಜರುಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿರುವ ರಿಟ್ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ಪರಿವರ್ತಿಸುವಂತೆ ಕೋರಲಾಗಿದೆ.

ಈ ಕುರಿತಂತೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಿವಾಸಿ ಮೊಹಮ್ಮದ್ ಖಲೀವುಲ್ಲಾ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು, 'ಈ ಪ್ರಕರಣದಲ್ಲಿ ಅರ್ಜಿದಾರರು ಹೇಗೆ ಬಾಧಿತರಾಗಿದ್ದಾರೆ ಎಂಬುದನ್ನು ವಿವರಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತು.

ಅರ್ಜಿದಾರರ ಪರ ವಕೀಲ ರಹಮತ್ ಉಲ್ಲಾ ಕೊತ್ವಾಲ್, 'ಅರ್ಜಿಯಲ್ಲಿ ಹೆಸರಿಸಲಾಗಿರುವ ಪ್ರತಿವಾದಿಗಳು ಮುಸ್ಲಿಂ ಸಮುದಾಯವನ್ನು ಅಪರಾಧಿಗಳು ಎಂಬಂತೆ ಬಿಂಬಿಸುತ್ತಿದ್ದಾರೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಹಾಗಾದರೆ ನೀವು ಸಕ್ಷಮ ನ್ಯಾಯಾಲಯದ ಮೊರೆ ಹೋಗಬಹುದು' ಎಂದು ಸೂಚಿಸಿತು.

ಆಗ ಕೊತ್ವಾಲ್, 'ಈ ರಿಟ್ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ಪರಿವರ್ತಿಸಿ ಮಂಡಿಸಲು ಬಯಸಿದ್ದೇನೆ. ಅದಕ್ಕೆ ಅನುಮತಿ ನೀಡಬೇಕು' ಎಂದು ಕೋರಿದರು.

ಈ ಮನವಿ ಪರಿಗಣಿಸಿದ ನ್ಯಾಯಪೀಠ, 'ಈ ಕುರಿತಂತೆ ಅರ್ಜಿದಾರರು ಮುಖ್ಯ ನ್ಯಾಯಮೂರ್ತಿಗಳ ಮುಂದೆ ಸೂಕ್ತ ಜ್ಞಾಪನಾ ಪತ್ರ ಮಂಡಿಸಬೇಕು. ಮುಖ್ಯ ನ್ಯಾಯಮೂರ್ತಿಗಳ ಸೂಚನೆ ಅನುಸಾರ ಅರ್ಜಿಯನ್ನು ರೋಸ್ಟರ್ ಪೀಠದ (ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುವ ಪೀಠ) ಮುಂದೆ ವಿಚಾರಣೆಗೆ ನಿಗದಿಪಡಿಸಬಹುದು' ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿತು.

ಕೋವಿಡ್ ಕಷ್ಟ ಜೀರ್ಣಿಸಿಕೊಂಡು ಪುಟಿದೇಳುತ್ತಿರುವ ವಾಣಿಜ್ಯ ನಗರಿ

33 ಲಕ್ಷ — ಕೋವಿಡ್ ಪೂರ್ವದಲ್ಲಿ ಬಿಎಂಟಿಸಿ ಬಸ್‌ಗಳಲ್ಲಿನ ದಿನದ ಸರಾಸರಿ ಪ್ರಯಾಣಿಕರ ಸಂಖ್ಯೆ

16 ಲಕ್ಷ — ಸದ್ಯ ಬಿಎಂಟಿಸಿ ಬಸ್‌ಗಳಲ್ಲಿನ ದಿನದ ಸರಾಸರಿ ಪ್ರಯಾಣಿಕರ ಸಂಖ್ಯೆ

6 ಲಕ್ಷ — ಕೋವಿಡ್ ಪೂರ್ವದ ದಿನದ ಸರಾಸರಿ ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ

4 ಲಕ್ಷ — ಸದ್ಯ ಮೆಟ್ರೊ ರೈಲಿನ ದಿನದ ಸರಾಸರಿ ಪ್ರಯಾಣಿಕರ ಸಂಖ್ಯೆ

ನೈಟ್ ಲೈಫ್‌ಗೆ ಮತ್ತೆ ರಂಗು



ಚರ್ಚ್ ಸ್ಟ್ರೀಟ್‌ನಲ್ಲಿ ರಸ್ತೆ ಬದಿ ತಿನಿಸು ಸವಿಯುತ್ತಿರುವ ಜನ

ಚರ್ಚ್ ಸ್ಟ್ರೀಟ್‌ನಲ್ಲಿ ಜನ ಸಂಚಾರ ಸಹಜ ಸ್ಥಿತಿಗೆ ಮರಳಿರುವುದು
–ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಎರಡು ವರ್ಷ ಕಾಡಿದ ಕೋವಿಡ್ ಭಯದಿಂದ ಜನರು ನಿಧಾನವಾಗಿ ಹೊರ ಬರುತ್ತಿದ್ದಾರೆ. ಕೋವಿಡ್ ಕಾಲದ ಕಷ್ಟದ ದಿನಗಳನ್ನು ಜೀರ್ಣಿಸಿಕೊಂಡು ಮೆಲ್ಲಗೆ ಮಾಸ್ಕ್‌ಗಳನ್ನು ಕೆಳಗಿಳಿಸಿ ಸಹಜ ಜೀವನಕ್ಕೆ ಹೊರಳುತ್ತಿದ್ದಾರೆ. ಎರಡು ವರ್ಷಗಳಿಂದ ಕಳೆಗುಂದಿದ್ದ ಬೆಂಗಳೂರಿನ ವಾಣಿಜ್ಯ ವಹಿವಾಟು ಈಗ ಮತ್ತೆ ಚೇತರಿಕೆ ಹಾದಿಯಲ್ಲಿದೆ.

ಕೋವಿಡ್ ಪೂರ್ವದಲ್ಲಿ ಜಗತ್ತಿನ ಕ್ರಿಯಾಶೀಲ ನಗರಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಬೆಂಗಳೂರು ನಗರದಲ್ಲಿ ವರ್ಷದಿಂದ ವರ್ಷಕ್ಕೆ ವಹಿವಾಟು ಹೆಚ್ಚಾಗುತ್ತಲೇ ಇತ್ತು. 2020ರ ಮಾರ್ಚ್ ತಿಂಗಳಲ್ಲಿ ಮೊದಲ ಕೋವಿಡ್ ಪ್ರಕರಣ ಬೆಂಗಳೂರಿನಲ್ಲಿ ದಾಖಲಾಗಿತ್ತು. 2020ರ ಮಾರ್ಚ್ 20ರಂದು ದೇಶದಾದ್ಯಂತ ಲಾಕ್‌ಡೌನ್ ಆರಂಭವಾಯಿತು. ಕೋವಿಡ್ ಮೂರು ಅಲೆಗಳ ನಡುವೆ ಸಿಲುಕಿ ಜನ ರೋಸಿ ಹೋಗಿದ್ದರು. ಲಾಕ್‌ಡೌನ್ ತೆರವಾದರೂ ಜನಸಂಚಾರವೇ ಇಲ್ಲದೆ ವಹಿವಾಟು ಸಂಪೂರ್ಣ ನೆಲ ಕಚ್ಚಿತ್ತು.

ಮೂರನೇ ಅಲೆ ಅಷ್ಟೇನೂ ಅಬ್ಬರಿಸದೆ ಮಾಯವಾಗಿದ್ದು ಜನರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಮೂರನೇ ಅಲೆ ದಾಟಿದ ನಂತರ ದಿನದಿಂದ ದಿನಕ್ಕೆ ವಹಿವಾಟು ಹೆಚ್ಚಾಗತೊಡಗಿದೆ. ಸಭೆ–ಸಮಾರಂಭಗಳು ನಡೆಯುತ್ತಿರುವುದರಿಂದ ಹೋಟೆಲ್‌ಗಳು, ಮಾರುಕಟ್ಟೆಗಳು, ಬಟ್ಟೆ ಅಂಗಡಿಗಳು, ಆಭರಣ ಅಂಗಡಿಗಳು ಮತ್ತೆ ಗಿಜಿಗುಡಲಾರಾಂಭಿಸಿವೆ.

ಚಿಕ್ಕಪೇಟೆಯಲ್ಲಿ ಬಟ್ಟೆ ವಹಿವಾಟು ಹಿಂದಿನಂತೆ ತನ್ನ ವೈಭವದ ಸ್ಥಿತಿಗೆ ಮರಳುವ ತವಕದಲ್ಲಿದೆ. ಕೋವಿಡ್ ಪೂರ್ವದಲ್ಲಿ ಇದ್ದ ಹೋಟೆಲ್‌ಗಳ ವಹಿವಾಟಿಗೆ ಹೋಲಿಸಿದರೆ ಶೇ 90ರಷ್ಟು ಚೇತರಿಕೆಯಾಗಿದೆ. ಖಾಲಿ ಹೊಡೆಯುತ್ತಿದ್ದ ಕಲ್ಯಾಣ ಮಂಟಪಗಳು, ಹೋಟೆಲ್ ಸಭಾಂಗಣಗಳನ್ನು ತಿಂಗಳು ಮೊದಲೇ ಕಾಯ್ದಿರಿಸಬೇಕಾಗಿದ್ದು, ಬಹುತೇಕ ಕೋವಿಡ್ ಪೂರ್ವದ ಸ್ಥಿತಿಗೆ ಮರಳುತ್ತಿದೆ.

ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್‌ಗಳು, ಡ್ಯಾನ್ಸ್ ಬಾರ್‌ಗಳಲ್ಲಿ ವಹಿವಾಟು ಚುರುಕು ಪಡೆದಿದೆ. ರಿಯಲ್ ಎಸ್ಟೇಟ್ ಉದ್ಯಮದ ವಹಿವಾಟು ಕೂಡ ಶೇ 25ರಷ್ಟು ಚೇತರಿಕೆ ಕಂಡಿದೆ. ಬಿಎಂಟಿಸಿ ಬಸ್ ಮತ್ತು ಮೆಟ್ರೊ ರೈಲಿನಲ್ಲಿ ಪ್ರಯಾಣಿಕರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಶಾಲೆಗಳಿಗೆ ರಜೆ ಇರುವುದರಿಂದ ಮಕ್ಕಳು–ಹಿರಿಯರೊಂದಿಗೆ ಜನರು ಮನೆಬಿಟ್ಟು ಹೊರಗೆ ಬರುತ್ತಿದ್ದಾರೆ.

ಇದೆಲ್ಲದರ ಪರಿಣಾಮವಾಗಿ ವಹಿವಾಟು ಮೆಲ್ಲಗೆ ಸುಧಾರಣೆಯಾಗುತ್ತಿದೆ. ಕೋವಿಡ್ ನಾಲ್ಕನೇ ಅಲೆ ಬಾರದಿದ್ದರೆ ಒಂದೆರಡು ತಿಂಗಳಲ್ಲಿ ಕೋವಿಡ್ ಪೂರ್ವ ಸ್ಥಿತಿಗೆ ಬೆಂಗಳೂರಿನ ವಹಿವಾಟು ಬರಲಿದೆ ಎಂಬುದು ತಜ್ಞರ ಲೆಕ್ಕಾಚಾರ.

ಹೋಟೆಲ್ ಉದ್ಯಮ ಚೇತರಿಕೆ

‘ನಗರದ ಹೋಟೆಲ್ ಉದ್ಯಮವೂ ಬಹುತೇಕ ಚೇತರಿಕೆ ಕಂಡಿದೆ. ಕೋವಿಡ್ ಪೂರ್ವದಲ್ಲಿ ಇದ್ದ ಸ್ಥಿತಿಗೆ ಇನ್ನೂ ಮರಳಿಲ್ಲ. ಆದರೆ, ಶೇ 90ರಷ್ಟು ಚೇತರಿಕೆ ಕಂಡಿದೆ’ ಎಂದು ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

ಹೋಟೆಲ್‌ಗಳ ಸಭಾಂಗಣಗಳಲ್ಲೂ ಪ್ರತಿನಿತ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಹೋಟೆಲ್‌ಗಳಿಗೆ ಬಂದು ಆಹಾರ ಸೇವಿಸಲು ಈಗ ಜನ ಭಯಪಡುತ್ತಿಲ್ಲ ಎಂದರು.

‘ಐ.ಟಿ ಕಂಪನಿಗಳಲ್ಲಿ ಮನೆಯಿಂದಲೇ ಕೆಲಸ ಮುಂದುವರಿದಿದೆ. ಆ ಉದ್ಯಮ ಅವಲಂಬಿಸಿ ನಡೆಯುತ್ತಿರುವ ಶೇ 10ರಷ್ಟು ಹೋಟೆಲ್‌ಗಳು ಇನ್ನೂ ಸುಧಾರಿಸಿಕೊಳ್ಳಲು ಆಗಿಲ್ಲ’ ಎಂದು ಹೇಳಿದರು.

ಐ.ಟಿ ಕಂಪನಿಗಳಲ್ಲಿ ಜೂನ್‌ನಿಂದ ಕಚೇರಿ ಕೆಲಸ

ಕೋವಿಡ್ ನಾಲ್ಕನೇ ಅಲೆ ಬಾರದಿದ್ದರೆ ಐ.ಟಿ ಕಂಪನಿಗಳಲ್ಲೂ ಮನೆಯಿಂದ ಕೆಲಸ ಮಾಡುವ ಪದ್ಧತಿ ಜೂನ್‌ನಿಂದ ಅಂತ್ಯವಾಗುವ ಸಾಧ್ಯತೆ ಇದೆ.

‘ಸದ್ಯಕ್ಕೆ ವಾರದಲ್ಲಿ ಎರಡು ದಿನ ಕಚೇರಿಗೆ ಬಂದು ಕೆಲಸ ಮಾಡಲು ಐ.ಟಿ ಕಂಪನಿಗಳು ಉದ್ಯೋಗಿಗಳಿಗೆ ತಿಳಿಸುತ್ತಿವೆ. ಆದರೆ, ಕಡ್ಡಾಯ ಮಾಡಿಲ್ಲ’ ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘದ(ಒಆರ್‌ಆರ್‌ಸಿಎ) ನವೀನ್‌ಕುಮಾರ್ ತಿಳಿಸಿದರು.

‘ಕೋವಿಡ್ ನಾಲ್ಕನೇ ಅಲೆ ಬರುವ ಮುನ್ಸೂಚನೆ ಇರುವುದರಿಂದ ಕಚೇರಿಗೆ ಬರುವುದು ಕಡ್ಡಾಯ ಮಾಡಿಲ್ಲ. ಒಂದು ವೇಳೆ ಕೋವಿಡ್ ಬಂದರೆ ಜೂನ್‌ನಲ್ಲೂ ಐ.ಟಿ ಕಂಪನಿಗಳ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡಲಿದ್ದಾರೆ’

ಎಂ.ಜಿ.ರಸ್ತೆಯಲ್ಲಿ ಮತ್ತೆ ಕಳೆ

ಬೆಂಗಳೂರಿನ ನೈಟ್‌ಲೈಫ್‌ನ ಕೇಂದ್ರ ಸ್ಥಾನ ಎಂದು ಕರೆಸಿಕೊಳ್ಳುವ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳು ತನ್ನ ಗತಕಾಲದ ವೈಭವಕ್ಕೆ ಮತ್ತೆ ನಿಧಾನವಾಗಿ ಹೊರಳುತ್ತಿವೆ.

ಜನರ ಓಡಾಟ ಮತ್ತೆ ಹೆಚ್ಚಾಗುತ್ತಿದೆ. ವಾರಾಂತ್ಯ ಮತ್ತು ಸಾಲ–ಸಾಲು ರಜೆಗಳಿದ್ದ ದಿನಗಳಲ್ಲಿ ಯುವಕ–ಯುವತಿಯರ ದಂಡು ನೆರೆಯುತ್ತಿದೆ. ಇಲ್ಲಿನ ಹೋಟೆಲ್‌ಗಳು, ಪಬ್‌ಗಳು ಮತ್ತು ಅಂಗಡಿ ಮುಂಗಟ್ಟುಗಳಲ್ಲಿ ವಹಿವಾಟ ಹೆಚ್ಚಾಗುತ್ತಿದೆ. ಕೋವಿಡ್ ಮೊದಲ ಅಲೆ ವೇಳೆ ಮುಚ್ಚಿದ್ದ ಅಂಗಡಿಗಳಲ್ಲಿ 35ಕ್ಕೂ ಹೆಚ್ಚು ವರ್ತಕರು ಮತ್ತೆ ತೆರೆಯುವ ಗೋಜಿಗೆ ಹೋಗಿರಲಿಲ್ಲ.

‘ಈಗ ನಿಧಾನವಾಗಿ ಒಂದೊಂದೇ ಅಂಗಡಿಗಳು ತೆರೆಯುತ್ತಿವೆ. ವಹಿವಾಟು ಸಹಜ ಸ್ಥಿತಿಯತ್ತ ಮರಳುತ್ತಿದೆ’ ಎಂದು ಬ್ರಿಗೇಡ್ ರಸ್ತೆ ಮಳಿಗೆಗಳ ಮಾಲೀಕರ ಸಂಘದ ಕಾರ್ಯದರ್ಶಿ ಸುಹೈಲ್ ಯೂಸುಫ್ ಹೇಳಿದರು.

ಟ್ಯಾಕ್ಸಿ ಬಳಕೆಯೂ ಹೆಚ್ಚಳ

‘ಟ್ಯಾಕ್ಸಿಗಳನ್ನು ಬಳಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಪ್ರವಾಸಿ ವಾಹನಗಳ ಉದ್ಯಮವೂ ಸುಧಾರಣೆಯಾಗಿದೆ’ ಎಂದು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ತಿಳಿಸಿದರು.

ವಾಹನಗಳನ್ನು ದಿನದ ಬಾಡಿಗೆಗೆ ಪಡೆಯುವವರ ಸಂಖ್ಯೆ ಏರಿಕೆಯಾಗಿದೆ. ವಿಮಾನದಲ್ಲಿ ಬರುವ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿದೆ. ಬೇಸಿಗೆ ರಜೆ ಇರುವುದರಿಂದ ಕುಟುಂಬ ಸಮೇತ ಪ್ರವಾಸ ಹೋಗಲು ವಾಹನಗಳನ್ನು ಬಳಸುತ್ತಿದ್ದಾರೆ. ಇರುವ ಎಲ್ಲಾ ವಾಹನಗಳಿಗೆ ಬೇಡಿಕೆ ಜಾಸ್ತಿಯಾಗಿದ್ದು, ವಹಿವಾಟು ಚುರುಕುಗೊಂಡಿದೆ ಎಂದರು.

‘ಎರಡು ವರ್ಷ ಕೋವಿಡ್‌ನಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಟ್ಯಾಕ್ಸಿ ಮಾಲೀಕರು ವಾಹನಗಳನ್ನು ಮಾರಾಟ ಮಾಡಿದರು. ಹಳದಿ ನಂಬರ್ ಪ್ಲೇಟ್ ಹೊಂದಿರುವ ವಾಹನಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಹೊಸ ವಾಹನಗಳನ್ನು ಖರೀದಿಸುವ ಶಕ್ತಿ ಈಗ ಇಲ್ಲ. ಆದರೆ, ಇರುವ ವಾಹನಗಳಿಗೆ ಬಾಡಿಗೆ ದೊರೆಯುತ್ತಿದೆ’ ಎಂದು ವಿವರಿಸಿದರು.

‘ಐ.ಟಿ, ಬಿ.ಟಿ ಕಂಪನಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಿದರೆ ಎಲ್ಲಾ ಗುಣಮಟ್ಟದ ವಾಹನಗಳಿಗೆ ಬೇಡಿಕೆ ಬರಲಿದೆ. ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆ ಇರುವುದರಿಂದ ಐಷಾರಾಮಿ ವಾಹನಗಳಿಗೆ ಬೇಡಿಕೆ ಇಲ್ಲವಾಗಿದೆ’ ಎಂದೂ ಹೇಳಿದರು.

ಎಂಆರ್‌ಪಿ ಮದ್ಯದ ಅಂಗಡಿ ವಹಿವಾಟು ಜಾಸ್ತಿ

ಮದ್ಯದ ವಹಿವಾಟ ಎಂಆರ್‌ಪಿ ಶಾಪ್‌ಗಳಲ್ಲಿ ಹೆಚ್ಚಾಗಿದ್ದರೆ, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಕುಳಿತು ಮದ್ಯ ಸೇವಿಸುವರ ಸಂಖ್ಯೆ ಅಷ್ಟೇನೂ ಹೆಚ್ಚಾಗಿಲ್ಲ.

‘ಮದ್ಯದ ವಹಿವಾಟಿನಲ್ಲಿ ಶೇ 65ರಷ್ಟು ಪಾರ್ಸೆಲ್ ವಹಿವಾಟಿನಲ್ಲೇ ನಡೆಯುತ್ತಿದ್ದು, ಕುಳಿತು ಮದ್ಯ ಸೇವನೆ ಮಾಡುವ ವಹಿವಾಟು ಶೇ 35ರಷ್ಟು ಮಾತ್ರ ಇದೆ’ ಎಂದು ಬೆಂಗಳೂರು ನಗರ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಲೋಕೇಶ್ ಹೇಳಿದರು.

‘ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ನಿರ್ವಹಣೆಗೆ ಹೆಚ್ಚು ವೆಚ್ಚವಾಗುತ್ತದೆ. ಅದನ್ನು ಸರಿದೂಗಿಸಲು ಕಷ್ಟವಾಗುತ್ತಿದೆ. ಈ ನಡುವೆ, ವೆಬ್ ಇಂಡೆಂಟ್ ಪದ್ಧತಿ ಕೂಡ ನಮ್ಮಲ್ಲಿ ಗೊಂದಲ ಸೃಷ್ಟಿಸಿದೆ’ ಎಂದು ಅವರು ಅಳಲು ತೋಡಿಕೊಂಡರು.

ಉಸಿರಾಡುತ್ತಿರುವ ಕೈಗಾರಿಕೆಗಳು

ಕೋವಿಡ್ ಸಂದರ್ಭದಲ್ಲಿ ಉಸಿರುಗಟ್ಟುವ ಸ್ಥಿತಿಯಲ್ಲಿದ್ದ ಕೈಗಾರಿಕೆಗಳು ಈಗ ನಿರಾಳವಾಗಿ ಉಸಿರಾಡುವಂತಾಗಿದೆ.

ಕೈಗಾರಿಕೆ ವಲಯಗಳಲ್ಲಿ ಕಾರ್ಖಾನೆಗಳ ಸದ್ದು ಮತ್ತೆ ಜೋರಾಗಿದೆ. ವಹಿವಾಟು ಚುರುಕು ಪಡೆದಿರುವುದರಿಂದ ಕೈಗಾರಿಕೆಗಳಲ್ಲಿ ಉದ್ಯೋಗಿಗಳಿಗೆ ಕೈತುಂಬ ಕೆಲಸ ನೀಡಲಾಗುತ್ತಿದೆ.

‘ಕೈಗಾರಿಕೆಗಳು ಮತ್ತೆ ಸಹಜ ಸ್ಥಿತಿಗೆ ಬಂದಿವೆ. ಮೂಲಸೌಕರ್ಯ ಅಭಿವೃದ್ಧಿಗೂ ಸರ್ಕಾರ ಮುಂದಾಗಿದ್ದು, ಆದ್ದರಿಂದ ಉದ್ಯೋಗ ಕೂಡ ಸೃಷ್ಟಿಯಾಗುತ್ತಿದೆ. ಕೋವಿಡ್ ಸಂದರ್ಭದ ಕಷ್ಟದ ದಿನಗಳನ್ನು ಜೀರ್ಣಿಸಿಕೊಂಡು ಕೈಗಾರಿಕೆಗಳು ಸುಧಾರಿಸಿಕೊಳ್ಳುತ್ತಿವೆ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್ ಹೇಳಿದರು.

ಈ ನಡುವೆ, ಕಬ್ಬಿಣದ ದರ ಹೆಚ್ಚಾಗಿರುವುದು ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ತೊಂದರೆ ಎದುರಿಸುತ್ತಿವೆ ಎಂದೂ ಅವರು ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021–22ನೇ ಸಾಲಿನ ಬಜೆಟ್

ಅನುಪಾಲನಾ ವರದಿಯನ್ನೂ ‘ಗುಪ್ತ’ವಾಗಿಟ್ಟ ಪಾಲಿಕೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ಬಜೆಟ್ ಮಂಡನೆಯ ಸಂದರ್ಭದಲ್ಲೇ ಹಿಂದಿನ ಸಾಲಿನ ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅನುಪಾಲನಾ ವರದಿಯನ್ನೂ ಮಂಡಿಸುವುದು ವಾಡಿಕೆ. ಬಜೆಟ್ ಮಂಡಿಸುವ ಪರಿಪಾಠಕ್ಕೆ ಈ ಸಲ ಇತಿಶ್ರೀ ಹಾಡಿರುವ ಬಿಬಿಎಂಪಿ, ಹಿಂದಿನ ಸಾಲಿನ ಬಜೆಟ್‌ನ ಅನುಪಾಲನಾ ವರದಿಯನ್ನೂ ‘ಗುಪ್ತ’ವಾಗಿಟ್ಟಿದೆ.

2022–23ನೇ ಸಾಲಿನ ಬಜೆಟ್ ಅನ್ನು ಮಾರ್ಚ್ 31ರ ರಾತ್ರೋರಾತ್ರಿ ವೆಬ್‌ಸೈಟ್‌ನಲ್ಲಿ (https://bbmp.gov.in) ಪ್ರಕಟಿಸಿರುವ ಬಿಬಿಎಂಪಿ, ಹಿಂದಿನ ಬಜೆಟ್ ಕಾರ್ಯಕ್ರಮಗಳ ಅನುಪಾಲನಾ ವರದಿಯನ್ನು ಇನ್ನೂ ಬಹಿರಂಗಪಡಿಸಿಲ್ಲ. ಇದರಿಂದ 2021–22ನೇ ಸಾಲಿನ ಬಜೆಟ್ ಕಾರ್ಯಕ್ರಮಗಳು ಎಷ್ಟರಮಟ್ಟಿನ ಅನುಷ್ಠಾನವಾಗಿವೆ ಎಂಬುದು ನಿಗೂಢವಾಗಿಯೇ ಉಳಿದಿದೆ.

ಅನುಪಾಲನಾ ವರದಿಯ ಆಧಾರದಲ್ಲೇ ಬಜೆಟನ್ನು ಸಿದ್ಧಪಡಿಸಬೇಕು, ಯಾವೆಲ್ಲ ಕಾರ್ಯಕ್ರಮಗಳು ಎಷ್ಟು ಪ್ರಮಾಣದಲ್ಲಿ ಅನುಷ್ಠಾನಗೊಂಡಿವೆ, ಅವುಗಳಲ್ಲಿ ಏನಾದರೂ ಬದಲಾವಣೆ ಮಾಡಲಾಗಿದೆಯೇ, ಒಂದು ವೇಳೆ ಯೋಜನೆಗಳು ಪೂರ್ಣಗೊಳ್ಳದೇ ಮುಂದಿನ ಆರ್ಥಿಕ ವರ್ಷದಲ್ಲೂ ಮುಂದುವರಿದರೆ, ಅದಕ್ಕೆ ಎಷ್ಟು ಹೆಚ್ಚುವರಿ ಅನುದಾನ ಒದಗಿಸಬೇಕಾಗುತ್ತದೆ ಎಂಬ ಲೆಕ್ಕಾಚಾರಗಳ ಆಧಾರದಲ್ಲೇ ಆರ್ಥಿಕ ವಿಭಾಗದವರು ಬಜೆಟ್ ಅಂಕಿ ಅಂಶಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಈ ಸಲದ ಬಜೆಟ್‌ನಲ್ಲಿ 2021–22ನೇ ಸಾಲಿನ ಪರಿಷ್ಕೃತ ಬಜೆಟ್ ವಿವರಗಳನ್ನು ಉಲ್ಲೇಖಿಸಲಾಗಿದೆ. ಆದರೆ, ಅದರ ವಿವರಗಳನ್ನು ಅನುಪಾಲನಾ ವರದಿಯಲ್ಲಿ ಒದಗಿಸಬೇಕಿತ್ತು. ಈ ವಿಚಾರದಲ್ಲಿ ಬಿಬಿಎಂಪಿ ಪಾರದರ್ಶಕವಾಗಿ ನಡೆದುಕೊಂಡಿಲ್ಲ ಎಂದು ಮಾಜಿ ಮೇಯರ್ ಗಂಗಾಂಬಿಕೆ ಅಸಮಾಧಾನ ವ್ಯಕ್ತಪಡಿಸಿದರು.

‘ರಾತ್ರೋರಾತ್ರಿ ಬಜೆಟ್ ಅನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ಬಿಬಿಎಂಪಿಯ ಸಂಪ್ರದಾಯಕ್ಕೆ ಅಪಚಾರ ಎಸಗಲಾಗಿದೆ. ಈಗ ಕಳೆದ ವರ್ಷದ ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದ ವಿವರಗಳನ್ನು ಅಧಿಕಾರಿಗಳು ಕತ್ತಲಲ್ಲಿ ಇಟ್ಟಿದ್ದಾರೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದರು.

‘ಬಿಬಿಎಂಪಿ ಆಡಳಿತ ವ್ಯವಸ್ಥೆಯನ್ನು ಹೇಳುವವರು ಕೇಳುವವರು ಯಾರೂ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಬಜೆಟ್ ಮಂಡನೆ ವಿಚಾರದಲ್ಲಿ ಬಿಬಿಎಂಪಿ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸಿದ್ದರೂ, ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ. ಸರ್ಕಾರವೂ ಈ ವಿಚಾರದಲ್ಲಿ ಏಕಿಷ್ಟು ಮೌನ ವಹಿಸಿದೆಯೋ ತಿಳಿಯುತ್ತಿಲ್ಲ’ ಎಂದರು.

ಈ ಹಿಂದೆ ಬಜೆಟ್‌ನ ‘ಅನುಪಾಲನಾ ವರದಿ’ಯನ್ನು ಕಾರ್ಯಸಾಧನೆಯ ಬಜೆಟ್ ಎಂದೇ ಕರೆಯುತ್ತಿದ್ದೆವು. ಆದಷ್ಟು ಬೇಗ ಪಾಲಿಕೆ ಅದನ್ನು ಬಹಿರಂಗಪಡಿಸಬೇಕು
ಎಂ.ಕೆ.ಗುಣಶೇಖರ್, ಪಾಲಿಕೆಯ ಮಾಜಿ ಸದಸ್ಯ

ಬಜೆಟ್ ವಿಚಾರದಲ್ಲಿ ಪಾರದರ್ಶಕವಾಗಿ ನಡೆಯಬೇಕು. ಅನುಪಾಲನಾ ವರದಿಯನ್ನೇ ಬಹಿರಂಗಪಡಿಸಿಲ್ಲ ಎಂದಾದರೆ, ಬಿಬಿಎಂಪಿ ಏನನ್ನೊ ಮುಚ್ಚಿಡುತ್ತಿದೆ ಎಂದರ್ಥ
ಗಂಗಾಂಬಿಕೆ, ಮಾಜಿ ಮೇಯರ್

‘ಅನುಪಾಲನಾ ವರದಿ ಶೀಘ್ರ ಪ್ರಕಟ’

‘ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲೇ ಅನುಪಾಲನಾ ವರದಿಯನ್ನೂ ಸಿದ್ಧಪಡಿಸಿದ್ದೇವೆ. ಇದನ್ನು ಸರ್ಕಾರದ ಗಮನಕ್ಕೂ ತಂದಿದ್ದೇವೆ. ಬಜೆಟ್ ಪ್ರತಿಯನ್ನು ಬಿಬಿಎಂಪಿ ವೆಬ್‌ಸೈಟ್‌ನನಲ್ಲಿ ಪ್ರಕಟಿಸಿದಂತೆಯೇ, ಅನುಪಾಲನಾ ವರದಿಯನ್ನೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತರಾದ (ಹಣಕಾಸು) ತುಳಸಿ ಮದ್ದಿನೇನಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಅದಿರು ರಫ್ತು ನಿರ್ಬಂಧ ತೆರವು ಸ್ಪಷ್ಟ ನಿಲುವಿಗೆ ‘ಸುಪ್ರೀಂ’ ಸೂಚನೆ

ನವದೆಹಲಿ: ಕಬ್ಬಿಣದ ಅದಿರು ರಫ್ತು ಮೇಲಿನ ನಿರ್ಬಂಧವನ್ನು ತೆಗೆದುಹಾಕುವ ಬಗ್ಗೆ ಕರ್ನಾಟಕ ಸರ್ಕಾರವು ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರಿನ ಗಣಿಗಳಿಂದ ತೆಗೆದ ಅದಿರನ್ನು ರಫ್ತು ಮಾಡುವ ಕುರಿತಂತೆ ಗಣಿ ಗುತ್ತಿಗೆದಾರರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ನಿರ್ಬಂಧ ತೆರವು ಮಾಡಲಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸುವಂತೆ ಸೂಚಿಸಿತು.

ಸರ್ಕಾರದ ನಿಲುವನ್ನು ತಿಳಿಸುವಂತೆ ಮುಖ್ಯನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಮೂವರು ಸದಸ್ಯರ ಪೀಠವು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಖಿಲ್ ಗೋಯಲ್ ಅವರಿಗೆ ಸೂಚಿಸಿತು.

ಕರ್ನಾಟಕದ ಮೂರು ಜಿಲ್ಲೆಗಳಿಂದ ಅದಿರು ರಫ್ತು ಮೇಲೆ ಇರುವ ನಿರ್ಬಂಧವನ್ನು ತೆರವು ಮಾಡಲು ಕೇಂದ್ರ ಸರ್ಕಾರದ ಗಣಿ ಮತ್ತು ಉಕ್ಕು ಸಚಿವಾಲಯ ಹಾಗೂ ಸಿಇಸಿ ಬೇಡಿಕೆ ಇರಿಸಿದ್ದವು. ಆದರೆ, ಉಕ್ಕು ತಯಾರಕರ ಸಂಘವು ಇದನ್ನು ವಿರೋಧಿಸಿತ್ತು.

‘ಅದಿರು ರಫ್ತು ಮಾಡದಿರಲು ಬದ್ಧ’

ಬೆಂಗಳೂರು: ರಾಜ್ಯದಿಂದ ಕಬ್ಬಿಣ ಅದಿರು ರಫ್ತು ಮಾಡದಿರುವ ಬಗ್ಗೆ ಈ ಹಿಂದೆ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣ ಪತ್ರಕ್ಕೆ ರಾಜ್ಯ ಸರ್ಕಾರ ಈಗಲೂ ಬದ್ಧ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮಂಗಳವಾರ ಸುಪ್ರೀಂಕೋರ್ಟ್‌ನಲ್ಲಿ ಅದಿರು ರಫ್ತು ವಿಷಯ ವಿಚಾರಣೆಗೆ ಬರಲಿದ್ದು, ಕರ್ನಾಟಕ ಸರ್ಕಾರದ ಅಭಿಪ್ರಾಯವನ್ನು ನ್ಯಾಯಾಲಯ ಕೇಳಿದೆ. ನಮ್ಮ ಈ ಹಿಂದಿನ ನಿಲುವನ್ನೇ ಪ್ರತಿಪಾದಿಸುತ್ತೇವೆ’ ಎಂದರು.

‘ಸಿದ್ದರಾಮಯ್ಯ ಸಾಕಿದ ಗಿಣಿ’

ಬೆಂಗಳೂರು: ‘ಕರ್ನಾಟಕದಲ್ಲಿ ತಲೆ ಎತ್ತಿರುವ ‘ಅಲ್ಪ ಮತೀಯವಾದ’ ಸಿದ್ದರಾಮಯ್ಯ ಸಾಕಿದ ಗಿಣಿ. ಹಿಂದೂ ಕಾರ್ಯಕರ್ತರ ವಿರುದ್ಧ ಇದೇ ಶಕ್ತಿಯನ್ನು ಗುರಾಣಿ ಮಾಡಿದ್ದರು’ ಎಂದು ಬಿಜೆಪಿ ಕಿಡಿಕಾರಿದೆ.ಈ ಕುರಿತು ಸರಣಿ ಟ್ವೀಟ್ ಮಾಡಿರುವ ಬಿಜೆಪಿ, ‘ಪಿಎಫ್‌ಐ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ಕೈಬಿಟ್ಟು, ಆ ಸಂಘಟನೆಯನ್ನು ಹಿಂದೂ ಕಾರ್ಯಕರ್ತರ ಮೇಲೆ ಛೂ ಬಿಟ್ಟ ಔರಂಗಜೇಬ್ ನೀವಲ್ಲವೇ’ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದೆ.

‘ಪಿಎಫ್‌ಐ ಕೇವಲ ಮತೀಯ ಸಂಘಟನೆಯಲ್ಲ, ಸಂಘಟಿತ ಅಪರಾಧದಲ್ಲೂ ಅದು ನಿಸ್ಸೀಮ ಎಂದು ಜಾಗೃತ ಸಮಾಜ ಹಾಗೂ ಮಾಧ್ಯಮಗಳು ಎಚ್ಚರಿಸಿದ್ದವು. ಆದರೂ ಅದನ್ನು ಕಡೆಗಣಿಸಿದ್ದರು ಎಂದು ತಿಳಿಸಿದೆ.

ಸಿದ್ದರಾಮಯ್ಯ ಪರ್ಸಂಟೇಜ್ ಪಿತಾಮಹ: ಎಚ್‌ಡಿಕೆ

ಬೆಂಗಳೂರು: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ‘ಪರ್ಸಂಟೇಜ್ ವ್ಯವಹಾರದ ಪಿತಾಮಹ’. ಮುಖ್ಯಮಂತ್ರಿಯಾಗಿದ್ದಾಗ ಆಪ್ತ ಶಾಸಕರಿಗೆ ಅನುದಾನ ಕೊಟ್ಟು ಕಮಿಷನ್ ಹೊಡೆದಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಸೋಮವಾರ ಟ್ವಿಟರ್‌ನಲ್ಲಿ ವಾಗ್ದಾಳಿ ನಡೆಸಿರುವ ಅವರು, ‘ನಿಮ್ಮ ಕಮಿಷನ್ ಕತೆ ಕಾದಂಬರಿ ಬರೆಯುವಷ್ಟಿದೆ. ಅರ್ಕಾವತಿ ಬಡಾವಣೆಯ ‘ರೀಡೂ’ ಹಗರಣದಲ್ಲಿ ಕೆಂಪಣ್ಣ ಆಯೋಗದ ಕೃಪೆಯಿಂದ ಪಾರಾದ ನಿಮ್ಮ ಯೋಗ್ಯತೆ ನಮಗೆ ಗೊತ್ತಿಲ್ಲವೆ’ ಎಂದು ಪ್ರಶ್ನಿಸಿದ್ದಾರೆ.

‘2008–09ರಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿರೋಧ ಪಕ್ಷದ ನಾಯಕನ ಸ್ಥಾನದಿಂದ ಕೆಳಕ್ಕಿಳಿಸಲು ಬಿಜೆಪಿ ಜತೆ ವ್ಯವಹಾರ ಕುದುರಿಸಿದ್ದು, ಆಪರೇಷನ್ ಕಮಲದಲ್ಲಿ ಶಾಸಕರನ್ನು ಬಿಜೆಪಿಗೆ ಕಳಿಸಿ ಹಣ ಪಡೆದದ್ದು ಎಲ್ಲವೂ ಗೊತ್ತಿದೆ. ಕೋಟಿಗಳ ಲೆಕ್ಕದ ಗಂಟು ತರಲು ಯಾರು ಹೋಗಿದ್ದರು? ಎಲ್ಲಿಗೆ ಹಣ ತಲುಪಿಸಿದರು ಎಂಬುದು ಗೊತ್ತು. ಹಣ ತಂದುಕೊಟ್ಟ ನಿಮ್ಮ ಹಳೆಯ ಸ್ನೇಹಿತರೇ ನನ್ನ ಬಳಿ ಸತ್ಯ ಬಿಚ್ಚಿಟ್ಟಿದ್ದಾರೆ’ ಎಂದಿದ್ದಾರೆ. ‘ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕದ್ದ ವಾಚ್ ಕಟ್ಟಿದ್ದು ಸತ್ಯವಲ್ಲವೆ? ಅದನ್ನು ತಂದುಕೊಟ್ಟ ಪೊಲೀಸ್ ಅಧಿಕಾರಿಗೆ ವರ್ಗಾವಣೆ ದಯಪಾಲಿಸಿಲ್ಲವೆ?’ ಎಂದು ಕೇಳಿದ್ದಾರೆ.

ಅರ್ಹರಿಗೆ ವಸತಿ ಸೌಲಭ್ಯ: ಅರ್ಜಿ ವಿಲೇವಾರಿ

ಬೆಂಗಳೂರು: ‘ರಾಜ್ಯದಲ್ಲಿ ವಸತಿ ರಹಿತರಿಗೆ ವಸತಿ ಕಲ್ಪಿಸಲು ರೂಪಿಸಲಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ ಮಹಮ್ಮದ್ ಇಕ್ಬಾಲ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ‘ನ್ಯಾಯಾಲಯ ಈ ಪ್ರಕರಣದಲ್ಲಿ ಹೆಚ್ಚಿನ ನಿರ್ದೇಶನ ನೀಡಲು ಸಾಧ್ಯವಿಲ್ಲ’ ಎಂದು ಹೇಳಿ ಅರ್ಜಿ ವಿಲೇವಾರಿ ಮಾಡಿದೆ.

2ಎ ಮೀಸಲಾತಿ-ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿಕೆ

ಇದೇ 21ರಿಂದ ಕೂಡಲಸಂಗಮದಲ್ಲಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ 2-ಎ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಇದೇ 21ರಿಂದ ಕೂಡಲ ಸಂಗಮದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಲಾಗುವುದು ಎಂದು ಕೂಡಲ ಸಂಗಮದ ಪಂಚಮಸಾಲಿ ಗುರುಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಪಂಚಮಸಾಲಿ ಮೀಸಲಾತಿ ಹಕ್ಕೊತ್ತಾಯ ಸಮಿತಿ ಮುಖಂಡರ ಜತೆ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೂರು ಬಾರಿ ಗಡುವು ಕೊಟ್ಟರೂ ಸರ್ಕಾರ ಬೇಡಿಕೆ ಈಡೇರಿಸಿಲ್ಲ. ಸರ್ಕಾರದ ಮೇಲೆ ನಂಬಿಕೆ ಇಟ್ಟಿದ್ದೆವು. ಸರ್ಕಾರ ಕೊಟ್ಟ ಮಾತಿಗೆ ತಪ್ಪಿದೆ. ಆದ್ದರಿಂದ ಈಗ ಅನಿವಾರ್ಯವಾಗಿ ಹೋರಾಟ ಆರಂಭಿಸುತ್ತಿದ್ದೇವೆ’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಗ್ಗೆ ಭರವಸೆ ಇತ್ತು. ಆದರೆ, ನಂಬಿಕೆ ಹುಸಿಯಾಗಿದೆ. ಜನರಲ್ಲಿ ಅಸಮಾಧಾನ ಉಂಟಾಗಿದೆ. ಆದ್ದರಿಂದಲೇ ಐದು ಹಂತದ ಹೋರಾಟ ಆರಂಭಿಸಲಾಗುತ್ತಿದೆ. ಹಿಂದುಳಿದ ವರ್ಗಗಳ ಪ್ರವರ್ಗ 2-ಎ ಪಟ್ಟಿಗೆ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಸೇರಿಸುವ ಆದೇಶ ಹೊರಬೀಳುವವರೆಗೆ ವಿರಮಿಸುವುದಿಲ್ಲ ಎಂದರು.

ಪಂಚಮಸಾಲಿ, ಲಿಂಗಾಯತ ಗೌಡ, ಮಲಯಗೌಡ, ದೀಕ್ಷ ಲಿಂಗಾಯತರು ಸೇರಿ ಹೋರಾಟ ನಡೆಸಲಾಗುವುದು. ಮೊದಲು ಕೂಡಲ ಸಂಗಮದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗುವುದು. ಎರಡನೇ ಹಂತದಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಹೋರಾಟ ನಡೆಸಲಾಗುವುದು. ಮೇ 21ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಲಾಗುವುದು. ಅದಕ್ಕೂ ಸರ್ಕಾರ ಮಣಿಯದಿದ್ದರೆ ಬೆಂಗಳೂರಿನಲ್ಲಿ ಬೃಹತ್ ಹೋರಾಟ ಆರಂಬಿಸಲಾಗುವುದು ಎಂದು ಹೇಳಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆದು ಪ್ರವರ್ಗ 2-ಎ ಅಡಿಯಲ್ಲಿ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಆಯೋಗದಿಂದ ವರದಿ ಪಡೆಯಲು ಒಂದು ವರ್ಷ ಬೇಕಿದೆಯೆ? ಕೋವಿಡ್ ಮತ್ತಿತರ ಕಾರಣಗಳನ್ನು ನೀಡುತ್ತಾ ಕಾಲಹರಣ ಮಾಡಲಾಗುತ್ತಿದೆ. ಈ ನಿಲುವು ವಿರೋಧಿಸಿ ಹೋರಾಟಕ್ಕೆ ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ಒಬ್ಬರು ಮಾತ್ರ ದೂರ: ಪಂಚಮಸಾಲಿ ಸಮುದಾಯದ ಶಾಸಕರು, ಸಚಿವರು ಮತ್ತು ಸಂಸದರ ಪೈಕಿ ಒಬ್ಬರು ಮಾತ್ರ ಈ ಹೋರಾಟದಿಂದ ದೂರ ಇದ್ದಾರೆ. ಅವರಿಗೆ ಯಾವ ಅಡ್ಡಿ ಇದೆಯೋ ಗೊತ್ತಿಲ್ಲ. ಉಳಿದ ಎಲ್ಲರೂ ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಗಟ್ಟಿಯಾಗಿ ಬೆಂಬಲಕ್ಕೆ ನಿಂತಿದ್ದಾರೆ. ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಕೂಡ ಬೆಂಬಲಿಸುತ್ತಿದ್ದಾರೆ ಎಂದು ಸ್ವಾಮೀಜಿ ಹೇಳಿದರು.

‘ನಾವು ಗಡುವು ನೀಡುವವರಲ್ಲ; ಗಟ್ಟಿಯಾಗಿ ನಿಲ್ಲುವವರು’

ಚಿತ್ರದುರ್ಗ: ‘ಮೀಸಲಾತಿ ವಿಚಾರದಲ್ಲಿ ಸರ್ಕಾರಕ್ಕೆ ನಾವು ಗಡುವು ನೀಡುವ ಸ್ವಾಮೀಜಿ ಅಲ್ಲ, ಗಟ್ಟಿಯಾಗಿ ನಿಲ್ಲುವವರು’ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.

‘ಮೀಸಲಾತಿ ಸಂಬಂಧ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಸರ್ಕಾರ ಮತ್ತು ಆಯೋಗಕ್ಕೆ ನೀಡಲಾಗಿದೆ. ಶೀಘ್ರ ‘2 ಎ’ ಮೀಸಲಾತಿ ಸಿಗುವ ನಿರೀಕ್ಷೆಯಲ್ಲಿದ್ದೇವೆ. ನಮ್ಮ ದಾರಿ ಬದಲಾಯಿಸುವ ಪ್ರಶ್ನೆಯೇ ಇಲ್ಲ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಕೋಮು ಗಲಭೆ, ಧಾರ್ಮಿಕ ದ್ವೇಷ ಹೆಚ್ಚಲು ಬಿಜೆಪಿ ಕಾರಣ- ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಮು ಗಲಭೆ, ಧಾರ್ಮಿಕ ದ್ವೇಷ ಹೆಚ್ಚಲು ಬಿಜೆಪಿ ಸರ್ಕಾರದ ದೌರ್ಬಲ್ಯವೇ ಕಾರಣ’ ಎಂದು ಆರೋಪಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಬಿಜೆಪಿ ಸರ್ಕಾರ ಅವರ ಪಕ್ಷದವರ ಮೇಲೆ ಕ್ರಮ ತೆಗೆದುಕೊಂಡು ನಿಯಂತ್ರಣದಲ್ಲಿ ಇಟ್ಟಿದ್ದರೆ ಇಂಥ ಅನಾಹುತಗಳು ಸಂಭವಿಸುತ್ತಿರಲಿಲ್ಲ’ ಎಂದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಹುಬ್ಬಳ್ಳಿಯಲ್ಲಿ ನಡೆದ ಘಟನೆ ಖಂಡನೀಯ. ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬಾರದು. ಶಾಂತಿ ಕಾಪಾಡುವುದು ಅವಶ್ಯಕ. ರಾಜ್ಯದಲ್ಲಿ ಬಂಡವಾಳ ಹೂಡಿಕೆ ಆಗಬೇಕಾದರೆ ಇಂಥ ಘಟನೆ ನಡೆಯಬಾರದು’ ಎಂದರು.

‘ಕಳೆದ ಒಂದು ವರ್ಷದಲ್ಲಿ ನೈತಿಕ ಪೊಲೀಸ್ ಗಿರಿ ಹೆಸರಿನಲ್ಲಿ ಬಜರಂಗದಳ ಹಾಗೂ ಬಿಜೆಪಿ ಕಾರ್ಯಕರ್ತರು ಹಲವು ಬಾರಿ ಕಾನೂನು ಕೈಗೆತ್ತಿ ಕೊಂಡಿದ್ದಾರೆ. ನೈತಿಕ ಪೊಲೀಸ್ ಗಿರಿ ಮಾಡಿದರೆ ತಪ್ಪೇನೆಂದು ಮುಖ್ಯಮಂತ್ರಿಯೇ ಪ್ರೋತ್ಸಾಹ ನೀಡುತ್ತಿದ್ದಾರೆ. ಪೊಲೀಸ್ ಠಾಣೆಯಲ್ಲಿ ಅಧಿಕಾರಿಗಳು ಸಮವಸ್ತ್ರ ತ್ಯಜಿಸಿ ಕೇಸರಿ ವಸ್ತ್ರ ಧರಿಸಿದರೂ ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿ ಸುಮ್ಮನಿದ್ದರು. ಹುಬ್ಬಳ್ಳಿಯಲ್ಲಿ ಚರ್ಚ್‌ಗೆ ನುಗ್ಗಿ ಬಲವಂತವಾಗಿ ಭಜನೆ ಮಾಡಿದರು. ಅನ್ಯಧರ್ಮಿಯರು ಜಾತ್ರೆಗಳಲ್ಲಿ ವ್ಯಾಪಾರ ಮಾಡಬಾರದು ಎಂದು ನಿರ್ಬಂಧ ಹೇರಿದರು’ ಎಂದು ಅವರು ವಾಗ್ದಾಳಿ ನಡೆಸಿದರು.

‘ಮುಸ್ಲಿಮರ ಅಂಗಡಿಗಳಿಂದ ಮಾಂಸ ಖರೀದಿ ಮಾಡಬೇಡಿ, ವ್ಯಾಪಾರ ಮಾಡಬೇಡಿ ಎಂದೆಲ್ಲ ಹೇಳಿದ ಪರಿಣಾಮ ರೈತರಿಂದ ಕುರಿ ಖರೀದಿ ಪ್ರಮಾಣ, ಬೆಲೆ ಕುಸಿದಿದೆ. ಈ ರೀತಿ ಜನರ ಹೊಟ್ಟೆ ಮೇಲೆ ಹೊಡೆದರೆ ಆಕ್ರೋಶ ಭುಗಿಲೇಳುತ್ತದೆ. ಎಲ್ಲ ಧರ್ಮದವರು ಅವರವರ ವೃತ್ತಿ ಮಾಡುತ್ತಾ ನೂರಾರು ವರ್ಷಗಳಿಂದ ಬದುಕುತ್ತಿದ್ದೇವೆ’ ಎಂದು ಹೇಳಿದರು

ಹುಬ್ಬಳ್ಳಿ ಘಟನೆಯಲ್ಲಿ ಪ್ರಭಾವಿ ವ್ಯಕ್ತಿಗಳ ಕೈವಾಡದ ಬಗ್ಗೆ ಸರ್ಕಾರ ಶಂಕೆ ವ್ಯಕ್ತಪಡಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಯಾವುದೇ ಪ್ರಭಾವಿ ವ್ಯಕ್ತಿಯ ಕೈವಾಡ ಇದ್ದರೂ ಅವರನ್ನು ಒದ್ದು ಒಳಗೆ ಹಾಕಲಿ’ ಎಂದು ಅವರು ತಿಳಿಸಿದರು

'ಶೇ 40 ಲಂಚ– ಸಿ.ಎಂ ಅಸಹಾಯಕತೆ ಏಕೆ?'

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾಮಗಾರಿಗಳಿಗಾಗಿ ಮಂಜೂರಾಗುವ ಅನುದಾನದಲ್ಲಿ ಶೇಕಡ 40ರಷ್ಟನ್ನು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಲಂಚದ ರೂಪದಲ್ಲಿ ಕೊಡಬೇಕಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಹಲವು ದಿನಗಳಿಂದಲೂ ಆರೋಪ ಮಾಡುತ್ತಿದೆ. ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಬಳಿಕ ರಾಜ್ಯದಾದ್ಯಂತ ಈ ಕುರಿತ ಚರ್ಚೆ ತೀವ್ರವಾಗಿದೆ. ಶೇ 40ರಷ್ಟು ಲಂಚದ ಆರೋಪ, ವಿವಿಧ ಇಲಾಖೆಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಮತ್ತಿತರ ವಿಚಾರಗಳ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿವಿಧ ಪಕ್ಷಗಳ ಮುಖಂಡರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

'ಇಡೀ ಸರ್ಕಾರವೇ ಭ್ರಷ್ಟವಾಗಿದೆ'

ಕರ್ನಾಟಕವು ಭ್ರಷ್ಟಾಚಾರದಲ್ಲಿ ದೇಶದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇದು ಬಿಜೆಪಿ ಕೊಡುಗೆ. ಸಂತೋಷ್ ಸಾವು ಸರ್ಕಾರವೇ ಮಾಡಿದ ಕೊಲೆ. ಕೆ.ಎಸ್. ಈಶ್ವರಪ್ಪ ರಾಜೀನಾಮೆ ಕೊಟ್ಟರೆ ಸಾಲದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಂಪುಟದ ಎಲ್ಲ ಸದಸ್ಯರು ರಾಜೀನಾಮೆ ನೀಡಬೇಕು.

ಕೋವಿಡ್ ಸಂದರ್ಭದಲ್ಲಿ ರಾಜ್ಯ ಸರ್ಕಾರವೇ ಮುಂದೆ ನಿಂತು ಲೂಟಿ ಮಾಡಿದೆ. ಪ್ರಾಮಾಣಿಕ ಆಡಳಿತ ನೀಡಲು ಈ ಸರ್ಕಾರ ಬಂದಿಲ್ಲ. ಜನರ ಹಣವನ್ನು ಲೂಟಿ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ.

ಹಣ ಕೊಡದವರಿಗೆ ಗುತ್ತಿಗೆಯೇ ಸಿಗದಂತೆ ಮಾಡುವ ದಬ್ಬಾಳಿಕೆ ನಡೆಯುತ್ತಿದೆ. ಕೋವಿಡ್ ಸಂದರ್ಭದಲ್ಲಿ ಸಚಿವರು, ಶಾಸಕರು ತಮ್ಮ ಸಂಬಂಧಿಕರಿಗೇ ಗುತ್ತಿಗೆಗಳನ್ನು ನೀಡಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಕುಲಪತಿ ಹುದ್ದೆಗಳಿಗೆ ಕೋಟ್ಯಂತರ ಹಣ ಕೊಡಬೇಕಿದೆ.

ಉದ್ಯೋಗ ಖಾತರಿಯಲ್ಲಿ ವಸ್ತುಗಳ ಖರೀದಿ ಹೆಸರಿನಲ್ಲಿ ವ್ಯಾಪಕ ಲೂಟಿಯಾಗುತ್ತಿದೆ. ಮಕ್ಕಳು ತಿನ್ನುವ ಮೊಟ್ಟೆ ಪೂರೈಕೆಯಲ್ಲೂ ಲಂಚದ ಹಾವಳಿ ಇದೆ. ಲಂಚದ ಹಾವಳಿ ಕುರಿತು ವಿಮರ್ಶೆಗಿಂತಲೂ ಈ ಸರ್ಕಾರವನ್ನು ಕಿತ್ತು ಬಿಸಾಡಬೇಕು. ಹಿಟ್ಟು, ಬೂದಿ ಒಂದೇ ಅಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಬೇಕು.

ಕೆ. ನೀಲಾ, ಸಿಪಿಎಂ ನಾಯಕಿ

'ಉನ್ನತ ಮಟ್ಟದಲ್ಲೇ ಹೆಚ್ಚು ಭ್ರಷ್ಟಾಚಾರ'

2018ರಲ್ಲಿ ರಾಜ್ಯದಲ್ಲಿದ್ದ ಕಾಂಗ್ರೆಸ್ ಸರ್ಕಾರವನ್ನು 'ಹತ್ತು ಪರ್ಸೆಂಟ್ ಸರ್ಕಾರ' ಎಂದು ಪ್ರಧಾನಿ ಟೀಕಿಸಿದ್ದರು. ಈಗ ಈ ಸರ್ಕಾರ ಶೇ 40ರಷ್ಟು ಲಂಚದ ಆರೋಪ ಎದುರಿಸುತ್ತಿದೆ. ಲೋಕಾಯುಕ್ತ ಮತ್ತು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎರಡೂ ಇರುವ ರಾಜ್ಯ ಕರ್ನಾಟಕ ಮಾತ್ರ. ಆದರೆ, ಇಲ್ಲೇ ಭ್ರಷ್ಟಾಚಾರ ಗಗನಮುಖಿ ಆಗಿದೆ.

ಸ್ವಚ್ಛ ಆಡಳಿತ ಕೊಡುವ ವಿಚಾರದಲ್ಲಿ ಮುಖ್ಯಮಂತ್ರಿಗೆ ಬದ್ಧತೆ ಇರಬೇಕು. ಆದರೆ, ಕರ್ನಾಟಕದಲ್ಲಿ ಮುಖ್ಯಮಂತ್ರಿ, ಸಚಿವರು, ಆಡಳಿತ ಪಕ್ಷಕ್ಕೆ ಈ ವಿಚಾರದಲ್ಲಿ ಬದ್ಧತೆ ಇಲ್ಲ. ಭ್ರಷ್ಟಾಚಾರ ವ್ಯಾಪಕವಾಗಿದೆ.

ಶೇ 40ರಷ್ಟು ಲಂಚದ ಬೇಡಿಕೆ ಕುರಿತು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಪ್ರಧಾನಿಗೆ ದೂರು ನೀಡಿದ್ದರು. ಮೃತ ಗುತ್ತಿಗೆದಾರ ಸಂತೋಷ್ ಪಾಟೀಲ ಕೂಡ ದೂರು ನೀಡಿದ್ದರು. ಬದ್ಧತೆ ಇದ್ದಿದ್ದರೆ ಪ್ರಧಾನಿಗೆ ದೂರು ಹೋದಾಗಲೇ ಕ್ರಮ ಕೈಗೊಳ್ಳಬೇಕಿತ್ತು. ಸಮಿತಿ ರಚನೆ ಜನರ ಕಣ್ಣೊರೆಸುವ ತಂತ್ರ.

ಈ ಸರ್ಕಾರ ಭ್ರಷ್ಟಾಚಾರದ ನೆಲೆಗಟ್ಟಿನಲ್ಲೇ ಬಂದಿದೆ. ಅವರಿಂದ ಏನು ನಿರೀಕ್ಷಿಸಲಾಗದು. ಬೊಮ್ಮಾಯಿ ಅವರ ಕೈಕಟ್ಟಿ ಹಾಕಲಾಗಿದೆ. ಭ್ರಷ್ಟಾಚಾರಕ್ಕೆ ಆಸ್ಪದವಿಲ್ಲದ ಚುನಾಯಿತ ಪ್ರತಿನಿಧಿಗಳ ಆಯ್ಕೆಯೇ ಪರಿಹಾರ.

ಭಾಸ್ಕರ್ ರಾವ್, ಎಎಪಿ ನಾಯಕ

ಪ್ರಜಾವಾಣಿ ಸಂವಾದ

'ಭ್ರಷ್ಟಾಚಾರ ಬೆಳೆಯಲು ಸಿದ್ದರಾಮಯ್ಯ ಕಾರಣ'

ಭ್ರಷ್ಟಾಚಾರ ಇಷ್ಟು ದೊಡ್ಡದಾಗಿ ಬೆಳೆಯಲು ಕಾರಣ ಸಿದ್ದರಾಮಯ್ಯ. ಲೋಕಾಯುಕ್ತವನ್ನು ಅವರು ದುರ್ಬಲಗೊಳಿಸಿರುವುದೇ ಈಗಿನ ದುಸ್ಥಿತಿಗೆ ಕಾರಣ. ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಭ್ರಷ್ಟಾಚಾರದ ಮುಖಗಳಿದ್ದಂತೆ.

ಸರ್ಕಾರಿ ಕಾಮಗಾರಿಗಳನ್ನು ಮಾಡಲು ನಿಯಮಾವಳಿಗಳಿವೆ. ಅವುಗಳನ್ನು ಉಲ್ಲಂಘಿಸಿ ಕಾಮಗಾರಿ ನಡೆಸುವುದು ಅಪರಾಧ. ಈ ವಿಚಾರದಲ್ಲಿ ಮೃತ ಸಂತೋಷ್ ಪಾಟೀಲ ಕೂಡ ಅಪರಾಧಿ. ಭಾಗಿಯಾದ ಎಲ್ಲರೂ ಜವಾಬ್ದಾರಿ ಹೊರಬೇಕು. ರಾಜಕೀಯ ಪಕ್ಷಗಳ ಚೇಲಾಗಳು, ಗೂಂಡಾಗಳು ಗುತ್ತಿಗೆದಾರರಾಗಿದ್ದಾರೆ.

ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದವರೆಗೂ ಪರ್ಸೆಂಟೇಜ್ ಲೆಕ್ಕದಲ್ಲಿ ಲಂಚ ನೀಡಬೇಕಿದೆ. ಪಂಚಾಯಿತಿ ಅಧ್ಯಕ್ಷ, ಪಿಡಿಒ, ಎಂಜಿನಿಯರ್ ಹೀಗೆ ಸಾಗುತ್ತಾ ಹಣ ಬಿಡುಗಡೆವರೆಗೂ ಲಂಚ ಕೊಡಲೇಬೇಕಾದ ಸ್ಥಿತಿ ಇದೆ. ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ. ಶೇ 40ರಷ್ಟು ಲಂಚವಿದೆ. ಜನರ ತೆರಿಗೆ ಲೂಟಿ ಮಾಡುವುದು ತಪ್ಪಬೇಕು.

ಲೋಕಾಯುಕ್ತವನ್ನು ಬಲಪಡಿಸುವುದರಿಂದ ಭ್ರಷ್ಟಾಚಾರ ತಡೆಯಬಹುದು. ಎಲ್ಲ ಕಡೆ ಈ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುವುದು

ಮಲ್ಲಿಕಾರ್ಜುನ ಭಟ್ಟರಹಳ್ಳಿ, ಕೆಆರ್‌ಎಸ್ ಪಕ್ಷದ ಕಾರ್ಯದರ್ಶಿ

ಲೈವ್ ಕಾರ್ಯಕ್ರಮದ ಲಿಂಕ್ ಇಲ್ಲಿದೆ...https://www.facebook.com/prajavani.net

ಸುದ್ದಿ 2 ನಿಮಿಷ

'ಚುನಾವಣಾ ಅಖಾಡಕ್ಕೆ 50 ಸನ್ಯಾಸಿಗಳು'

ಭಟ್ಕಳ (ಉತ್ತರ ಕನ್ನಡ): 'ಶಾಸಕಾಂಗದ ಸಮಗ್ರ ಬದಲಾವಣೆಗಾಗಿ, ರಾಜ್ಯದಲ್ಲಿ 50 ಸನ್ಯಾಸಿಗಳು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಲಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಂದ ಪ್ರೇರಣೆ ಪಡೆದಿದ್ದೇವೆ' ಎಂದು ಕನ್ನಡ ಶ್ರೀರಾಮಕ್ಷೇತ್ರದ ಪೀಠಾಧಿಪತಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಸಮೀಪದ ಸಾರದ ಹೊಳೆ ಹಳೆಕೋಟೆ ಶ್ರೀಕ್ಷೇತ್ರ ಹನುಮಂತ ದೇವರ ಪುನರ್ ಪ್ರತಿಷ್ಠಾಪನಾ ಮಹೋತ್ಸವದ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದರು.

'ಶಾಸಕಾಂಗದ ವ್ಯವಸ್ಥೆ ದಿಕ್ಕು ತಪ್ಪುತ್ತಿದೆ. ಇದರ ಪರಿಹಾರಕ್ಕೆನೇ ಇಂದಿನ ವಿಧಾನಸಭೆಯಲ್ಲಿ ಅಶಿಸ್ತಿನ ವರ್ತನೆ ತೋರುತ್ತಿದ್ದಾರೆ. ರಾಜಕೀಯಕ್ಕೆ ಬರುವುದೇ ಪ್ರಚಾರಕ್ಕಾಗಿ, ಹಣಕ್ಕಾಗಿ, ಸುಖಭೋಗಕ್ಕಾಗಿ ಎಂದು ತಿಳಿದಿದ್ದಾರೆ. ವಿದ್ಯಾವಂತರಿಲ್ಲದ ರಾಜಕಾರಣಿಗಳು 'ಇಂದು ತಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ಅಸಮರ್ಥರಾಗುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಉತ್ತರಾಖಂಡದ ನಾಗಾ ಸಾಧುಗಳ ಜೊತೆ ನಾನೂ ಒಬ್ಬ ಪಂಥನಿದ್ದೇನೆ. ಈಗಾಗಲೇ ಈ ಬಗ್ಗೆ ನಮ್ಮಲ್ಲಿ ಹಲವು ಚರ್ಚೆಗಳು ನಡೆದಿವೆ. ಸನಾತನ ಹಿಂದೂ ಧರ್ಮವನ್ನು ತಿದ್ದಬೇಕು. ರಾಮರಾಜ್ಯ ಕಲ್ಪನೆಯಲ್ಲಿ ಭಟ್ಕಳದಿಂದ ಪ್ರಾಯೋಗಿಕವಾಗಿ ನಾನು ಸ್ಪರ್ಧಿಸುವ ಯೋಜನೆಯಲ್ಲಿದ್ದೇನೆ' ಎಂದು ತಿಳಿಸಿದರು.



'ಧರ್ಮ ಹಾಗೂ ರಾಜಕೀಯ ಒಟ್ಟಿಗೆ ಹೋಗಬೇಕು. ರಾಜ್ಯದಲ್ಲಿ ತ್ಯಾಗಿ ರಾಜಕಾರಣಿ ಮುಂದೆ ಬರಬೇಕು. ಹಾಗಾದಲ್ಲಿ ರಾಜ್ಯದಲ್ಲಿ ಸಮಾನತೆ ತರಲು ಸಾಧ್ಯ' ಎಂದು ಪ್ರತಿಪಾದಿಸಿದರು.

'ಯಾವ ಮಸೀದಿಯಲ್ಲಿ ಮಠಾಧೀಶರಿಗೆ ಸತ್ಕರಿಸಿದ್ದಾರೆ?'

ಶಿವಮೊಗ್ಗ: 'ಹಿಂದೂ, ಮುಸ್ಲಿಮರ ಮಧ್ಯೆ ಸೌಹಾರ್ದ ಇರಬೇಕು ಎಂದು ಹಿರಿಯ ಶ್ರೀಗಳು ಮಠದಲ್ಲೇ ಇಫ್ತಾರ್ ಕೂಟ ಆಯೋಜಿಸಿದ್ದರು. ಆದರೆ, ಯಾವ ಮಸೀದಿಯಲ್ಲೂ ಮಠಾಧೀಶರನ್ನು ಕರೆದು ಸತ್ಕರಿಸಿಲ್ಲ. ಬದಲಾವಣೆ ಒಂದು ಬದಿಯಲ್ಲಿ ಸಾಧ್ಯವಿಲ್ಲ' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸೋಮವಾರ ಪ್ರತಿಪಾದಿಸಿದರು.

ಅಯೋಧ್ಯೆಗೆ ತೆರಳುವ ಮುನ್ನ ಶಿವಮೊಗ್ಗದಲ್ಲಿ ಈಶ್ವರಪ್ಪ ಅವರ ಮನೆಗೆ ಭೇಟಿ ನೀಡಿದ್ದ ಅವರು, 'ರಾಮ, ಹನುಮ ಹುಟ್ಟಿದ ನಾಡಿನಲ್ಲೇ ಅವರ ಜಯಂತಿ, ಉತ್ಸವಗಳ ಸಮಯದಲ್ಲಿ ಪ್ರತಿರೋಧ ತೋರುವುದು ಸರಿಯಲ್ಲ' ಎಂದರು.

'ಮುಸ್ಲಿಂ ಸಮುದಾಯದ ಬಗ್ಗೆ ನಾವು ಒಲವು ತೋರಿದರೆ, ಅವರು ಎಲ್ಲದಕ್ಕೂ ವಿರೋಧ ವ್ಯಕ್ತಪಡಿಸುತ್ತಾರೆ. ಎರಡೂ ಕಡೆ ಹೊಂದಾಣಿಕೆ ಇದ್ದರೆ ಸೌಹಾರ್ದ ಬೆಳೆಯುತ್ತದೆ. ಕಲ್ಲು ತೂರಾಟ ನಡೆಸುವುದು, ದೇವಸ್ಥಾನಗಳಿಗೆ ಹಾನಿ ಮಾಡುವುದು ತುಂಬಾ ನೋವಿನ ಸಂಗತಿ. ಪ್ರತಿರೋಧ ತೊರೆದು ಸಹಬಾಳ್ವೆಯಿಂದ ಜೀವನ ನಡೆಸಬೇಕು' ಎಂದು ಕಿವಿಮಾತು ಹೇಳಿದರು.

ಶಾಸಕ ಕೆ.ಎಸ್.ಈಶ್ವರಪ್ಪ ಅವರು, 'ಹನುಮ ಜಯಂತಿ, ರಾಮನವಮಿ ಸಮಯದಲ್ಲಿ ಆಘಾತಕಾರಿ ಕೃತ್ಯ ನಡೆಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಳಿ ಪ್ರಸ್ತಾಪಿಸುವೆ' ಎಂದರು.

'ಫಲಾಪೇಕ್ಷೆ ಪಡೆದಿಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: 'ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಪಲಿಮಾರು ಮಠಕ್ಕೆ ಧನ ಸಹಾಯ ನೀಡಲಾಗಿತ್ತು. ಹಣ ಬಿಡುಗಡೆಗೆ ಯಾರೂ ಫಲಾಪೇಕ್ಷೆ ಪಡೆದಿಲ್ಲ' ಎಂದು ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ ಹೇಳಿದರು.

ಹಣ ಬಿಡುಗಡೆಗೆ ಶಾಸಕರಾಗಲಿ, ಮಂತ್ರಿಗಳಾಗಲಿ ಕಿಂಚಿತ್ತೂ ಸ್ವಾರ್ಥ ತೋರಿಸಿಲ್ಲ. ಹಣ ಬಿಡುಗಡೆಗೆ ವಿಳಂಬವಾದಾಗ ಶಾಸಕರು ಹಾಗೂ ಮುಜರಾಯಿ ಸಚಿವರು, ಅಧಿಕಾರಿಗಳು ಮಠದ ನೆರವಿಗೆ ಧಾವಿಸಿದ್ದರು ಎಂದು ಶ್ರೀಗಳು ತಿಳಿಸಿದ್ದಾರೆ.

ಅನುದಾನ ಪಡೆಯಲು ಮಠಗಳೂ ಕಮಿಷನ್ ಕೊಡಬೇಕು ಎಂಬ ಸ್ವಾಮೀಜಿಯ ಹೇಳಿಕೆಯ ಹಿಂದೆ ಕಾರಣಗಳು ಇರಬಹುದು. ಸರ್ಕಾರದ ಪ್ರಾಮಾಣಿಕ ಸೇವೆಯಲ್ಲಿ ಹುಳಿ ಹಿಂಡಬಾರದು, ಪ್ರೋತ್ಸಾಹ ನೀಡಬೇಕು ಎಂದು ಸ್ವಾಮೀಜಿ ಕಿವಿಮಾತು ಹೇಳಿದ್ದಾರೆ.

ವಿದ್ಯಾಧೀಶ ತೀರ್ಥರು

ಹಿಂದಿನ ಸರ್ಕಾರದ ಅವಧಿಯಲ್ಲಿ ಒಬ್ಬರಿಗೆ ಹೆಚ್ಚು, ಒಬ್ಬರಿಗೆ ಕಡಿಮೆ ಎಂದು ಓಲೈಕೆ ಮಾಡಲಾಗುತ್ತಿತ್ತು. ಆದರೆ ಇಂದಿನ ಸರ್ಕಾರ ಒಂದು ನಾಡು, ಒಂದು ಬೆಳಕು, ಒಂದು ನೀರು ಎಂಬ ನಿಲುವು ಹೊಂದಿರುವುದು ಅಭಿನಂದನೀಯ ಎಂದರು.

> 'ಮಠಗಳಿಗೆ ಕೊಟ್ಟ ಅನುದಾನದಲ್ಲೂ ಪರ್ಸೆಂಟೇಜ್ ಕೇಳುತ್ತಾರೆಂದು ಸ್ವಾಮೀಜಿಗಳೇ ಆರೋಪಿಸಿದ್ದಾರೆ. ಇದು ಎಂತಹ ನಾಚಿಗೆಗೇಡಿನ ಸರ್ಕಾರ? ಪ್ರಧಾನಿ ಮೋದಿ ಏನು ಮಾಡುತ್ತಿದ್ದಾರೆ?
> **ಸಿದ್ದರಾಮಯ್ಯ,** ವಿರೋಧಪಕ್ಷದ ನಾಯಕ

> 'ಮಠಗಳಿಗೂ ಶೇ 30ರಷ್ಟು ಕಮಿಷನ್ ನಿಗದಿ ಹೇಳಿಕೆಗೆ ಈಗಲೂ ಬದ್ಧ. ಹಿಂದೆ ಯಡಿಯೂರಪ್ಪ ಅವಧಿಯಲ್ಲಿ ಬಾಲೇಹೊಸೂರು ಮಠಕ್ಕೆ ಬಿಡುಗಡೆ ಆಗಿರುವ ಅನುದಾನ ಇಂದಿಗೂ ಸಿಕ್ಕಿಲ್ಲ. ಇದಕ್ಕೇನು ಅರ್ಥ?'
> **ದಿಂಗಾಲೇಶ್ವರ ಸ್ವಾಮೀಜಿ**
> ಶಿರಹಟ್ಟಿಯ ಮಹಾಸಂಸ್ಥಾನ ಮಠ

ಶೇ 30 ಕಮಿಷನ್: ದಿಂಗಾಲೇಶ್ವರ ಸ್ವಾಮೀಜಿ ಹೇಳಿಕೆಗೆ ಸಿ.ಎಂ ಪ್ರತಿಕ್ರಿಯೆ

'ಶ್ರೀಗಳು ದಾಖಲೆ ನೀಡಿದರೆ ತನಿಖೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಠಗಳಿಗೆ ಮಂಜೂರಾದ ಅನುದಾನದ ಮೊತ್ತ ಪಡೆಯಲು ಶೇ 30ರಷ್ಟು ಕಮಿಷನ್ ಕೊಡಬೇಕಿದೆ ಎಂಬ ಆರೋಪಕ್ಕೆ ಪೂರಕವಾಗಿ ದಿಂಗಾಲೇಶ್ವರ ಸ್ವಾಮೀಜಿ ದಾಖಲೆ ಒದಗಿಸಿದರೆ ತನಿಖೆಗೆ ಸಿದ್ಧ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ದಿಂಗಾಲೇಶ್ವರರು ಪರಮಪೂಜ್ಯರು, ಮಹಾತ್ಮರು, ತಪಸ್ವಿಗಳು. ಮಠಾಧೀಶರು ಹೇಳಿಕೆ ನೀಡಿದರೆ ಸಾಕಾಗುವುದಿಲ್ಲ' ಎಂದು ಹೇಳಿದರು.

'ಸ್ವಾಮೀಜಿಗಳು ಯಾರಿಗೆ? ಯಾವ ಉದ್ದೇಶಕ್ಕಾಗಿ? ಎಷ್ಟು ಮೊತ್ತದ ಲಂಚ ಕೊಟ್ಟಿದ್ದಾರೆ ಎಂಬುದರ ಬಗ್ಗೆ ವಿವರಗಳನ್ನು ಒದಗಿಸಲಿ. ಪ್ರಕರಣದ ಸಂಪೂರ್ಣ ಆಳಕ್ಕೆ ಇಳಿದು ತನಿಖೆ ಮಾಡಿಸಲಾಗುವುದು' ಎಂದರು.

'ಬಿಜೆಪಿಯವರು ಲೂಟಿ ಧರ್ಮದ ಪರಿಪಾಲಕರು'

ಕಲಬುರಗಿ: 'ಬಿಜೆಪಿಯವರು ಲೂಟಿ ಧರ್ಮದ ಪರಿಪಾಲಕರು' ಎಂದು ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಲೇವಡಿ ಮಾಡಿದ್ದಾರೆ.

'ಮಠಗಳಿಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಶೇ 30ರಷ್ಟು ಕಮಿಷನ್ ಕೊಡಬೇಕಾಗಿದೆ ಎಂದು ಶಿರಹಟ್ಟಿಯ ಜಗದ್ಗುರು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಆರೋಪ ಮಾಡಿದ್ದಾರೆ. ಶಾಸಕರು ಮಠಗಳ ಅನುದಾನದಲ್ಲಿಯೂ ಕಮಿಷನ್ ಕಡ್ಡಾಯಗೊಳಿಸಿದ್ದಾರೆ. ಬಾಯಲ್ಲಿ ಹಿಂದೂ ಧರ್ಮ ಎನ್ನುವ ಬಿಜೆಪಿಯವರು ಅಸಲಿಗೆ ಲೂಟಿ ಧರ್ಮದ ಪರಿಪಾಲಕರು' ಎಂದು ಟೀಕಿಸಿದ್ದಾರೆ.

'ಬಿಜೆಪಿಯವರ ಎದೆ ಸೀಳಿದರೆ ಸಿಗುವುದು ನಾಲ್ಕೇ ಅಕ್ಷರ. ಅದು ಕಮಿಷನ್. ಸ್ವಾಮಿಗಳ ಈ ಗಂಭೀರ ಆರೋಪಕ್ಕೆ ಉತ್ತರ ಕೊಡುತ್ತಾರಾ ಅಥವಾ ಅವರಿಗೂ ಹಿಂದೂ ವಿರೋಧಿ ಪಟ್ಟ ಕಟ್ಟುತ್ತಾರಾ ನೋಡಬೇಕು' ಎಂದು ಕುಟುಕಿದ್ದಾರೆ.

'ದಿಂಗಾಲೇಶ್ವರ ಶ್ರೀ ಊಸರವಳ್ಳಿ'

ಚಿತ್ರದುರ್ಗ: 'ದಿಂಗಾಲೇಶ್ವರ ಸ್ವಾಮೀಜಿ ಊಸರವಳ್ಳಿ ರೀತಿಯಲ್ಲಿ ಬಣ್ಣ ಬದಲಿಸುತ್ತಾರೆ. ಲಂಚ ನೀಡುವುದಕ್ಕೂ ಮೊದಲು ಅವರು ಪ್ರತಿಭಟಿಸಬೇಕಿತ್ತು' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಕಿಡಿಕಾರಿದರು.

'ಸರ್ಕಾರ ಮಠಗಳಿಗೆ ನೀಡುವ ಅನುದಾನ ಪಡೆಯಲು ಶೇ 30ರಷ್ಟು ಕಮಿಷನ್ ನೀಡಬೇಕಿದೆ' ಎಂಬ ದಿಂಗಾಲೇಶ್ವರ ಸ್ವಾಮೀಜಿ ಅವರ ಆರೋಪಕ್ಕೆ ಸಚಿವರು ತಿರುಗೇಟು ನೀಡಿದರು.

'ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಕ್ಕೆ ತೆರಳಿ ಕಾಂಗ್ರೆಸ್ ಭಕ್ತರನ್ನು ಮೆಚ್ಚಿಸುವ ಉದ್ದೇಶದಿಂದ ಹೀಗೆ ಮಾತನಾಡಿದ್ದಾರೆ. ಅವರ ಮಾತುಗಳಿಗೆ ಬೆಲೆ ಕೊಡುವ ಅಗತ್ಯವಿಲ್ಲ' ಎಂದು ಹೇಳಿದರು.

'ಭಾವೈಕ್ಯ ದಿನ' ಘೋಷಣೆಗೆ ಸ್ವಾಮೀಜಿ ತಕರಾರು

ಪ್ರಜಾವಾಣಿ ವಾರ್ತೆ

ಅಕ್ಕಿಆಲೂರ (ಹಾವೇರಿ ಜಿಲ್ಲೆ): 'ಗದುಗಿನ ತೋಂಟದ ಸಿದ್ಧಲಿಂಗ ಸ್ವಾಮೀಜಿ ಹೆಸರಿನ ಮೇಲೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಭಾವೈಕ್ಯ ದಿನ' ಘೋಷಿಸುವ ಮೂಲಕ ಆರ್‌ಎಸ್‌ಎಸ್ ಹಾಗೂ ವಿಎಚ್‌ಪಿ ನಿಯಮಗಳನ್ನು ವಿರೋಧಿಸುವ ಹುನ್ನಾರದಲ್ಲಿದ್ದಂತೆ ಕಂಡುಬರುತ್ತಿದೆ' ಎಂದು ಶಿರಹಟ್ಟಿಯ ಮಹಾಸಂಸ್ಥಾನ ಮಠದ ದಿಂಗಾಲೇಶ್ವರ ಸ್ವಾಮೀಜಿ ಟೀಕಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಅವರು ಮಠಗಳ ವಿಷಯದಲ್ಲಿಯೂ ಒಡೆದು–ಆಳುವ ರಾಜಕೀಯ ಮಾಡುತ್ತಿರುವುದು ಸ್ಪಷ್ಟವಾಗಿದೆ. ಅವರ ನಡೆಯೇ ವಿಚಿತ್ರವಾಗಿದೆ' ಎಂದರು.

'ಭಾವೈಕ್ಯ ಮತ್ತು ತೋಂಟದ ಸಿದ್ಧಲಿಂಗ ಸ್ವಾಮೀಜಿಗೂ ಯಾವ ಸಂಬಂಧವಿಲ್ಲ. ಬದುಕಿನುದ್ದಕ್ಕೂ ಬ್ರಾಹ್ಮಣ ಸಮಾಜವನ್ನು ಬೈಯುತ್ತಾ, ಲಿಂಗಾಯತರು, ಬ್ರಾಹ್ಮಣರು, ದಲಿತರು, ಮುಸ್ಲಿಮರಲ್ಲಿ ಭೇದಭಾವ ಉಂಟು ಮಾಡುತ್ತಿದ್ದರು. ಸಮಾಜ ಸಮಾಜಗಳ ಮಧ್ಯೆ ಗೊಂದಲ ಸೃಷ್ಟಿಸುತ್ತಿದ್ದರು. ವೀರಶೈವವೇ ಬೇರೆ ಲಿಂಗಾಯತವೇ ಬೇರೆ ಎಂದು ಹೇಳಿ ಬೆಂಕಿ ಹಚ್ಚುವ ಕೆಲಸ ಮಾಡಿ ಇಡೀ ಅಖಂಡ ಸಮಾಜ ಒಡೆಯುವ ಪ್ರಯತ್ನಕ್ಕೆ ಕಾರಣರಾಗಿದ್ದರು' ಎಂದು ಟೀಕಿಸಿದರು.

'ತೋಂಟದ ಸಿದ್ದಲಿಂಗ ಸ್ವಾಮೀಜಿ ಹೆಸರಿನಲ್ಲಿ ನೂರು ನಿರ್ಣಯ ಕೈಗೊಂಡರೂ ಅಭ್ಯಂತರವಿಲ್ಲ. ಲೋಕಸಭೆ, ವಿಧಾನಸಭೆಯಲ್ಲಿ ಅವರ ಮೂರ್ತಿ ಪ್ರತಿಷ್ಠಾಪಿಸಿದರೂ ತಕರಾರಿಲ್ಲ, ಅವರ ಹೆಸರ ಮೇಲೆ ಪ್ರಶಸ್ತಿ ಘೋಷಿಸಿದರೂ ವಿರೋಧಿಸಲ್ಲ. ಆದರೆ ಭಾವೈಕ್ಯ ದಿನ ಘೋಷಣೆ ಒಪ್ಪುವುದಿಲ್ಲ. ಸ್ವಾಮೀಜಿ ನಡೆದು ಬಂದ ದಾರಿಗೂ ಮುಖ್ಯಮಂತ್ರಿಗಳ ನಿರ್ಣಯಕ್ಕೂ ವ್ಯತ್ಯಾಸವಿದೆ' ಎಂದರು.

'ಶಿರಹಟ್ಟಿಯ ಜಗದ್ಗುರು ಫಕೀರೇಶ್ವರ ಮಠದ 'ಫಕೀರೇಶ್ವರರ ಜನ್ಮದಿನ' ಅಥವಾ ಜಾತ್ರೆಯ ದಿನವಾದ ಅಗಿ ಹುಣ್ಣಿಮೆಯನ್ನು ಭಾವೈಕ್ಯ ದಿನ ಎಂದು ಘೋಷಿಸಬೇಕು. ಮುಖ್ಯಮಂತ್ರಿಗಳು ಭಾವೈಕ್ಯ ದಿನ ಕುರಿತ ಈಗಿನ ಘೋಷಣೆಯನ್ನು ಹಿಂಪಡೆದು ಬೇರೊಂದು ನಿರ್ಣಯ ಮಾಡಬೇಕು' ಎಂದು ಸ್ವಾಮೀಜಿ ಆಗ್ರಹಿಸಿದರು.

'ರಾಜ್ಯದ ಶಾಲೆಗಳಲ್ಲಿ ಬಿಸಿಯೂಟ ಯೋಜನೆಯಡಿ ಅಡುಗೆ ತಯಾರಿ ಕೆಲಸ ಮಾಡುತ್ತಿದ್ದ ಮಹಿಳೆಯರನ್ನು 60 ವರ್ಷ ವಯೋಮಿತಿ ನೆಪವೊಡ್ಡಿ ಏಕಾಏಕಿ ತೆಗೆದುಹಾಕಲಾಗಿದ್ದು, ಈ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿ ನೊಂದ ಮಹಿಳೆಯರು, ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ (ಮಧ್ಯಾಹ್ನದ ಉಪಾಹಾರ ಯೋಜನೆ) ಕಚೇರಿಗೆ ಸೋಮವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ರಮೇಶ ಭೇಟಿಯಾದ ಗುತ್ತಿಗೆದಾರರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಂತೋಷ್ ಪಾಟೀಲ ಅವರ ಬಳಿ ಉಪ ಗುತ್ತಿಗೆ ಪಡೆದಿದ್ದರು ಎನ್ನಲಾದ ಐವರು ಗುತ್ತಿಗೆದಾರರು ಗೋಕಾಕದಲ್ಲಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರನ್ನು ಸೋಮವಾರ ಭೇಟಿಯಾಗಿ ಚರ್ಚಿಸಿದ್ದಾರೆ.

'ಕಾಮಗಾರಿ ನಿರ್ವಹಿಸಿರುವ ಹಿಂಡಲಗಾ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗೇಶ ಮನ್ನೋಳಕರ ಅವರೊಂದಿಗೆ ಗುತ್ತಿಗೆದಾರರು ರಮೇಶ ಅವರನ್ನು ಭೇಟಿಯಾಗಿದ್ದಾರೆ. ಎಷ್ಟೆಷ್ಟು ಹಣ ಹಾಕಿದ್ದೇವೆ, ಯಾವ್ಯಾವ ಕೆಲಸ ಮಾಡಿದ್ದೇವೆ ಎಂಬ ಮಾಹಿತಿ ನೀಡಿದ ಅವರು, ಸರ್ಕಾರದಿಂದ ತಮಗೆ ಬರಬೇಕಾದ ಬಿಲ್ ಕೊಡಿಸುವಂತೆ ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಹಿಂಡಲಗಾದಲ್ಲಿ ರಸ್ತೆ, ಚರಂಡಿ ಕಾಮಗಾರಿ ನಡೆಸಲು ಸಂತೋಷ್ ಹಾಗೂ ಗ್ರಾ.ಪಂ.ಅಧ್ಯಕ್ಷ ನಾಗೇಶ ನಮಗೆ ತಿಳಿಸಿದ್ದರು. ಒಟ್ಟು 12 ಮಂದಿ ಕೆಲಸ ಮಾಡಿದ್ದೇವೆ. ಕಾರ್ಯಾದೇಶದ ಪ್ರತಿ ಕೇಳಿದಾಗ, ನನ್ನ ಬಳಿ ಇದೆ, ಕಾಳಜಿ ಮಾಡಬೇಡಿ ಎಂದು ಸಂತೋಷ್ ತಿಳಿಸಿದ್ದರು' ಎಂದು ಉಪ ಗುತ್ತಿಗೆ ಪಡೆದಿದ್ದ ರಾಜು ಜಾಧವ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ನಾವ್ಯಾರೂ ಕೆ.ಎಸ್.ಈಶ್ವರಪ್ಪ ಅವರನ್ನು ಭೇಟಿಯಾಗಿಲ್ಲ. ಶೇ 40ರಷ್ಟು ಕಮಿಷನ್ ವಿಚಾರ ನಮಗೆ ಗೊತ್ತಿಲ್ಲ. ನಾನೊಬ್ಬನೆ ಹಿಂಡಲಗಾದ ಕಲ್ಮೇಶ್ವರ ನಗರದಲ್ಲಿ ₹27ಲಕ್ಷ ವೆಚ್ಚದಲ್ಲಿ ಕಾಮಗಾರಿ ಮಾಡಿದ್ದೇನೆ. ಸ್ವಂತ ಹಣ ಹಾಕಿದ್ದೇವೆ. ಸಂತೋಷ್ ಹಣ ನೀಡಿಲ್ಲ'. ನಮಗೆ ನೀಡಬೇಕಿದ್ದನ್ನು ಸೇರಿಸಿ ₹ 4 ಕೋಟಿ ಬಿಲ್ ಎಂದು ಸಂತೋಷ್ ಹೇಳಿರಬಹುದು' ಎಂದು ಪ್ರತಿಕ್ರಿಯಿಸಿದರು.

'ಈ ಪ್ರಕರಣದಲ್ಲಿ ಮಹಾನಾಯಕನ ಷಡ್ಯಂತ್ರವಿದ್ದು, ಆ ಬಗ್ಗೆ ಸೋಮವಾರ ಪತ್ರಿಕಾಗೋಷ್ಠಿ ನಡೆಸಿ ದಾಖಲೆ ಬಿಡುಗಡೆ ಮಾಡುತ್ತೇನೆ' ಎಂದಿದ್ದ ಶಾಸಕ ರಮೇಶ ಜಾರಕಿಹೊಳಿ ಹಿಂದೆ ಸರಿದಿದ್ದಾರೆ.

ಪೊಲೀಸರಿಂದ ಪಿಡಿಒ ವಿಚಾರಣೆ

ಬೆಳಗಾವಿ: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಉಡುಪಿ ಪೊಲೀಸರ ತಂಡ ತಾಲ್ಲೂಕಿನ ಹಿಂಡಲಗಾಗೆ ಭೇಟಿ ನೀಡಿದ್ದು, ಗ್ರಾಮ ಪಂಚಾಯಿತಿ ಪಿಡಿಒ ವಸಂತಕುಮಾರಿ ಕೆ. ಅವರಿಂದ ಮಾಹಿತಿ ಪಡೆಯಿತು.

ಹಿಂಡಲಗಾ ಗ್ರಾಮದಲ್ಲಿ ₹4 ಕೋಟಿ ಮೊತ್ತದ ಕಾಮಗಾರಿ ನಿರ್ವಹಿಸಿದ್ದಾಗಿ ಸಂತೋಷ್ ಹೇಳಿಕೊಂಡಿದ್ದರು. ಉಡುಪಿ ಠಾಣೆಯ ಇನ್‌ಸ್ಪೆಕ್ಟರ್ ಶರಣಗೌಡ ಪಾಟೀಲ ನೇತೃತ್ವದ ತಂಡವು ಕಾಮಗಾರಿಗಳ ಕುರಿತು ಅಧಿಕಾರಿಯಿಂದ ಮಾಹಿತಿ ಪಡೆಯಿತು.

ಕಾರ್ಯಾದೇಶ ಪತ್ರವಿಲ್ಲದೆ ಕೆಲಸ ನಡೆಸಲು ಅವಕಾಶ ಕೊಟ್ಟಿದ್ದು ಏಕೆ ಎಂದು ಪ್ರಶ್ನಿಸಿದರು. 'ಕಾಮಗಾರಿ ನಡೆದ ವೇಳೆ ನಾನು ಇಲ್ಲಿರಲಿಲ್ಲ. ಕೆಲವು ತಿಂಗಳ ಹಿಂದೆಯಷ್ಟೆ ಬಂದಿದ್ದೇನೆ' ಎಂದು ಪಿಡಿಒ ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

ಹಿಂದೆ ಪಿಡಿಒ ಇದ್ದವರು ಯಾರು?, ಎಲ್ಲೆಲ್ಲಿ ಮತ್ತು ಯಾವ್ಯಾವ ಕಾಮಗಾರಿ ನಡೆದಿವೆ? ಎಂಬಿತ್ಯಾದಿ ಮಾಹಿತಿಯನ್ನು ಅಧಿಕಾರಿಗಳು ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗೇಶ ಮನ್ನೋಳಕರ ಇರಲಿಲ್ಲ.

ಈಶ್ವರಪ್ಪ ಕುಟುಂಬದ ನಂಟು: ಆರೋಪ

ಶಿವಮೊಗ್ಗ: 'ಗುತ್ತಿಗೆದಾರ ಸಂತೋಷ್ ಪಾಟೀಲ ಯಾರೆಂಬುದೇ ಗೊತ್ತಿಲ್ಲ ಎಂದು ಈಶ್ವರಪ್ಪ ಹೇಳುತ್ತಿದ್ದಾರೆ. ಆದರೆ, ಅವರ ಪುತ್ರ ಕೆ.ಇ.ಕಾಂತೇಶ್ ಜತೆ ಪ್ರಕರಣದ 2ನೇ ಆರೋಪಿ ರಮೇಶ್ ಇರುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ' ಎಂದು ಮಾಜಿ ಶಾಸಕ, ಕೆಪಿಸಿಸಿ ವಕ್ತಾರ ಕೆ.ಬಿ. ಪ್ರಸನ್ನಕುಮಾರ್ ಆರೋಪಿಸಿದ್ದಾರೆ.

'ಈಶ್ವರಪ್ಪ ಅವರನ್ನು ಬಂಧಿಸದಿರುವುದು ಸರ್ಕಾರವೇ ಈ ಕೃತ್ಯ ಮುಚ್ಚಿ ಹಾಕಲು ಪ್ರಯತ್ನ ನಡೆಸಿರುವ ಶಂಕೆ ಮೂಡಿಸಿದೆ. ಈಶ್ವರಪ್ಪ ಅವರಿಗೆ ನೀಡಿದ ಪೊಲೀಸ್ ಎಸ್ಕಾರ್ಟ್ ಸೇವೆ ಹಿಂತೆಗೆದುಕೊಳ್ಳಬೇಕು. ಸಂತೋಷ್ ಪಾಟೀಲ ಸಾವಿಗೆ ಕಾರಣರಾದ ಎಲ್ಲ ಆರೋಪಿಗಳಿಗೂ ಈಶ್ವರಪ್ಪ ಕುಟುಂಬಕ್ಕೂ ಇರುವ ಸಂಬಂಧದ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಕೊಡಗು ಜಿಲ್ಲೆ, ಮಡಿಕೇರಿ–571201
ಕಛೇರಿ: 08272–225500, ನಿವಾಸ: 08272–225700, ಫ್ಯಾಕ್ಸ್: 08272–225900,
ಇ–ಮೇಲ್: deo.kodagu@gmail.com, ವೆಬ್‌ಸೈಟ್: http://www.kodagu.nic.in
ಸಂಖ್ಯೆ:ಸಿಬ್ಬಂದಿ(1)ಸಿಆರ್/02/2022–23 ದಿನಾಂಕ: 18.04.2022

ಪ್ರಕಟಣೆ

ಕೊಡಗು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ Online ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ.
ಅರ್ಜಿ ನಮೂನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ ವಿಳಾಸ: http://kodagu-va.kar.nic.inನಲ್ಲಿ ಅಳವಡಿಸಲಾಗಿದೆ. ಅರ್ಜಿಗಳು ದಿನಾಂಕ: **19.04.2022ರ ಬೆಳಿಗ್ಗೆ 10.00 ಗಂಟೆಯಿಂದ** ಸದರಿ ವೆಬ್‌ಸೈಟ್‌ನಲ್ಲಿ ಚಾಲನೆಯಲ್ಲಿರುತ್ತದೆ. ಅರ್ಜಿಗಳನ್ನು ಆನ್–ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿಗಳನ್ನು **ಆನ್‌ಲೈನ್‌ನಲ್ಲಿ ದಿನಾಂಕ: 19.05.2022ರ ಸಂಜೆ 5.30ರೊಳಗೆ ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕವನ್ನು ಎಸ್.ಬಿ.ಐ ಮಡಿಕೇರಿ ಚಾಲ್ತಿ ಖಾತೆ ಸಂಖ್ಯೆ: 40901632473ಕ್ಕೆ ಪಾವತಿ ಮಾಡಲು ಕೊನೆಯ ದಿನಾಂಕ: 19.05.2022** ಆಗಿರುತ್ತದೆ.

ಹುದ್ದೆಯ ಹೆಸರು	ಒಟ್ಟು ಹುದ್ದೆ	ವಿದ್ಯಾರ್ಹತೆ	ವೇತನ ಶ್ರೇಣಿ
ಗ್ರಾಮ ಲೆಕ್ಕಿಗರು	35	ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸುವ ದ್ವಿತೀಯ ಪಿ.ಯು.ಸಿ ವಿದ್ಯಾರ್ಹತೆ ಅಥವಾ 12ನೇ ತರಗತಿ (12th Standard Examination Conducted by Central Board of Secondary Education or ICSE) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು	21,400–500–22,400–550–24,600–600–27,000–650–29,600–750–32,650–850–36,000–950–39,800–11,000–42,000

ಮೀಸಲಾತಿ, ಅರ್ಜಿ ಶುಲ್ಕ, ವಯೋಮಿತಿ, ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಷರತ್ತು ಇತ್ಯಾದಿ ವಿವರಗಳಿಗಾಗಿ ವೆಬ್‌ಸೈಟ್: http://kodagu-va.kar.nic.inನಲ್ಲಿ ಅಳವಡಿಸಲಾಗಿರುವ ಅಧಿಸೂಚನೆಯನ್ನು ಗಮನಿಸುವುದು.
ಸಹಿ/– (ಡಾ. ಬಿ.ಸಿ. ಸತೀಶ, ಭಾ.ಆ.ಸೇ), ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ

ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂ :080–2286 4681/4604, ಫ್ಯಾಕ್ಸ್:080–2286 4619, ಇ–ಮೇಲ್:dof-blr-ka@nic.in
ಟೆಂಡರ್ ಪ್ರಕಟಣೆ ಸಂಖ್ಯೆ: DOF-TECH0MVH/12/2022 ದಿನಾಂಕ: 13.04.2022

–: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ :–

2022–23 ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯ ಕಛೇರಿಯ ಉಪಯೋಗಕ್ಕಾಗಿ 2017 ರ ಅಥವಾ ನಂತರದ ಮಾಡೆಲ್‌ನ ಹವಾನಿಯಂತ್ರಿತ 04 ವಾಹನಗಳ ಅಗತ್ಯವಿರುತ್ತದೆ. ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ಟೊಯೊಟಾ ಇಟಿಯೋಸ್ ಹಾಗೂ ಇತರೆ ಸಮಾನಾಂತರ ಮಾದರಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಗಳಿಂದ ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್ (e-Procurement Portal ಮುಖಾಂತರ) ಕರೆಯಲಾಗಿದೆ. **ಟೆಂಡರ್ ವಿವರಗಳು: ಕ್ರ.ಸಂ: ಕಛೇರಿಗಳು: 1)** ಮೀನುಗಾರಿಕೆ ನಿರ್ದೇಶಕರು ಬೆಂಗಳೂರು. **ವಾಹನ ವಿವರ ಹಾಗೂ ಮಾದರಿ (MODEL):** 2017 ರ ಅಥವಾ ನಂತರದ ಮಾಡೆಲ್‌ನ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ಟೊಯೊಟಾ ಇಟಿಯೋಸ್ ಹವಾನಿಯಂತ್ರಿತ AC ವಾಹನ 04. **ಮಾಸಿಕ ದರ ಹಾಗೂ ಇ.ಎಂ.ಡಿ ಮೊತ್ತದ ವಿವರಗಳು:** ಗರಿಷ್ಠ **ರೂ.40000/–** + ತೆರಿಗೆ ಇ.ಎಂ.ಡಿ ಮೊತ್ತ **ರೂ.48000/–** (ಇ.ಎಂ.ಡಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ರವರ ಹೆಸರಿಗೆ Online ನಲ್ಲಿ ಜಮಾ ಮಾಡುವುದು). **ಸೂಚನೆ:** ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. **1)** ಇ–ಟೆಂಡರ್ ಪ್ರಕಟಣೆ ದಿನಾಂಕ: **18.04.2022 ಸಮಯ: 10.00 AM 2)** ಇ–ಟೆಂಡರ್ (e-Procurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು) ಕೊನೆಯ ದಿನಾಂಕ: **28.04.2022 ಸಮಯ: 05.00 PM 3)** ಇ–ಟೆಂಡರ್ ಪೂರ್ವ ಬಿಡ್ ದಿನಾಂಕ: **25.04.2022.**

ಸಹಿ/–
ವಾ.ಸಾ.ಸಂ.ಇ/ವಾಪ್ರ/190/ಶಿರಡಿಸಾಯಿ/2022–23 ಮೀನುಗಾರಿಕೆ ನಿರ್ದೇಶಕರು

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭೆ ಕಾರ್ಯಾಲಯ, ಬೀದರ
ಸಂಖ್ಯೆ:ಬಿಎಂಸಿ/ಎನ್‌ಜಿ/ಸಿಆರ್–818/2021–22 ದಿನಾಂಕ:18–04–2022.

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ / ಸರಕು / ಸೇವೆಯ ವಿವರ : DMA/2021-22/OW/WORK_INDENT129677 (FOR SC CONTRACTORS), DMA/2021-22/OW/WORK_INDENT129678, DMA/2021-22/OW/WORK_INDENT129679,DMA/2021-22/OW/WORK_INDENT129680, DMA/2021-22/OW/WORK_INDENT129681, DMA/2021-22/OW/WORK_INDENT129682(FOR ST CONTRACTORS), DMA/2021-22/WS/WORK_INDENT128469(FOR SC CONTRACTORS), DMA/2021-22/WS/WORK_INDENT128457, DMA/2021-22/WS/WORK_INDENT128458, 2) ಕಾಮಗಾರಿಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : e-portal ನಲ್ಲಿ ನಮೂದಿಸಿದಂತೆ 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು : 04-05-2022 upto 04.00 PM, 6) ಟೆಂಡರ ತೆರೆಯುವ ದಿನಾಂಕ : 05-05-2022 at 04.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಪೌರಾಯುಕ್ತರು ನಗರಸಭೆ ಬೀದರ. ಇ–ಮೇಲ್: itstaff_ulb_bidar@yahoo.com 08482-240432, 8) ಅಂತರಜಾಲ ತಾಣದ ವಿಳಾಸ www.eproc.karnataka.gov.in

ಸಹಿ/– ಪೌರಾಯುಕ್ತರು
ನಗರಸಭೆ ಬೀದರ
ವಾ.ಸಾ.ಸಂ.ಇ/ಬೀದರ/23/ಎಂಸಿ&ಎ/2022–23

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222.
ದೂರವಾಣಿ: 08182–246165, website: www.shimul.coop
ಐ.ಎಫ್.ಟಿ/ಸಂಖ್ಯೆ/ಶಿದಾಚಿಸಹಾಒ/ಖರೀದಿ/ಇ–ಪ್ರೊ/ಟೆಂಡರ್–281ಡಿ/499/2022–23 ದಿನಾಂಕ: 12.04.2022

ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.kamataka.gov.in ನ ಮೂಲಕ ಮಾತ್ರ ಟೆಂಡರ್ ಸಲ್ಲಿಸುವುದು)

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟಕ್ಕೆ ಅಗತ್ಯವಿರುವ ಈ ಕೆಳಕಂಡ ಸಾಮಗ್ರಿ/ಯಂತ್ರೋಪಕರಣಗಳ ಖರೀದಿಗೆ ಅರ್ಹ ಆಸಕ್ತ ಸಂಸ್ಥೆಯವರಿಂದ ಜಿ.ಒ.ಕೆ.ಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯುಮೆಂಟ್ ಸಿಸ್ಟಮ್‌ನಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಇವರ ಕೆಳಕಂಡಂತಿದೆ.

ಕ್ರ. ಸಂ.	ವಿವರ	ಪ್ರಮಾಣ	ಪಾವತಿಸಬೇಕಾದ ಇ.ಎಂ.ಡಿ ರೂ.ಗಳಲ್ಲಿ
1	ಒಕ್ಕೂಟದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಬಿ.ಎಂ.ಸಿ ಕೇಂದ್ರಗಳಿಗೆ ಜೆಟ್ ಕ್ಲಿನಿಂಗ್ ಮೆಷಿನ್‌ಗಳನ್ನು ಸರಬರಾಜು ಮಾಡಿ ಅಳವಡಿಸುವುದು	137 ಸಂಖ್ಯೆ	61,650/–
2	ಒಕ್ಕೂಟದ ಹರಮಘಟ್ಟ ಮತ್ತು ಸಿದ್ದರಹಳ್ಳಿ ಬಿ.ಎಂ.ಸಿ ಕೇಂದ್ರಗಳಲ್ಲಿ 25 ಕೆ.ವಿ.ಎ. ವಾಟರ್ ಕೂಲಂಟ್ ಕೂಲ್ಡ್ ಡಿಜಿ ಸೆಟ್ ಅನ್ನು ಟರ್ನ್ ಕೀ ಆಧಾರದ ಮೇಲೆ, ಆಸ್ತಿತ್ವದಲ್ಲಿರುವ 25 ಕೆ.ವಿ.ಎ. ಎರಡು ಸಂಖ್ಯೆ ಡಿಜಿ ಸೆಟ್‌ಗಳನ್ನು ಬೈಬ್ಯಾಕ್‌ನಲ್ಲಿ ಪಡೆದು ಬಿ.ಎಂ.ಸಿ. ಕೇಂದ್ರಗಳಿಗೆ ಸೂಕ್ತವಾದ ಪರಿಕರಗಳೊಂದಿಗೆ ಸರಬರಾಜು ಮಾಡಿ ಅಳವಡಿಸುವುದು.	02 ಸಂಖ್ಯೆ	22,500/–

1. ಟೆಂಡರ್ ದಸ್ತಾವೇಜುಗಳನ್ನು ಜಿ.ಒ.ಕೆ.ಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: 19.04.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 05.05.2022ರಂದು ಸಮಯ: ಸಂಜೆ 04:00 ಗಂಟೆ ಒಳಗೆ. 3. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 06.05.2022ರಂದು ಸಮಯ ಸಂಜೆ 05:00 ಗಂಟೆಗೆ. 4. ವಾಣಿಜ್ಯ ಟೆಂಡರ್ ತರೆಯುವ ದಿನಾಂಕ: 09.05.2022ರಂದು ಸಮಯ ಸಂಜೆ 05:00 ಗಂಟೆಗೆ. 5. ಟೆಂಡರ್‌ದಾರರು ವಿವರವಾದ ಟೆಂಡರ್ ದಸ್ತಾವೇಜುಗಳನ್ನು ಜಿ.ಒ.ಕೆ.ಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ಇ–ಪೋರ್ಟಲ್ ಶುಲ್ಕ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳುವುದು.

ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸಲು ಸಂಬಂಧಿಸಿದ ವಿವರಗಳನ್ನು ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.inಗೆ ಲಾಗಿನ್ ಆಗುವ ಮೂಲಕ ಪಡೆಯಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ಮುಖ್ಯಸ್ಥರನ್ನು ಮೊಬೈಲ್ ಸಂಖ್ಯೆ: 7760971951ರ ಮೂಲಕ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಶಿಷ್ಟಾಚಾರ ಅಂತರಂಗದ ಶಕ್ತಿ

ರಘು ವಿ.

ಶಿಷ್ಟಾಚಾರವು ವ್ಯಕ್ತಿಯ ನಡವಳಿಕೆಯನ್ನು ಸಿಹಿಯಾಗಿ, ಸಹನೀಯವಾಗಿ ತಿದ್ದಿ ರೂಪಿಸುವಂತಹದ್ದು. ಮನುಷ್ಯಪ್ರಾಣಿಯನ್ನು ಮನುಷ್ಯನನ್ನಾಗಿಸುವುದು ಈ ಶಿಷ್ಟಾಚಾರದ ನಡೆಯೇ. ಇದು ಆರಂಭದಲ್ಲಿ ಹೊರಗಿನಿಂದ ಆರೋಪಿತವಾದ ಕಲಿಕೆಯಾದರೂ ಕ್ರಮೇಣ ಅದು ವ್ಯಕ್ತಿಯ ಅಂತರಂಗದ ಸ್ಫುರಣೆಯಾಗಿ ಇಡೀ ವ್ಯಕ್ತಿತ್ವಕ್ಕೇ ಒಂದು ಸೌರಭವನ್ನು ಒದಗಿಸುತ್ತದೆ. ಮಕ್ಕಳಿಗೆ ಮಾತು ಕಲಿಸುವ ನಾವು 'ಮಾತಾಡುವ' ಕ್ರಮವನ್ನು ತಿಳಿಸುತ್ತೇವೆಯೇ? ಶ್ರೀರಾಮನ ವ್ಯಕ್ತಿತ್ವದ ಒಂದು ಪ್ರಮುಖ ಅಂಶವೇ ಅವನು 'ಸ್ಮಿತಪೂರ್ವಭಾಷೀ' ಎಂಬುದು. ಎದುರಿಗೆ ಬಂದವರು ತನ್ನತ್ತ ಮುಗುಳ್ನಗೆ ಬೀರಿದರೆ ಮಾತ್ರವೇ ನಾವು ಪ್ರತಿಯಾಗಿ ನಗಬೇಕು ಎಂದು ನಾವು ಭಾವಿಸಬಹುದು. ಆದರೆ ಶ್ರೀರಾಮನು 'ಸ್ಮಿತಪೂರ್ವಭಾಷೀ' ಎಂದರೆ ತಾನೇ ಮೊದಲಿಗೆ ಮುಗುಳ್ನಗುವುದರ ಜೊತೆಗೆ ತಾನೇ ಮಾತನಾಡಿಸಿಬಿಡುತ್ತಿದ್ದ. ಇಡೀ ರಾಮಾಯಣದಲ್ಲಿ ಅವನು ಸ್ನೇಹವನ್ನು ಗಳಿಸುತ್ತ ಬೆಳೆಸುತ್ತ ಹೋದ. ನದಿ ದಾಟಿಸಿದ ಗುಹನಿಂದ ಹಿಡಿದು, ಜಟಾಯುವರೆಗೆ; ಶಬರಿಯಿಂದ ಹಿಡಿದು ರಾವಣನ ತಮ್ಮ ವಿಭೀಷಣನವರೆಗೆ ಅವನ ಸ್ನೇಹದ ಪಟ್ಟಿ ಬೆಳೆಯುತ್ತ ಹೋಯಿತು. ನಗುವುದು, ನಗುತ್ತ ಮಾತನಾಡಿಸುವುದು ಬಹಳ ಮುಖ್ಯ ನಡವಳಿಕೆ.

'ಒಳ್ಳೆಯ ನಡವಳಿಕೆ ಅತ್ಯುತ್ತಮ ವಿದ್ಯೆಯೂ ತೆರೆಸಲಾಗದ ಬಾಗಿಲುಗಳನ್ನು ತೆರೆಸುತ್ತದೆ' ಎನ್ನುತ್ತಾನೆ ಕ್ಲಾರೆನ್ಸ್ ಥಾಮಸ್ (Good manners will open doors that the best education cannot) ಹೀಗೆಂಬುದರ ಅರ್ಥ – ವಿದ್ಯಾದದಾತಿ ವಿನಯಂ ಎಂದಷ್ಟೇ ಅಲ್ಲ. ಏಕೆಂದರೆ ಇವತ್ತು ಈ 'ವಿನಯ'ದ ಅರ್ಥ ಓಲೈಕೆ ಎಂಬಲ್ಲಿಗೆ ಬಂದುಬಿಟ್ಟಿದೆ. ಇಲ್ಲಿ ವಿನಯವೆಂದರೆ ವ್ಯಕ್ತಿ ತನ್ನ ಆತ್ಮಗೌರವಕ್ಕೆ ಚ್ಯುತಿ ಬಾರದಂತೆ ಇತರರನ್ನು ಆದರಿಸುವುದು. ಒಳ್ಳೆಯ ನಡವಳಿಕೆ ಮುಚ್ಚಿದ ಬಾಗಿಲುಗಳನ್ನು ತೆರೆಸಿದಂತೆ ಕೆಟ್ಟ ನಡವಳಿಕೆಗಳು ತೆರೆದ ಬಾಗಿಲುಗಳನ್ನು ಮುಚ್ಚಿಸಿಬಿಡುತ್ತವೆ. ನಡವಳಿಕೆ ಎಂಬುದು ವ್ಯಕ್ತಿಯೊಬ್ಬ ಸಮಾಜದಲ್ಲಿ ವರ್ತಿಸುವ ಬಗೆ. ಅದು ಊಟ, ಉಡುಗೆ ತೊಡುಗೆಗಳಿಗಿಂತ ಅವನು ಸಮಾಜದ ಇತರ ಸದಸ್ಯರೊಂದಿಗೆ ಹೇಗೆ ನಡೆದುಕೊಳ್ಳುತ್ತಾನೆ, ಅವನ ವರ್ತನೆ, ಕ್ರಿಯೆ-ಪ್ರತಿಕ್ರಿಯೆಗಳು ಹೇಗಿವೆ ಎಂಬುದರ ಸೂಚಕ ಆಗಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ನಾವೀಗ ಗಮನಿಸಬಹುದು.

ಎದುರಿಗೆ ಬಂದವರು ಮೊದಲಿಗೆ ಮುಗುಳ್ನಕ್ಕು ಮಾತನಾಡಿಸಲಿ ಎಂದು ಕಾಯದೇ ನಾವು ನಕ್ಕು ಮಾತಾಡಿಸಿ ಅವರ ಯೋಗಕ್ಷೇಮ ವಿಚಾರಿಸಬೇಕು. ಇದೊಂದು ಸರಳ ನಡೆ ಎನಿಸಿದರೂ, ಅದು ಎಲ್ಲರಿಗೂ ಏಕೆ ಸಾಧ್ಯವಾಗದು ಎಂಬ ಪ್ರಶ್ನೆ ಏಳುತ್ತದೆ. ಉತ್ತರವೂ ಸುಲಭ; ನಮ್ಮ ಪ್ರತಿಷ್ಠೆ, ಅಹಂಕಾರಗಳು ಅಡ್ಡಿಯಾಗುವುದರಿಂದ ಇದನ್ನು ರೂಢಿಸಿಕೊಳ್ಳುವುದು ಅಭ್ಯಾಸದಿಂದ, ಅಹಂಕಾರ ಮರ್ದನದಿಂದ ಮಾತ್ರ ಸಾಧ್ಯ. ಆದರೆ ಒಮ್ಮೆ ಈ ನಡವಳಿಕೆ ನಮ್ಮದಾದರೆ ಇಡೀ ಜಗತ್ತೇ ನಮ್ಮದಾದಂತೆ. ಏಕೆಂದರೆ ಎಲ್ಲರೂ ನಮ್ಮ ಮಿತ್ರರಾಗಿ ಪರಿವರ್ತಿತರಾಗಿಬಿಡುತ್ತಾರೆ. ನಮ್ಮೆಡೆಗೆ ಆಕರ್ಷಿತರೂ ಆಗಿಬಿಡುತ್ತಾರೆ.

ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಸೌಜನ್ಯತೆಯ ಲಕ್ಷಣ. ಇದೂ ಕೂಡ ನಮ್ಮ ನಡವಳಿಕೆಯ ಒಂದು ಭಾಗವಾಗಲಿ. ಯಾರಿಂದ ಯಾವುದೇ ಕನಿಷ್ಠ ಸಹಾಯ ದೊರೆತರೂ ತಕ್ಷಣ ಅವರಿಗೆ ಕೃತಜ್ಞತೆ ಸಲ್ಲಿಸಬೇಕು. 'ಧನ್ಯವಾದಗಳು', 'ನಿಮ್ಮಿಂದ ಉಪಕಾರವಾಯಿತು', 'ಕೃತಜ್ಞತೆಗಳು' ಇತ್ಯಾದಿ ಧನ್ಯವಾದ ಸೂಚಕಗಳನ್ನು ಧಾರಾಳವಾಗಿ ಬಳಸಬೇಕು. ಮನೆಯವರೇ ಆದರೂ, ಅವರ ಸೇವೆ-ಸಹಾಯಗಳಿಗೆ ಕೃತಜ್ಞತೆ ಸಲ್ಲಿಸುವುದನ್ನು ಮರೆಯಬಾರದು. ಉಪಕಾರ ಸ್ಮರಣೆ ಸಜ್ಜನಿಕೆಯ ಅತಿ ಪ್ರಮುಖ ಗುಣ. ಅದು ನಮ್ಮಲ್ಲಿ ಸದಾ ಜಾಗೃತವಾಗಿರಬೇಕು.

ಮೇಲಿನ ಎರಡು ಶಿಷ್ಟಾಚಾರ ಪದ್ಧತಿಗೆ ಪೂರಕವಾದದ್ದು ಮೂರನೆಯದು: ಅಭಿನಂದನೆಗಳನ್ನು ಸಲ್ಲಿಸುವುದು. ಕಚೇರಿಯಲ್ಲೋ ಮನೆಯಲ್ಲೋ – ಎಲ್ಲೇ ಇರಲಿ ವ್ಯಕ್ತಿಯೊಬ್ಬರು ಸಾಧನೆಗೈದ ಸುದ್ದಿ ದೊರೆತ ಕೂಡಲೇ ಅವರನ್ನು ಅಭಿನಂದಿಸಬೇಕು. ಯಾರಿಗೆ ಅಭಿನಂದನೆ ಸಲ್ಲಿಸಲು ಕಷ್ಟ ಎನಿಸುತ್ತದೆಯೋ ಅವರಿಗೆ ಅವರೊಳಗಿನ ಅಸೂಯೆ–ಅಹಂಕಾರಗಳು ಅದನ್ನು ತಡೆದಿವೆ ಎಂದು ತಿಳಿಯಬೇಕು. ತಾನು ಸಾಧಿಸಲಾಗದ್ದನ್ನು ಬೇರೆಯವರು ಸಾಧಿಸಿದರಲ್ಲ – ಎಂದು ಭಾವಿಸದೆ ಹೃತ್ಪೂರ್ವಕವಾಗಿ ಅಭಿನಂದಿಸಿ, ಅವರ ವಿಶ್ವಾಸ ಗಳಿಸಿ, ಆ ಗೆಲುವಿನ ಗುಟ್ಟನ್ನೂ ಅರಿಯಬಹುದು.

ಅಬ್ಬರದ ಮಾತು, ಜಂಬ, ಅಹಂಕಾರದ ಮಾತು ಬೇಡ. ನಾವೆಂತಹವರು ಎಂಬುದು ನಮ್ಮ ನಡವಳಿಕೆಯಿಂದಲೇ ಗೊತ್ತಾಗುವುದರಿಂದ ನಮ್ಮ ಬಗ್ಗೆ ನಾವು ಜಂಬ ಕೊಚ್ಚಬಾರದು. ತಂಡದ ಮಾತಿನ ಜಾಡಿನಲ್ಲಿ ಅದೇ ದನಿಯನ್ನು ಹಿಡಿದು ಮಾತಾಡಬೇಕು. ಬೇಕೆಂದೇ, ಗಮನ ಸೆಳೆಯಲೆಂದೇ ಅಬ್ಬರದ ಮಾತು, ಗಡುಸಾದ ಮಾತು ಬಳಸಬಾರದು. ಜನರಿಗೆ ನಮ್ಮ ಬಗ್ಗೆ ವಿವರ ಬೇಕಿಲ್ಲ. ಬೇಕಿದ್ದರೆ ಕೇಳಿ ಪಡೆಯುತ್ತಾರೆ. ವ್ಯಕ್ತಿಸಂಬಂಧಗಳು ಹಾಳಾಗಲು ಅಹಂಕಾರವೇ ಕಾರಣ. ಅದನ್ನು ಪಕ್ಕಕ್ಕಿಟ್ಟು ಮಾತನಾಡಿದಾಗ ಎಲ್ಲರಿಗೂ ನಾವು ಪ್ರಿಯರಾಗುತ್ತೇವೆ.

ಮಾತನಾಡುವ ಮುನ್ನ ಕೇಳಿಸಿಕೊಳ್ಳಬೇಕು. ಕಿವಿಗೆ ಹೆಚ್ಚು ಕೆಲಸ ಕೊಟ್ಟು ಬಾಯಿಗೆ ಕಡಿಮೆ ಸಮಯ ಕೊಡಬೇಕು. ಬೇರೆಯವರ ಮಾತುಗಳನ್ನು ಪೂರ್ಣವಾಗಿ ಕೇಳಿಸಿಕೊಂಡು ಬಳಿಕ ಪ್ರತಿಯಾಗಿ ಮಾತನಾಡಬೇಕು. ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯ ಮಾತೆ ಇದೆ. ದುಡುಕಿ ಮಾತನಾಡಲೇಬಾರದು. ಬಿಲ್ಲಿನಿಂದ ಹೊರಟ ಬಾಣವನ್ನು ಹಿಂಪಡೆಯಲಾಗದಂತೆ ಬಾಯಿಂದ ಹೊರಟ ಮಾತನ್ನು ಮತ್ತೆ ಹಿಂಪಡೆಯಲಾರೆವು. ಖಂಡನೆ, ನಿಂದನೆ, ದೂರು – ಈ ಮೂರು ಜನರಿಂದ ನಮ್ಮನ್ನು ದೂರ ಮಾಡುತ್ತವೆ. ಖಂಡಿಸುವ ಬದಲು ಅಪೇಕ್ಷಿತ ಬದಲಾವಣೆಗಳನ್ನು ಸೂಚಿಸಬಹುದು. ಹಾಗೆಯೇ ನಿಂದಿಸುವ ಬದಲು ಅವರೆಂತಿದ್ದರೆ ನಮಗೆ ಹಿತವೆಂದು ಹೇಳಬಹುದು. ಇನ್ನು ದೂರುವುದಂತೂ ಸಲ್ಲದು. ದೂರು ಹೇಳುವುದೆಂದರೆ, ಬೆನ್ನ ಹಿಂದೆ ಚಾಡಿ ಹೇಳಿದಂತೆ.

ಬಹಳ ಮುಖ್ಯವಾದ ನಡವಳಿಕೆಯೊಂದಿದೆ, ಅದು ಸಮಯಪ್ರಜ್ಞೆ. ಇದು ಎಲ್ಲ ಪ್ರಜ್ಞೆಗಳಿಗಿಂತ ಮುಖ್ಯ. ಬೇರೆಯವರ ಸಮಯ ಮೌಲ್ಯವುಳ್ಳದ್ದು. ಯಾರನ್ನೂ ಅನವಶ್ಯಕವಾಗಿ ಕಾಯಿಸಬಾರದು. ಸಭೆಗಳಿಗೆ, ಸ್ನೇಹಿತರ ಭೇಟಿಗೆ, ಸಮಾರಂಭಗಳಿಗೆ ಸರಿಯಾದ ಸಮಯಕ್ಕೆ ತಲುಪಬೇಕು. ಅದು ಸಮಯಕ್ಕೆ ಸಲ್ಲಿಸುವ ಗೌರವ, ಸಭೆಗೆ ನೀಡುವ ಮನ್ನಣೆ.

ಇತರರನ್ನು ಗೌರವಿಸುವುದ ಕೂಡ ನಮ್ಮ ನಡವಳಿಕೆಯ ಅಂಗವಾಗಲಿ. ನಿಷ್ಠುರವಾದ ಕಟು ಮಾತು, ಒರಟಾದ ಭಾಷೆ, ಸಿಡುಕುವುದು ಒಂದು ಬಗೆಯ ಲೋಪವಾದರೆ ಅಶ್ಲೀಲ ನೋಟ, ಅಶ್ಲೀಲ ಭಾಷೆ, ದ್ವಂದ್ವಾರ್ಥದ ಸಂಭಾಷಣೆ – ಇವು ಇನ್ನೊಂದು ಬಗೆಯ ಲೋಪ. ಎಚ್ಚರದ, ಗೌರವದ ವರ್ತನೆಯಿಂದ ನಮ್ಮ ಬಗೆಗಿನ ಗೌರವವೂ ಹೆಚ್ಚುತ್ತದೆ. ಅಡ್ಡ ಹೆಸರಿಟ್ಟು ಕರೆಯುವುದು ಅಥವಾ ವೈಯಕ್ತಿಕ ಹಣಕಾಸಿನ ವ್ಯವಹಾರವನ್ನು ಪ್ರಶ್ನಿಸುವುದು, ವೈಯಕ್ತಿಕ ವಿಚಾರಗಳನ್ನು ಕೇಳುವುದು ಇವುಗಳೂ ಕೂಡ ಉತ್ತಮ ಶಿಷ್ಟಾಚಾರದ ಉಲ್ಲಂಘನೆಯಾಗುತ್ತದೆ.

ನಮ್ಮ ವೇಷ-ಭೂಷಣ ವರ್ತನೆಗಳು ಲಾಯಕ್ಕಾಗಿರಬೇಕು. ಬಟ್ಟೆಗಳು ಶುಭ್ರವಾಗಿರಬೇಕು. ಆಧುನಿಕ ಜೀವನ ಸೃಜಿಸುತ್ತಿರುವ ಸಂದರ್ಭಗಳು ಹೊಸತಾದರೂ ಮೂಲ ಶಿಷ್ಟಾಚಾರದ ನಡವಳಿಕೆಗಳ ಮೇಲೆ ಹೊಸತನ್ನು ಕಟ್ಟಿಕೊಳ್ಳಬೇಕು. ಮೊಬೈಲ್ ಫೋನ್, ಲ್ಯಾಪ್‌ಟಾಪ್, ಕಚೇರಿ ವಸ್ತುಗಳ ಬಳಕೆ, ಸಾರ್ವಜನಿಕ ಸಾರಿಗೆಯಲ್ಲಿ ನಡವಳಿಕೆ, ಸಮಾರಂಭಗಳಲ್ಲಿ ಸಕ್ರಿಯ ಭಾಗವಹಿಸುವಿಕೆ, ವಾಹನಚಾಲನೆ – ಇವೆಲ್ಲವೂ ಶಿಷ್ಟಾಚಾರದ ಪರಿಧಿಯೊಳಗೆ ಬರುವಂತಹವೇ. ಒಟ್ಟಿನಲ್ಲಿ ಶಿಷ್ಟಾಚಾರ ಕೇವಲ ತೋರಾಣಿಕೆಗೆ ಅಲ್ಲ; ಅದು ನಮ್ಮ ಅಂತರಂಗದ ಅಭಿವ್ಯಕ್ತಿ, ನಮ್ಮ ಸುಪ್ತವ್ಯಕ್ತಿತ್ವದ ಪ್ರತಿಫಲನ ಎಂದು ತಿಳಿದು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕು. ಇತರರಿಗೆ ನೋವಾಗದಂತೆ ನಮ್ಮ ಆತ್ಮಗೌರವಕ್ಕೂ ಚ್ಯುತಿ ಬರದಂತೆ ನಡೆದುಕೊಳ್ಳಬೇಕು.

❖

ಬೇಸಿಗೆಯಲ್ಲಿ ತಂಪು ದಾರಿಗಳು

ಡಾ. ವಿಜಯಲಕ್ಷ್ಮಿ ಪಿ.

ಬೇಸಿಗೆಯ ದಿನಚರಿ ಹೇಗಿರಬೇಕು? ಎಲ್ಲಾ ಕಾಲದಂತೆಯೇ ಬೇಸಿಗೆಯು ಒಂದು ಕಾಲ ಅದರಲ್ಲೇನು ವಿಶೇಷ ಎಂದೆನಿಸಬಹುದು. ಆದರೆ ವಸಂತದ ಪ್ರಾರಂಭದೊಂದಿಗೆ ಶುರುವಾಗುವ ಸೆಕೆ, ಬೇಸಿಗೆ ಮುಂದುವರೆದಂತೆ ಹೆಚ್ಚುತ್ತಾ ಹೋಗಿ ತಡೆಯಲಾರದ ಸ್ಥಿತಿ ತಲುಪುತ್ತದೆ. ಉಷ್ಣಾಂಶ 30 ಡಿಗ್ರಿಯ ಆಸುಪಾಸಿಗೆ ತಲುಪಲು ಪ್ರಾರಂಭವಾಗುತ್ತಿದ್ದಂತೆ, ಚಳಿಗಾಲದ ಶೀತದಿಂದಾಗಿ ದೇಹದಲ್ಲಿ ಸಂಚಯವಾದ ಕಫವು ವಸಂತದ ಅಲ್ಪವಾದ ಬಿಸಿಲಿನಿಂದಾಗಿ ಕರಗಿ ನೀರಾಗಿ ಜೀರ್ಣಶಕ್ತಿಯನ್ನು ಕಡಿಮೆ ಮಾಡಿ ಕಫ ಸಂಬಂಧವಾದ ತೊಂದರೆ ಉಂಟು ಮಾಡುತ್ತದೆ; ಎಂದರೆ ಅಜೀರ್ಣ, ಉಬ್ಬಸ, ನೆಗಡಿ, ತಲೆನೋವು, ಜ್ವರ, ಮುಂತಾದ ವ್ಯಾಧಿಗಳನ್ನು ಉತ್ಪತ್ತಿ ಮಾಡುತ್ತದೆ. ನಿಧಾನವಾಗಿ ಗ್ರೀಷ್ಮದ ಲಕ್ಷಣ ಬರುತ್ತಿದ್ದಂತೆ ಮೈ ಕೈ ಉರಿ, ಕಣ್ಣುಗಳ ಉರಿ, ಮೂತ್ರವಿಸರ್ಜನೆಯಲ್ಲಿ ತೊಂದರೆ, ಅತಿಯಾದ ದ್ರವಮಲ ಪ್ರವೃತ್ತಿ – ಹೀಗೆ ಕೆಲವು ಬಾಧೆಗಳು ಪ್ರಾರಂಭವಾಗುತ್ತವೆ. ಇವುಗಳಿಂದ ದೂರವಿರಲು ನಮ್ಮ ದಿನಚರ್ಯೆ, ಆಹಾರ, ವಿಹಾರಗಳಲ್ಲಿ ಕೆಲವೊಂದು ಬದಲಾವಣೆ ಅನಿವಾರ್ಯವಾಗುತ್ತದೆ.

ಬೇಸಿಗೆಯ ಸೆಕೆಗೆ ರಾತ್ರಿ ನಿದ್ರೆ ಬರುವುದೇ ಕಷ್ಟ. ಬೆಳಗಿನ ತಂಪು ವಾತಾವರಣದಲ್ಲಿ ನಿದ್ರೆ ಬಂದರೆ ಸೂರ್ಯ ಮೇಲೆ ಬಂದಮೇಲೂ ಕೆಲವರಿಗೆ ಏಳಲು ಮನಸ್ಸಾಗುವುದಿಲ್ಲ. ಆದರೆ ಮೇಲೆ ಹೇಳಿದ ರೋಗಗಳನ್ನು ತಡೆಗಟ್ಟಲು, ವಾತಪಿತ್ತಕಫಗಳು ಸಮಸ್ಥಿತಿಯಲ್ಲಿರಲು ಸೂರ್ಯೋದಯಕ್ಕೆ ಮೊದಲೇ ಅಥವಾ ಸೂರ್ಯೋದಯದ ಹೊತ್ತಿಗಾದರು ನಿದ್ರೆಯಿಂದ ಏಳಲೇಬೇಕು. ಬಿಸಿಲ ಬೇಗೆಯಿಂದಾಗುವ ಬಳಲಿಕೆಯನ್ನು ತಡೆಯಲು ಮಧ್ಯಾಹ್ನ ಸ್ವಲ್ಪ ಮಲಗಿ ವಿಶ್ರಾಂತಿ ಪಡೆಯಬಹುದು. ಬೇಸಿಗೆ ಹೆಚ್ಚಾಗುತ್ತಿದ್ದಂತೆ ಅತಿಯಾದ ವ್ಯಾಯಾಮ ವಾತ–ಪಿತ್ತಗಳ ಪ್ರಕೋಪವನ್ನು ಉಂಟುಮಾಡಿ ಅನೇಕ ಕಾಯಿಲೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಬೆವರು ಬರಲು ಪ್ರಾರಂಭವಾದಾಗ ವ್ಯಾಯಾಮವನ್ನು ನಿಲ್ಲಿಸಬೇಕು. ತಂಪಿನ ವಾತಾವರಣದಲ್ಲಿ ಮಾಡುವಂತೆ ಹೆಚ್ಚು ಕಾಲ ವ್ಯಾಯಾಮ ಮಾಡುವುದು, ವಿಪರೀತವಾದ ದೇಹದಂಡನೆ ಒಳಿತಲ್ಲ. ಆದರೆ ವ್ಯಾಧಿ ನಿವೃತ್ತಿಯಾಗಲು ವಿಧಿಸಿರುವ ವ್ಯಾಯಾಮ ಮಾಡುತ್ತಿದ್ದರೆ ಮುಂದುವರೆಸಬೇಕು. ವ್ಯಾಯಾಮದ ನಂತರ ಅನುಕೂಲ ಇರುವವರು ಶ್ರೀಗಂಧ, ಲಾವಂಚ, ಇಲ್ಲದಿರುವವರು ಅರಿಸಿನ, ಸೀಗೆಕಾಯಿ ಮುಂತಾದುವುಗಳ ಚೂರ್ಣದಿಂದ ಮೈಯನ್ನು ತಿಕ್ಕಿಕೊಳ್ಳಬೇಕು. ಇದರಿಂದ ಕಫರೋಗಗಳು ಹಾಗೂ ಹೃದಯಸಂಬಂಧಿ ರೋಗಗಳು ಬರುವುದಿಲ್ಲ.

ಸ್ನಾನಕ್ಕೆ ಅತಿ ಬಿಸಿಯೂ ಅಲ್ಲದ, ತಂಪೂ ಅಲ್ಲದ ಬೆಚ್ಚಗಿನ ನೀರು ಒಳ್ಳೆಯದು. ಸಾಧ್ಯವಾದಲ್ಲಿ ಅತ್ತಿ, ಆಲ, ಅಶ್ವತ್ಥ, ಮಾವು, ಹಲಸು, ಮುಂತಾದ, ಪಿತ್ತವನ್ನು ಕಡಿಮೆ ಮಾಡುವ ಮರಗಳ ಚಕ್ಕೆ ಅಥವಾ ಚೂರ್ಣದಿಂದ ನೀರನ್ನು ಕಾಯಿಸಿ ಸ್ನಾನಕ್ಕೆ ಬಳಸುವುದು, ಚರ್ಮಕ್ಕೆ ಸಂಬಂಧಿಸಿದ ವ್ಯಾಧಿಗಳಿಂದ ದೂರವಿರಿಸುತ್ತದೆ.

ಇನ್ನು ಆಹಾರದ ವಿಷಯವನ್ನು ಗಮನಿಸಿದರೆ ವಸಂತದ ಪ್ರಾರಂಭದಲ್ಲಿ ಸಿಹಿ–ಕಹಿಗಳ ಮಿಶ್ರಣದ ಬಳಕೆ ಅಗತ್ಯ. ಅದಕ್ಕಾಗಿ ಯುಗಾದಿಯ ಆಚರಣೆಯನ್ನು ಬೇವು–ಬೆಲ್ಲದ ಮೂಲಕ ಮಾಡುತ್ತಾರೆ. ಈ ಕಾಲದಲ್ಲಿ ಪಡವಲ, ಹೀರೆ, ಬೂದುಗುಂಬಳ ಕಾಯಿಗಳ ಸೇವನೆ ಅಗತ್ಯ, ಕುಡಿಯುವ ನೀರಿಗೆ ಕೊನ್ನಾರಿಗಡ್ಡೆ, ಶುಂಠಿ, ಕರ್ಪೂರ, ಶ್ರೀಗಂಧ, ಕಾಚು, ಲಾವಂಚ ಇವುಗಳಲ್ಲಿ ಒಂದೋ ಎರಡೋ ಅಥವಾ ಸಿಕ್ಕರೆ ಎಲ್ಲವನ್ನೂ ಪುಡಿಮಾಡಿ ಒಂದೆರಡು ಚಿಟಿಕೆಯಷ್ಟನ್ನು ನೀರಿಗೆ ಹಾಕಿ ಕುದಿಸಿ ತಣಿಸಿ ಕುಡಿಯುವುದರಿಂದ ಅತಿಸಾರವೇ ಮೊದಲಾದ ಜೀರ್ಣಾಂಗಕ್ಕೆ ಸಂಬಂಧಿಸಿದ ರೋಗಗಳನ್ನು ತಡೆಗಟ್ಟಬಹುದು. ಅಲ್ಲದೆ ಬೆವರುವುದರಿಂದ ಮತ್ತು ಬಾಯಾರಿಕೆಯಿಂದ ದೇಹದಲ್ಲಿ ದ್ರವಾಂಶ ಕಡಿಮೆಯಾಗುವುದನ್ನು ತಡೆಗಟ್ಟಬಹುದು.

ಬೇಸಿಗೆ ಹೆಚ್ಚಾದಂತೆ ನೀರು ಮಜ್ಜಿಗೆಗೆ ಉಪ್ಪು, ಶುಂಠಿಯ ತಿಳಿರಸ ಹಾಕಿ ಸೇವಿಸುವುದು ಒಳ್ಳೆಯದು. ಮಜ್ಜಿಗೆಗೆ ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ ಹಾಕಿ ಒಗ್ಗರಣೆ ಮಾಡಿ ಸೇವಿಸಬಾರದು. ಪಾನಕವನ್ನು ಬೇಲದಹಣ್ಣು, ನಿಂಬೆ, ಬಿಲ್ವಫಲದ ತಿರುಳು, ಪುನರ್ಪುಳಿ ಅಥವಾ ಮುರುಗಲಹುಳಿ, ಸೋಗದೇಬೇರು, ಗುಲಾಬಿ ಎಸಳು ಇವುಗಳಿಂದ ತಯಾರಿಸಬಹುದು. ಇವು ಬೇಸಿಗೆಯ ರೋಗಗಳಿಗೆ ಚಿಕಿತ್ಸೆಯಾಗಿಯೂ, ಕಾಲದ ಪರಿಣಾಮವನ್ನು ಉಪಶಮನಗೊಳಿಸುವ ಪಾನೀಯವಾಗಿಯೂ ಹಿತಕರ. ಹೆಸರುಕಾಳು ಅಥವಾ ಬೇಳೆಯನ್ನು ನೆನೆಸಿ, ರುಬ್ಬಿ, ಹಾಲು ತೆಗೆದು, ಬೆಲ್ಲ ಸೇರಿಸಿ ಸೇವಿಸುವ ಪಾನಕವಂತೂ ಬೇಸಿಗೆಗೆ ಹೇಳಿ ಮಾಡಿಸಿದ ಪಾನೀಯ. ರೆಫ್ರಿಜರೇಟರ್‌ನಲ್ಲಿಟ್ಟ ಆಹಾರ, ಐಸ್ ಹಾಕಿದ ಆಹಾರ–ಪಾನೀಯಗಳು ಸರ್ವಥಾ ನಿಷಿದ್ಧ. ಹುಳಿ ಒಗರುಗಳೇ ಪ್ರಧಾನವಾದ 'ಸಾಫ್ಟ್ ಡ್ರಿಂಕ್'ಗಳು ಮುಂತಾದ ದ್ರವಗಳ ಸೇವನೆ ಮನಸ್ಸಿಗೆ ಹಿತ ಎನಿಸಿದರೂ ದೇಹದಲ್ಲಿ ಆಮ್ಲತೆ ಜಾಸ್ತಿಯಾಗಿ ಚರ್ಮವನ್ನು ಒರಟಾಗಿಸುತ್ತದೆ ಮತ್ತು ಕಪ್ಪಾಗಿಸುತ್ತದೆ. ಬೇಸಿಗೆ ಹೆಚ್ಚಾದಂತೆ ಕಹಿಯನ್ನು ತೊರೆದು ಸಿಹಿಪ್ರಧಾನವಾದ ದ್ರವಪದಾರ್ಥಗಳನ್ನು ಸೇವಿಸಬೇಕು. ಹುಳಿ–ಉಪ್ಪುಗಳು ಕಡಿಮೆಯೂ, ಖಾರ–ಕಹಿಗಳು ಅತಿ ಕಡಿಮೆಯೂ ಇರಬೇಕು. ಹಾಲು, ಹಾಲಿನಿಂದ ತಯಾರಾದ ಸಿಹಿಗಳು, ಪಾಯಸ, ಬಾಸುಂದಿ, ಕುಂದ ಮುಂತಾದ ಸಿಹಿತಿಂಡಿಗಳು, ಅದೇ ರೀತಿ ಮೊಸರಿನಿಂದ ತಯಾರಿಸಿದ ಶ್ರೀಖಂಡ ಇತ್ಯಾದಿಗಳಿಂದ ಆರೋಗ್ಯ ವೃದ್ಧಿಯಾಗುತ್ತದೆ. ಬೆವರು ಹೆಚ್ಚು ಬರುವ ಪ್ರದೇಶಗಳಲ್ಲಿ ಕೇರಳ, ಕರಾವಳಿಗಳಲ್ಲಿ ತಯಾರಿಸುವ ಕೆಂಪಕ್ಕಿ ಅಥವಾ ಕುಸುಬಲು ಅಕ್ಕಿಯ ಗಂಜಿ, ವಿಧವಿಧವಾದ ತಂಬುಳಿಗಳು ಆರೋಗ್ಯಕರ. ಸೊಪ್ಪುಗಳಲ್ಲಿ ಹುಳಿಸೊಪ್ಪು, ಚಕ್ರಮುನಿ (ವಿಟಮಿನ್ ಸೊಪ್ಪು) – ಇವುಗಳ ತಂಬುಳಿ ಹಿತಕರ. ಹಾಗೆಯೇ ಹಸಿ ಈರುಳ್ಳಿಯು ಬಿಸಿಲಿನ ಬೇಗೆಯನ್ನು ತಡೆಯುವಲ್ಲಿ ಸಹಕಾರಿ (ಕೆಮ್ಮು ದಮ್ಮು ಇರುವವರು ಸೇವಿಸಬಾರದು). ಬೆಣ್ಣೆ ತೆಗೆದ (ಕೇವಲ ಕೆನೆ ತೆಗೆದದ್ದು ಅಲ್ಲ) ಮಜ್ಜಿಗೆಗೆ ಹೆಚ್ಚು ನೀರು ಸೇರಿಸಿ ಮಡಕೆಯಲ್ಲಿಟ್ಟು ಸೇವಿಸುವುದು ಹಿತಕರ ಮತ್ತು ಆರೋಗ್ಯಕರ.

ಸೆಕೆ ಹೆಚ್ಚಾದಂತೆ, ನಿತ್ಯ ಮಾಂಸಾಹಾರಿಗಳಲ್ಲದವರು ಬೆಳ್ಳುಳ್ಳಿ, ಕರಿಮೆಣಸು ಮತ್ತು ಹಸಿ ಮೆಣಸಿನಕಾಯಿಯನ್ನು ಆಹಾರದಲ್ಲಿ ಬಳಸುವುದು ಅಮ್ಲಪಿತ್ತ, ಉರಿಮೂತ್ರ, ಮಲಮೂತ್ರಗಳಲ್ಲಿ ರಕ್ತಪ್ರವೃತ್ತಿ ಮುಂತಾದ ರೋಗಗಳಿಗೆ ಕಾರಣವಾಗುತ್ತದೆ. ಕಲ್ಲಂಗಡಿ, ಕರಬೂಜ ಹಿತಕರವಾದ ಹಣ್ಣುಗಳಾದರೂ ಇವುಗಳೊಡನೆ ಹೆಚ್ಚು ನೀರು ಸೇವಿಸುವುದು ಉರಿಶೀತವನ್ನು ಕಡಿಮೆ ಮಾಡುತ್ತದೆ. ಬಿಸಿಲಿನಲ್ಲಿ ತಿರುಗಾಡುವವರಿಗೆ ಬಾಳೆಹಣ್ಣು, ಬೇಯಿಸಿದ ಬಾಳೆಹಣ್ಣಿನಿಂದ ತಯಾರಿಸಿದ ಹಲ್ವ, ರಸಾಯನಗಳು ಆರೋಗ್ಯಕರ. ಆದರೆ ಯಾವುದೇ ಹಣ್ಣುಗಳೊಡನೆ ಹಾಲನ್ನು ಬೆರೆಸಿ ಸೇವಿಸುವುದು (ಮಿಲ್ಕ್ ಶೇಕ್, ಫ್ರುಟ್ ಸಲಾಡ್‌ನೊಂದಿಗೆ ಐಸ್‌ಕ್ರೀಮ್) ಅನಾರೋಗ್ಯಕ್ಕೆ ನಾಂದಿ ಹಾಡಿದಂತೆ.

ಬಿಸಿಲು ಹೆಚ್ಚಾದಂತೆ ವಾತಾವರಣವನ್ನು ತಂಪಾಗಿಸಲು ಬಳಸುವ ವಾತಾಯನಗಳು ದೇಹವನ್ನು ಅತಿ ತಂಪಾಗಿಸಬಾರದು. ಆದ್ದರಿಂದ ಅವುಗಳನ್ನು 23 ಡಿಗ್ರಿಗಳ ಅಸುಪಾಸಿನಲ್ಲಿರುವುದು ಹಿತಕರ. ಗಾಳಿಯು ದೇಹಕ್ಕೆ ನೇರವಾಗಿ ಒತ್ತಡದಲ್ಲಿ ಬೀಳದಂತೆ ಫ್ಯಾನಿನ ದಿಕ್ಕನ್ನು ಬದಲಿಸಿಡಬೇಕು. ಒತ್ತಡದಲ್ಲಿ ಬೀಸುವ ಗಾಳಿಯು ರಕ್ತದೊತ್ತಡವನ್ನು ಹೆಚ್ಚು ಮಾಡಿ ಪಕ್ಷಾಘಾತವೇ ಮೊದಲಾದ ರೋಗಗಳಿಗೆ ನಾಂದಿ ಹಾಡುತ್ತದೆ.

ಹೀಗೆ ನಮ್ಮ ಆಹಾರ, ಆಚಾರ, ವಿಚಾರ, ವಿಹಾರಗಳನ್ನು ವಿವೇಚನೆಯಿಂದ ಅನುಸರಿಸಿದರೆ ಬೇಸಿಗೆಯಲ್ಲೂ ಆರೋಗ್ಯಕರವಾಗಿರಬಹುದು.

❖

ರಜೆಯನ್ನು ಸವಿಯೋಣ...

ರಮ್ಯಾ ಶ್ರೀಹರಿ

ಹಗಲೆಲ್ಲಾ ಬಿರುಬಿಸಿಲು, ಸಂಜೆಯಾಗುತ್ತಲೇ ತಂಪೆರೆಯುವ ಗಾಳಿ, ಮಳೆ; ಮನೆಯೊಳಗೂ ಪರೀಕ್ಷೆಯ ಧಗೆ ಕಳೆದು ತಂಪಾದ ರಜೆಯ ಮಜಾ ಅನುಭವಿಸುತ್ತಿರುವ ಮಕ್ಕಳು. ಮರಗಳಲ್ಲಿ ಅರಳಿರುವ ಕಣ್ಮನ ತಣಿಸುವ ಬಣ್ಣ ಬಣ್ಣದ ಹೂಗಳು; ದಾಹವನ್ನು ಇಂಗಿಸುವ ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ಮಾವು, ಹಲಸು - ಬಗೆ ಬಗೆಯ ಹಣ್ಣುಗಳು; ಕಿವಿ ತುಂಬುವ ಪಕ್ಷಿಗಳ ಗಾನ; ಮನೆಯಲ್ಲಿಯೂ ಹಾಗೇ ಚೈತ್ರದ ಹೊಸ ಹುರುಪೇ ಮೈತಳೆದು ಬಂದಂತಿರುವ ಮಕ್ಕಳ ಚಿಲಿಪಿಲಿ, ಆಟ, ನಗು, ತುಂಟಾಟ, ತಂಟೆ-ತಕರಾರು. ಯಾವುದೇ ಧಾವಂತವಿರದ ಬೆಳಗು, ಶಾಂತವಾದ ಮಧ್ಯಾಹ್ನ, ಲವಲವಿಕೆಯ ಸಂಜೆಗಳು. ಮಕ್ಕಳ ನೆಪ ಹೇಳಿ ಮಾಡುವ ಬಗೆಬಗೆಯ ತಿಂಡಿಗಳು, ಏಕತಾನತೆಯನ್ನು ಮುರಿಯಲು ಕೈಗೊಳ್ಳುವ ಪ್ರವಾಸಗಳು, ರೂಢಿಸಿಕೊಳ್ಳುವ ಹವ್ಯಾಸಗಳು, ನೆಂಟರಿಷ್ಟರ-ಬಂಧುಗಳ ಭೇಟಿ. ಒಟ್ಟಿನಲ್ಲಿ ಬಾಲ್ಯಕಾಲದ ಅತ್ಯಂತ ಮೋಹಕ ಸಮಯ ಬೇಸಿಗೆ ರಜೆಯ ಈ ಎರಡು ತಿಂಗಳು.



ನಾವು ಚಿಕ್ಕವರಿದ್ದಾಗ ಎಷ್ಟೋ ಪುಸ್ತಕಗಳನ್ನು, ಕಥೆ–ಕಾದಂಬರಿಗಳನ್ನು ಶಾಲೆಯ ಗಡಿಬಿಡಿಯ ನಡುವೆ ಓದಲಾಗದೆ, ಬೇಸಿಗೆ ರಜೆಯಲ್ಲಿ ಓದಬೇಕೆಂದು ಪ್ಲಾನ್ ಮಾಡಿಕೊಂಡಿರುತ್ತಿದೆವು. ಈಗಲೂ ಮಕ್ಕಳಿಗೆ ತಮ್ಮ ಬೇಸಿಗೆ ರಜೆಗಳ ಕುರಿತು ತಮ್ಮದೇ ಕಲ್ಪನೆಗಳಿರುತ್ತವೆ. ಎಷ್ಟೋ ಬಾರಿ ಪೋಷಕರೇ 'ಈಗ ಬೇಡ, ಚೆನ್ನಾಗಿ ಓದಿಕೋ, ಬೇಸಿಗೆ ರಜೆಯಲ್ಲಿ ಮಾಡುವೆಯಂತೆ' ಎಂದು ಮಕ್ಕಳ ಹಲವು ಆಸಕ್ತಿಗಳ ಕುರಿತಾಗಿ ಹೇಳಿರುತ್ತಾರೆ. ಈಗ ಆ ಬೇಸಿಗೆ ರಜೆ ಬಂದೇ ಬಿಟ್ಟಿದೆ, ಮಕ್ಕಳು ತಮ್ಮೆಲ್ಲಾ ಕೂಡಿಟ್ಟ ಕನಸುಗಳನ್ನು ಯಾರ ಅಡೆತಡೆಯಿಲ್ಲದೆ ಕಂಡು, ಸುಖವಾಗಿ ಅನುಭವಿಸಿ, ಸಾಧ್ಯವಾದರೆ ನನಸು ಮಾಡಿಕೊಳ್ಳುವ ಕಾಲ. ಹಾಗೆಯೇ ಪೋಷಕರಿಗೂ ಇದು ಸಂತಸದ ಕಾಲವೇ. ಮಕ್ಕಳ ಜೊತೆ ನಕ್ಕು ನಲಿಯಲು, ಕಲಿಯಲು, ಅವರೊಂದಿಗೆ ಮನಬಿಚ್ಚಿ ಮಾತನಾಡಲು, ವಿಹರಿಸಲು ಸಕಾಲ.

ಇದೀಗ ಪರೀಕ್ಷೆಗಳು ಮುಗಿದಿವೆ; ರಜೆಗಳು ಆರಂಭವಾಗಿವೆ. ಈ ಸಮಯವನ್ನು ದೊಡ್ಡವರು ಮತ್ತು ಮಕ್ಕಳು ಹೇಗೆ ಸದುಪಯೋಗ ಮಾಡಿಕೊಳ್ಳಬಹುದು? ಸಂತೋಷವಾಗಿರಬಹುದು?...

ಇಂತಹ ಆರಾಮದಾಯಕ ಸಮಯದಲ್ಲೂ ಸಣ್ಣಪುಟ್ಟ ಕಿರಿಕಿರಿಗಳು ಇದ್ದೇ ಇರುತ್ತವೆ. ಮಕ್ಕಳು 'ಬೋರಾಗುತ್ತಿದೆ' ಎಂದು ಗಂಟೆಗೊಮ್ಮೆ ಹೇಳುವುದು, 'ಏನಾದ್ರು ತಿನ್ನಲು ಕೊಡು' ಎಂದು ಪದೇ ಪದೇ ಕೇಳಿ ಪೀಡಿಸುವುದು ಎಲ್ಲರ ಮನೆಯಲ್ಲೂ ಇದ್ದಿದ್ದೇ. ಚಿಕ್ಕಮಕ್ಕಳಿಗೆ ನಗರ ಪ್ರದೇಶಗಳಲ್ಲಿ ಆಟವಾಡುವುದಕ್ಕೆ ಸುರಕ್ಷಿತವಾದ ಜಾಗವಿರುವುದಿಲ್ಲ. ಎಲ್ಲರೊಂದಿಗೂ ಮುಕ್ತವಾಗಿ ಬೆರೆಯಲು ಈಗಿನ ಕಾಲಕ್ಕೆ ಅದರದೇ ಆದ ತೊಡಕುಗಳಿವೆ; ಪೋಷಕರ ಅತಿಯಾದ ಕಾಳಜಿ, ನಿರ್ಬಂಧಗಳೂ ಇದಕ್ಕೆ ಕಾರಣವಿರಬಹುದು. ಮಕ್ಕಳು ತಮ್ಮ ಯಾವುದೇ ಕೆಲಸಗಳನ್ನು ಮಾಡಿಕೊಳ್ಳದೇ ಸೋಮಾರಿಯಾಗಿ ಮೊಬೈಲ್, ಟ್ಯಾಬ್‌ಗಳನ್ನು ನೋಡುತ್ತಾ ಕುಳಿತುಕೊಳ್ಳುವುದು, ಹದಿಹರೆಯಕ್ಕೆ ಕಾಲಿಡುತ್ತಿರುವ ಮಕ್ಕಳು ಮತ್ತು ಅವರ ಪೋಷಕರ ನಡುವೆ ಮಾತು ಮಾತಿಗೂ ಸ್ಫೋಟಗೊಳ್ಳುವ ಸಿಟ್ಟು-ಸಿಡಿಮಿಡಿ, ಯಾವುದೇ ರೀತಿಯ ಬೌದ್ಧಿಕ ಪ್ರಚೋದನೆಗಳನ್ನು ಒದಗಿಸದೆ ಮಕ್ಕಳ ಬೆಳವಣಿಗೆ ಕುಂಠಿತಗೊಳಿಸುವ ಕೆಲವು ಕೌಟುಂಬಿಕ ಪರಿಸ್ಥಿತಿಗಳು, ಇನ್ನೂ ಹಲವು ಇಂತಹ ಸಮಸ್ಯೆಗಳು ಬೇಸಿಗೆ ರಜೆಯ ಆನಂದವನ್ನು ಸವಿಯಲು ತೊಡಕುಗಳಾಗಿವೆ.

ಬೇಸಿಗೆ ರಜೆ ಎನ್ನುವುದು ಮಕ್ಕಳು ದೊಡ್ಡವರಾದ ಮೇಲೂ ಅವರು ಸಂತಸದಿಂದ ಮೆಲುಕು ಹಾಕುವ, ಹೃದಯಕ್ಕೆ ಆಪ್ತವಾದ ನೆನಪುಗಳನ್ನು ಸೃಷ್ಟಿಸಿಕೊಳ್ಳುವ ಕಾಲ. ಹಾಗೆಯೇ ಅವರ ಬೌದ್ಧಿಕ, ಭಾವನಾತ್ಮಕ, ದೈಹಿಕ, ಮಾನಸಿಕ ವಿಕಾಸಕ್ಕೆ ಅಗತ್ಯವಿರುವ ವಿರಾಮವನ್ನು ಒದಗಿಸುವ ಕಾಲ. ಪೋಷಕರು ತಮಗಿಷ್ಟವಾದದ್ದನ್ನೆಲ್ಲಾ ಮಕ್ಕಳು ಈ ಕಾಲದಲ್ಲಿ ಕಲಿತುಬಿಡಬೇಕೆಂದು ಬಯಸುವುದು ಸರಿಯಲ್ಲ. ಮಕ್ಕಳು ತಮ್ಮ ರಜೆಯನ್ನು ಹೇಗೆ ಕಳೆಯಬೇಕೆಂದು ಇಷ್ಟಪಡುತ್ತಾರೆನ್ನುವುದನ್ನು ಅವರಿಂದಲೇ ಕೇಳಿ ತಿಳಿಯಬೇಕು, ಆಗ ಅವರಿಗೂ ಪ್ರಾಮುಖ್ಯವನ್ನು ನೀಡಿದಂತಾಗುತ್ತದೆ ಮತ್ತು ಅವರ ಸ್ವಾತಂತ್ರ್ಯವನ್ನು ಗೌರವಿಸಿದಂತಾಗುತ್ತದೆ.

ಮಕ್ಕಳು ಮನೆಯಲ್ಲಿರುವ ರಜೆಯ ಸಮಯದಲ್ಲಿ ಏನೊಂದೂ ಮನೆಕೆಲಸ ಮಾಡದೆ ಎಲ್ಲದಕ್ಕೂ ಮನೆಯ ಇತರ ಸದಸ್ಯರ ಮೇಲೆ ಅವಲಂಬಿತವಾಗಿರುವುದು ಹಲವು ಪೋಷಕರಿಗೆ ತಲೆನೋವಾಗಿ ಪರಿಣಮಿಸಿರುತ್ತದೆ. ಮಕ್ಕಳಿಗೆ ಮನೆಕೆಲಸಗಳನ್ನು ಮಾಡುವುದರ ಮಹತ್ವವನ್ನು ಎಷ್ಟು ತಿಳಿಸಿಕೊಟ್ಟರೂ ಅವರು ತಮ್ಮ ನಡವಳಿಕೆಯಲ್ಲಿ ಹೆಚ್ಚಿನ ಬದಲಾವಣೆಯನ್ನು ತೋರದಿರಬಹುದು. ಈ ವಿಷಯದಲ್ಲಿ ಅವರನ್ನು ಶಿಕ್ಷಿಸುವುದು, ಬಲವಂತಪಡಿಸುವುದು ಉಪಯೋಗಕ್ಕೆ ಬರುವುದಿಲ್ಲ. ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕಾದ ಅನಿವಾರ್ಯ ಸಂದರ್ಭಗಳನ್ನು ಸೃಷ್ಟಿಸಿ ಅವರಿಗೆ ಸ್ವತಂತ್ರವಾಗಿ ಬದುಕುವುದನ್ನು ರೂಢಿ ಮಾಡಿಸಬೇಕು.

ಮಕ್ಕಳೊಡನೆ ಸಂವಹಿಸುವುದು ಒಂದು ಕಲೆ. ಕೇವಲ 'ಹೀಗೆ ಯಾಕೆ ಮಾಡುತ್ತೀಯ? ಹೀಗಿರು, ಇಂಥದ್ದೇ ಮಾಡು' ಎನ್ನುವ ಮಾತುಗಳ ಮೂಲಕ ಅವರನ್ನು ಅರಿಯುವುದಾಗಲಿ, ಪೋಷಕರ ನಿಲುವನ್ನು ಅವರಿಗೆ ಅರ್ಥಮಾಡಿಸುವುದಾಗಲಿ ಸಾಧ್ಯವಿಲ್ಲದಿರಬಹುದು. ಮಕ್ಕಳ ಕೆಲವು ವರ್ತನೆಗಳನ್ನು ಬದಲಾಯಿಸುವುದರಲ್ಲಿ ಪೋಷಕರು ಸೋತಿರಬಹುದು. ಯಾವುದೇ ವರ್ತನೆಯನ್ನು ಮುಂದುವರೆಸುವುದಕ್ಕೆ ಮಕ್ಕಳಿಗೆ ಅವರದೇ ಆದ ಕಾರಣಗಳಿರುತ್ತವೆ. ಅವುಗಳನ್ನೆಲ್ಲಾ ಅರಿಯಲು, ಮನಬಿಚ್ಚಿ ಮಾತನಾಡಲು ಬೇಸಿಗೆ ರಜೆ ಸೂಕ್ತ ಕಾಲ. ಮನೆಯ ಹೊರಗೆಲ್ಲಾದರೂ ಮಕ್ಕಳನ್ನು ವಿಹಾರಕ್ಕೆ ಕರೆದೊಯ್ದು ಅವರ ಇಷ್ಟಾನಿಷ್ಟಗಳನ್ನು ಗುರುತಿಸುತ್ತಾ ಅವರೊಂದಿಗೆ ಮಾತಿಗಿಳಿಯಬಹುದು, ಅವರ ಅನಿಸಿಕೆ, ಅಭಿಪ್ರಾಯಗಳ ಬಗೆಗೆ ಕುತೂಹಲ ತುಂಬಿದ ಪ್ರಶ್ನೆಗಳನ್ನು ಕೇಳುತ್ತ ಮಾತನಾಡುವುದು ಪೋಷಕರಿಗೂ ಆಹ್ಲಾದಕರ ಅನುಭವ ನೀಡುತ್ತದೆ.

ಬೇಸಿಗೆ ಶಿಬಿರಗಳು ಶಾಲೆಯಲ್ಲಿ ಕಲಿಸದ ವಿಷಯಗಳನ್ನು ಅರಿತುಕೊಳ್ಳಲು ಅಧ್ಯಯನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಸಹಕಾರಿ. ಮಕ್ಕಳ ಅಭ್ಯುದಯಕ್ಕೆ ಬೇಕಾದ ಎಲ್ಲಾ ತರಬೇತಿ, ಕೌಶಲಗಳನ್ನು ಶಿಕ್ಷಣ ವ್ಯವಸ್ಥೆಯೇ ಒದಗಿಸಿಬಿಡಬೇಕು ಎನ್ನುವುದು ಅವಾಸ್ತವಿಕವಾದ ನಿರೀಕ್ಷೆ. ಶಿಕ್ಷಣ ವ್ಯವಸ್ಥೆಯ ಲೋಪದೋಷಗಳನ್ನು ಸರಿದೂಗಿಸುವಂತಹ ಕೆಲಸವನ್ನು ಬೇಸಿಗೆ ಶಿಬಿರಗಳು ಮಾಡುವಂತಿರಬೇಕು. ಮಕ್ಕಳಲ್ಲಿ ವಿಮರ್ಶಾತ್ಮಕ ಪ್ರಜ್ಞೆ ಬೆಳೆಸುವಂತಹ, ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ, ತಮ್ಮ ದನಿಯನ್ನು ಕಂಡುಕೊಳ್ಳುವಂತಹ, ಸಮಾಜದಲ್ಲಿ ಕಾಣಬರುವ ಅನ್ಯಾಯ, ಅಸಮಾನತೆಗಳನ್ನು ಧೈರ್ಯವಾಗಿ ಪ್ರಶ್ನಿಸುವಂತಹ ಸಾಮರ್ಥ್ಯವನ್ನು ಉಂಟುಮಾಡುವ ಬೇಸಿಗೆ ಶಿಬಿರಗಳು ಎಷ್ಟಿವೆ? ಮಕ್ಕಳೊಂದಿಗೆ ಆತ್ಮೀಯತೆಯಿಂದ ಮಾತನಾಡುವ, ಪ್ರತಿ ಮಗುವೂ ಅನನ್ಯವಾದ, ವಿಶೇಷವಾದ ವ್ಯಕ್ತಿ ಎಂದು ಭಾವಿಸುವ ವಿಷಯ ತಜ್ಞರು ನಡೆಸಿಕೊಡುವ, ಹೆಚ್ಚು ಹಣ ನೀಡಬೇಕಿಲ್ಲದ, ಸ್ಪರ್ಧಾತ್ಮಕವಾಗಿರದ, ಸಮಾಜದೊಟ್ಟಿಗಿನ ಬಾಂಧವ್ಯವನ್ನು, ಅಂತಃಸತ್ತ್ವವನ್ನು ಗಟ್ಟಿಗೊಳಿಸುವಂತಹ ಬೇಸಿಗೆ ಶಿಬಿರಗಳು ಮಕ್ಕಳ ಬದುಕಿನ ಹಾದಿಯನ್ನೇ ಬದಲಿಸಬಲ್ಲವು. ರಂಗಭೂಮಿ, ಜಾನಪದ ಕಲಾಪ್ರಕಾರಗಳ ಕಲಿಕೆ, ಪರಿಸರ ಸಂರಕ್ಷಣೆಯ ಕುರಿತಾದ ಕಾರ್ಯಾಗಾರಗಳು, ಸಿನೆಮಾ ರಸಗ್ರಹಣ ಶಿಬಿರಗಳು ಈ ನಿಟ್ಟಿನಲ್ಲಿ ಪ್ರಸ್ತುತವೆನಿಸಿಕೊಳ್ಳುತ್ತವೆ.

❖



ಸುಭಾಷಿತ

ಮೂರು ಮಹಾನ್ ಶಕ್ತಿಗಳು ಜಗತ್ತನ್ನು ಆಳುತ್ತವೆ:
ಅವೆಂದರೆ, ಮೂರ್ಖತನ, ಭಯ ಮತ್ತು ದುರಾಸೆ.
–ಆಲ್ಬರ್ಟ್ ಐನ್‌ಸ್ಟೀನ್

ಹುಬ್ಬಳ್ಳಿ ಗಲಭೆ: ಸೌಹಾರ್ದಕ್ಕೆ ಕೊಳ್ಳಿ ಇಡುವ ಪ್ರವೃತ್ತಿ ಹತ್ತಿಕ್ಕಿ

ಬಹುತ್ವದಿಂದ ಕೂಡಿದ ನಮ್ಮ ಸಮಾಜವನ್ನು ಒಂದಾಗಿ ಬೆಸೆದಿರುವ ಸಾಮರಸ್ಯದ ತಂತುಗಳು ಇತ್ತೀಚಿನ ದಿನಗಳಲ್ಲಿ ಹೇಗೆ ಛಿದ್ರಗೊಳ್ಳುತ್ತಿವೆ ಎನ್ನುವುದಕ್ಕೆ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಸಾಕ್ಷಿ. ಸಮುದಾಯದ ನಡುವೆ ಸುಳಿದಾಡುವ ಗಾಳಿಯನ್ನೂ ಕೋಮು ರಾಜಕೀಯವು ಈಗ ವಿಷಮಯಗೊಳಿಸುತ್ತಿರುವುದು ದುರಂತ. ಕೋಮು ದ್ವೇಷವನ್ನು ಅದು ಕಾಳ್ಗಿಚ್ಚಿನಂತೆ ಹಬ್ಬಿಸುತ್ತಿದೆ ಕೂಡ. ನಾಡಿನ ಪಾಲಿನ ಆಸ್ತಿಯಾಗಿ, ಜವಾಬ್ದಾರಿಯುತ ನಾಗರಿಕ ಸಮುದಾಯವಾಗಿ ಬೆಳೆಯಬೇಕಿದ್ದ ಯುವಪೀಳಿಗೆ ಹೇಗೆ ದಿಕ್ಕು ತಪ್ಪುತ್ತಿದೆ ಎಂಬುದಕ್ಕೂ ಈ ಪ್ರಕರಣ ನಿದರ್ಶನ. ವಿದ್ಯಾರ್ಥಿಯೊಬ್ಬ, ಸಾಮಾಜಿಕ ಹೊಣೆಗಾರಿಕೆಯನ್ನು ಮರೆತು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡ ವಿವಾದಾತ್ಮಕ ವಿಡಿಯೊ ಎಲ್ಲ ರಾದ್ಧಾಂತಕ್ಕೂ ಮೂಲವಾಗಿದೆ. ಸಾಮರಸ್ಯವನ್ನು ಕದಡುವಂತಹ ಇಂತಹ ಕುಕೃತ್ಯಗಳಿಗೆ ಕೈಹಾಕುವಂತಹ ಮಾನಸಿಕತೆ ಕುಟುಂಬ, ಶಿಕ್ಷಣ ವ್ಯವಸ್ಥೆ ಅಥವಾ ಧರ್ಮದ ಅಫೀಮನ್ನು ಯುವಪೀಳಿಗೆಗೆ ಈ ಪರಿ ತಲೆಗೇರಿಸಲಾಗುತ್ತಿದೆಯೇ? ಇತ್ತೀಚಿನ ದಿನಗಳಲ್ಲಿ ಪದೇ ಪದೇ ನಡೆಯುತ್ತಿರುವ ಸೌಹಾರ್ದ ಕದಡುವ ಘಟನಾವಳಿಗಳು ಇಂತಹ ಕುಚೋದ್ಯದ ಕೃತ್ಯಕ್ಕೆ ಕುಮ್ಮಕ್ಕು ನೀಡುವುದರಲ್ಲಿ ಯಾವ ಅನುಮಾನವೂ ಇಲ್ಲ. ವಿವಾದಾತ್ಮಕ ವಿಡಿಯೊದಿಂದ ಪ್ರಚೋದನೆಗೆ ಒಳಗಾದ ಉದ್ರಿಕ್ತರ ಗುಂಪು ಕಲ್ಲು ತೂರಾಟ ನಡೆಸಿ ಪುಂಡಾಟಿಕೆಯಲ್ಲಿ ತೊಡಗಿದ್ದು ಕೂಡ ಖಂಡನೀಯ. ಯಾರೇ ಆಗಲಿ, ನೆಲದ ಕಾನೂನನ್ನು ಮೊದಲು ಗೌರವಿಸಬೇಕು. ಯಾರಿಂದಲಾದರೂ ತಮ್ಮ ಭಾವನೆಗಳಿಗೆ ಧಕ್ಕೆಯಾಗಿದ್ದರೆ ಪೊಲೀಸರಿಗೆ ದೂರು ನೀಡಬೇಕು. ನ್ಯಾಯವನ್ನು ಪಡೆಯಲು ಇರುವ ಸರಿಯಾದ ಹಾದಿಯೂ ಅದೇ ಆಗಿದೆ. ಕಲ್ಲು ತೂರಾಟ ಇಲ್ಲವೆ ಬೀದಿಯಲ್ಲಿ ಹಲವಾರು ದುಷ್ಕೃತ್ಯಗಳ ಮೂಲಕ ನಡೆಸುವ ದುರ್ವರ್ತನೆಯನ್ನು ಯಾವ ನಾಗರಿಕ ಸಮಾಜವೂ ಸಹಿಸದು.

ಬೆಂಕಿ ಹಚ್ಚುವ ಕೆಲಸದಲ್ಲಿ ತೊಡಗಿದವರನ್ನು ಎರಡೂ ಕೋಮಿನವರು ದೂರ ಇಟ್ಟು, ತಮ್ಮ ಬದುಕು ಅಂತಹ ಬೆಂಕಿಯಲ್ಲಿ ಬೇಯದಂತೆ ಎಚ್ಚರ ವಹಿಸಬೇಕಾಗಿದೆ

ಹಿಂದೊಮ್ಮೆ ಕೋಮು ದಳ್ಳುರಿಯಲ್ಲಿ ಹೊತ್ತಿ ಉರಿದಿದ್ದ ಹುಬ್ಬಳ್ಳಿಯಲ್ಲಿ ಶಾಂತಿ ನೆಲೆಸಿ ಎರಡೂವರೆ ದಶಕಗಳೇ ಕಳೆದಿದ್ದವು. ಈಗ ಮತ್ತೆ ಶಾಂತಿ ಕದಡಿದೆ. ಈ ಹಿಂದೆ ಈದ್ಗಾ ಮೈದಾನದ ವಿವಾದ ಜೀವಂತವಾಗಿದ್ದಾಗ ಕಾಲ ಎಲ್ಲ ಸಮುದಾಯದವರು ಅನುಭವಿಸಿದ ನೋವು, ಸಂಕಟ ಸಣ್ಣದಲ್ಲ. ಉತ್ತರ ಕರ್ನಾಟಕದ ದೊಡ್ಡ ಮಾರುಕಟ್ಟೆ ಎಂದು ಹೆಸರಾಗಿದ್ದ ಹುಬ್ಬಳ್ಳಿಯಿಂದ ಹಲವು ವಾಣಿಜ್ಯ ಚಟುವಟಿಕೆಗಳು ಸುತ್ತಲಿನ ನಗರಗಳಿಗೆ ಸ್ಥಳಾಂತರಗೊಂಡಿದ್ದು ಈದ್ಗಾ ವಿವಾದದ ಬಿಸಿ ಹೆಚ್ಚಾಗಿದ್ದ ಸಂದರ್ಭದಲ್ಲೇ. ನಿರಂತರವಾಗಿ ಬಿದ್ದ ಆರ್ಥಿಕ ಹೊಡೆತದಿಂದ ಪಾಠ ಕಲಿತಿದ್ದ ಇಲ್ಲಿನ ಜನ, ರಾಜಕೀಯ ಪಿತೂರಿಯಿಂದ ಉದ್ಭವಿಸಿದ್ದ ಸಾಮರಸ್ಯದ ಬಿರುಕನ್ನು ಮತ್ತೆ ಹೊರಳಿಕೊಂಡಿದ್ದರು. ಆದರೆ, ಸೌಹಾರ್ದದ ತಳಹದಿಗೆ ಕಲ್ಲು ಎಸೆಯುವ ಯತ್ನಗಳು ಈಗ ಪುನಃ ನಡೆದಿವೆ. ಇಂತಹ ಯತ್ನಗಳನ್ನು ಆರಂಭದಲ್ಲೇ ಚಿವುಟಿಹಾಕುವ ಕೆಲಸವನ್ನು ಪೊಲೀಸರು ಮಾಡಬೇಕು. ಎಂತಹ ಕಠಿಣ ಅನಿವಾರ್ಯ ವರ್ತನೆಯನ್ನು ನಿರ್ದಾಕ್ಷಿಣ್ಯವಾಗಿ ಮಟ್ಟಹಾಕಬೇಕು.

ರಾಜಕೀಯ ಮುಖಂಡರು ಸಮಾಜದಲ್ಲಿ ಶಾಂತಿ ಕದಡಲು ಅವಕಾಶವಾಗದಂತೆ ತಮ್ಮ ಮಾತು-ಕೃತಿಯಲ್ಲಿ ಎಚ್ಚರಿಕೆ ವಹಿಸಬೇಕು. ಆದರೆ, 'ಮುಸ್ಲಿಂ ಗೂಂಡಾಗಳಿಂದ ದಾಳಿ ನಡೆದಿದೆ' ಎನ್ನುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಹೇಳಿಕೆಯಾಗಲೀ, 'ಒಂದು ಸ್ಟೇಟಸ್ ಹಾಕಿದ್ದಕ್ಕೆ ಇಷ್ಟೊಂದು ಕೆರಳಬೇಕೇ' ಎನ್ನುವ ಸಿ.ಟಿ. ರವಿ ಅವರ ಪ್ರಶ್ನೆಯಾಗಲೀ ಸಮರ್ಥನೀಯವಲ್ಲ. ಮಾತ್ರವಲ್ಲ, ತುಂಬಾ ಅಸೂಕ್ಷ್ಮವಾದವು. ಇಂತಹ ರಾಜಕೀಯ ಮುಖಂಡರನ್ನು ಹೊಣೆಗಾರಿಕೆಯನ್ನೇ ಮರೆತವರು ಎಂದು ಕರೆಯದೆ ವಿಧಿಯಿಲ್ಲ. ಸಮಾಜಘಾತುಕ ವ್ಯಕ್ತಿಗಳನ್ನು ಜಾತಿ, ಸಮುದಾಯದ ಹೆಸರಿನಲ್ಲಿ ಗುರುತಿಸುವ ಪ್ರವೃತ್ತಿಯೇ ಸರಿಯಲ್ಲ. ಇಂತಹ ಪ್ರಕರಣಗಳನ್ನು ಯಾವ ಪಕ್ಷವೂ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು. ವಿರೋಧ ಪಕ್ಷಗಳ ಮುಖಂಡರು ಕೂಡ ಸಂಯಮ ಕಾಯ್ದುಕೊಳ್ಳಬೇಕಾದ ಸನ್ನಿವೇಶ ಇದು. ಸೂಕ್ಷ್ಮ ಪರಿಸ್ಥಿತಿಯಲ್ಲಿ ಲಾಭ ಪಡೆಯಲು ಹವಣಿಸುವ ರಾಷ್ಟ್ರ ಶಕ್ತಿಗಳು ವಿಜೃಂಭಿಸಲು ಒಂದು ಒಡಕು ಮಾತು ಸಾಕಾಗುತ್ತದೆ. ಸರ್ಕಾರದ ಭಾಗವಾದ ಜನಪ್ರತಿನಿಧಿಗಳ ಬದ್ಧತೆ ಇರಬೇಕಾದುದು ಸಂವಿಧಾನಕ್ಕೇ ಹೊರತು ಸಮುದಾಯಗಳಿಗಲ್ಲ ಎಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳಬೇಕಾಗಿದೆ. ಹುಬ್ಬಳ್ಳಿ ಹೇಳಿಕೇಳಿ ಭಾವೈಕ್ಯದ ರಾಯಭಾರಿಗಳಾದ ಸಿದ್ಧಾರೂಢರು, ಶಿಶುನಾಳ ಷರೀಫರಂತಹ ಸಂತರು ಓಡಾಡಿದ ನೆಲ. ಅವರ ಕರ್ಮಭೂಮಿ ಅದು. ಹೀಗಾಗಿ ಸೌಹಾರ್ದ ಎನ್ನುವುದು ನೂರಾರು ವರ್ಷಗಳಿಂದ ಅದರ ಹೃದಯದಲ್ಲೇ ಅರಳಿ ಬೆಳೆದಿದೆ. ಅಂತಹ ಸೌಹಾರ್ದಕ್ಕೆ ಕೊಳ್ಳಿ ಇಡುವ ಕೆಲಸವನ್ನು ಹತ್ತಿಕ್ಕುವುದು ಸದ್ಯದ ಜರೂರು. ಬೆಂಕಿ ಹಚ್ಚುವ ಕೆಲಸದಲ್ಲಿ ತೊಡಗಿದವರನ್ನು ಎರಡೂ ಕೋಮಿನವರು ದೂರ ಇಟ್ಟು, ತಮ್ಮ ಬದುಕು ಅಂತಹ ಬೆಂಕಿಯಲ್ಲಿ ಬೇಯದಂತೆ ಎಚ್ಚರ ವಹಿಸಬೇಕಾದ ಕಾಲವೂ ಇದಾಗಿದೆ.

ದಿನದ ಟ್ವೀಟ್

ನಗಣ್ಯವಾಗುತ್ತಿವೆ ಮೌಲ್ಯಗಳು

ಕಾನೂನಾತ್ಮಕ ಆಡಳಿತ, ವಾಕ್ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಸಮಾನ ಅವಕಾಶ, ಧರ್ಮ ಮತ್ತು ರಾಜಕಾರಣದ ಪ್ರತ್ಯೇಕೀಕರಣ, ಸಾರ್ವಜನಿಕ ವಲಯದಲ್ಲಿ ಪಾರದರ್ಶಕತೆ, ಒಂದೇ ಎರಡೇ ಜನತಂತ್ರದ ಎಷ್ಟೊಂದು ಮೌಲ್ಯಗಳಿವೆ. ಇವುಗಳ ಯಾವುದೇ ಉಲ್ಲಂಘನೆಯೂ ಭ್ರಷ್ಟತೆಯೇ. ಬಹಳಷ್ಟು ಮಂದಿಗೆ ಜನತಂತ್ರ ಎಂದರೆ ಬಹುಮತ ಅಷ್ಟೇ. ಉಳಿದೆಲ್ಲವೂ ಗೌಣ. ದುರದೃಷ್ಟಕರ.

ಶ್ರೀನಾಥ್ ಶಿರಗಳಲೆ, ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿ

ಕಿಡಿನುಡಿ

ಧರ್ಮವನ್ನು ಮನುಷ್ಯನ ಒಳಿತಿಗೆ ಉಪಯೋಗಿಸಬೇಕು. ಆದರೆ, ನಮ್ಮಲ್ಲಿ ಧರ್ಮದ ವೈಭವೀಕರಣ ನಡೆಯುತ್ತಿದೆ. ಧರ್ಮದ ಅಫೀಮನ್ನು ನಾವು ತಿಂದಿದ್ದೇವೆ. ಅದು ನಶೆ ಏರಿಸಿ ಏನೇನೋ ಮಾಡಿಸುತ್ತಿದೆ. ದಾರಿ ತಪ್ಪಿಸುತ್ತಿದೆ.

ವಿ.ಶ್ರೀನಿವಾಸ ಪ್ರಸಾದ್, ಸಂಸದ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 19-4-1997

• **ರಂಗಕ್ಕೆ ಬೆಂಬಲ: ಶರ್ಮಾಗೆ ಕಾಂಗ್ರೆಸ್ ಪತ್ರ**

ನವದೆಹಲಿ, ಏ. 18 (ಪಿಟಿಐ, ಯುಎನ್‌ಐ)– ಹೊಸ ನಾಯಕನ ನೇತೃತ್ವದಲ್ಲಿ ಕೇಂದ್ರದಲ್ಲಿ ಸರ್ಕಾರ ರಚಿಸಲು ಸಂಯುಕ್ತ ರಂಗಕ್ಕೆ ಬೆಂಬಲ ನೀಡುವುದಾಗಿ ಕಾಂಗ್ರೆಸ್(ಐ) ಪಕ್ಷ ಇಂದು ರಾಷ್ಟ್ರಪತಿ ಡಾ. ಶಂಕರದಯಾಳ್ ಶರ್ಮಾ ಅವರಿಗೆ ಪತ್ರ ಬರೆದಿರುವುದರಿಂದ ಸಂಯುಕ್ತ ರಂಗಕ್ಕೆ ಹೊಸ ನಾಯಕನನ್ನು ಆರಿಸಲು ಇದ್ದ ಅಡ್ಡಿ ನಿವಾರಣೆಯಾದಂತಾಗಿದೆ.

ಹೊಸ ನಾಯಕನ ಆಯ್ಕೆ ಕುರಿತಂತೆ ಆಂಧ್ರ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಇಂದು ಮಧ್ಯರಾತ್ರಿ ಪ್ರಧಾನಿ ಸೇರಿದಂತೆ ರಂಗದ ಘಟಕ ಪಕ್ಷಗಳ ನಾಯಕರ ಜತೆ ಮೊದಲ ಸುತ್ತಿನ ಮಾತುಕತೆ ನಡೆಸಿದರು. ನಾಳೆ ಎರಡನೇ ಸುತ್ತಿನ ಮಾತುಕತೆ ನಡೆಯಲಿದೆ.

ಸಂಯುಕ್ತ ರಂಗವು ದೇವೇಗೌಡ ಅವರ ಉತ್ತರಾಧಿಕಾರಿಯನ್ನು ನಾಳೆ ಆರಿಸುವ ಸಂಭವವಿದೆ.

• **ನಕಲಿ ವೈದ್ಯಕೀಯ ಕಾಲೇಜು– ಗಣ್ಯರ ಬಂಧನ**

ರಾಯಚೂರು, ಏ. 18– ಸಿಂಧನೂರಿನಲ್ಲಿ ನಕಲಿ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಿ ಅನೇಕ ಮುಗ್ಧ ವಿದ್ಯಾರ್ಥಿಗಳನ್ನು ವಂಚಿಸಿದ ಆರೋಪದ ಮೇಲೆ ಅಲ್ಲಿನ ಪೊಲೀಸರು ಇಬ್ಬರು ವೈದ್ಯರು ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಸಿಂಧನೂರಿನ ಇತರ ಕೆಲ ಪ್ರತಿಷ್ಠಿತರು ಬಂಧನದ ಬೆದರಿಕೆಯಿಂದ ಭೂಗತರಾಗಿದ್ದು ಅವರಿಗಾಗಿ ಶೋಧ ನಡೆದಿದೆ.

50 ವರ್ಷಗಳ ಹಿಂದೆ

ಬುಧವಾರ, 19-4-1972

• **ಮಹಾಜನ್ ವರದಿ ಬಗ್ಗೆ ಸಂಸತ್ತಿನದೇ ಅಂತಿಮ ತೀರ್ಮಾನ: ಅರಸು**

ಬೆಂಗಳೂರು, ಏ. 18– ಮೈಸೂರು– ಮಹಾರಾಷ್ಟ್ರ ಗಡಿ ವಿವಾದ ಪರಿಹಾರಕ್ಕೆ ಮಹಾಜನ್ ವರದಿಯನ್ನು ಮುಂದಿಟ್ಟುಕೊಂಡಿರುವ ಸಂಸತ್ತಿನದೇ ಅಂತಿಮ ನುಡಿ ಎಂದು ಮುಖ್ಯಮಂತ್ರಿ ದೇವರಾಜ ಅರಸು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

'ಈ ಪ್ರಶ್ನೆಯ ಪರಿಹಾರದ ಹೊಣೆಯನ್ನು ಪ್ರಧಾನಿಯವರಿಗೆ ಬಿಟ್ಟಿಲ್ಲ' ಎಂದು ಸದಸ್ಯರ ಸಂದೇಹಗಳನ್ನು ನಿವಾರಿಸಿದ ಮುಖ್ಯಮಂತ್ರಿ ಅವರು 'ಅಂತಿಮ ತೀರ್ಪಿನ ಅಧಿಕಾರ ಪಾರ್ಲಿಮೆಂಟ್‌ಗೆ ಬಿಟ್ಟಿದ್ದು, ಕಾದು ನೋಡೋಣ' ಎಂದರು.

• **ರಾಸಾಯನಿಕ ಗೊಬ್ಬರ ಬಳಕೆ ಬಗ್ಗೆ ಶೀಘ್ರವೇ ಕಾಯಿದೆ ಜಾರಿ**

ಬೆಂಗಳೂರು, ಏ. 18– ರಾಸಾಯನಿಕ ಗೊಬ್ಬರ ಬಳಕೆ ಮತ್ತು ವಹಿವಾಟು ಸಂಬಂಧದಲ್ಲಿ ಕಾಯಿದೆಯೊಂದು ಕಾರ್ಯಗತವಾಗುವ ಸಂಭವವಿದೆ.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಬೇಕೆಂಬ ನಿರ್ಣಯದ ಮೇಲೆ ವಿಧಾನ-ಪರಿಷತ್ತಿನಲ್ಲಿ ಚರ್ಚೆ ನಡೆಯುತ್ತಿದ್ದಾಗ ಪಶುಪಾಲನೆ ರಾಜ್ಯ ಸಚಿವ ಎನ್. ಚಿಕ್ಕೇಗೌಡ ಅವರು ಇಂದು ಮಧ್ಯಪ್ರವೇಶಿಸಿ, 'ರಾಸಾಯನಿಕ ಗೊಬ್ಬರ ಕಾಯಿದೆಯೊಂದನ್ನು ತೀವ್ರವಾಗಿ ಕಾರ್ಯಗತಗೊಳಿಸಲು ಉದ್ದೇಶಿಸಿರುವುದಾಗಿ' ತಿಳಿಸಿದರು.

ಸುಳ್ಳು ಜಾತಿ ಪ್ರಮಾಣಪತ್ರ ಪಡೆಯಲು ತಡೆಯಾಗಿ ನಿಂತಿದ್ದ 'ಗೋಡೆ'ಯನ್ನು ಉರುಳಿಸಿದ್ದೇಕೆ?

ಮೀಸಲಾತಿ ನುಂಗುವ ನುಸುಳುಕೋರರು

ವಿಶ್ಲೇಷಣೆ

ವಾದಿರಾಜ್

ಲಿಂಗಾಯತ ಜಂಗಮರಾದ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಮಗಳು ಬೇಡಜಂಗಮ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದಿದ್ದ ಸಂಗತಿ ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆಗೆ ಒಳಗಾಯಿತು. ಈ ಕಾರಣಕ್ಕಾಗಿ ಸದನದ ಹೊರಗೆ ಪ್ರತಿಭಟನೆಗಳೂ ನಡೆದವು. ಈ ಕುರಿತ ಚರ್ಚೆಗೆ ಮೊದಲೇ ನಕಲಿ ಜಾತಿ ಪ್ರಮಾಣಪತ್ರ ತಡೆಯುವ ಪ್ರಕ್ರಿಯೆಗೆ ಸಂಬಂಧಿಸಿದ ಆದೇಶವೊಂದನ್ನು ಮುಖ್ಯಮಂತ್ರಿ ಹಿಂಪಡೆದ ವಿಚಾರ ವಿಧಾನಸಭೆಯಲ್ಲಿ ಹೆಚ್ಚು ಚರ್ಚೆಯಾಗಲಿಲ್ಲ. ಏಕೆಂದರೆ ಈ ಆದೇಶವನ್ನು ಹಿಂಪಡೆಯುವ ಕೆಲಸವನ್ನು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಜಂಟಿಯಾಗಿಯೇ ಮಾಡಿದ್ದವು.

ಬೀದರ್ ಜಿಲ್ಲೆಗೆ ಸೇರಿದ ಕೆಎಸ್‌ಆರ್‌ಟಿಸಿ ಚಾಲಕರೊಬ್ಬರು ಆತ್ಮಹತ್ಯೆಗೆ ಶರಣಾದ ವಿಷಯವನ್ನು ಮಾರ್ಚ್ 15ರಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಸ್ತಾಪಿಸಿದರು. ಪೊಲೀಸ್ ಇಲಾಖೆಯ ವ್ಯಾಪ್ತಿಗೆ ಬರುವ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಜಾತಿ ಪ್ರಮಾಣಪತ್ರದ ವಿಷಯದಲ್ಲಿ ಅನಗತ್ಯ ಕಿರುಕುಳ ನೀಡುತ್ತಿದೆ. 2021ರ ಜ. 16ರಂದು ಬಿಜೆಪಿ ನೇತೃತ್ವದ ಸರ್ಕಾರ ಮಾಡಿದ ಆದೇಶದಿಂದಾಗಿ ಕಾನೂನು ಮತ್ತಷ್ಟು ಬಿಗಿಯಾಗಿ ಜಾತಿ ಪ್ರಮಾಣಪತ್ರದ ವಿಷಯದಲ್ಲಿ ಕಿರುಕುಳ ವಿಪರೀತವಾಗಿದೆ. ಇದರಿಂದ ಬೇಸತ್ತು ಸಂತ್ರಸ್ತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಹೀಗಾಗಿ ಸರ್ಕಾರವು 2021ರ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಈ ಆಗ್ರಹಕ್ಕೆ ಕಾಂಗ್ರೆಸ್ಸಿನ ಈಶ್ವರ ಖಂಡ್ರೆ, ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಅವರೂ ದನಿಗೂಡಿಸಿದರು. ಆತ್ಮಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಚರ್ಚೆ ನಡೆದದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆದೇಶ ಹಿಂಪಡೆಯಲು ಮುಂದಾಗುವಂತೆ ಮಾಡಿತು. ಇದರ ಮರುದಿನವೇ, 2021ರಲ್ಲಿ ತಮ್ಮ ಪಕ್ಷದ ನೇತೃತ್ವದ ಸರ್ಕಾರವೇ ಮಾಡಿದ್ದ ಆದೇಶವನ್ನು ಹಿಂಪಡೆದರು.

ಜಾತಿ ಪ್ರಮಾಣಪತ್ರದ ಇನ್ನೊಂದು ಮುಖವಾದ 'ನಕಲಿ'ತನದ ಬಗ್ಗೆ ಸದನದಲ್ಲಿ ಚರ್ಚೆ ಆಗಲಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಶಾಸಕರ್‍ಯಾರಿಗೂ ದನಿಯೆತ್ತುವ ಅವಕಾಶವೂ ಸಿಗಲಿಲ್ಲ. ವಾಸ್ತವದಲ್ಲಿ ಸರ್ಕಾರದ 2021ರ ಆದೇಶವು ನಕಲಿ ಜಾತಿ ಪ್ರಮಾಣಪತ್ರದ ಹಾವಳಿಗೆ ಅಂಕುಶ ಹಾಕುವ ಶಕ್ತಿ ಹೊಂದಿತ್ತು. ನಕಲಿ ಜಾತಿ ಹೆಸರಿನಲ್ಲಿ ಅತಿಹೆಚ್ಚು ದುರುಪಯೋಗ ಆಗುವ 18 ಮೀಸಲು ಜಾತಿಗಳನ್ನು ಗುರುತಿಸಿತ್ತು. ಇದರಲ್ಲಿ ಗೊಂಡ, ಜೇನುಕುರುಬ, ಕಾಡುಕುರುಬ, ಟೋಕರೆ ಕೋಳಿ, ಡೋರ್ ಕೋಳಿ ಸೇರಿದಂತೆ ಎಸ್.ಟಿ. ವ್ಯಾಪ್ತಿಗೆ ಬರುವ 12 ಜಾತಿಗಳು ಮತ್ತು ಎಸ್.ಸಿ. ವ್ಯಾಪ್ತಿಗೆ ಬರುವ ಬೇಡಜಂಗಮ, ಬುಡ್ಗಜಂಗಮ, ಮೊಗೇರ ಸೇರಿದಂತೆ 6 ಜಾತಿಗಳನ್ನು ಗುರುತಿಸಲಾಗಿತ್ತು. ಇವುಗಳ ಜಾತಿ ಸಿಂಧುತ್ವ ಪ್ರಮಾಣಪತ್ರ ನೀಡುವ ಮುನ್ನ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಯು ನಿರ್ದೇಶನಾಲಯದಿಂದ ವಿಚಾರಣಾ ವರದಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿತ್ತು. ಈ ಸಂಬಂಧದ ಆದೇಶವನ್ನು ಈಗ ಹಿಂಪಡೆಯಲಾಗಿದೆ. ಅನುಮಾನಾಸ್ಪದ ಪ್ರಕರಣಗಳಲ್ಲಿ ಮಾತ್ರವೇ ವಿಚಾರಣಾ ವರದಿ ಪಡೆಯಬೇಕೆಂದು ಸೂಚಿಸಲಾಗಿದೆ. ಕರ್ನಾಟಕದಲ್ಲಿ ನಕಲಿ ಜಾತಿ ಪ್ರಮಾಣ ಪತ್ರದ ಮೂಲಕ ಮೀಸಲಾತಿ ಕಬಳಿಸುವುದು ದೊಡ್ಡ ದಂಧೆ. ಒಂದೆಡೆ ಕುರುಬ ಸಮುದಾಯದ ಕೆಲವರು ಗೊಂಡ, ಕಾಡುಕುರುಬರ ಹೆಸರಲ್ಲಿ, ಇನ್ನೊಂದೆಡೆ ಲಿಂಗಾಯತ ಜಂಗಮರಲ್ಲಿ ಕೆಲವರು ಬೇಡಜಂಗಮರ ಹೆಸರಿನಲ್ಲಿ ಮೀಸಲು ಪಟ್ಟಿಯೊಳಗೆ ನುಸುಳುತ್ತಿದ್ದಾರೆ. ಇದಲ್ಲದೆ ಕರಾವಳಿಯಲ್ಲಿ ಮೊಗೇರ, ಉತ್ತರ ಕರ್ನಾಟಕದಲ್ಲಿ ಟೋಕರೆ ಕೋಳಿ, ಡೋರ್ ಕೋಳಿ ಜಾತಿಗಳಲ್ಲೂ ನುಸುಳುಕೋರರು ದೊಡ್ಡ ಪ್ರಮಾಣದಲ್ಲಿದ್ದಾರೆ.

ಮಹಾರಾಷ್ಟ್ರದ ಸೊಲ್ಲಾಪುರ ಮೀಸಲು ಲೋಕಸಭಾ ಕ್ಷೇತ್ರದಿಂದ 'ಬೇಡಜಂಗಮ' ಪ್ರಮಾಣಪತ್ರದೊಂದಿಗೆ, ಲಿಂಗಾಯತ ಜಂಗಮರಾದ ಡಾ. ಜೈಸಿದ್ಧೇಶ್ವರ ಸ್ವಾಮೀಜಿ ಸಂಸದರಾಗಿ ಬಿಜೆಪಿಯಿಂದ ಗೆದ್ದಿದ್ದಾರೆ. ಸ್ವಾಮೀಜಿ ಪಡೆದಿದ್ದ ಜಾತಿ ಪ್ರಮಾಣಪತ್ರವು ಅಸಿಂಧು ಎಂದು ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು ಹೇಳಿದೆ. ಪ್ರಕರಣ ಈಗ ಕೋರ್ಟಿನಲ್ಲಿದೆ.

1991ರ ಜನಗಣತಿಯಲ್ಲಿ 1.24 ಲಕ್ಷ ಜನಸಂಖ್ಯೆಯಿದ್ದ ಗೊಂಡ ಸಮುದಾಯವು 2001ರಲ್ಲಿ 1.36 ಲಕ್ಷಕ್ಕೆ ಏರಿದರೆ 2011ರಲ್ಲಿ 1.58 ಲಕ್ಷ ತಲುಪಿದೆ. ಏರಿಕೆ ಪ್ರಮಾಣದಲ್ಲಿ ಅಸಹಜತೆ ಗೋಚರಿಸುತ್ತಿದೆ. ಕಾಡುಕುರುಬರ ಮೂಲ ಮೈಸೂರು, ಕೊಡಗು. ಆದರೆ, ಅವರು ರಾಜ್ಯದಲ್ಲಿ ಅತ್ಯಂತ ಹೆಚ್ಚಿರುವುದು ಯಾದಗಿರಿ ಜಿಲ್ಲೆಯಲ್ಲಿ! 2011ರ ಜನಗಣತಿಯಂತೆ ಕಾಡುಕುರುಬರದ್ದು ಮೈಸೂರು ಜಿಲ್ಲೆಯಲ್ಲಿ 1,859 ಜನಸಂಖ್ಯೆ ಇದ್ದರೆ, ಯಾದಗಿರಿ ಜಿಲ್ಲೆಯಲ್ಲಿ 5,297. ಕಾಡುವಾಸಿಗಳಾದ ಕಾಡುಕುರುಬರು ಕಾಡೇ ಇಲ್ಲದ ಯಾದಗಿರಿ ಜಿಲ್ಲೆಯಲ್ಲಿ ಹೇಗೆ ಇಷ್ಟೊಂದು ಸಂಖ್ಯೆಯಲ್ಲಿ ಬಂದರೆಂಬುದು ಸಮಸ್ಯೆಯ ಆಳವನ್ನು ಬಿಂಬಿಸುತ್ತದೆ. ಬೇಡಜಂಗಮ, ಬುಡ್ಗಜಂಗಮ- ತೆಲುಗು ಭಾಷಿಕ, ಮಾಂಸಾಹಾರಿ ಪರಿಶಿಷ್ಟ ಜಾತಿಗಳು. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಭಿಕ್ಷೆ ಬೇಡಿಕೊಂಡು, ಕೂಲಿ ಮಾಡಿಕೊಂಡು ಇರುವ ಸಮುದಾಯ. ಇವರ ಹೆಸರಿನಲ್ಲಿ ಮೀಸಲು ಪಟ್ಟಿಯೊಳಗೆ ನುಸುಳಿರುವ ಲಿಂಗಾಯತ ಜಂಗಮರು ಮೂಲದಲ್ಲಿ ಬ್ರಾಹ್ಮಣರಾಗಿದ್ದವರು. ಹಾಗೆಂದೇ ಲಿಂಗಾಯತರಲ್ಲಿ ಈಗಲೂ ಬಹುಪಾಲು ಧಾರ್ಮಿಕ ನೇತೃತ್ವ ಈ ಜಂಗಮರದ್ದೆ. ಎಲ್ಲ ಸಾಮಾಜಿಕ ಸ್ಥಾನಮಾನ ಅನುಭವಿಸುತ್ತಿರುವ ಇವರು ಮೀಸಲು ಪಟ್ಟಿಗೆ ವ್ಯವಸ್ಥಿತವಾಗಿ ನುಸುಳುತ್ತಿದ್ದಾರೆ.

ಲಿಂಗಾಯತ ಜಂಗಮ ಸ್ವಾಮೀಜಿಗಳ ನಿಯೋಗವು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಎಸ್.ಸಿ. ಪ್ರಮಾಣಪತ್ರಕ್ಕಾಗಿ ಹಕ್ಕೊತ್ತಾಯ ಮಂಡಿಸಿದೆ. ಲಿಂಗಾಯತ ಜಂಗಮರ ಎರಡು ಸಂಘಟನೆಗಳು ಎಸ್.ಸಿ. ಪ್ರಮಾಣಪತ್ರ ಕೊಡಿಸುವುದಕ್ಕೆ ಒತ್ತಾಸೆಯಾಗಿ ನಿಂತಿವೆ. ಮೈಸೂರಿನ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯು 2013ರ ಡಿ. 10ರಂದು, ಈ ಸಂಘಟನೆಗಳ ಶಿಫಾರಸು ಪತ್ರವಿದ್ದರೆ ಬೇಡಜಂಗಮ ಜಾತಿ ಪ್ರಮಾಣಪತ್ರ ಕೊಡಬೇಕೆಂದು ಆದೇಶಿಸಿದ್ದರು. ಸಿದ್ದರಾಮಯ್ಯ, ಶ್ರೀನಿವಾಸ ಪ್ರಸಾದ್, ಡಾ. ಮಹದೇವಪ್ಪ ಅಧಿಕಾರ ಸೂತ್ರ ಹಿಡಿದಿದ್ದರೂ ಮೈಸೂರು ಜಿಲ್ಲೆಯಲ್ಲಿ ಈ ಆದೇಶ ಐದು ವರ್ಷ ಚಾಲ್ತಿಯಲ್ಲಿತ್ತು. ಈ ಸಂದರ್ಭದಲ್ಲೇ ಕೆ.ಆರ್.ನಗರದ 62 ಮಂದಿ ಲಿಂಗಾಯತ ಜಂಗಮರು 'ಬೇಡಜಂಗಮ' ಪ್ರಮಾಣಪತ್ರ ಪಡೆದರು. ಈಗ ಈ ಪ್ರಕರಣವು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ ತನಿಖೆಗೆ ಒಳಪಟ್ಟಿದೆ. ಮೈಸೂರಿನ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯ ಆದೇಶ ರದ್ದಾದದ್ದು 2018ರಲ್ಲಿ ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯ-ಮಂತ್ರಿಯಾದ ನಂತರ. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಕಲಿ ಜಾತಿ ಪ್ರಮಾಣಪತ್ರಗಳ ಮೇಲೆ ನಿಗಾ ಇಡಬೇಕಾದ ನಿರ್ದೇಶನಾಲಯವನ್ನು ದುರ್ಬಲಗೊಳಿಸಲಾಗಿತ್ತು.

ಈ ನಡುವೆ ಧಾರವಾಡದ ಜಿಲ್ಲಾ ನ್ಯಾಯಾಲಯದಲ್ಲಿ 'ಲಿಂಗಾಯತ ಜಂಗಮರೂ ಬೇಡಜಂಗಮರೇ' ಎಂದು ತೀರ್ಪು ಬಂದದ್ದು ನುಸುಳುಕೋರರ ವೇಗ ಹೆಚ್ಚಿಸಿತ್ತು. ರಾಜಕೀಯ ಪ್ರಾತಿನಿಧ್ಯದಲ್ಲಿ, ಸರ್ಕಾರಿ ನೌಕರಿಯಲ್ಲಿ ನಕಲಿ ಪ್ರಮಾಣಪತ್ರ ಪತ್ತೆಯಾಗಿ ವಿಚಾರಣೆಯಾದರೂ ನಡೆಯುತ್ತದೆ. ಉನ್ನತ ಶಿಕ್ಷಣದಲ್ಲಿ ಅದರಲ್ಲೂ ಎಂಜಿನಿಯರಿಂಗ್, ವೈದ್ಯಕೀಯ ಸೀಟುಗಳ ಪೈಪೋಟಿಯಲ್ಲಿ ಶಕ್ತ ಸಮುದಾಯಗಳು ಎಸ್.ಸಿ., ಎಸ್.ಟಿ. ಮೀಸಲನ್ನು ಕಬಳಿಸುವುದು ಗಮನಕ್ಕೂ ಬಾರದೇ ಹೋಗುತ್ತಿದೆ. ಇಂತಹ ಹಾವಳಿ ತಡೆಯಲು ಕಾನೂನು ಬಿಗಿಯಾಗಿಯೇ ಇರಬೇಕು.

2019ರ ಅ. 1ರಂದು ಸುಪ್ರೀಂ ಕೋರ್ಟ್ ನೀಡಿರುವ ಒಂದು ತೀರ್ಪಿನಲ್ಲಿ 'ಜಾತಿ ಪ್ರಮಾಣಪತ್ರದ ಪರಿಶೀಲನೆಯು ವಿಶೇಷ ನಿಗಾದಲ್ಲಿ ನಡೆಯಬೇಕು. ಅದಕ್ಕೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೂರ್ತಿ ನೆರವು ಪಡೆಯಬೇಕು. ಅಪಾತ್ರರ ಅಕ್ರಮ ಪ್ರವೇಶದಿಂದ ಅರ್ಹರು ಮೀಸಲಾತಿಯಿಂದ ವಂಚಿತರಾಗಬಾರದು' ಎಂದು ಸ್ಪಷ್ಟವಾಗಿ ಹೇಳಿದೆ. ಇದನ್ನು ಆಧರಿಸಿಯೇ 2021ರಲ್ಲಿ ಸರ್ಕಾರವು ಜಾತಿ ಸಿಂಧುತ್ವ ಪ್ರಮಾಣಪತ್ರ ನೀಡುವಾಗ ನಿರ್ದೇಶನಾಲಯದ ವರದಿ ಆಧರಿಸಿಯೇ ಕ್ರಮ ಕೈಗೊಳ್ಳಲು ಆದೇಶಿಸಿತ್ತು. ಇದನ್ನು ಸಂತ್ರಸ್ತ 18 ಎಸ್.ಸಿ., ಎಸ್.ಟಿ. ಜಾತಿಗಳ ವಿಷಯದಲ್ಲಿ ಕಡ್ಡಾಯಗೊಳಿಸಲಾಗಿತ್ತು. ಈಗ ಅದೇ ಸರ್ಕಾರದ ಮುಖ್ಯಮಂತ್ರಿಯು ಸಿದ್ದರಾಮಯ್ಯ ಮತ್ತಿತರರ ಒತ್ತಡಕ್ಕೆ ಮಣಿದು ಅದೇಶವನ್ನು ಹಿಂಪಡೆದು ಇಡೀ ಪ್ರಕ್ರಿಯೆಯನ್ನು ದುರ್ಬಲಗೊಳಿಸಿದ್ದಾರೆ. ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಮೀಸಲಾತಿ ಕಬಳಿಸುವುದು, ಅದನ್ನು ಪರೋಕ್ಷವಾಗಿ ಪೋಷಿಸುವುದು ಸಂವಿಧಾನಕ್ಕೆ ಮಾಡುವ ದ್ರೋಹ. ಕರ್ನಾಟಕದ ಎಲ್ಲ ಪಕ್ಷಗಳ ಪ್ರಮುಖ ರಾಜಕಾರಣಿಗಳ ಒಳಬೆಂಬಲದಿಂದಾಗಿಯೇ ನಕಲಿ ಜಾತಿ ಪ್ರಮಾಣಪತ್ರದ ಹಾವಳಿ ವಿಪರೀತಕ್ಕೆ ಹೋಗಲು ಕಾರಣವಾಗಿದೆ. ಇದೇ ಸದನ ಕೆಲ ತಿಂಗಳ ಹಿಂದಷ್ಟೇ ಸಂವಿಧಾನದ ಮಹತ್ವದ ಬಗ್ಗೆ ಇಡೀ ವಾರ ಚರ್ಚಿಸಿತ್ತು!

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

ಚುರುಮುರಿ

ಕೆಜಿಎಫ್– 3

• ಲಿಂಗರಾಜು ಡಿ.ಎಸ್.

'**ಕಲ್ಲು** ಸಿಕ್ಕರೆ ಕೊಳ್ಳಿರೋ, ನೀವೆಲ್ಲರೂ' ಅಂತ ತುರೇಮಣೆ ಕಲ್ಲು ಗುಡ್ಡೆ ಹಾಕ್ತಾ ಕುಂತುದ್ದರು.

'ಅಯ್ಯೋ ಬೊಡ್ಡಿಹೈದ್ನೆ, ಈಗ ಹುಬ್ಳಿ ಕಡೆ ಕಲ್ಲಿಗೂ ಡಿಮ್ಯಾಂಡಂತೆ! ಕಂಡ್ರೆ ಪೋಲೀಸ್ನೋರು ಒಳಾಕ್ತರೆ' ಅಂತು ಯಂಟಪ್ಪಣ್ಣ.

'ಅದು ಬುಡಿ, ರಾಕಿ ಭಾಯ್ ಕೆಜಿಎಫ್- 2 ಬಾಕ್ಸ್ ಆಫೀಸ್ ಚಿಂದಿ ಮಾಡ್ಯದಂತೆ' ಅಂತಂದೆ.

'ಪ್ರೊಡ್ಯುಜರು ನಮ್ಮೂರೋನು ಕಣ್ಲಾ. ಮಂಡ್ಯ ಈಸ್ ಇಂಡಿಯಾ! ಕೆಜಿಎಫ್- 3 ಸಿನಿಮಾಕ್ಕೆ ಇಂತವೆಷ್ಟು ಚಾಪ್ಟರ್ ಕತೆ ಬೇಕೋ ಎಲ್ಲಾ ಇಲ್ಲೇ ಸಿಕ್ತವೆ ಬಯ್ಯ ಅಂತ ಹೇಳಬಕು' ಅಂದರು ತುರೇಮಣೆ.

'ಮಂಡೇದಲ್ಲಿ ಕತೆಗಳೇನು ನಿಮ್ಮನೆ ಕೊಟಾರದಲ್ಲವಾ ಸಾ?' ನಾನು ರೇಗಿಸಿದೆ.

'ಕಮಲದ್ದು- ಕೈದು 150, ಕುಮಾರಣ್ಣಂದು 123, ಮೂರೂ ಪಕ್ಸದ 423 ಕತೆ ಸುರುವಾಗ್ಯದೆ' ಅಂತು ಯಂಟಪ್ಪಣ್ಣ.

'ಅಣ್ಣೆ, ಕರ್ನಾಟಕ ಭ್ರಷ್ಟಾಚಾರದ ಹೆಡ್ಡಾಫೀಸ್ ಆಗ್ಯದೆ. ಲೈಂಗಿಕ ದೌರ್ಜನ್ಯ, ಅಕ್ರಮ ಗಣಿಗಾರಿಕೆ, ಆತ್ಮಹತ್ಯೆ, ರಸ್ತೆ ಕೊಲ್ಲಾಟ, ಧರ್ಮ ದಂಗಲ್, ಟೆಂಡರ್ ಬ್ಲಂಡರ್, ಕೊರೋನಾ ಕರಾಮತ್, ಫೈಲು ವಿಲೇವಾರಿ, ಆರೋಗ್ಯ ಕ್ಷೇತ್ರ, ರಾಜಕಾಲುವೆ ಒತ್ತುವರಿ, ಆಸ್ಪತ್ರೆ, ಫ್ಲೆಕ್ಸ್ ಪಿಡುಗು ಒಂದಾ ಎರಡಾ. ಎಲ್ಲಾ ಗ್ವಾಮಾಳೆಗಂಟಾ ಬಂದವೆ' ವಿವರಣೆ ಕೊಟ್ಟರು ತುರೇಮಣೆ.

'ಇಂತವು ಎಲ್ಲಾ ಪಕ್ಸದ ಸರ್ಕಾರ ಇದ್ದಾಗಲೂ ನಡೆದವೆ. ನಾಕು ಹಗರಣ ಆಚೆಗೆ ಬಂದ್ರೆ, ನೂರಾರು ಹಂಗೇ ಮುಚ್ಕೋಯ್ತವೆ' ಅಂತ ತಾಳ ಹಾಕಿದೆ.

'ಈಗ ಸರ್ಕಾರಿ ಕೆಲಸ ಅಂದ್ರೆ ದೇವರ ಕೆಲಸ ಕಪ್ಪಾ. ತಟ್ಟೆಕಾಸು ಹಾಕಿದ್ರೇ ಆಶೀರ್ವಾದ. ಕೆಜಿಎಫ್ ಡೈರೆಕ್ಟರಿಗೆ ಇಂತಾ ಕತೆಗಳು ಸಿಕ್ರೆ ಸಿನೆಮಾ ತಗೀದೆ ಬುಟ್ಟಾನಾ' ಅವರ ವಿಚಾರಧಾರೆ ಹರಿಸಿದರು.

'ಕರ್ನಾಟಕದ ಕಿತಾಪತಿ ಹ್ಯಂಗೆ ಕೆಜಿಎಫ್- 3 ಆದದು ಸಾ?' ಅಂತಂದೆ.

'ಇದೂ ಕೆಜಿಎಫ್ ಅಲ್ಲವೇನ್ಲಾ, 'ಕರ್ನಾಟಕ ಗೋಲ್‌ಮಾಲ್ ಫೈಲ್ಸ್- ದಿ ಪೀಕ್' ಅಂತ ನೂರು ಸಿನೆಮಾ ಮಾಡಬೌದು ಅಷ್ಟು ಕತೆ ಇಲ್ಲ್ಯವೆ!' ಅಂದರು ತುರೇಮಣೆ.

ಸಂಗತ

ಪ್ರತಿದಿನ ಆಗಲಿ ಭೂಮಿದಿನ

ಭೂಮಿಯ ಉಳಿವಿಗಾಗಿ ವಿವಿಧ ಕಾರ್ಯಕ್ರಮಗಳ ಬದಲು, ವೈಯಕ್ತಿಕ ಮಟ್ಟದಲ್ಲಿ ನಾವು ರೂಢಿಸಿಕೊಳ್ಳಬಹುದಾದ ಪುಟ್ಟ ಪುಟ್ಟ ಹಸಿರು ಕಾರ್ಯಗಳೇ ಬಹು ಮುಖ್ಯ

• ಉದಯ ಗಾಂವಕಾರ

ತೀರಾ ಭಾವನಾತ್ಮಕ ಸಂಗತಿಗಳನ್ನು ಎದುರಿಟ್ಟು ಯುವ ಸಮೂಹವನ್ನು ದಾರಿ ತಪ್ಪಿಸಿದ ಅನೇಕ ಉದಾಹರಣೆಗಳು ಇರಬಹುದು. ಆದರೆ, ಯುವಶಕ್ತಿಯನ್ನು ಶಾಂತಿಗಾಗಿ, ಸಹನೀಯ ಬದುಕಿಗಾಗಿ ಸಂಘಟಿಸಬಹುದೆಂದು ತೋರಿಸಿದವರೂ ಅನೇಕರಿದ್ದಾರೆ. ಗೇಲಾರ್ಡ್ ನೆಲ್ಸನ್ ಎಂಬ ಅಮೆರಿಕದ ಸೆನೆಟರ್ ಸುಸ್ಥಿರ ಭೂಮಿಗಾಗಿ ಯುವಕರನ್ನು ಒಂದುಗೂಡಿಸಿದರು. ಆಗ ಹುಟ್ಟಿದ್ದೇ ಭೂಮಿ ದಿನವನ್ನು ಆಚರಿಸುವ ಯೋಚನೆ.

1962ರಲ್ಲಿ ಪ್ರಕಟವಾದ ರಾಚೆಲ್ ಕಾರ್ಸನ್ ಅವರ 'ಸೈಲೆಂಟ್ ಸ್ಪ್ರಿಂಗ್' ಪುಸ್ತಕ, ಕೀಟನಾಶಕಗಳ ಬಳಕೆ ಹೇಗೆ ಭೂಮಿಯನ್ನು ಸದ್ದಿಲ್ಲದೆ ಬರಡಾಗಿಸುತ್ತಿದೆ ಎಂಬುದನ್ನು ಮನಮುಟ್ಟುವಂತೆ ವಿವರಿಸಿತು. ಕ್ಯಾಲಿಫೋರ್ನಿಯಾದ ಸಮೀಪ ಶಾಂತ ಸಾಗರದ ಮೇಲೆ ಹಡಗುಗಳು ಚೆಲ್ಲಿದ ಕಚ್ಚಾ ತೈಲದ ದಪ್ಪ ಪದರವೂ ದೊಡ್ಡ ಸುದ್ದಿಯಾಯಿತು. ಮನುಷ್ಯನ ಕ್ರಿಯೆಗಳಿಂದ ಭೂಮಿಗೆ ತಟ್ಟುತ್ತಿರುವ ಅಪಾಯವನ್ನು ಮನಗಂಡ ಗೇಲಾರ್ಡ್, ಭೂಮಿಗಾಗಿ ಪ್ರತಿಭಟನೆ ನಡೆಸಲು ಕಾಲೇಜು ವಿದ್ಯಾರ್ಥಿಗಳ ಬಳಿ ತೆರಳಿದರು. ಹತ್ತಾರು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. 'ನಮ್ಮ ಕಾಡುಗಳು ಮೈದಾನಗಳಾಗುತ್ತಿವೆ, ಪ್ರಾಣಿ-ಪಕ್ಷಿಗಳು ಆವಾಸ ಕಳೆದುಕೊಳ್ಳುತ್ತಿವೆ, ಕಾರ್ಖಾನೆಗಳು ಹೊಗೆಯುಗುಳುತ್ತಿವೆ, ನದಿ-ಸರೋವರಗಳು ಮಲಿನವಾಗುತ್ತಿವೆ, ಆರೋಗ್ಯಕರ ಮತ್ತು ಸುಸ್ಥಿರ ಭೂಮಿಗಾಗಿ ನಾವು ಒಂದಾಗಬೇಕು' ಎಂಬುದನ್ನು ಯುವಕರಿಗೆ ಮನವರಿಕೆ ಮಾಡಿದರು. ಅಷ್ಟೇ ಅಲ್ಲ, ಸರ್ಕಾರವು ತನ್ನ ನಿಲುವು ಪ್ರಕಟಿಸುವಂತೆ ಒತ್ತಾಯಿಸಬೇಕಿದೆ ಎಂಬುದನ್ನು ತಿಳಿಸಿದರು. ಡೆನಿಸ್ ಹೇಯ್ಸ್ ಎಂಬ ವಿದ್ಯಾರ್ಥಿನಾಯಕನ ಮುಂದಾಳತ್ವದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಬೀದಿಗಿಳಿದರು. ಪರಿಸರಕ್ಕಾಗಿ ನಡೆದ ದೊಡ್ಡ ಪ್ರತಿಭಟನೆ ಇದು.

ಹೀಗೆ, 1970ರ ಏ. 22ರಂದು ಮೊದಲ ಭೂಮಿ ದಿನ ಆಚರಿಸಲ್ಪಟ್ಟಿತು. ಅಮೆರಿಕ ಸರ್ಕಾರವು ಪರಿಸರ ನಿಯಂತ್ರಣ ಕಾಯ್ದೆ ರೂಪಿಸಲು ಕಾರಣವಾಯಿತು. 'ಭೂಮಿಯಲ್ಲಿ ವಿನಿಯೋಗಿಸೋಣ' ಎಂಬುದು ಈ ವರ್ಷದ ಭೂದಿನದ ಘೋಷವಾಕ್ಯ. ಭೂದಿನದಂದು ನಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿಲ್ಲ. ಪ್ರತಿಭಟನೆ ನಡೆಸಬೇಕಂತಿಲ್ಲ. ಅರ್ಧ ಶತಮಾನದ ಹೋರಾಟದ ಬಳಿಕ ಸುಸ್ಥಿರ ಭೂಮಿಗಾಗಿ ನೂರಾರು ನಿಯಮಗಳು, ಕಾನೂನುಗಳು, ದಂಡಸಂಹಿತೆಗಳೆಲ್ಲ ರೂಪುಗೊಂಡಿರುವಾಗ ಪ್ರತಿಭಟಿಸುವುದಾದರೂ ಯಾರ ವಿರುದ್ಧ?

ನಾವು ಈ ದಿನವನ್ನು ಈವೆಂಟ್ ಆಗಿಸಲು ಹೊರಟರೆ ಇನ್ನಷ್ಟು ಅಪಾಯವೇ ಉಂಟಾಗಬಹುದು. ಎಷ್ಟೋ ಶಾಲೆಗಳಲ್ಲಿ ವನಮಹೋತ್ಸವಕ್ಕಾಗಿ ಪ್ರತಿವರ್ಷವೂ ಅದೇ ಹೊಂಡದಲ್ಲೇ ಗಿಡ ನೆಡುತ್ತಾರೆ. ಸಂಘ ಸಂಸ್ಥೆಗಳು ಹಸಿರುಪ್ರೇಮ ಮೆರೆಯಲು ವೇದಿಕೆಯ ಮೇಲೆ ಇಡುವ ಗಿಡಗಳನ್ನು ಕಾರ್ಯಕ್ರಮದ ನಂತರ ಹೊರ ಬಿಸಾಡಲಾಗುತ್ತದೆ. ಹಾಗೆ ನೋಡಿದರೆ, ವೈಯಕ್ತಿಕ ಮಟ್ಟದಲ್ಲಿ ನಾವು ರೂಢಿಸಿಕೊಳ್ಳಬಹುದಾದ ಪುಟ್ಟ ಪುಟ್ಟ ಹಸಿರು ಕಾರ್ಯಗಳೇ ಬಹು ಮುಖ್ಯ. ಬಟ್ಟೆ ಕೈಚೀಲ ಬಳಸುವ ರೂಢಿ ಎಷ್ಟೊಂದು ಪ್ಲಾಸ್ಟಿಕ್ ಚೀಲಗಳನ್ನು ತಡೆಯಬಲ್ಲದು?

ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡಿನ ಪ್ರಮಾಣ ಹೆಚ್ಚುತ್ತಿರುವುದರಿಂದ ಭೂಮಿಯ ಸರಾಸರಿ ತಾಪಮಾನವು ಏರುತ್ತಿದೆ. ಭೂಮಿಯ ಅತ್ಯಂತ ಬಿಸಿಯ ಏಳು ವರ್ಷಗಳಲ್ಲಿ 2021 ಕೂಡಾ ಒಂದು. ಬೇಸಿಗೆಯಲ್ಲೂ ಹಿಮನದಿಗಳ ಪ್ರವಾಹ ಉಂಟಾಗುತ್ತಿದೆ. ಸಮುದ್ರದ ಮಟ್ಟ ಏರುತ್ತಿದೆ. ಅತಿವೃಷ್ಟಿಯ ನಂತರ ಮುಂದೆ ಅನಾವೃಷ್ಟಿಯೂ ಕಾದಿದೆ ಎಂದು ಪರಿಸರ ತಜ್ಞರು ಎಚ್ಚರಿಸುತ್ತಿದ್ದಾರೆ.

ಒಂದು ಲೀಟರ್ ಪೆಟ್ರೋಲ್ ಸುಟ್ಟಾಗ ಎರಡೂವರೆ ಕೆ.ಜಿ. ಕಾರ್ಬನ್ ಡೈಆಕ್ಸೈಡ್ ವಾತಾವರಣವನ್ನು ಸೇರುತ್ತದೆ. ನಿಮ್ಮದು ಇಪ್ಪತ್ತು ಕಿ.ಮೀ. ಮೈಲೇಜಿನ ಡೀಸೆಲ್ ಕಾರಾಗಿದ್ದರೆ ಅದು ನೂರು ಕಿ.ಮೀ. ಪ್ರಯಾಣದಲ್ಲಿ ಹದಿಮೂರು ಕೆ.ಜಿ. ಕಾರ್ಬನ್ ಡೈಆಕೈಡನ್ನು ಉಗುಳುತ್ತದೆ. ಇದು ನಮ್ಮ ಕಾರ್ಬನ್ ಹೆಜ್ಜೆಗುರುತು. ಪ್ರಯಾಣದ ನಡುವೆ ನಾವು ಬಾಳೆಹಣ್ಣು ತಿಂದೆವೋ ಸೇಬು ತಿಂದೆವೋ ಎನ್ನುವುದರ ಮೇಲೆ ಕಾರ್ಬನ್ ಹೆಜ್ಜೆಗುರುತು ಹೆಚ್ಚು ಕಡಿಮೆ ಆಗಬಹುದು. ಸೇಬಾದರೆ ಅದನ್ನು ಸಾವಿರಾರು ಕಿ.ಮೀ. ದೂರದಿಂದ ತಂದಿರುತ್ತಾರೆ, ಎಷ್ಟೋ ದಿನಗಳವರೆಗೆ ಸ್ಟೋರೇಜಿನಲ್ಲಿ ಇಟ್ಟಿರುತ್ತಾರೆ. ಇವೆಲ್ಲವೂ ಇನ್ನಷ್ಟು ಕಾರ್ಬನ್ ಡೈಆಕ್ಸೈಡ್ ಉಗುಳುವಿಕೆಗೆ ಕಾರಣವಾಗಿರುತ್ತವೆ.

ಮನೆಗೆ ಸಮೀಪವಿರುವ ಕಚೇರಿಗೆ ಕಾರ್ಬನ್ ಹೆಜ್ಜೆಗುರುತು ಮೂಡದಂತೆ ನಡೆದೇ ಹೋಗಬಹುದು. ನೂರು ಗ್ರಾಂ ಕಾರ್ಬನ್ ಡೈಆಕ್ಸೈಡ್ ಹೊರಸೂಸಿ ಬೈಕ್‌ನಲ್ಲೂ ಹೋಗಬಹುದು. ಬೈಕಿನಲ್ಲಿ ಇನ್ನೊಬ್ಬರನ್ನು ಕರೆದುಕೊಂಡು ಹೋದರೆ ನಮ್ಮ ಕಾರ್ಬನ್ ಹೆಜ್ಜೆಗುರುತು ಅರ್ಧದಷ್ಟು ಕಡಿಮೆಯಾಗುತ್ತದೆ. ಎಲ್ಲವೂ ನಮ್ಮ ಆಯ್ಕೆಯನ್ನು ಅವಲಂಬಿಸಿವೆ.

ಐದು ಪ್ಲಾಸ್ಟಿಕ್ ಚೀಲಗಳನ್ನು ತಯಾರಿಸುವಾಗ ಒಂದು ಕೆ.ಜಿ. ಕಾರ್ಬನ್ ಡೈಆಕ್ಸೈಡ್ ವಾತಾವರಣ ಸೇರುತ್ತದೆ. ಎರಡು ನೀರಿನ ಬಾಟಲು ತಯಾರಿಸುವಾಗಲೂ ಇಷ್ಟೇ ಕಾರ್ಬನ್ ಡೈಆಕ್ಸೈಡ್ ವಾತಾವರಣ ಸೇರುತ್ತದೆ. ಮಾಲ್‌ಗಳಿಗೆ ಹೋಗುವ ಬದಲು ಮನೆಯಾಚೆಯ ಪುಟ್ಟ ದುಕಾನಿನಿಂದ ದಿನಸಿಯನ್ನು ತಂದರೆ ಅನಗತ್ಯದ ಅನೇಕ ವಸ್ತುಗಳು ಮನೆ ಸೇರುವುದು ತಪ್ಪುತ್ತದೆ. ಖರ್ಚೂ ಕಡಿಮೆಯಾಗುತ್ತದೆ. ಲಾಕ್‌ಡೌನ್ ಕಾಲದಲ್ಲಿ ಜೀವ ಉಳಿಸಿದ ಆ ಅಂಗಡಿಯಾತನ ಹೊಟ್ಟೆಯೂ ತಣ್ಣಗಾಗುತ್ತದೆ. ಊಟದ ಎಲೆಯ ಮೇಲೆ ಬಿಟ್ಟ ಅನ್ನ ತೊಟ್ಟಿ ಸೇರಿ ಕೊಳೆತು ಮಿಥೇನ್ ಅನಿಲವನ್ನು ಉತ್ಪಾದಿಸುತ್ತದೆ. ನಾವು ಅಗತ್ಯಕ್ಕಿಂತ ತುಸು ಕಡಿಮೆ ಬಡಿಸಿಕೊಂಡರೂ ಈ ಭೂಮಿ ಅಷ್ಟರಮಟ್ಟಿಗೆ ತಣ್ಣಗಾಗುತ್ತದೆ. ಪ್ರತಿದಿನವೂ ಭೂದಿನವಾಗುತ್ತದೆ.

ವಾಚಕರ ವಾಣಿ

ಅಭಿವೃದ್ಧಿ ಕಾಮಗಾರಿ: ಕಾಡುತ್ತಿವೆ ಪ್ರಶ್ನೆಗಳು

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ತಾಲ್ಲೂಕಿನ ಹಿಂಡಲಗಾ ಗ್ರಾಮದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸಗಳು ನಡೆದಿರುವುದು ನಿಜವಾದರೂ ಅವುಗಳನ್ನು ಮಾಡಿಸಿದ್ದು ಯಾರೆಂಬುದು ತಿಳಿದಿಲ್ಲ ಎಂದು ಕೆಲವು ಗ್ರಾಮಸ್ಥರು ಹೇಳಿರುವುದು (ಪ್ರ.ವಾ., ಏ. 18) ವಿಚಿತ್ರವಾದರೂ ಗಮನಾರ್ಹ ಸುದ್ದಿ. ಸಾರ್ವಜನಿಕ ರಸ್ತೆ ಕಾಮಗಾರಿಗಳನ್ನು ಯಾರಾದರೂ ಮಾಡಬಹುದು, ಯಾರಾದರೂ ಕಾಮಗಾರಿ ಆದೇಶ ಕೊಡಬಹುದು, ಹೇಗಾದರೂ ಮಾಡಬಹುದು ಎನ್ನುವಂತಾಗಿದೆ.

ಎಂಜಿನಿಯರುಗಳ ಪರವಾನಗಿ ಇಲ್ಲದೆ ರಸ್ತೆ ಕಾಮಗಾರಿ ಕೈಗೊಳ್ಳಬಹುದೇ? ಒಬ್ಬ ವ್ಯಕ್ತಿ ಕಾಮಗಾರಿ ಮಾಡಿ ಒಂದು ರೂಪಾಯಿಯನ್ನೂ ತೆಗೆದುಕೊಳ್ಳದೆ ನಾಲ್ಕು ಕೋಟಿ ಮೊತ್ತದಷ್ಟು ಕೆಲಸ ನಿರ್ವಹಿಸಬಹುದೇ? ಅಷ್ಟೊಂದು ಮೊತ್ತದ ಕೆಲಸ ಮಾಡಲು ಅಗತ್ಯವಾದ ಎಂಜಿನಿಯರುಗಳು ಮತ್ತು ವಾಹನಗಳನ್ನು ಆ ಗುತ್ತಿಗೆದಾರ ಹೊಂದಿದ್ದಾನೆಯೇ? ಆತನ ಹತ್ತಿರ ಅದಕ್ಕೆ ಸರಿಹೊಂದುವ ಮೂಲಬಂಡವಾಳವಾದರೂ ಇರಬೇಕಲ್ಲವೇ? ಎಂತಹ ತುರ್ತು ಕಾಮಗಾರಿಯಿದ್ದರೂ ಸದರಿ ಕೆಲಸ ಪೂರ್ಣವಾದ ತಕ್ಷಣ ಅಂದಾಜು ಪಟ್ಟಿ, ಕೆಲಸದ ಆದೇಶಗಳನ್ನು ಹೊಂದಿರಬೇಕಲ್ಲವೇ? ಇಷ್ಟೆಲ್ಲ ಪ್ರಶ್ನೆಗಳು ಜನಸಾಮಾನ್ಯರನ್ನು ಕಾಡುತ್ತಿವೆ.

ಕೊಂಪಿ ಗುರುಬಸಪ್ಪ, ಬೆಂಗಳೂರು

ಕಮಿಷನ್ ದಂಧೆ: ಕಠಿಣ ಶಿಕ್ಷೆಯಾಗಲಿ

ಬಿಲ್ ಪಾವತಿಗೆ ಶೇ 40ರಷ್ಟು ಕಮಿಷನ್ ಕೊಡಬೇಕಾಗಿದೆ ಎಂಬ ಗುತ್ತಿಗೆದಾರರ ದೂರಿನ ವಿಚಾರದಲ್ಲಿ ಸರ್ಕಾರ ಯಾವ ಕ್ರಮವನ್ನೂ ಜರುಗಿಸಲಿಲ್ಲ. ಈಗ ಮಠಗಳಿಗೆ ಸರ್ಕಾರದ ಅನುದಾನ ಪಡೆಯಲು ಸಹ ಶೇ 30ರಷ್ಟು ಕಮಿಷನ್ ನೀಡಬೇಕಾಗಿದೆ ಎಂದು ಶಿರಹಟ್ಟಿ ಜಗದ್ಗುರು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದ್ದಾರೆ (ಪ್ರ.ವಾ., ಏ. 18). ಸರ್ಕಾರ ಇನ್ನಾದರೂ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳದೆ, ಕಮಿಷನ್ ದಂಧೆಯಲ್ಲಿ ತೊಡಗಿರುವವರನ್ನು ಪತ್ತೆ ಮಾಡಿ ನಿರ್ದಾಕ್ಷಿಣ್ಯವಾಗಿ ಕಠಿಣ ಶಿಕ್ಷೆ ಕೊಡುವಂತಾಗಬೇಕು.

ಇಂದಿರಾ ಶ್ರೀಧರ್, ಮಳಲಕೆರೆ

ಹುಬ್ಬಳ್ಳಿ ದಾಂದಲೆ: ಅವಿವೇಕದ ನಡೆ

ಯಾರೋ ಅವಿವೇಕಿ ಒಂದು ಚಿತ್ರವನ್ನು ಕೊಲಾಜ್ ಮಾಡಿ ಹಾಕಿದ ಎನ್ನುವ ಕಾರಣಕ್ಕೆ ಹುಬ್ಬಳ್ಳಿಯಲ್ಲಿ ಕೆಲವು ಮುಸ್ಲಿಂ ಯುವಕರು ದಾಂದಲೆ ಮಾಡಿದ್ದು ವಿವೇಕದ ನಡೆ ಅನಿಸುವುದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಇಂಥದ್ದು ಆಗಾಗ ನಡೆಯುತ್ತಿರುತ್ತದೆ. ಅದರ ಬಗ್ಗೆ ಕಾನೂನು ಕ್ರಮ ಜರುಗಿಸುವಂತೆ ದೂರು ಕೊಡಬಹುದು. ಅದನ್ನು ಬಿಟ್ಟು ದಾಂದಲೆ ಮಾಡಿದರೆ ಅದು ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಜನರ ವಿರೋಧವನ್ನೂ ಕಟ್ಟಿಕೊಂಡಂತಾಗುತ್ತದೆ ಮತ್ತು ಸಮಾಜಘಾತುಕ ಶಕ್ತಿಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇಂಥ ಘಟನೆಗಳು ನಡೆದಾಗ ಅತ್ಯಂತ ಸಂಯಮದಿಂದ ವರ್ತಿಸುವುದು ಎಲ್ಲ ಧಾರ್ಮಿಕರ ಕರ್ತವ್ಯವಾಗಬೇಕಾಗುತ್ತದೆ.

ಈ.ಬಸವರಾಜು, ಬೆಂಗಳೂರು

ಜಿಎಸ್‌ಟಿ ದರ ಏರಿಸುವ ಕಾಲ ಇದಲ್ಲ!

ಅಪ್ರತ್ಯಕ್ಷ ತೆರಿಗೆಯಾದ ಜಿಎಸ್‌ಟಿಯು ಆರ್ಥಿಕತೆಯಲ್ಲಿ ಈಗಾಗಲೇ ಉಲ್ಬಣಾವಸ್ಥೆಯಲ್ಲಿರುವ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಒಕ್ಕೂಟ ಸರ್ಕಾರವು ಇದರ ಮೇಲೆ ಹೆಚ್ಚು ಅವಲಂಬಿಸುತ್ತಿದೆ. ಉದಾ: 2021-22ನೇ ಸಾಲಿನಲ್ಲಿ ನೇರ ತೆರಿಗೆಗಳಾದ ಕಾರ್ಪೊರೇಟ್ ತೆರಿಗೆ ಮತ್ತು ವರಮಾನ ತೆರಿಗೆಗಳಿಂದ ಬಂದ ಹಣ ₹ 12.50 ಲಕ್ಷ ಕೋಟಿಯಾದರೆ ಅಪ್ರತ್ಯಕ್ಷ ತೆರಿಗೆಗಳಾದ ಜಿಎಸ್‌ಟಿ, ಯೂನಿಯನ್ ಎಕ್ಸೈಜ್ ಮತ್ತು ಕಸ್ಟಮ್ಸ್ ಸುಂಕಗಳಿಂದ ಬಂದ ಹಣ ₹ 12.58 ಲಕ್ಷ ಕೋಟಿ. ಇದೀಗ ಜಿಎಸ್‌ಟಿ ಶೇ 5ರ ಸ್ತರವನ್ನು ತೊಡೆದುಹಾಕಿ ಆ ಸ್ತರಗಳಲ್ಲಿನ ಸರಕುಗಳನ್ನೆಲ್ಲಾ ಶೇ 7, ಶೇ 8 ಅಥವಾ ಶೇ 9ರ ಸ್ತರಕ್ಕೆ ಸೇರಿಸುವ ಬಗ್ಗೆ ಜಿಎಸ್‌ಟಿ ಮಂಡಳಿ ಯೋಚಿಸುತ್ತಿರುವಂತೆ ಕಾಣುತ್ತಿದೆ (ಪ್ರ.ವಾ., ಏ. 18).

ಈಗಾಗಲೇ ಜನರು ಶೇ 6 ಅನ್ನೂ ಮೀರುತ್ತಿರುವ ಹಣದುಬ್ಬರದ ಯಮಾಘಾತವನ್ನು ಅನುಭವಿಸುತ್ತಿದ್ದಾರೆ. ಪ್ರತ್ಯಕ್ಷ ತೆರಿಗೆಗಳನ್ನು ಕಡಿಮೆ ಮಾಡುತ್ತಾ ಜಿಎಸ್‌ಟಿಯನ್ನು ಏರಿಸುವ ಬಗ್ಗೆ ಯೋಚಿಸುವುದು ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ಕ್ರಮದಿಂದ ಶತಕೋಟ್ಯಧೀಶರುಗಳಾದ ಅಂಬಾನಿ, ಅದಾನಿ ಮತ್ತು ಕೂಲಿಕಾರರನ್ನು ಒಂದೇ ತಕ್ಕಡಿಯಲ್ಲಿ ತೂಗಿದಂತಾಗುತ್ತದೆ. ಇದು ಆರ್ಥಿಕ ದೌರ್ಜನ್ಯ ಎನಿಸಿಕೊಳ್ಳುತ್ತದೆ. ಹಣಕಾಸು ಸಚಿವರು ನೇರ ತೆರಿಗೆಗಳನ್ನು ಹೆಚ್ಚಿಸುವುದರ ಬಗ್ಗೆ, ದುಡಿಮೆಗಾರರ ಹೊಟ್ಟೆಯ ಮೇಲೆ ಹೊಡೆಯುವ ಜಿಎಸ್‌ಟಿಯನ್ನು ಕಡಿಮೆ ಮಾಡುವ ಬಗ್ಗೆ ಯೋಚಿಸಬೇಕು. ಅದನ್ನು ಏರಿಸುವ ಕಾಲ ಇದಲ್ಲ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಒಂದು ರಾಷ್ಟ್ರ, ಒಂದು ಭಾಷೆ– ಅಪಾಯಕಾರಿ ನಡೆ

ಹಿಂದಿಯನ್ನು ಇಂಗ್ಲಿಷ್‌ಗೆ ಪರ್ಯಾಯ ಭಾಷೆಯಾಗಿ ಸ್ವೀಕರಿಸಬೇಕು ಎಂಬ ಗೃಹ ಸಚಿವ ಅಮಿತ್ ಶಾ ಅವರ ಮಾತಿಗೆ ವ್ಯಾಪಕ ವಿರೋಧ ವ್ಯಕ್ತವಾದ ಬೆನ್ನಲ್ಲೇ, ಬಿಜೆಪಿ ನಾಯಕರು 'ಒಂದು ರಾಷ್ಟ್ರ, ಒಂದು ಭಾಷೆ' ಎಂಬ ನಿಲುವಿಗೆ ಬರಲು ಇದು ಸರಿಯಾದ ಸಮಯ ಎಂದು ಹೇಳಿದ್ದಾರೆ. ಇದು ದೇಶದ ಹಿತದೃಷ್ಟಿಯಿಂದ ಆತಂಕದ ಬೆಳವಣಿಗೆಯಾಗಿದೆ.

ಭಾರತವು ಬಹು ಭಾಷೆಗಳನ್ನುಳ್ಳ ರಾಜ್ಯಗಳ ಒಕ್ಕೂಟವಾಗಿದೆ ಮತ್ತು ಪ್ರತಿಯೊಂದು ಭಾಷೆಗೂ ತನ್ನದೇ ಆದ ಸುದೀರ್ಘ ಇತಿಹಾಸ, ವಿಶಿಷ್ಟ ಸಂಸ್ಕೃತಿಯಿದೆ. ಬಾರತದ ನಿಜವಾದ ಶಕ್ತಿ ಭಾಷೆಯೇ. ಹಿಂದಿ ಸಾಮ್ರಾಜ್ಯಶಾಹಿ ಧೋರಣೆ ವಿರುದ್ಧ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. 'ಒಂದು ದೇಶ ಒಂದು ಚುನಾವಣೆ' ಎಂಬಂತೆ ಹಿಂದಿ ಹೇರಿದರೆ ದೇಶ ಚಿಂದಿಯಾಗುವುದು ಖಚಿತ. 'ಎಲ್ಲಾ ನಿರಂಕುಶ ಪ್ರಭುತ್ವಗಳು- ಕಮ್ಯುನಿಸ್ಟ್, ಮಿಲಿಟರಿಸ್ಟ್, ಬಲಪಂಥೀಯ ಸರ್ಕಾರಗಳು ಬಹುತ್ವದ ಬಗ್ಗೆ ಆತಂಕವನ್ನು ಹಂಚಿಕೊಳ್ಳುತ್ತವೆ' ಎಂಬ ಮಾತು ನೆನಪಾಗುತ್ತಿದೆ. ಪ್ರಪಂಚದ ಇತಿಹಾಸದಲ್ಲಿ 'ಒಂದು ರಾಷ್ಟ್ರ, ಒಂದು ಭಾಷೆ' ಎಂಬುದನ್ನು ಹೇರಿದ ರಾಷ್ಟ್ರಗಳು ಒಡೆದು ಛಿದ್ರವಾಗಿವೆ. ಅದಕ್ಕೊಂದು ನಿದರ್ಶನ ಸೋವಿಯತ್ ರಷ್ಯಾ. ಇದನ್ನು ನಮ್ಮ ನಾಯಕರು ಗಮನಿಸಬೇಕು. 'ವಿವಿಧತೆಯಲ್ಲಿ ಏಕತೆ' ಎಂಬುದನ್ನು ಅನುಸರಿಸುವಲ್ಲಿ ವಿವೇಕವಿದೆ. ಬೆಂಕಿ ಬಿದ್ದ ಮೇಲೆ ಬಾವಿ ತೋಡುವುದಕ್ಕಿಂತ ಬೆಂಕಿ ಬೀಳದಂತೆ ನೋಡಿಕೊಳ್ಳಬೇಕಾದದ್ದು ದೇಶದ ಅಖಂಡತೆಯ ದೃಷ್ಟಿಯಿಂದ ನಿಜವಾದ ಅಗತ್ಯವಾಗಿದೆ.

ರಾ.ನಂ. ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಣದುಬ್ಬರ ಹೊಣೆಗಾರಿಕೆ ನುಣುಚಿಕೊಂಡ ಆರ್‌ಬಿಐ

• ಸೋಮೇಶ್ ಝಾ

ಶಕ್ತಿಕಾಂತ್ ದಾಸ್ ನೇತೃತ್ವದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಣದುಬ್ಬರವನ್ನು ನಿಗದಿತ ಪ್ರಮಾಣದೊಳಗೆ ಇರಿಸಿಕೊಳ್ಳಲು 2020ರಲ್ಲಿ ವಿಫಲವಾದಾಗ ಕೇಂದ್ರ ಸರ್ಕಾರವು ಕಾಯ್ದೆಯನ್ನು ಅನ್ವಯ ಮಾಡಲಿಲ್ಲ- 'ರಿಪೋರ್ಟರ್ಸ್ ಕಲೆಕ್ಟಿವ್' ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ದಾಖಲೆಗಳಿಂದ ಈ ಮಾಹಿತಿ ಬಹಿರಂಗವಾಗಿದೆ.

2020ರ ಜನವರಿಯಿಂದ ಸೆಪ್ಟೆಂಬರ್‌ವರೆಗಿನ ಸತತ ಮೂರು ತ್ರೈಮಾಸಿಕಗಳಲ್ಲಿ ಹಣದುಬ್ಬರವು ಕಾಯ್ದೆ ಪ್ರಕಾರ ನಿಗದಿ ಪಡಿಸಲಾದ ಶೇ 6ರ ಗರಿಷ್ಠ ಮಟ್ಟವನ್ನು ದಾಟಿ ಹೋಗಿತ್ತು. ಹಣದುಬ್ಬರದ ನಿಗದಿತ ಮಟ್ಟವನ್ನು ಕಾಯ್ದುಕೊಳ್ಳಲು ಆರ್‌ಬಿಐ ವಿಫಲವಾದಾಗ, ಒಂದು ತಿಂಗಳೊಳಗೆ ಸರ್ಕಾರಕ್ಕೆ ಲಿಖಿತ ವಿವರಣೆ ಕೊಡಬೇಕು. ದರವನ್ನು ಮತ್ತೆ ಹಳಿಗೆ ತರಲು ಅಗತ್ಯವಾದ ಯೋಜನೆಯನ್ನು ಸಲ್ಲಿಸಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿದೆ. ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವ ಆರ್‌ಬಿಐ ಮತ್ತು ಸರ್ಕಾರದ ಸಾಮರ್ಥ್ಯದ ಬಗ್ಗೆ ಉದ್ಯಮ ಮತ್ತು ಜನರಲ್ಲಿ ಇರುವ ನಂಬಿಕೆ ನಷ್ಟವಾಗದಿರಲು ಇಂತಹ ಪಾರದರ್ಶಕತೆ ಅಗತ್ಯ.

ಆದರೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಒಪ್ಪಿಗೆಯ ಪ್ರಕಾರ, ಹಣಕಾಸು ಸಚಿವಾಲಯವು ಆರ್‌ಬಿಐ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂಬುದು ದಾಖಲೆಗಳಿಂದ ವ್ಯಕ್ತವಾಗುತ್ತದೆ.

ಆ ಅವಧಿಯ ಹಣದುಬ್ಬರದ ಅಧಿಕೃತ ಅಂಕಿ ಅಂಶಗಳನ್ನು ಅಂದಾಜಿಸುವಾಗ ಕೋವಿಡ್ ತಡೆಗಾಗಿ ಹೇರಿದ ಲಾಕ್‌ಡೌನ್‌ನ ತೊಡಕುಗಳು ಇದ್ದವು. ಹಾಗಾಗಿ, ಬಡ್ಡಿದರ ನಿಗದಿಗೆ ಈ ಅಂಕಿ ಅಂಶಗಳನ್ನು ಅವಲಂಬಿಸಲಾಗದು ಎಂದು ಸಚಿವಾಲಯವು ಆರ್‌ಬಿಐಗೆ ತಿಳಿಸಿತ್ತು. ಆದರೆ, ಸರ್ಕಾರದ ಎಲ್ಲ ಹಂತಗಳು ಮತ್ತು ಸರ್ಕಾರದ ಸಾಂಖ್ಯಿಕ ಸಂಸ್ಥೆಗಳು ಈ ಸಂಖ್ಯೆಗಳನ್ನು ಅನುಮೋದಿಸಿದ್ದವು. ಹಾಗೆಯೇ, ಆರ್ಥಿಕ ವಿಶ್ಲೇಷಣೆಯ ಎಲ್ಲ ಉದ್ದೇಶಗಳಿಗೂ ಈ ಅಂಕಿ ಅಂಶಗಳನ್ನು ಬಳಸಿಕೊಳ್ಳಲಾಗಿತ್ತು ಎಂಬುದನ್ನು ದಾಖಲೆಗಳು ಹೇಳುತ್ತವೆ.

ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕಾಗಿ ಬಡ್ಡಿದರ ಕಡಿತ ಆಗಬೇಕು ಎಂದು ಸರ್ಕಾರವು ಬಯಸಿದ್ದ ಸಂದರ್ಭದಲ್ಲಿ ಬಡ್ಡಿದರ ಏರಿಸಿ ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ಮುಂದಾಗಿತ್ತು. ಇದು ಹಣಕಾಸು ಸಚಿವಾಲಯಕ್ಕೆ ತಲೆನೋವಾಗಿ ಪರಿಣಮಿಸಿತ್ತು ಎಂದು ಆಂತರಿಕ ದಾಖಲೆಗಳು ಹೇಳುತ್ತವೆ. ಇದರ ಕುರಿತು ಕೇಳಲಾದ ವಿವರವಾದ ಹಲವು ಪ್ರಶ್ನೆಗಳಿಗೆ ಹಣಕಾಸು ಸಚಿವಾಲಯ ಮತ್ತು ಆರ್‌ಬಿಐ ಉತ್ತರಿಸಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು ಕೊರೊನಾ ಸೋಂಕು ಹರಡುವಿಕೆ ತಡೆಗೆ ಜಗತ್ತಿನಲ್ಲಿಯೇ ಅತ್ಯಂತ ಕಠಿಣವಾದ ಲಾಕ್‌ಡೌನ್ ಅನ್ನು 2020ರಲ್ಲಿ ಹೇರಿದ್ದರು. ಇದರಿಂದಾಗಿ ಪೂರೈಕೆಯಲ್ಲಿ ಆದ ಭಾರಿ ವ್ಯತ್ಯಯವು ಹಣದುಬ್ಬರ ನೆಗೆತಕ್ಕೆ ಕಾರಣವಾಯಿತು. ಈ ನಡುವೆ, ಹಣದುಬ್ಬರ ನಿಯಂತ್ರಣದ ಹೊಣೆಗಾರಿಕೆಯನ್ನು ಈಡೇರಿಸುವಲ್ಲಿ ಕೇಂದ್ರೀಯ ಬ್ಯಾಂಕ್ ವಿಫಲವಾಯಿತು. ಆರ್‌ಬಿಐ ಗವರ್ನರ್ ನೇತೃತ್ವದಲ್ಲಿ ಸ್ವತಂತ್ರ ಹಣಕಾಸು ನೀತಿ ಸಮಿತಿಯನ್ನು (ಎಂಪಿಸಿ) 2016ರಲ್ಲಿ ಸ್ಥಾಪಿಸಿದ ಬಳಿಕ, ಹಣದುಬ್ಬರವನ್ನು ಮಿತಿಯೊಳಗೆ ಇರಿಸಿಕೊಳ್ಳುವಲ್ಲಿ ಆರ್‌ಬಿಐ ಮೊದಲ ಬಾರಿಗೆ ವಿಫಲವಾಯಿತು. ಆರ್‌ಬಿಐ, ಬ್ಯಾಂಕುಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿದರವನ್ನು ಹೆಚ್ಚು ಕಡಿಮೆ ಮಾಡುವ ಮೂಲಕ ಹಣದುಬ್ಬರವನ್ನು ನಿಗದಿತ ಪ್ರಮಾಣದಲ್ಲಿಯೇ ಉಳಿಸಿಕೊಳ್ಳುವುದು ಎಂಪಿಸಿಯ ಹೊಣೆಗಾರಿಕೆ.

ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿ
ಭಾಗ–2

ಏರಿದ ಹಣದುಬ್ಬರ: ಸಾಲದ ಬಡ್ಡಿದರ ಹಲವು ಬಾರಿ ಹೆಚ್ಚಳ	
2019 ಫೆ.-ಅ.	ಶಕ್ತಿಕಾಂತ ದಾಸ್ ಅವರು ನಾಲ್ಕು ಬಾರಿ ರೆಪೊ ದರ ಕಡಿತ ಮಾಡಿದರು. ಇವುಗಳಿಂದ ಒಟ್ಟು ಶೇ 1.35ರಷ್ಟು ರೆಪೊ ದರ ಇಳಿಕೆ
2020 ಮಾರ್ಚ್	ಭಾರತದಲ್ಲಿ ಲಾಕ್‌ಡೌನ್ ಘೋಷಣೆ (ಶೇ 0.75ರಷ್ಟು ರೆಪೊ ದರ ಕಡಿತ)
2020 ಏ.	ಮತ್ತೊಂದು ರೆಪೊ ದರ ಕಡಿತ ನಿರ್ಧಾರ ಪ್ರಕಟಿಸಿದ ಎಂಪಿಸಿ (ಬಡ್ಡಿದರ ಸಾರ್ವಕಾಲಿಕ ಶೇ 4ಕ್ಕೆ ಇಳಿಕೆ)
2020 ಜುಲೈ	ಏಪ್ರಿಲ್ ಮತ್ತು ಮೇ ತಿಂಗಳ ಹಣದುಬ್ಬರ ದತ್ತಾಂಶ ಬಿಡುಗಡೆ ಮಾಡಿದ ಸಾಂಖ್ಯಿಕ ಸಚಿವಾಲಯ
2020 ಆ.	ಏಪ್ರಿಲ್, ಮೇ ತಿಂಗಳ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಹಣದುಬ್ಬರ ದತ್ತಾಂಶ ಕೈಬಿಡಲು ಆರ್‌ಬಿಐ ನಿರ್ಧಾರ
2020 ಸೆ.	ಏಪ್ರಿಲ್, ಮೇ ತಿಂಗಳ ಸಿಪಿಐ ಹಣದುಬ್ಬರ ಸಂಖ್ಯೆ ಕೈಬಿಡುವ ಆರ್‌ಬಿಐ ನಿರ್ಧಾರ ಸಮರ್ಥಿಸಿ ಟಿಪ್ಪಣಿ ಬರೆದ ಹಣಕಾಸು ಸಚಿವಾಲಯ
2020 ಸೆ.	ಹಣಕಾಸು ನೀತಿಯಲ್ಲಿ ಆರ್‌ಬಿಐನ ಹೊಣೆಗಾರಿಕೆಯು ಜುಲೈನಿಂದ ಆರಂಭವಾಗುತ್ತದೆ ಎಂದು ತಿಳಿಸಿದ ಹಣಕಾಸು ಸಚಿವಾಲಯ
2020 ಅ.	ಸತತ ಮೂರು ತ್ರೈಮಾಸಿಕಗಳಲ್ಲಿ ಹಣದುಬ್ಬರವನ್ನು ಶೇ 6ಕ್ಕಿಂತ ಕೆಳಗಿಳಿಸಲು ಆರ್‌ಬಿಐ ವಿಫಲವಾದದ್ದು ಎಂಬುದು ಅಧಿಕೃತ ದತ್ತಾಂಶಗಳಿಂದ ದೃಢ

ಪ್ರಕ್ರಿಯೆ ಏನು?

ಚಿಲ್ಲರೆ ಹಣದುಬ್ಬರವನ್ನು ಶೇ 4ರಲ್ಲಿ ಇರಿಸಿಕೊಳ್ಳಬೇಕು ಎಂದು ಕಾಯ್ದೆ ಹೇಳುತ್ತದೆ. ಆದರೆ, ಗರಿಷ್ಠ ಮತ್ತು ಕನಿಷ್ಠ ಮಟ್ಟವು ಕ್ರಮವಾಗಿ ಶೇ 6 ಮತ್ತು ಶೇ 2 ಆಗಿರುವುದರಿಂದ ಆರ್‌ಬಿಐಗೆ ಸ್ವಲ್ಪ ಮಟ್ಟಿನ ಒತ್ತಡ ಕಡಿಮೆ ಆಗುತ್ತದೆ. ಸತತ ಮೂರು ತ್ರೈಮಾಸಿಕಗಳಲ್ಲಿ ಹಣದುಬ್ಬರವು ಈ ನಿಗದಿತ ಮಿತಿಗಿಂತ ಹೆಚ್ಚಾದರೆ, ಆರ್‌ಬಿಐ ವಿಫಲವಾಗಿದೆ ಎಂದು ಪರಿಗಣಿಸಬೇಕು ಎಂದು ಕಾಯ್ದೆಯು ಹೇಳುತ್ತದೆ. ಬಡ್ಡಿದರವು ಕಡಿಮೆಯಾದರೆ ಅರ್ಥ ವ್ಯವಸ್ಥೆಯಲ್ಲಿ ಹಣದ ಹರಿವು ಹೆಚ್ಚಾಗುತ್ತದೆ; ಇದರಿಂದಾಗಿ ಹಣದುಬ್ಬರದ ಒತ್ತಡ ಹೆಚ್ಚುತ್ತದೆ. ಬಡ್ಡಿದರವನ್ನು ಹೊಂದಾಣಿಕೆ ಮಾಡುವ ಮೂಲಕ ಕೇಂದ್ರೀಯ ಬ್ಯಾಂಕ್ ಹಣದುಬ್ಬರವನ್ನು ನಿಯಂತ್ರಿಸುತ್ತದೆ.

2016ರಲ್ಲಿ ಹಣಕಾಸು ನೀತಿ ಚೌಕಟ್ಟಿನ ನಿಯಮಗಳನ್ನು ರೂಪಿಸಲಾಗಿತ್ತು. ಆಗ ಹಣಕಾಸು ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ, ಈಗ ಆರ್‌ಬಿಐ ಗವರ್ನರ್ ಆಗಿರುವ ಶಕ್ತಿಕಾಂತ ದಾಸ್ ಅವರು , ಒಂದು ತಿಂಗಳ ಗಡುವಿನ ವಾಗ್ದಾನವನ್ನು ಆರ್‌ಬಿಐನಿಂದ ಪಡೆದುಕೊಂಡಿದ್ದರು ಎಂಬುದು ರಿಪೋರ್ಟರ್ಸ್ ಕಲೆಕ್ಟಿವ್‌ಗೆ ಸಿಕ್ಕ ದಾಖಲೆಗಳಲ್ಲಿ ಇದೆ. ಉತ್ತರದಾಯಿತ್ವ ವರದಿಯನ್ನು ಬಹಿರಂಗಪಡಿಸುವುದಕ್ಕೂ ಆರ್‌ಬಿಐ ಒಲವು ವ್ಯಕ್ತಪಡಿಸಿತ್ತು ಎಂಬುದು ಆರ್‌ಬಿಐ ಮತ್ತು ಹಣಕಾಸು ಸಚಿವಾಲಯದ ನಡುವೆ 2016ರಲ್ಲಿ ನಡೆದ ಪತ್ರವ್ಯವಹಾರದಿಂದ ಸ್ಪಷ್ಟವಾಗುತ್ತದೆ.

ಎಂಪಿಸಿಯ ಉತ್ತರದಾಯಿತ್ವ ಕ್ರಮಗಳ ಕುರಿತಂತೆ ಹಣಕಾಸು ವ್ಯವಹಾರಗಳ ಕಾರ್ಯದರ್ಶಿ ಶಕ್ತಿಕಾಂತ ದಾಸ್ ಅವರು ಆರ್‌ಬಿಐನ ಗವರ್ನರ್ ಆಗಿದ್ದ ರಘುರಾಮ್ ರಾಜನ್ ಅವರಿಗೆ 2016ರ ಜೂನ್‌ನಲ್ಲಿ ಬರೆದ ಪತ್ರ ಎಂಬ ಹೆಸರಿನ ಕಡತವೂ ಇದೆ.

'ಹಣದುಬ್ಬರವನ್ನು ನಿಗದಿತ ದರದಲ್ಲಿ ಇರಿಸಿಕೊಳ್ಳಲು ಸಾಧ್ಯವಾಗದೇ ಇದ್ದರೆ ಒಂದು ತಿಂಗಳ ಒಳಗೆ ಉತ್ತರದಾಯಿತ್ವ ವರದಿ ಸಲ್ಲಿಕೆಗೆ ಆರ್‌ಬಿಐ ತನ್ನ ಒಪ್ಪಿಗೆಯನ್ನು ಸೂಚಿಸಿದೆ. ಅದನ್ನು ಬಹಿರಂಗಪಡಿಸುವುದಕ್ಕೂ ಸಮ್ಮತಿ ಕೊಟ್ಟಿದೆ. ಹಾಗಾಗಿ, ಈ ಅಂಶವನ್ನು ನಿಯಮಗಳಲ್ಲಿ ಸೇರಿಸಲಾಗಿಲ್ಲ. ಆಡಳಿತಾತ್ಮಕವಾಗಿ ಅದನ್ನು ನಿಭಾಯಿಸಬಹುದು' ಎಂದು ಶಕ್ತಿಕಾಂತ ದಾಸ್ ಅವರು ಆಗ ಆರ್‌ಬಿಐ ಗವರ್ನರ್ ಆಗಿದ್ದ ರಘುರಾಮ್ ಅವರಿಗೆ 2016ರ ಜೂನ್ 27ರಂದು ಬರೆದ ಪತ್ರದಲ್ಲಿ ಹೇಳಿದ್ದರು.

ಉತ್ತರದಾಯಿತ್ವ ವ್ಯವಸ್ಥೆಯ ಕುರಿತು ಸರ್ಕಾರಕ್ಕೆ ಬಹಿರಂಗ ಪತ್ರ ಬರೆಯುವ ನಡೆಯನ್ನು ಇಂಡೋನೇಷ್ಯಾ, ಫಿಲಿಪ್ಪೀನ್ಸ್, ಬ್ರೆಜಿಲ್, ಬ್ರಿಟನ್, ನ್ಯೂಜಿಲೆಂಡ್, ನಾರ್ವೆ, ಟರ್ಕಿ ಮತ್ತು ಇತರ ದೇಶಗಳ ಕೇಂದ್ರೀಯ ಬ್ಯಾಂಕುಗಳು ಅನುಸರಿಸುತ್ತಿವೆ.

ಹೊಣೆಗಾರಿಕೆ ಕಸರತ್ತು

ಹಣಕಾಸು ಸಚಿವಾಲಯವು 'ಹಣಕಾಸು ನೀತಿ ಚೌಕಟ್ಟಿನ ಅಡಿಯಲ್ಲಿ ಹಣದುಬ್ಬರ ನಿಯಂತ್ರಣ ವೈಫಲ್ಯದ ಪರಿಣಾಮಗಳು' ಎಂಬ ಹೆಸರಿನ ಆಂತರಿಕ ಟಿಪ್ಪಣಿಯಲ್ಲಿ ಆರ್‌ಬಿಐನ ಕ್ರಮವನ್ನು ಸಮರ್ಥಿಸಿಕೊಂಡಿತ್ತು. ಹಣದುಬ್ಬರವು ಕೃತಕವಾಗಿ ಏರಿಕೆಯಾಗಿದ್ದು, ಅದು ವಾಸ್ತವವನ್ನು ಪ್ರತಿಬಿಂಬಿಸುವುದಿಲ್ಲ ಎಂದು ಸೆಪ್ಟೆಂಬರ್‌ನಲ್ಲಿ ಬರೆದ ಟಿಪ್ಪಣಿಯಲ್ಲಿ ಹೇಳಿತ್ತು.

ಆರ್ಥಿಕತೆ ಈಗಾಗಲೇ ಬಿಕ್ಕಟ್ಟಿಗೆ ಸಿಲುಕಿರುವ ಈ ಸಮಯದಲ್ಲಿ, ಹಣದುಬ್ಬರ-ವನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರೀಯ ಬ್ಯಾಂಕ್ ಮತ್ತೆ ಬಡ್ಡಿದರಗಳನ್ನು ಏರಿಕೆಮಾಡುವ ಸಾಧ್ಯತೆಯಿದೆ ಎಂಬ ಭೀತಿ ಕೇಂದ್ರ ಸರ್ಕಾರದ್ದಾಗಿತ್ತು. ಏಕೆಂದರೆ, ಬಡ್ಡಿದರ ಕಡಿತಕ್ಕೆ ಮುಕ್ತ ಅವಕಾಶ ನೀಡುವ ಹೊಂದಾಣಿಕೆ ನಿಲುವನ್ನು ಆರ್‌ಬಿಐ ಅಳವಡಿಸಿಕೊಂಡಿತ್ತು.

ಹಣಕಾಸು ನೀತಿಯನ್ನು ರೂಪಿಸಲು ಅಂದಾಜು ಮೌಲ್ಯ ಆಧಾರಿತವಾದ ಗ್ರಾಹಕ ಬೆಲೆ ಸೂಚ್ಯಂಕದಂತಹ ಅನರ್ಹ ವಿಧಾನವನ್ನು ಅವಲಂಬಿಸಬಾರದು. ಆರ್ಥಿಕ ಪರಿಸ್ಥಿತಿಯು ದುರ್ಬಲವಾಗಿರುವ ಸಂದರ್ಭದಲ್ಲಿ ಇಂತಹ ಕ್ರಮವನ್ನು ಅನುಸರಿಸಿದರೆ, ಫಲಿತಾಂಶವು ಕೆಟ್ಟದಾಗಬಹುದು ಮತ್ತು ಗೊಂದಲಕಾರಿಯಾಗಬಹುದು. ಇಂತಹ ಅಂಕಿ ಅಂಶಗಳ ಅವಲಂಬನೆಯು ಬಡ್ಡಿದರ ಏರಿಕೆಯ ನಿರ್ಧಾರಕ್ಕೆ ಕಾರಣವಾಗಿ ಪ್ರತಿಕೂಲ ಪರಿಣಾಮ ಉಂಟಾಗಬಹುದು ಎಂದು ಅದೇ ಟಿಪ್ಪಣಿಯಲ್ಲಿ ಹೇಳಲಾಗಿತ್ತು.

ಹಣಕಾಸು ಸಚಿವಾಲಯವು, ಹಣದುಬ್ಬರದ ದತ್ತಾಂಶಗಳನ್ನು ತಿರಸ್ಕರಿಸುವ ತನ್ನ ನಿರ್ಧಾರದ ಬಗ್ಗೆ ಅಭಿಪ್ರಾಯವನ್ನು ತಿಳಿಸುವಂತೆ ಸಾಂಖ್ಯಿಕ ಸಚಿವಾಲಯವನ್ನು ಕೋರಿತ್ತು. ಆದರೆ, ತನ್ನ ದತ್ತಾಂಶಗಳಿಗೆ ಬದ್ಧವಾಗಿರುವುದಾಗಿ ತಿಳಿಸಿದ ಸಾಂಖ್ಯಿಕ ಸಚಿವಾಲಯ, ಒಪ್ಪಿಗೆ ಪಡೆದ ಬಳಿಕವೇ ದತ್ತಾಂಶಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ಹಣಕಾಸು ಸಚಿವಾಲಯಕ್ಕೆ ನೆನಪಿಸಿತು. ಎರಡು ತಿಂಗಳ ಹಣದುಬ್ಬರದ ಅಂದಾಜು ಸಂಖ್ಯೆಯನ್ನು ಸರ್ಕಾರದ ತಜ್ಞರ ಸಂಖ್ಯಾ ಶಾಸ್ತ್ರೀಯ ಸಂಸ್ಥೆಯಾದ 'ಬೆಲೆಗಳು ಮತ್ತು ಜೀವನವೆಚ್ಚದ ದತ್ತಾಂಶಗಳ ತಾಂತ್ರಿಕ ಸಲಹಾ ಸಮಿತಿ'ಯ ಒಪ್ಪಿಗೆ ಪಡೆದು ಬಿಡುಗಡೆ ಮಾಡಲಾಗಿತ್ತು. ಸಾಮಾನ್ಯ ಜನರನ್ನು ಬೆಲೆ ಏರಿಕೆ ಹೈರಾಣಾಗಿಸುತ್ತದೆ ಎಂದು ಹಲವು ಸಂಸ್ಥೆಗಳು ಬೊಟ್ಟು ಮಾಡಿದ್ದವು.

ಏಪ್ರಿಲ್-ಜೂನ್ ತ್ರೈಮಾಸಿಕದ ಚಿಲ್ಲರೆ ಹಣದುಬ್ಬರವು ಅಧಿಕೃತ ಅಂದಾಜಿಗಿಂತ ಸಾಕಷ್ಟು ಅಧಿಕವಾಗಿದೆ ಎಂದು 2020ರ ತನ್ನ ಅಧ್ಯಯನ ವರದಿಯಲ್ಲಿ ಭಾರತದ ಅತಿದೊಡ್ಡ ಬ್ಯಾಂಕ್ ಆದ, ಭಾರತೀಯ ಸ್ಟೇಟ್ ಬ್ಯಾಂಕ್ ಅಭಿಪ್ರಾಯಪಟ್ಟಿತ್ತು. ಏಪ್ರಿಲ್‌ನಲ್ಲಿ ಗ್ರಾಹಕ ಬೆಲೆ ಸೂಚ್ಯಂಕವು (ಸಿಪಿಐ) ಶೇ 9.68ರಷ್ಟಿತ್ತು. ಆದರೆ ಅಧಿಕೃತ ದತ್ತಾಂಶಗಳಲ್ಲಿ ಅದು ಶೇ 7.22ರಷ್ಟಿದೆ. ಹಾಗೆಯೇ ಮೇ ತಿಂಗಳಲ್ಲಿ ಶೇ 7.82ರಷ್ಟಿದ್ದು, ಅಧಿಕೃತ ದತ್ತಾಂಶಗಳಲ್ಲಿ ಶೇ 6.27ರಷ್ಟಿದೆ ಎಂದು ವರದಿ ಉಲ್ಲೇಖಿಸಿತ್ತು.

ಆದರೆ, ಏಪ್ರಿಲ್-ಜೂನ್ ತ್ರೈಮಾಸಿಕದ ಹಣದುಬ್ಬರ ದತ್ತಾಂಶವನ್ನು ಕೈಬಿಡಲು ಹಣಕಾಸು ಸಚಿವಾಲಯ ಹಾಗೂ ಆರ್‌ಬಿಐ ನಿರ್ಧರಿಸಿದ್ದವು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಒಪ್ಪಿಗೆಯೊಂದಿಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರಿಗೆ ಪತ್ರ ಬರೆದಿದ್ದ ಅಂದಿನ ಹಣಕಾಸು ಕಾರ್ಯದರ್ಶಿ ತರುಣ್ ಬಜಾಜ್ (ಈಗಿನ ಕಂದಾಯ ಕಾರ್ಯದರ್ಶಿ), '2020ರ ಏಪ್ರಿಲ್-ಜೂನ್ ಹಣದುಬ್ಬರ ದತ್ತಾಂಶಗಳು ಪ್ರಸ್ತುತ ಬೆಲೆಯನ್ನು ಪ್ರತಿಬಿಂಬಿಸುವುದಿಲ್ಲ' ಎಂದು ಉಲ್ಲೇಖಿಸಿದ್ದರು. 2020ರ ಜುಲೈ ತ್ರೈಮಾಸಿಕದ ಆರಂಭದಿಂದ ಹಣದುಬ್ಬರ ಗುರಿ ಹೊಣೆಗಾರಿಕೆ ಅನ್ವಯವಾಗುತ್ತದೆ ಎಂದು ಬಜಾಜ್ ಹೇಳಿದ್ದರು. ಹೀಗಾಗಿ ಹೊಣೆಗಾರಿಕೆ ನಿಗದಿ ಕ್ರಮ ಕೈಬಿಟ್ಟುಹೋಯಿತು.

ಕೋವಿಡೋತ್ತರ ಹಣಕಾಸು ನೀತಿ

2020ರ ಮಾರ್ಚ್‌ನಲ್ಲಿ ಲಾಕ್‌ಡೌನ್ ಹೇರಿಕೆಯಾಗುವ ಮುನ್ನವೇ ಭಾರತದಲ್ಲಿ ಹಣದುಬ್ಬರವು ನಿಗದಿತ ಪ್ರಮಾಣಕ್ಕಿಂತ ಹೆಚ್ಚೇ ಆಗಿತ್ತು. ಗ್ರಾಹಕ ಬೆಲೆ ಸೂಚ್ಯಂಕವು 2019ರ ಅಕ್ಟೋಬರ್-ಡಿಸೆಂಬರ್‌ನಲ್ಲಿ ಶೇ 5.8ರಷ್ಟು ಇತ್ತು. 2020ರ ಜನವರಿ–ಮಾರ್ಚ್ ಅವಧಿಯಲ್ಲಿ ಅದರ ಸರಾಸರಿಯು ಶೇ 6.7ರಷ್ಟು ಇತ್ತು.

ದೇಶವ್ಯಾಪಿ ಲಾಕ್‌ಡೌನ್ ಘೋಷಣೆಯಾದ ಕೆಲವೇ ದಿನಗಳಲ್ಲಿ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು (ಆರ್‌ಬಿಐನಿಂದ ಬ್ಯಾಂಕುಗಳು ಪಡೆಯುವ ಸಾಲದ ಬಡ್ಡಿದರ) ಶೇ 0.75ರಷ್ಟು ಇಳಿಸಿತು. ಇದರಿಂದಾಗಿ ರೆಪೊ ದರವು ಶೇ 4.4ಕ್ಕೆ ಇಳಿಯಿತು. ಮೇಯಲ್ಲಿ ಮತ್ತೊಮ್ಮೆ ರೆಪೊ ದರ ಕಡಿತ ಮಾಡಲಾಯಿತು. ರೆಪೊ ದರವು ದಾಖಲೆಯ ಶೇ 4ರಷ್ಟಕ್ಕೆ ಕುಸಿಯಿತು.

ಸುಮಾರು ಇದೇ ಹೊತ್ತಿಗೆ, ಬ್ರೆಜಿಲ್, ಮೆಕ್ಸಿಕೊ, ದಕ್ಷಿಣ ಆಫ್ರಿಕಾದ ಕೇಂದ್ರೀಯ ಬ್ಯಾಂಕುಗಳು ರೆಪೊ ದರವನ್ನು ಶೇ 2ರಷ್ಟು ಕಡಿತ ಮಾಡಿದ್ದವು. ಈ ದೇಶಗಳಲ್ಲಿನ ಹಣದುಬ್ಬರ ದರವು 2020ರಲ್ಲಿಯೂ ಸಾಂಕ್ರಾಮಿಕ ಪೂರ್ವದಲ್ಲಿ ಇದ್ದ ಮಟ್ಟದಲ್ಲಿಯೇ ಇತ್ತು. ಅಷ್ಟೇ ಅಲ್ಲದೆ, ಆಯಾ ಕೇಂದ್ರೀಯ ಬ್ಯಾಂಕುಗಳಿಗೆ ನಿಗದಿಪಡಿಸಿದ ಪ್ರಮಾಣದ ಒಳಗೇ ಇತ್ತು. ಆದರೆ, ಭಾರತದಲ್ಲಿ ಹಣದುಬ್ಬರ ದರವು 2020ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 6.6ಕ್ಕೆ ಏರಿತ್ತು. ಅದೇ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಶೇ 6.9ಕ್ಕೆ ಏರಿಕೆ ಆಗಿತ್ತು. ಜನವರಿ–ಮಾರ್ಚ್ ತ್ರೈಮಾಸಿಕದ ಹಣದುಬ್ಬರವನ್ನೂ (ಶೇ 6.7) ಗಣನೆಗೆ ತೆಗೆದುಕೊಂಡರೆ ಸತತ ಮೂರು ತ್ರೈಮಾಸಿಕದಲ್ಲಿಯೂ ಹಣದುಬ್ಬರವು ನಿಗದಿತ ಪ್ರಮಾಣಕ್ಕಿಂತ ಹೆಚ್ಚೇ ಇತ್ತು. ಇದರಿಂದಾಗಿ ಕಾಯ್ದೆಯ ಉಲ್ಲಂಘನೆಯಾಗಿದೆ.

ಆಗಸ್ಟ್‌ನಲ್ಲಿ ಸಭೆ ನಡೆದಾಗ, ಕಾಯ್ದೆ ಉಲ್ಲಂಘನೆಯ ಅಂಚಿನಲ್ಲಿ ತಾನು ಇದ್ದೇನೆ ಎಂಬ ಅರಿವು ಎಂಪಿಸಿಗೆ ಇತ್ತು. ಹಣದುಬ್ಬರವು ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚಾಗಿದೆ ಎಂದು ಆರ್‌ಬಿಐನ ಉಪ ಗವರ್ನರ್ ಮೈಖೆಲ್ ಪಾತ್ರ ಒಪ್ಪಿಕೊಂಡಿದ್ದರು. ಆದರೆ, ಏಪ್ರಿಲ್–ಜೂನ್ ಅವಧಿಯ ದತ್ತಾಂಶ-ಗಳನ್ನು ಸಾಂಖ್ಯಿಕ ಸಚಿವಾಲಯವು ಅಂದಾಜು ಮೌಲ್ಯ ನಿರ್ಣಯದ ಭಿನ್ನ ವಿಧಾನ ಅನುಸರಿಸಿ ಪಡೆದುಕೊಂಡಿದೆ ಎಂಬ ಕಾರಣ ಕೊಟ್ಟು ಗಣನೆಗೆ ತೆಗೆದುಕೊಳ್ಳದಿರಲು ಎಂಪಿಸಿ ನಿರ್ಧರಿಸಿತು.

ಪಾರದರ್ಶಕತೆಯ ಕೊರತೆ

ಹಣದುಬ್ಬರದ ಗರಿಷ್ಠ ಪ್ರಮಾಣ ನಿಗದಿಯ ಬಳಿಕ, 2016ರಿಂದ 2020ರ ಅವಧಿಯಲ್ಲಿ ಎಂಪಿಸಿಯಿಂದ ಯಾವುದೇ ವೈಫಲ್ಯವಾಗಿಲ್ಲ ಎಂಬುದಾಗಿ 2021ರ ಫೆಬ್ರುವರಿಯಲ್ಲಿ ಆರ್‌ಬಿಐ ತನ್ನ ಹಣಕಾಸು ನೀತಿ ಚೌಕಟ್ಟು ಪರಾಮರ್ಶೆ ವರದಿಯ ಹೊಣೆಗಾರಿಕೆ ಅಧ್ಯಾಯದಲ್ಲಿ ತಿಳಿಸಿತ್ತು. 2020ನೇ ಏಪ್ರಿಲ್ ತ್ರೈಮಾಸಿಕದ ಎಂಪಿಸಿಯ ವಿವಾದಾತ್ಮಕವಾದ ದಾಖಲೆಗಳನ್ನು ವರದಿ ಕೈಬಿಟ್ಟಿತ್ತು.

ಜಗತ್ತಿನ ಇತರ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರ ನಿಯಂತ್ರಣದಲ್ಲಿ ಆಗಿರುವ ವೈಫಲ್ಯದಲ್ಲಿ ತಮ್ಮ ಹೊಣೆಗಾರಿಕೆಯನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದವು. ಬ್ರಿಟನ್‌ನ ಬ್ಯಾಂಕ್ ಆಫ್ ಇಂಗ್ಲೆಂಡ್ 2020ರಲ್ಲಿ ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವಲ್ಲಿ ವಿಫಲವಾಗಿತ್ತು. ಬ್ರಿಟನ್ ಸರ್ಕಾರಕ್ಕೆ ಬರೆದ ಪತ್ರದಲ್ಲಿ ವೈಫಲ್ಯದ ಕಾರಣಗಳನ್ನು ವಿವರಿಸಿತ್ತು.

2016ರಿಂದ 2020ರವರೆಗೆ ಎಂಪಿಸಿ ಸದಸ್ಯರಾಗಿದ್ದ ಭಾರತೀಯ ಸಾಂಖ್ಯಿಕ ಸಂಸ್ಥೆಯ ಪ್ರಾಧ್ಯಾಪಕ ಚೇತನ್ ಘಾಟೆ ಅವರು 2021ರ ಆಗಸ್ಟ್‌ನಲ್ಲಿ ಇನ್‌ಫಾರ್ಮಿಸ್ಟ್ ಸುದ್ದಿವಾಹಿನಿಗೆ ನೀಡಿದ್ದ ಸಂದರ್ಶನದಲ್ಲಿ ಎಂಪಿಸಿ ವಿಶ್ವಾಸಾರ್ಹತೆ ಕುರಿತು ಮಾತನಾಡಿದ್ದರು. ಹಣದುಬ್ಬರವನ್ನು ನಿರ್ವಹಣೆ ಮಾಡುವಲ್ಲಿ ಆಗಿರುವ ವೈಫಲ್ಯವನ್ನು ಎಂಪಿಸಿ ಒಪ್ಪಿಕೊಳ್ಳುವ ಧೈರ್ಯ ಮಾಡಿದ್ದರೆ, ಅದರ ಬಗೆಗಿನ ವಿಶ್ವಾಸಾರ್ಹತೆ ಹೆಚ್ಚಾಗುತ್ತಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದರು.

ಆದರೆ, ಬ್ಯಾಂಕ್ ಆಫ್ ಇಂಗ್ಲೆಂಡ್‌ನ ಸದಸ್ಯರಾಗಿದ್ದ ವಿಲಿಯಂ ಬೈಟರ್ ಅವರು ಆರ್‌ಬಿಐ ಆಹ್ವಾನದ ಮೇಲೆ ನೀಡಿದ್ದ ಉಪನ್ಯಾಸದಲ್ಲಿ, ಹಣದುಬ್ಬರವು ನಿಗದಿತ ಪ್ರಮಾಣಕ್ಕಿಂತ ಸ್ವಲ್ಪ ಏರಿಕೆ ಆಗಿದ್ದಕ್ಕೆ ಆರ್‌ಬಿಐ ತೀರಾ ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. 'ವೈಫಲ್ಯ, ಪರಿಹಾರ ಕ್ರಮಗಳನ್ನು ಕುರಿತು ಸರ್ಕಾರಕ್ಕೆ ಬಹಿರಂಗ ಪತ್ರ ಬರೆಯುವುದರಿಂದ ಆರ್‌ಬಿಐಗೆ ವಿನಾಯಿತಿ ನೀಡುವ ಅಗತ್ಯವಿಲ್ಲ. 2020ರ ಮಾರ್ಚ್‌ನಿಂದ ಎದುರಾದ ಅಸಾಧಾರಣ ಸಂದರ್ಭಗಳನ್ನು ಆರ್‌ಬಿಐ ಪತ್ರ ಬರೆದು ವಿವರಿಸಬೇಕು. ಒಂದು ಅರ್ಥದಲ್ಲಿ ಈ ತಾಂತ್ರಿಕ 'ವೈಫಲ್ಯ'ವು ಸಾಧಾರಣ ಯಶಸ್ಸು' ಎಂದು ಅವರು ವಿಶ್ಲೇಷಿಸಿದ್ದರು.

(ರಿಪೋರ್ಟರ್ಸ್ ಕಲೆಕ್ಟಿವ್‌ನ ಈ ವರದಿಯ ಇಂಗ್ಲಿಷ್ ಅವತರಣಿಕೆಯು 'ಅಲ್ ಜಝೀರಾ'ದಲ್ಲಿ ಪ್ರಕಟವಾಗಿದೆ)

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 98

ವಿಗ್ರಹಾರಾಧನೆಯೇ ಶ್ರೇಷ್ಠ

ದೇವತೆಗಳೆಲ್ಲರಿಗೂ ಲಿಂಗಗಳನ್ನು ಕೊಟ್ಟು ಅನುಗ್ರಹಿಸಿದ ವಿಷ್ಣು, ನಂತರ ಶಿವನನ್ನು ಅರ್ಚಿಸುವ ಕ್ರಮವನ್ನು ಬ್ರಹ್ಮನಿಗೆ ತಿಳಿಸಿದ. ಅದನ್ನು ಬ್ರಹ್ಮ ದೇವತೆಗಳಿಗೂ ಋಷಿಗಳಿಗೂ ನಾರದನಿಗೂ ವಿವರವಾಗಿ ತಿಳಿಸುತ್ತಾನೆ.

'ಮನುಷ್ಯಜನ್ಮ ದುರ್ಲಭವಾದುದು. ಅವಯವಗಳೊಂದೂ ವಿಕಾರಹೊಂದದೆ, ಆಚಾರಶೀಲರಾದ ಸುಜನರ ಮನೆಯಲ್ಲಿ ಜನಿಸುವುದು ಹಿಂದಿನ ಜನ್ಮದ ಪುಣ್ಯಫಲ. ತನಗೆ ಯಾವುದು ವಿಹಿತವಾಗಿದೆಯೋ ಆ ಕರ್ಮಗಳನ್ನು ಉಲ್ಲಂಘಿಸಿಬಾರದು. ತನ್ನಲ್ಲಿ ಹಣವಿರುವಷ್ಟು ನೋಡಿಕೊಂಡು ದಾನಾದಿಕ್ರಿಯೆಗಳನ್ನು ಮಾಡಬೇಕು. ಸಾವಿರ ಕರ್ಮಪ್ರಧಾನವಾದ ಯಜ್ಞಗಳಿ-ಗಿಂತಲೂ ತಪೋಯಜ್ಞವು ಮಿಗಿಲಾದುದು. ಸಾವಿರ ತಪೋಯಜ್ಞಗಳಿಗಿಂತಲೂ ಜಪಯಜ್ಞವು ಶ್ರೇಷ್ಠವಾದುದು. ಧ್ಯಾನಯಜ್ಞಕ್ಕಿಂತಲೂ ಉತ್ತಮವಾದುದು ಇನ್ನೊಂದಿಲ್ಲ. ಧ್ಯಾನವು ಜ್ಞಾನಕ್ಕೆ ಸಾಧಕವಾದುದು. ಯೋಗನಿರತನಾದವನು ಧ್ಯಾನದಿಂದ ತನಗಿಷ್ಟವಾದುದನ್ನು ಸಮರಸವಾಗಿ ನೋಡುತ್ತಾನೆ. ಇಂಥ ಧ್ಯಾನ-ಯಜ್ಞನಿರತರಾದವರ ಬಳಿಯಲ್ಲಿ ಶಿವನು ನೆಲೆಸಿರುವನು.

'ವಿಜ್ಞಾನಶೀಲರಾದವರಿಗೆ ಪ್ರಾಯಶ್ಚಿತ್ತಾದಿ ಪಾಪನಿರ್ಮೂಲನ ಕಾರ್ಯಗಳು ಅವಶ್ಯಕವಿಲ್ಲ. ವಿಚಾರಮಾಡಿ ನೋಡಿದರೆ ಯಾರು ಈ ರೀತಿ ವಿಜ್ಞಾನದಿಂದ ಶುದ್ಧವಾಗಿರುವರೋ ಅವರಿಗೆ ಕರ್ಮಗಳೂ ಸುಖದುಃಖಗಳೂ ಒಂದೂ ಇಲ್ಲ. ಅವರಿಗೆ ಧರ್ಮ-ಅಧರ್ಮಗಳೂ, ಜಪ, ಹೋಮ, ಧ್ಯಾನ, ಯಾವೊಂದೂ ಬೇಕಾಗಿಲ್ಲ. ಅವರು ವಿಜ್ಞಾನಬಲದಿಂದ ಸದಾ ವಿಕಾರರಹಿತರಾಗಿರುತ್ತಾರೆ. ಸರ್ವವ್ಯಾಪಿಯಾದ ಶಿವಲಿಂಗವು ಯೋಗಿಗಳ ಹೃದಯದಲ್ಲೇ ಇದೆಯೆಂದು ತಿಳಿಯಿರಿ.

'ಲಿಂಗದಲ್ಲಿ ಬಾಹ್ಯ ಮತ್ತು ಆಭ್ಯಂತರವೆಂಬ ಎರಡು ವಿಧವಿದೆ. ಸ್ಥೂಲವಾಗಿ ಕಣ್ಣಿಗೆ ಗೋಚರವಾಗುವುದು ಬಾಹ್ಯವೆನಿಸಿದರೆ, ಬಾಹ್ಯೇಂದ್ರಿಯಗಳಿಗೆ ಗೋಚರಿಸದಿರುವುದು ಆಭ್ಯಂತರವೆನಿಸುವುದು. ಯಾರು ಕರ್ಮಯಜ್ಞನಿರ-ತರೋ, ಯಾರು ಬಾಹ್ಯಲಿಂಗವನ್ನು ಪೂಜಿಸುವರೋ, ಅವರು ಅಜ್ಞಾನಿಗಳ ತಿಳಿವಳಿಕೆಗಾಗಿ ಸ್ಥೂಲಲಿಂಗಾರ್ಚನೆಯಲ್ಲಿ ತೊಡಗಿರುವರೆಂದು ಭಾವಿಸಬೇಕು. ಆಧ್ಯಾತ್ಮಿಕವಾದ, ಅಂದರೆ ಆಭ್ಯಂತರವಾದ ಲಿಂಗವನ್ನು ತಾನು ತಿಳಿದು-ಕೊಳ್ಳಲಾರದ ಮಾತ್ರಕ್ಕೇ, ಆತನು ಸ್ಥೂಲಲಿಂಗಕ್ಕೂ ಆಭ್ಯಂತರಲಿಂಗಕ್ಕೂ ಭೇದವನ್ನು ಕಲ್ಪಿಸಬಾರದು. ಜ್ಞಾನಿಗಳಾದವರಿಗೆ ಶುದ್ಧವೂ ಅವಿನಾಶಿಯೂ ಆದ ಸೂಕ್ಷ್ಮಲಿಂಗವು ವಿಹಿತವು. ಅಂತಹ ಯೋಗ್ಯತೆಯನ್ನು ಇನ್ನೂ ಪಡೆಯದೆ ಇರುವವರೆಗೆ ಸ್ಥೂಲಲಿಂಗವು ಪ್ರಕಲ್ಪಿತವಾಗಿರುವುದು. ಅಧ್ಯಾತ್ಮಸಾಧಕರಿಗೆ ಆಭ್ಯಂತರಲಿಂಗವು ಭಾವನಾಮಾತ್ರದಿಂದಲೇ ಗೋಚರವಾಗುವುದು.

'ತತ್ತ್ವಾರ್ಥವನ್ನು ಅರಿಯಬೇಕೆನ್ನುವವನಿಗೆ ವಿಚಾರಕ್ಕಿಂತಲೂ ಬೇರೆ ಮಾರ್ಗ ಯಾವುದೂ ಇಲ್ಲ. ಅವನ ಅಂತರಂಗದಲ್ಲಿಯೇ ಕಲಾಸಹಿತನೂ ಕಲಾತೀತನೂ ಆದ ಶಿವನಿರುವನು. ಅಂತಹ ವಿಜ್ಞಾನಿಯು ಪ್ರಪಂಚವೆಲ್ಲವನ್ನೂ ಶಿವನೆಂದು ಭಾವಿಸುವನು. ಅವನಿಗೆ ಜಗತ್ತೇ ಶಿವಸ್ವರೂಪವಾಗಿ ತೋರುವುದು. ಈ ರೀತಿ ಶುದ್ಧಜ್ಞಾನದಿಂದ ನಿಸ್ಸಂಗರಾದವರಿಗೆ ಯಾವ ದೋಷದ ಸಂಪರ್ಕವೂ ಇಲ್ಲ. ಅವರಿಗೆ ವಿಧಿಯಿಲ್ಲ, ವಿಹಿತಾವಿಹಿತವಿಲ್ಲ. ನಿಷಿದ್ಧವಾದುದೂ ಇಲ್ಲ.

'ನೀರಿನ ಮೇಲಿನ ಕಮಲಕ್ಕೆ ನೀರು ಹೇಗೆ ಅಂಟದೆ ಇರುವುದೋ ಹಾಗೆ ಜ್ಞಾನಿಯಾದವನು ಕರ್ಮಪ್ರಧಾನವಾದ ಗೃಹಸ್ಥನಾಗಿದ್ದರೂ ಕರ್ಮಬಂಧಕ್ಕೆ ಸಿಕ್ಕಲಾರ. ಇಂತಹ ಶುದ್ಧಜ್ಞಾನವು ಯಾರಿಗೆ ಇನ್ನೂ ಹುಟ್ಟದಿರುವುದೋ, ಅವರು ಕರ್ಮಾಚರಣೆಯಿಂದ ಶಿವನನ್ನಾರಾಧಿಸುತ್ತಿರಬೇಕು. ಶಿವನು ವಸ್ತುತಃ ಒಬ್ಬನೇ ಆಗಿದ್ದರೂ, ಸೂರ್ಯನು ನೀರು ತುಂಬಿದ ಅನೇಕ ಪಾತ್ರೆಗಳಲ್ಲಿ ಪ್ರತಿ-ಬಿಂಬಿಸುವಂತೆ, ನಾನಾ ರೂಪವಾಗಿ ತೋರುವನು.

'ಈ ಜಗತ್ತಿನಲ್ಲಿ ಯಾವುದು ಕಾಣುವುದೋ ಯಾವುದು ಕೇಳಿಬರುವುದೋ ಸದ್ರೂಪವಾಗಿಯೂ ಅಸದ್ರೂಪವಾಗಿಯೂ ಯಾವುದು ತೋರುವುದೋ ಅದೆಲ್ಲವೂ ಪರಬ್ರಹ್ಮಾತ್ಮಕನಾದ ಶಿವನೆಂದೇ ತಿಳಿಯಿರಿ. ಮಣ್ಣಿನಿಂದ ಮಾಡಿದ ವಸ್ತುಗಳು ಬೇರೆ ಬೇರೆಯಾಗಿ ತೋರಿದರೂ ಅದರ ಮೂಲ ಮಣ್ಣೇ ಆಗಿರುವಂತೆ, ಪರಬ್ರಹ್ಮವೂ ಉಪಾಧಿವಶದಿಂದ ಬೇರೆ ಬೇರೆಯಾಗಿ ತೋರಿದರೂ ಪರಮಾತ್ಮನೊಬ್ಬನೆ ಅಂತ ವೇದಾಂತರಹಸ್ಯವನ್ನು ಬಲ್ಲವರು ಹೇಳುವರು.

'ಸಾಕ್ಷಾತ್ ಪರಮೇಶ್ವರನು ತನ್ನ ಹೃದಯದಲ್ಲೇ ನೆಲೆಸಿರುವ ಎಂದು ಯಾರು ತಿಳಿದಿರುವರೊ, ಅವರು ಸಂಸಾರಿಯೇ ಆಗಿದ್ದರೂ ಅವರಿಗೆ ಈ ಬಾಹ್ಯ ವಿಗ್ರಹಪೂಜಾದಿಗಳು ಬೇಕಿಲ್ಲ. ಯಾರಿಗೆ ಈ ರೀತಿ ಭಾವನೆ ಇಲ್ಲವೋ ಅವರು ವಿಗ್ರಹಪೂಜಾದಿಗಳನ್ನು ಮಾಡಬೇಕು. ಉನ್ನತವಾದ ಸ್ಥಾನವನ್ನು ಪಡೆಯಬೇಕಾದರೆ, ವಿಗ್ರಹಾರಾಧನೆಯು ಶ್ರೇಷ್ಠವಾದ ಸಾಧನವೆಂದು ಹೇಳಲ್ಪಟ್ಟಿದೆ. ಯಾವ ಆಲಂಬನವೂ ಇಲ್ಲದೆ, ಮೇಲಿನ ಹಂತವನ್ನು ಹತ್ತಲು ಸಾಧ್ಯವಿಲ್ಲ. ಗುಣಾತೀತನಾದ ಆ ಪರಬ್ರಹ್ಮನನ್ನು ಹೊಂದಲು ಮನುಷ್ಯರಿಗೆ ಸಗುಣಮೂರ್ತಿಯ ಪ್ರತಿಮೆಯೇ ಆಲಂಬನವೆಂದು ತಿಳಿಯಿರಿ' ಎಂದು ಬ್ರಹ್ಮನು ದೇವತೆಗಳಿಗೆ ತಿಳಿಸಿದ್ದನ್ನು ನಾರದನಿಗೆ ಹೇಳುತ್ತಾನೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ನೋವು ಪಾವಕ

ಆವ ಜೀವದ ಪಾಕವಾವನುಭವದಿನಹುದೊ! |
ಆವ ಪಾಪಕ್ಷಯವದಾವ ಪುಣ್ಯದಿನೋ! ||
ಕಾವಿರದೆ ಪಕ್ವವಹ ಜೀವವಿಳೆಯೊಳಗಿರದು |
ನೋವೆಲ್ಲ ಪಾವಕವೊ – ಮಂಕುತಿಮ್ಮ || 609 ||

ಪದ-ಅರ್ಥ: ಪಾಕವಾವನುಭವದಿನಹುದೊ = ಪಾಕ + ಯಾವ + ಅನುಭವದಿಂ + ಅಹುದೊ, ಪಾಪಕ್ಷಯವದಾವ = ಪಾಪಕ್ಷಯವು(ಪಾಪದ ಕರಗುವಿಕೆ) + ಅದಾವ, ಪುಣ್ಯದಿನೋ = ಪುಣ್ಯದಿಂ-ದಲೋ, ಕಾವಿರದೆ = ಕಾವು + ಇರದೆ, ಪಕ್ವವಹ = -ಪಕ್ವವಾಗಿರುವ, ಜೀವವಿಳೆಯೊಳಗಿರದು = ಜೀವ + ಇಳೆಯೊಳಗೆ + ಇರದು, ಪಾವಕ = ಪಾವನಮಾಡುವಂಥದ್ದು.

ವಾಚ್ಯಾರ್ಥ: ಯಾವ ಅನುಭವದಿಂದ ಯಾವ ಜೀವದ ಪಾಕವಾಗುವುದೊ, ಯಾವ ಪುಣ್ಯದಿಂದ ಯಾವ ಜೀವಿಯ ಪಾಪಕ್ಷಯವಾಗುವುದೊ, ಕಾವು ತಾಗದೆ ಪಕ್ವವಾಗಿರುವ ಜೀವ ಈ ಭೂಮಿಯೊಳಗಿರದು. ಪ್ರತಿಯೊಂದು ನೋವು ಕೂಡ ಪಾವನ ಮಾಡುವ ಶಕ್ತಿಯನ್ನು ಹೊಂದಿದೆ.

ವಿವರಣೆ: ಬಂಗಾರ ಒಂದು ಆಭರಣವಾಗಬೇ-ಕಾದರೆ ಮೊದಲು ಅದು ಬೆಂಕಿಯಲ್ಲಿ ಹೋಗಿ ಬರಬೇಕು. ಆಗಲೇ ಅದು ಮೆದುವಾಗಿ ವಿವಿಧ, ಮನೋಹರ ಆಕಾರಗಳನ್ನು ಪಡೆಯುವುದು. ಅಂತೆಯೇ ಒಂದು ಜೀವ ಔನ್ನತ್ಯವನ್ನು ಹೊಂದಲು ಅನೇಕ ಅನುಭವಗಳ ಮೂಲಕ ಹಾಯ್ದು ಬರಬೇಕು. ಆ ಅನುಭವದ ಕುಲುಮೆ, ಅಲ್ಲಿಯ ಪೆಟ್ಟುಗಳು ವ್ಯಕ್ತಿತ್ವವನ್ನು ರೂಪಿಸುತ್ತವೆ. ಇತ್ತೀಚೆಗೆ ಮಂಜಮ್ಮ ಜೋಗತಿಯರ, 'ನಡುವೆ ಸುಳಿವ ಹೆಣ್ಣು' ಆತ್ಮಕಥೆ-ಯನ್ನು ಓದಿದೆ. ಮಂಜುನಾಥ ಶೆಟ್ಟಿಯಾಗಿ ಹುಟ್ಟಿದ ಹುಡುಗ ಹದಿನಾರನೇ ವರ್ಷಕ್ಕೆ ತಾನು ಹುಡುಗಿ ಎಂಬ ಭಾವ ಬಂದು ಬದಲಾದದ್ದು, ಮನೆಯಲ್ಲಿ, ಸಮಾಜದಲ್ಲಿ ಅದನ್ನು ಒಪ್ಪದೆ ದಂಡಿಸಿದ್ದು, ಬದುಕಿಗಾಗಿ ಭಿಕ್ಷೆ ಬೇಡಿದ್ದು, ಜೀವತೊರೆಯಲು ಎರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು, ಜಾನಪದ ಕಲೆಯಾದ 'ಚೌಡಕಿ ಪದ'ವನ್ನು ಕಲಿತದ್ದು, ಇಡ್ಲಿ ಮಾಡಿ ಮಾರಿ ಜೀವನ ನಡೆಸಿದ್ದು, ಜೋಗತಿ ನೃತ್ಯ ಕಲಿತದ್ದು, ಇವೆಲ್ಲ ಜೀವನದ ಪಾಕವಾಯಿತು. ಈ ಬೆಂಕಿಯಿಂದ ಹೊರಬಂದ ಮಂಜಮ್ಮ ಜೋಗತಿ ಈಗ ಜನಮಾನಸದಲ್ಲಿ ಎತ್ತರದ ವ್ಯಕ್ತಿ. ಆಕೆಯ ಸಾಧನೆಯನ್ನು ಭಾರತ ಸರ್ಕಾರ ಗುರುತಿಸಿ, ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು. ಹೀಗೆ ಆ ಜೀವದ ಪರಿಪಾಕವಾದದ್ದು ಬದುಕಿನ ಅನುಭವಗಳಿಂದಲೇ.

ಇದೇ ರೀತಿಯಲ್ಲಿ ಯಾವ ಪುಣ್ಯದಿಂದಲೋ ಹಿಂದೆ ಮಾಡಿದ ಪಾಪರಾಶಿ ಕರಗಿ ಉದ್ಧಾರವಾಗುತ್ತದೆ ಜೀವ. ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಹೊರಟಾಗ ದಾರಿಯಲ್ಲಿ ಘೋರಾಕೃತಿಯ ಕಬಂಧನೆಂಬ ರಾಕ್ಷಸನೊಬ್ಬ ಎದುರಿಗೆ ಬರುತ್ತಾನೆ. ಸಾಲವೃಕ್ಷದಂತೆ ಹೆಗಲು, ಹೆಬ್ಬಾವಿನಂಥ ತೋಳುಗಳು, ಎದೆಯ ಭಾಗದಲ್ಲಿ ವಿಸ್ತಾರವಾದ ಕಣ್ಣು, ದೊಡ್ಡ ಹೊಟ್ಟೆ ಹೀಗೆ ವಿಕಾರವಾಗಿದ್ದ ರಾಕ್ಷಸ ರಾಮ ಲಕ್ಷ್ಮಣರನ್ನು ಎರಡು ಕೈಗಳಲ್ಲಿ ಹಿಡಿದುಕೊಂಡಾಗ ಅವರಿಬ್ಬರೂ ಅವನ ಎರಡೂ ತೋಳುಗಳನ್ನು ಕತ್ತರಿಸುತ್ತಾರೆ. ಕಬಂಧ ಸಾಯುತ್ತಾನೆ. ಅವನ ದೇಹದಿಂದ ದಿವ್ಯಾಕೃತಿಯ ಪುರುಷನೊಬ್ಬ ಹೊರಬಂದು, ತಾನು ವಿಶ್ವಾವಸುವೆಂಬ ಗಂಧರ್ವ, ಋಷಿಶಾಪದಿಂದ ಈ ಅವಸ್ಥೆ ಬಂದಿತ್ತು. ರಾಮಲಕ್ಷ್ಮಣರಿಂದ ತನ್ನ ಪಾಪನಾಶವಾಯಿತೆಂದು ಹೇಳುತ್ತಾನೆ. ಯಾವುದೋ ಪಾಪನಾಶಕ್ಕೆ ಯಾವುದೋ ಅನುಭವ. ಇದರಂತೆ ಹಿಂದೆ ಮಾಡಿದ ತಪ್ಪುಗಳಿಗಾಗಿ ಜಯ-ವಿಜಯರು ಆನೆ ಮತ್ತು ಮೊಸಳೆಗಳಾಗಿ ಹುಟ್ಟಿ ಕೊನೆಗೆ ವಿಷ್ಣುವಿನ ಸುದರ್ಶನ ಚಕ್ರದಿಂದ ಮೋಕ್ಷ ಪಡೆಯುತ್ತಾರೆ.

ಕಗ್ಗ ಹೇಳುತ್ತದೆ, ಅನುಭವದ ಕಾವು ತಟ್ಟದೆ ಯಾವ ಜೀವವೂ ಪಕ್ವವಾಗುವುದಿಲ್ಲ. ಅನೇಕ ಮಹಾನ್ ವ್ಯಕ್ತಿಗಳು ಪಟ್ಟ ನೋವುಗಳೇ ಅವರಿಗೆ ಪಾವನ ಮಾಡುವ ಸಾಧನಗಳಾದವು. ಹರಿಶ್ಚಂದ್ರನ ಕಷ್ಟ, ಗಾಂಧೀಜಿಯ ಪರಿಶ್ರಮ, ಮಂಡೇಲಾರ ಸೆರೆಮನೆವಾಸ ಇವೆಲ್ಲ ನೋವುಗಳು ಪಾವಕಗಳಾಗಿ ಆ ವ್ಯಕ್ತಿಗಳನ್ನು ಪುಟವಿಟ್ಟ ಚಿನ್ನದಂತೆ ಮಾಡಿದವು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ತೃತೀಯ ಗಂ. 16-39 ನಕ್ಷತ್ರ: ಅನುರಾಧ ಗಂ. 25-39 ಯೋಗ: ವ್ಯತೀಪಾತ ಗಂ. 17-01, ಕರಣ: ವಣಿಜ ಗಂ. 06-02, ಮೇಷ ಮಾಸದ 05 ನೇ ದಿನ. ರಾಹುಕಾಲ : ಮಧ್ಯಾಹ್ನ 03:00 –04:30 ಸೂರ್ಯೋದಯ : 06-19 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 17 ರಂಜಾನ್ ದಿನ ವಿಶೇಷ : ಸಂಕಷ್ಟಹರ ಚತುರ್ಥಿ. (ಚಂದ್ರೋದಯ – ರಾತ್ರಿ 09-27) ಅದೃಷ್ಟ ಸಂಖ್ಯೆ: 1, 9

ಮೇಷ: ವೃತ್ತಿಯಲ್ಲಿ ಪರಿಸ್ಥಿತಿ ಹತೋಟಿಗೆ ತರಲು ನಿಮ್ಮೊಳಗಿನ ನಾಯಕನನ್ನು ಜಾಗೃತಗೊಳಿಸಿರಿ. ಅವಿವಾಹಿತರ ಮನೋಕಾಮನೆಗಳು ಪೂರ್ಣಗೊಳ್ಳುವ ದಿನ. ಕುಟುಂಬ ಸದಸ್ಯರ ಆರೋಗ್ಯದ ಬಗೆಗಿನ ಚಿಂತೆ ತಪ್ಪಿದ್ದಲ್ಲ.

ವೃಷಭ: ನಿಮ್ಮ ಸೃಜನಶೀಲ ಯೋಜನೆಯನ್ನು ಮುಂದುವರೆಸಲು ಶುಭದಿನ. ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸಿ ಅವಕಾಶಗಳನ್ನು ಸದುಪಯೋಗಪ-ಡಿಸಿಕೊಳ್ಳುವುದು ಉತ್ತಮ. ಯಾವ ಕೆಲಸದಲ್ಲೂ ಅಡೆತಡೆಗಳಿರದು.

ಮಿಥುನ: ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ನಿಮಗಾಗಿ ತೆರೆದಿದೆ. ಇಂದಿನ ಕೆಲಸದಲ್ಲಿ ಹೆಚ್ಚಿನ ಉತ್ಸಾಹವಿರುವುದು. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಅಥವಾ ಅಪವಾದದ ಸಮಸ್ಯೆ ಇರುತ್ತದೆ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಓದು ಅಥವಾ ಉದ್ಯೋಗದ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ವರಮಾನ ತೆರಿಗೆ ಸಿಬ್ಬಂದಿಗಳಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು. ತೋಟದ ಕೆಲಸಗಳಿಗಾಗಿ ಹೆಚ್ಚಿನ ಶ್ರಮ.

ಸಿಂಹ: ಷೇರು ಬಂಡವಾಳದಲ್ಲಿ ಲಾಭ. ಬಾಕಿ ಇರಿಸಿದ ವ್ಯವಹಾರವು ಪೂರ್ಣ-ಗೊಳ್ಳುವುದು. ವಿಮಾ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಬಹುದು. ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವಿರಿ.

ಕನ್ಯಾ: ಅಧಿಕಾರಿಗಳ ಧಿಡೀರ್ ಭೇಟಿಯಿಂದ ಕೆಲಸಗಳು ಏರುಪೇರಾಗುವುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ. ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಿಲ್ಲ.

ತುಲಾ: ಚರ ಅಥವಾ ಸ್ಥಿರ ಸ್ವತ್ತುಗಳು ಸಿಗುವ ಸಂಭವವಿದೆ. ಮನೆಯ ಕೆಲಸದಲ್ಲಿ ನಿರ್ಲಕ್ಷ್ಯ ಬೇಡ. ಸಹೋದರನಲ್ಲಿ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸುವುದರಿಂದ ಸಂಬಂಧಗಳು ಉತ್ತಮಗೊಳ್ಳುವುದು.

ವೃಶ್ಚಿಕ: ಕುಟುಂಬದ ಸಂತೋಷ ವೃದ್ಧಿಯಾಗುವುದು. ವೈಯಕ್ತಿಕ ಜೀವನದಲ್ಲಿ ನೀವು ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ಆಫೀಸಿನ ಕೆಲಸಗಳಿಗಾಗಿ ದೂರದ ಪ್ರಯಾಣ.

ಧನು: ಹಿರಿಯರ ಆಶೀರ್ವಾದದಿಂದ ಕಾರ್ಯಗಳಲ್ಲಿ ಜಯ ಸಾಧಿಸುವಿರಿ. ಸಹೋದ್ಯೋಗಿಗಳ ಸಂಯಮದ ವರ್ತನೆಯಿಂದ ಅನುಕೂಲವಾಗಲಿದೆ. ಇಂದು ರಾಜಕೀಯ ರಂಗದಲ್ಲಿ ಉತ್ತಮ ಅನುಕೂಲಗಳ ಸಂಭವವಿದೆ.

ಮಕರ: ಕೋರ್ಟ್ ವ್ಯವಹಾರಗಳನ್ನು ಬಹಳಷ್ಟು ಲಾಭದಾಯಕವಾಗಿ ಮುಗಿಸಿ-ಕೊಳ್ಳುವಿರಿ. ಮಕ್ಕಳ ಓದಿನ ವಿಷಯದಲ್ಲಿ ಹೆಚ್ಚಿನ ಗಮನ ಕೊಡಿ. ವಿದ್ಯಾರ್ಥಿಗ-ಳಿಗೆ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದಲು ಅವಕಾಶಗಳು ಸಿಗಲಿದೆ.

ಕುಂಭ: ನಿಮ್ಮಲ್ಲಿ ಇದ್ದ ಪ್ರತಿಭೆಯನ್ನು ಇತರರು ಗಮನಿಸುವರು. ಆಸ್ತಿಕೊಳ್ಳುವ ನಿರ್ಧಾರವನ್ನು ಮಾಡುವಿರಿ. ನಿಮ್ಮ ಮೇಲಧಿಕಾರಿಗಳು ಬಯಸಿದ ಹೆಚ್ಚಿನ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ ಕಾರಣ ಅತಿಯಾಗಿ ಮೆಚ್ಚುವರು.

ಮೀನ: ಇಂದು ಕೆಲಸಗಳು ನಿಧಾನಗತಿಯಲ್ಲಿ ಸಾಗುವುದಕ್ಕೆ ಮನಸ್ಸಿಗೆ ಬೇಸರ ಉಂಟಾಗುವುದು. ಹಿಂದೆ ಕೆಲಸ ತಿರಸ್ಕರಿಸಿದವರು ಪುನಃ ಹಿಂದಿನ ಕಂಪನಿಯನ್ನೇ ಆಶ್ರಯಿಸುವ ಬಗ್ಗೆ ಯೋಚನೆ ಮಾಡಿ.

ಪದಬಂಧ 4932 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೂವಿನ ಬಾಣ (4)
3.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
5.ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಸ್ವಂತ ದೇಶದಲ್ಲಿ ಉತ್ಪತ್ತಿಯಾದುದು (3)
15. ಪ್ರತ್ಯಕ್ಷದ ವಿರುದ್ಧ ಪದ (3)
16.ಅಕ್ಕಪಕ್ಕ ಎಂದು ಹೀಗೂ ಹೇಳುವರು (4)

ಮೇಲಿಂದ ಕೆಳಕ್ಕೆ
1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಕಟ್ಟಿಕೊಂಡು ಹೋಗುವ ಅನ್ನ (2)
3.ಕೈಯಲ್ಲಿರುವ ಕಚ್ಚಾಪ್ರತಿ (3)
4.ಘೋರವಾದ ದಂಡನೆಯನ್ನು ಹೀಗೂ ಹೇಳುವರು (4)
6.ಆ ದಿವಸ ತಂದುಕೊಂಡ ಕಾಳುಕಡಿ (3)
7.ಕೆಲಸಕ್ಕೆ ಬಾರದ ಮಾತು (5)
9.ಗಂಗೆಯ ಮಗನಾದ ಭೀಷ್ಮ (3)
10.ಅತಿಯಾದ ದುಃಖ ಈ ಪರಿಯಾಗಿ ಬಂದಿದೆಯಲ್ಲಾ! (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಒಡಗೂಡುವ ಸಂಪ್ರದಾಯ! (3)
14.ಕೂರ್ಮವಿಲ್ಲಿ ತಲೆ ಕೆಳಗಾಗಿದೆ (2)

4931ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೈರುಹಾಜರು 3.ಉಬ್ಬಸ
5.ಅಂಗರಾಗ 8.ತಪ್ಪುಕಲ್ಪನೆ
11.ಹಗರಣ 13.ಉಬ್ಧಕ
14.ದೇಹಪ್ರಕೃತಿ

ಮೇಲಿಂದ ಕೆಳಕ್ಕೆ:
1.ಗೈರುವಿಲೆ 2.ಜಟ್ಟಿಗ
4.ಸಭಾಂಗಣ 6.ಗಣನೆ
7.ಕಂಕಣ 8.ತವರ
9.ತಹಸೀಲು 10.ಪದಚ್ಯುತಿ
12.ಸಂದೇಹ

ಸುಡೊಕು 5318

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8	6				4		2	
		3		2		7		6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5317 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಉಕ್ರೇನ್ ನಗರಗಳ ಮೇಲೆ ರಷ್ಯಾ ಪಡೆಗಳಿಂದ ರಾತ್ರಿಯಿಡೀ ದಾಳಿ; ಅಜೋವಸ್ಟಾಲ್ ಉಕ್ಕಿನ ಕಾರ್ಖಾನೆ ನಾಶ

‘ಇಸ್ಕಾಂಡರ್’ ದಾಳಿ: 4 ಶಸ್ತ್ರಕೋಠಿ ಧ್ವಂಸ

ಮಾಸ್ಕೊ/ ಲುವಿವ್ (ರಾಯಿಟರ್ಸ್/ ಎಎಫ್‌ಪಿ): ಉಕ್ರೇನ್‌ನ ಪ್ರಮುಖ ಸೇನಾ ನೆಲೆಗಳನ್ನು ಗುರಿಯಾಗಿಸಿ ಭಾನುವಾರ ತಡರಾತ್ರಿ ರಷ್ಯಾ ಪಡೆಗಳು ಇಸ್ಕಾಂಡರ್ ಕ್ಷಿಪಣಿ ಮತ್ತು ವೈಮಾನಿಕ ದಾಳಿ ನಡೆಸಿದ್ದು, ಉಕ್ರೇನಿನ ನಾಲ್ಕು ಶಸ್ತ್ರಕೋಠಿಗಳನ್ನು ಧ್ವಂಸ ಮಾಡಿವೆ.

ರಷ್ಯಾದ ವಾಯುಪಡೆ, ಕ್ಷಿಪಣಿ ಪಡೆಗಳು, ಫಿರಂಗಿ ಮತ್ತು ವಾಯು ರಕ್ಷಣಾ ವ್ಯವಸ್ಥೆ ಬಳಸಿಕೊಂಡು, ಉಕ್ರೇನಿನ ಸೇನೆ ಮತ್ತು ಅದಕ್ಕೆ ಸಂಬಂಧಿಸಿದ ಸೇನಾ ಗುರಿಗಳ ಮೇಲೆ ರಾತ್ರಿಯಿಡೀ ದಾಳಿ ನಡೆಸಲಾಯಿತು. ಲುಹಾನ್‌ಸ್ಕ್, ವಿನಿಟ್‌ಸಿಯಾ ಹಾಗೂ ಡೊನೆಟ್‌ಸ್ಕ್ ಪ್ರಾಂತ್ಯದಲ್ಲಿ ನಾಲ್ಕು ಶಸ್ತ್ರಕೋಠಿಗಳನ್ನು ಇಸ್ಕಾಂಡರ್ ಕ್ಷಿಪಣಿಗಳಿಂದ ಧ್ವಂಸ ಮಾಡಲಾಯಿತು.

ಉಕ್ರೇನಿನ 12 ಮಾರಕ ಡ್ರೋನ್ ಮತ್ತು ಟ್ಯಾಂಕ್‌ಗಳನ್ನೂ ನಾಶಪಡಿಸಲಾಗಿದೆ. ಜತೆಗೆ 315 ಸೇನಾ ನೆಲೆಗಳನ್ನು ಧ್ವಂಸಗೊಳಿಸಿರುವುದಾಗಿ ರಕ್ಷಣಾ ಸಚಿವಾಲಯ ಸೋಮವಾರ ನೀಡಿರುವ ಮಾಹಿತಿ ಉಲ್ಲೇಖಿಸಿ ರಷ್ಯಾದ ಸುದ್ದಿ ಸಂಸ್ಥೆ ‘ಟಾಸ್’ ವರದಿ ಮಾಡಿದೆ.

ಉಕ್ರೇನಿನ ನೊವೊದ್ಮಿಟ್ರಿವ್ಕಾ/ನೊವೊದ್ಯಝುಸ್ಕ್ ಗ್ರಾಮದಲ್ಲಿ ಸೋಮವಾರ ರಷ್ಯಾ ಪಡೆಗಳು ನಡೆಸಿದ ಕ್ಷಿಪಣಿ ಮತ್ತು ಶೆಲ್ ದಾಳಿಗೆ ಕಟ್ಟಡ ಧ್ವಂಸವಾಗಿದೆ– ಎಎಫ್‌ಪಿ ಚಿತ್ರ

ಉಕ್ರೇನ್ ಸೇನೆಯ ಐದು ಕಮಾಂಡ್ ಪೋಸ್ಟ್‌ಗಳು, ಇಂಧನ ಸಂಗ್ರಹಾಗಾರ, ಯುದ್ಧ ಸಲಕರಣೆಗಳ ಮೂರು ಗೋದಾಮುಗಳು, ರಕ್ಷಣಾ ವ್ಯವಸ್ಥೆ ಸೇರಿ ಸೇನಾ ಸೌಲಭ್ಯಗಳ ಆಯಕಟ್ಟಿನ 16 ನೆಲೆಗಳನ್ನು ವಾಯು ಕ್ಷಿಪಣಿಗಳು ನಾಶಪಡಿಸಿವೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಹಾರ್ಕಿವ್, ಝಪ್ರೊರಿಝಿಯಾ, ಡೊನೆಟ್‌ಸ್ಕ್ ಮತ್ತು ನಿಪ್ರೊಪೆಟ್ರೊವ್‌ಸ್ಕ್ ಪ್ರಾಂತ್ಯಗಳು ಹಾಗೂ ಮೈಕೊಲೈವ್ ಬಂದರಿನಲ್ಲಿ ಉಕ್ರೇನ್ ಸೇನೆಯ ರಕ್ಷಣಾ ವ್ಯವಸ್ಥೆ ಕೇಂದ್ರೀಕರಿಸಿ ಒಟ್ಟು 108 ಆಯಕಟ್ಟಿನ ಸ್ಥಳಗಳ

ಮೇಲೆ ರಷ್ಯಾ ವಾಯುಪಡೆ ದಾಳಿ ನಡೆಸಿದೆ. ಫಿರಂಗಿ ಪಡೆಗಳ ದಾಳಿಯಲ್ಲಿ ಉಕ್ರೇನಿನ 315 ಸೇನಾ ಗುರಿ ನಾಶ ಮಾಡಲಾಗಿದೆ. ವಾಯು ರಕ್ಷಣಾ ವ್ಯವಸ್ಥೆಯಿಂದ 3 ಹೆಲಿಕಾಪ್ಟರ್‌ಗಳು, 2 ಮಿಗ್–29 ಯುದ್ಧ ವಿಮಾನಗಳು ಹಾಗೂ ಒಂದು ಸುಖೊಯ್–25 ವಿಮಾನ ಹೊಡೆದುರುಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಉಕ್ರೇನ್ ಸೇನೆ ಪ್ರತಿ ದಾಳಿಯಲ್ಲಿ ರಷ್ಯಾದ ಕಪ್ಪುಸಮುದ್ರದಲ್ಲಿನ ನೌಕಾ ಬಲದ ಪ್ರತಿಷ್ಠಿತ ‘ಮಾಸ್ಕವಾ’ ಯುದ್ಧನೌಕೆಯನ್ನು ನೆಪ್ಚೂನ್ ಕ್ಷಿಪಣಿಗಳಿಂದ ಹೊಡೆದು, ಮುಳುಗಿಸಿದ್ದರಿಂದ ರಷ್ಯಾ ಪಡೆಗಳು ಪ್ರತೀಕಾರ ತೀವ್ರಗೊಳಿಸಿವೆ. ಕೀವ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸೋಮವಾರ ಮತ್ತಷ್ಟು ಪ್ರಬಲ ದಾಳಿ ನಡೆಸಿವೆ. ಬಂದರು ನಗರ ಮರಿಯುಪೊಲ್ ಹಿಡಿತಕ್ಕೆ ರಷ್ಯಾ ಪಡೆಗಳು ಹೆಚ್ಚು ಗಮನ ಕೇಂದ್ರೀಕರಿಸಿದ್ದು, ನಗರದ ಅಜೊವಸ್ಟಾಲ್ ಉಕ್ಕಿನ ಕಾರ್ಖಾನೆ ಮೇಲೆ ವೈಮಾನಿಕ ಮತ್ತು ಫಿರಂಗಿ ದಾಳಿ ನಡೆಸಿವೆ.

7 ಮಂದಿ ಸಾವು

ಲುವಿವ್ (ಎಎಫ್‌ಪಿ): ಉಕ್ರೇನಿನ ಪಶ್ಚಿಮದ ಲುವಿವ್ ನಗರದ ಸೇನಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ರಷ್ಯಾ ಪಡೆಗಳು ಸೋಮವಾರ ನಸುಕಿನಲ್ಲಿ ನಡೆಸಿದ ಪ್ರಬಲ ಕ್ಷಿಪಣಿಗಳ ಮತ್ತು ವೈಮಾನಿಕ ದಾಳಿಯಲ್ಲಿ ಹಲವು ಕಟ್ಟಡಗಳು ಹೊತ್ತಿ ಉರಿದಿವೆ. ಏಳು ಮಂದಿ ಮೃತಪಟ್ಟಿದ್ದು, ಒಂದು ಮಗು ಸೇರಿ 11 ಮಂದಿ ಗಾಯಗೊಂಡಿದ್ದಾರೆ.

ರಷ್ಯಾ ವಶಕ್ಕೆ ಕ್ರೆಮಿನ್ನಾ ನಗರ

ಲುವಿವ್ (ರಾಯಿಟರ್ಸ್): ಲುಹಾನ್‌ಸ್ಕ್ ಪ್ರಾಂತ್ಯದ ಪೂರ್ವದ ಕ್ರೆಮಿನ್ನಾ ನಗರವನ್ನು ರಷ್ಯಾ ಪಡೆಗಳು ರಾತ್ರೋರಾತ್ರಿ ವಶಕ್ಕೆ ತೆಗೆದುಕೊಂಡಿದ್ದು, ಇನ್ನು ಮುಂದೆ ನಾಗರಿಕರನ್ನು ನಗರದಿಂದ ಸ್ಥಳಾಂತರಿಸಲು ಸಾಧ್ಯವಿಲ್ಲ ಎಂದು ಪ್ರಾಂತ್ಯದ ಗವರ್ನರ್ ಸೆರಿಹಿ ಹೈದೈ ಸೋಮವಾರ ತಿಳಿಸಿದ್ದಾರೆ.

ಕ್ರೆಮಿನ್ನಾದಿಂದ ಪಲಾಯನಕ್ಕೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ನಾಲ್ವರು ನಾಗರಿಕರನ್ನು ಕೊಂದಿದ್ದಾರೆ ಎಂದು ಅವರು ಟೆಲಿಗ್ರಾಮ್‌ನಲ್ಲಿ ತಿಳಿಸಿದ್ದಾರೆ.

ಜೊಲೊಟ್ ಪಟ್ಟಣದಲ್ಲಿ ನಡೆದ ಶೆಲ್ ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿ, ನಾಲ್ವರು ಗಾಯಗೊಂಡಿದ್ದಾರೆ. ಲಿಸಿಚಾನ್‌ಸ್ಕ್ ನಗರದಲ್ಲಿ ಆರು ಮಂದಿ ಗಸ್ತು ಪೊಲೀಸರು ಗಾಯಗೊಂಡಿದ್ದಾರೆ.

ಸ್ವೀಕೃತವಲ್ಲದ ವ್ಯಕ್ತಿಗಳು: ರಷ್ಯಾದ 10 ರಾಜತಾಂತ್ರಿಕರನ್ನು ಬಲ್ಗೇರಿಯಾ ಉಚ್ಚಾಟಿಸಿದ್ದಕ್ಕೆ, ಪ್ರತಿಯಾಗಿ ಮಾಸ್ಕೊದಲ್ಲಿನ ಬಲ್ಗೇರಿಯಾ ರಾಯಭಾರ ಕಚೇರಿಯ ಕೆಲವು ಉದ್ಯೋಗಿಗಳನ್ನು ‘ಸ್ವೀಕೃತವಲ್ಲದ ವ್ಯಕ್ತಿಗಳು’ ಎಂದು ರಷ್ಯಾ ಸೋಮವಾರ ಘೋಷಿಸಿದೆ.

ಭದ್ರತಾ ವಿಶ್ಲೇಷಣೆ ನಡೆಸಲಿರುವ ಭಾರತೀಯ ಕಮಾಂಡರ್‌ಗಳು

ನವದೆಹಲಿ: ರಷ್ಯಾ ಮತ್ತು ಉಕ್ರೇನ್ ಸಂಘರ್ಷದಿಂದ ಉಂಟಾಗಿರುವ ಭದ್ರತಾ ಪರಿಸ್ಥಿತಿ ಹಾಗೂ ಯುದ್ಧ ನಿರತ ಎರಡೂ ದೇಶಗಳಿಂದ ಸೇನಾ ಸಲಕರಣೆಗಳ ಪೂರೈಕೆಗೆ ಸಂಬಂಧಿಸಿ ಭಾರತವು ವಿಶ್ಲೇಷಣೆ ನಡೆಸಲಿದೆ.

ಸೋಮವಾರ ಇಲ್ಲಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ನೇತೃತ್ವದಲ್ಲಿ ಭಾರತೀಯ ಸೇನಾ ಕಮಾಂಡರ್‌ಗಳ ನಾಲ್ಕು ದಿನಗಳ ಸಮಾವೇಶ ಆರಂಭವಾಗಿದೆ. ಸಮಾವೇಶದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕಮಾಂಡರ್‌ಗಳೊಂದಿಗೆ ಸಂವಾದ ನಡೆಸುವ ನಿರೀಕ್ಷೆಯಿದೆ.

ಉಭಯ ರಾಷ್ಟ್ರಗಳಿಂದ ರಕ್ಷಣಾ ಉಪಕರಣಗಳು ಮತ್ತು ಬಿಡಿಭಾಗಗಳ ಪೂರೈಕೆಯ ಮೇಲೆ ಆಗಲಿರುವ ಪರಿಣಾಮವನ್ನು ಕಮಾಂಡರ್‌ಗಳು ಅಂದಾಜಿಸಲಿದ್ದಾರೆ.

ಆಶಿಶ್ ಜಾಮೀನು ರದ್ದು, ಶರಣಾಗತಿಗೆ ಸೂಚನೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ, ಲಖಿಂಪುರ ಖೇರಿ ಪ್ರಕರಣದ ಮುಖ್ಯ ಆರೋಪಿ ಆಶಿಶ್ ಮಿಶ್ರಾಗೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಜಾಮೀನು ಅನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಪಡಿಸಿದೆ.

‘ಒಂದು ವಾರದಲ್ಲಿ ಶರಣಾಗಬೇಕು’ ಎಂದೂ ಆಶಿಶ್ ಮಿಶ್ರಾಗೆ ಸುಪ್ರೀಂ ಕೋರ್ಟ್ ಸೂಚಿಸಿದೆ. ‘ಹೈಕೋರ್ಟ್ ಅಪ್ರಸ್ತುತ ಅಂಶಗಳನ್ನು ಪರಿಗಣಿಸಿದೆ. ಎಫ್‌ಐಆರ್‌ನಲ್ಲಿದ್ದ ಅಂಶಗಳಿಗೆ ಹೆಚ್ಚಿನ ಮಹತ್ವ ನೀಡಿದೆ’ ಎಂದು ‘ಸುಪ್ರೀಂ’ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಹಿಮಾ ಕೊಹ್ಲಿ ಅವರಿದ್ದ ವಿಶೇಷ ಪೀಠವು, ‘ಸಂತ್ರಸ್ತರವಾದ ಆಲಿಸಲು ಪೂರ್ಣ ಅವಕಾಶ ನೀಡಿಲ್ಲ. ಜಾಮೀನು ಅರ್ಜಿಯ ಮರು ವಿಚಾರಣೆ ಆಗಬೇಕು’ ಎಂದಿತು.

‘ನೊಂದವರಿಗೆ ವಾದ ಮಂಡಿಸಲು ಅವಕಾಶ ನೀಡದಿರುವುದು ಮತ್ತು ಹೈಕೋರ್ಟ್‌ನಲ್ಲಿ ತೋರಿದ ತರಾತುರಿಯ ಕಾರಣದಿಂದ ಜಾಮೀನು ಅನ್ನು ಅಸಿಂಧುಗೊಳಿಸಲಾಗುತ್ತಿದೆ’ ಆದೇಶದಲ್ಲಿದ್ದ ಅಡಕವನ್ನು ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಓದಿದರು.

‘ಆರೋಪಿಯ ಜಾಮೀನು ಅರ್ಜಿಯ ವಿಚಾರಣೆಯನ್ನು ಅದೇ ನ್ಯಾಯಮೂರ್ತಿ ನಡೆಸಬೇಕು ಎಂದು ಉಲ್ಲೇಖಿಸುವ ಅಗತ್ಯವಿಲ್ಲ. ಇದನ್ನು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರ ವಿವೇಚನೆಗೆ ಬಿಡುವುದು ಒಳ್ಳೆಯದು’ ಎಂದೂ ಪೀಠ ಹೇಳಿದೆ.

ಆಶೀಶ್ ಮಿಶ್ರಾ ಅವರಿಗೆ ನೀಡಿರುವ ಜಾಮೀನು ರದ್ದುಪಡಿಸಬೇಕು ಎಂದು ಕೋರಿ ರೈತರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಏ.4ರಂದು ನಡೆಸಿದ್ದ ಸುಪ್ರೀಂ ಕೋರ್ಟ್ ತನ್ನ ತೀರ್ಪು ಕಾಯ್ದಿರಿಸಿತ್ತು.

ಲಖಿಂಪುರ ಖೇರಿ ಪ್ರಕರಣದಲ್ಲಿ ಬಂಧಿತನಾಗಿ ನಾಲ್ಕು ತಿಂಗಳು ಪೊಲೀಸರ ವಶದಲ್ಲಿದ್ದ ಆಶಿಶ್ ಮಿಶ್ರಾಗೆ ಹೈಕೋರ್ಟ್‌ನ ಏಕ ಸದಸ್ಯ ಪೀಠವು ಫೆಬ್ರುವರಿ 10ರಂದು ಜಾಮೀನು ನೀಡಿತ್ತು.

‘ನ್ಯಾಯ ಸಿಗುವ ಭರವಸೆ’

ನೋಯ್ಡಾ (ಪಿಟಿಐ): ‘ರೈತರಿಗೆ ನ್ಯಾಯ ಸಿಗುವ ಭರವಸೆ ಇದೆ’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ. ಆಶಿಶ್ ಮಿಶ್ರಾ ಜಾಮೀನು ರದ್ದುಪಡಿಸಿದ ಆದೇಶ ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ.

ಲಖಿಂಪುರ ಖೇರಿ ಪ್ರಕರಣದಲ್ಲಿ ನೊಂದ ರೈತರಿಗೆ ಪರಿಹಾರ ಒದಗಿಸಲು, ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಉತ್ತರ ಪ್ರದೇಶ ಸರ್ಕಾರ ಈಗ ಕಾರ್ಯಪ್ರವೃತ್ತರಾಗಬೇಕು. ಆಶೀಶ್ ಮಿಶ್ರಾ ಜಾಮೀನು ರದ್ದುಗೊಂಡಿರುವುದು ನ್ಯಾಯ ಸಿಗುವ ಭರವಸೆ ಮೂಡಿಸಿದೆ. ಅಮಾಯಕ ರೈತರ ಬಿಡುಗಡೆ ಹಾಗೂ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಹೇಳಿದ್ದಾರೆ.

ರೈಲ್ವೆ ರಕ್ಷಣಾ ಪಡೆ ಹೆಡ್‌ಕಾನ್‌ಸ್ಟೆಬಲ್ ಹುತಾತ್ಮ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಕಾಕಪೊರಾ ಪ್ರದೇಶದಲ್ಲಿ ಸೋಮವಾರ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ರೈಲ್ವೆ ರಕ್ಷಣಾ ಪಡೆಯ(ಆರ್‌ಪಿಎಫ್) ಹೆಡ್ ಕಾನ್‌ಸ್ಟೆಬಲ್ ಸುರಿಂದರ್ ಸಿಂಗ್ ಹುತಾತ್ಮರಾಗಿದ್ದು, ಎಎಸ್‌ಐ ದೇವರಾಜ್ ಗಾಯಗೊಂಡಿದ್ದಾರೆ.

‘ಕಾಕಪೋರಾದ ಟೀ ಅಂಗಡಿಯೊಂದರ ಬಳಿ ನಿಂತಿದ್ದ ಆರ್‌ಪಿಎಫ್‌ನ ಇಬ್ಬರು ಸಿಬ್ಬಂದಿ ಮೇಲೆ ಅಪರಿಚಿತ ಉಗ್ರರು ಏಕಾಏಕಿ ಗುಂಡಿನ ದಾಳಿ ನಡೆಸಿದರು. ಗಾಯಗೊಂಡ ಇಬ್ಬರನ್ನೂ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮಾರ್ಗಮಧ್ಯೆ ಹೆಡ್‌ಕಾನ್‌ಸ್ಟೆಬಲ್ ಮೃತಪಟ್ಟರು. ಎಎಸ್‌ಐ ದೇವರಾಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಹಾಂಗಿರ್‌ಪುರಿಯಲ್ಲಿ ಹಿಂಸಾಚಾರ; ಅಧಿಕೃತ ಹೇಳಿಕೆಯಿಂದ ಹಿಂದೆ ಸರಿದ ದೆಹಲಿ ಪೊಲೀಸರು

ವಿಎಚ್‌ಪಿ ಉಲ್ಲೇಖ: ಬಳಿಕ ನಿಲುವು ಬದಲು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಜಹಾಂಗಿರ್ ಪುರಿಯಲ್ಲಿ ನಡೆದ ಹಿಂಸಾಚಾರದ ಜತೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಬಜರಂಗದಳಕ್ಕೆ ಸಂಪರ್ಕ ಕಲ್ಪಿಸಿ ನೀಡಿದ್ದ ಅಧಿಕೃತ ಹೇಳಿಕೆಯನ್ನು ಮಾಧ್ಯಮಗಳಿಗೆ ಪೊಲೀಸರು ಬಿಡುಗಡೆ ಮಾಡಿ, ಬಳಿಕ ಅದನ್ನು ಹಿಂದಕ್ಕೆ ಪಡೆದ ವಿದ್ಯಮಾನ ಸೋಮವಾರ ನಡೆದಿದೆ. ನಂತರ ಕೊಟ್ಟ ಹೇಳಿಕೆಯಲ್ಲಿ ಸಂಘ ಪರಿವಾರದ ಯಾವುದೇ ಸಂಘಟನೆಯ ಉಲ್ಲೇಖ ಇರಲಿಲ್ಲ.

ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಶನಿವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ಒಟ್ಟು ಮೂರು ಪ್ರಕರಣಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಒಂದು ಮೆರವಣಿಗೆಗೆ ಅನುಮತಿ ಪಡೆದುಕೊಂಡಿರಲಿಲ್ಲ ಎಂಬ ಪ್ರಕರಣವೂ ಅದರಲ್ಲಿ ಸೇರಿದೆ.

ವಿಶ್ವಹಿಂದೂ ಪರಿಷತ್ ಮತ್ತು ಬಜರಂಗ ದಳದ ಮೆರವಣಿಗೆ ಆಯೋಜಕರ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 188ರ ಅಡಿಯಲ್ಲಿ (ಅಧಿಕಾರಿಗಳ ಆದೇಶ ಉಲ್ಲಂಘನೆ) ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಆರಂಭದಲ್ಲಿ ಹೇಳಿದ್ದರು. ಪರಿಷತ್‌ನ ಜಿಲ್ಲಾ ಸೇವಾ ಪ್ರಮುಖರನ್ನು ಬಂಧಿಸಲಾಗಿದೆ ಎಂದೂ ಹೇಳಲಾಗಿತ್ತು.

ಆದರೆ, ಕೆಲವೇ ತಾಸುಗಳಲ್ಲಿ ಪೊಲೀಸರು ತಮ್ಮ ಹೇಳಿಕೆ ಬದಲಿಸಿದರು. ಹೊಸ ಹೇಳಿಕೆ ಬಿಡುಗಡೆ ಮಾಡಿದರು. ಅದರಲ್ಲಿ ಬಂಧನದ ಉಲ್ಲೇಖವೇ ಇರಲಿಲ್ಲ.

ವಿಎಚ್‌ಪಿ ಮತ್ತು ಬಜರಂಗ ದಳದ ಮೆರವಣಿಗೆಯು ಅನುಮತಿಯಿಲ್ಲದೇ ಸಾಗಲು ಹೇಗೆ ಸಾಧ್ಯವಾಯಿತು, ಎರಡು ಪೊಲೀಸ್ ಜೀಪ್‌ಗಳೂ ಮೆರವಣಿಗೆಯಲ್ಲಿ ಜೊತೆಗಿರಲು ಸಾಧ್ಯವಾಗಿದ್ದು ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. ಸ್ಥಳೀಯರ ಪ್ರಕಾರ, ಮೂರು ಮೆರವಣಿಗೆಗಳು ನಡೆದಿವೆ. ಈ ಪೈಕಿ ವಿಎಚ್‌ಪಿ ಹಾಗೂ ಬಜರಂಗದಳ ಮೂರನೇ ಮೆರವಣಿಗೆಯನ್ನು ಆಯೋಜಿಸಿದ್ದವು.

‘ಮೂರನೇ ಮೆರವಣಿಗೆಯು ಮಸೀದಿಯ ಸಮೀಪ ಸಾಗಿ ಬಂದಾಗ, ಕೆಲವು ಸದಸ್ಯರು ಮೆರವಣಿಗೆಯನ್ನು ತಡೆದರು. ಆ ಸಮಯದಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಮೆರವಣಿಗೆಯಲ್ಲಿ ಮೈಕ್‌ನಲ್ಲಿ ಹಾಕಲಾಗಿದ್ದ ಹಾಡಿನ ಧ್ವನಿಯನ್ನು ಹೆಚ್ಚಿಸಲಾಯಿತು’ ಎಂದು ಸ್ಥಳೀಯರು ಹೇಳಿದ್ದಾರೆ. ಮಸೀದಿಯ ಗೋಡೆಯ ಮೇಲೆ ಧ್ವಜ ಹಾರಿಸಲು ಯತ್ನ ನಡೆಯಿತು ಎಂದು ಸ್ಥಳೀಯರು ಹೇಳಿದ್ದರೂ, ಪೊಲೀಸ್ ಆಯುಕ್ತ ರಾಕೇಶ್ ಅಸ್ಥಾನ ಅವರು ಇದನ್ನು ಅಲ್ಲಗಳೆದಿದ್ದಾರೆ.

ಜಹಾಂಗಿರ್‌ಪುರಿ ಹಿಂಸಾಚಾರದ ತನಿಖೆ ನಡೆಸುತ್ತಿರುವ ಪೊಲೀಸರು ಸೋಮವಾರ ವ್ಯಕ್ತಿಯೊಬ್ಬರನ್ನು ವಶಕ್ಕೆ ಪಡೆದರು —ಪಿಟಿಐ ಚಿತ್ರ

ರಸ್ತೆ ಅಪಘಾತ ಕೋಮು ಗಲಭೆಗೆ ಕಾರಣ

ವಡೋದರ (ಪಿಟಿಐ): ಗುಜರಾತ್‌ನ ವಡೋದರದಲ್ಲಿ ಸಣ್ಣ ರಸ್ತೆ ಅಪಘಾತವು ಕೋಮು ಘರ್ಷಣೆಗೆ ಕಾರಣವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 60 ಜನರನ್ನು ಬಂಧಿಸಲಾಗಿದೆ. ಗಲಭೆಯಲ್ಲಿ ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ನಗರದ ರಾವ್‌ಪುರ ಪ್ರದೇಶದ ನಿವಾಸಿಗಳಿಬ್ಬರ ದ್ವಿಚಕ್ರ ವಾಹನಗಳ ನಡುವೆ ಭಾನುವಾರ ತಡ ರಾತ್ರಿ ಅಪಘಾತ ಸಂಭವಿಸಿದೆ. ಘಟನೆ ನಡೆದ ಸ್ವಲ್ಪ ಸಮಯದಲ್ಲೇ ಅವರಿಬ್ಬರ ಕೋಮುಗಳಿಗೆ ಸೇರಿದ ಜನರು ಸ್ಥಳದಲ್ಲಿ ಸೇರಿ ಹಿಂಸಾಚಾರದಲ್ಲಿ ತೊಡಗಿದರು. ಹತ್ತಿರಲ್ಲಿದ್ದ ಮಂದಿರದ ಪ್ರತಿಮೆ, ಎರಡು ಆಟೊ ರಿಕ್ಷಾಗಳು ಮತ್ತು ಹಲವಾರು ದ್ವಿಚಕ್ರ ವಾಹನಗಳನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿದ್ದಾರೆ. ಗಲಭೆಯ ಕಾರಣಕ್ಕೆ 19 ಜನರನ್ನು ಮತ್ತು ಅಪಘಾತದ ಕಾರಣಕ್ಕೆ ಇಬ್ಬರನ್ನು ಬಂಧಿಸಲಾಗಿದೆ. ರಾವ್‌ಪುರ ಮತ್ತು ಕರೆಲಿಬಾಗ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಧಾರ್ಮಿಕ ಧ್ವಜ ತೆರವು; ಕೋಮು ಘರ್ಷಣೆ

ಅಮರಾವತಿ (ಮಹಾರಾಷ್ಟ್ರ) (ಪಿಟಿಐ): ಧಾರ್ಮಿಕ ಧ್ವಜವನ್ನು ತೆರವುಗೊಳಿಸಿದ್ದಕ್ಕಾಗಿ ಎರಡು ಸಮುದಾಯಗಳ ಸದಸ್ಯರ ನಡುವೆ ಇಲ್ಲಿಯ ಅಚಲ್‌ಪುರ ನಗರದಲ್ಲಿ ಭಾನುವಾರ ಮಧ್ಯರಾತ್ರಿ ಗಲಭೆ ನಡೆದಿದೆ. ಗಲಭೆ ನಡೆದ ಸ್ಥಳದಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಖಿಡ್ಕಿ ದ್ವಾರ ಮತ್ತು ದುಲ್ಹಾ ದ್ವಾರಗಳ ಬಳಿ ಧಾರ್ಮಿಕ ಧ್ವಜಗಳನ್ನು ಹಾಕಲಾಗಿತ್ತು. ಗುಂಪೊಂದು ಭಾನುವಾರ ಮಧ್ಯರಾತ್ರಿ ಧ್ವಜಗಳನ್ನು ತೆರವುಗೊಳಿಸಿತ್ತು. ಈ ಕಾರಣಕ್ಕಾಗಿ ಗಲಭೆ, ಕಲ್ಲು ತೂರಾಟ ನಡೆದಿದೆ. ಕೂಡಲೇ ಮಧ್ಯ ಪ್ರವೇಶಿಸಿದ ರಾಜ್ಯ ಮೀಸಲು ಪೊಲೀಸ್ ಪಡೆ ಪರಿಸ್ಥಿತಿಯನ್ನು ಹತೋಟಿಗೆ ತರುವ ಸಲುವಾಗಿ ಅಶ್ರುವಾಯು ಶೆಲ್ ಪ್ರಯೋಗಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡು ಹಾರಿಸಿದವನ ಬಂಧನ

- ಗಲಭೆಯ ವೇಳೆ ಪಿಸ್ತೂಲ್‌ನಿಂದ ಗುಂಡು ಹಾರಿಸಿದ ಸೋನು ಅಲಿಯಾಸ್ ಇಮಾಮ್ ಅಲಿಯಾಸ್ ಯೂನುಸ್ ಎಂಬ 28 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ವ್ಯಕ್ತಿಯು ಗುಂಡು ಹಾರಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿತ್ತು
- ಮೆರವಣಿಗೆಯ ಮೇಲೆ ಎಸೆಯಲು ಬಾಟಲಿ ಪೂರೈಸಿದ ಆರೋಪದ ಮೇಲೆ 36 ವರ್ಷದ ಶೇಕ್ ಹಮೀದ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ
- ‘ಬಜರಂಗ ದಳದ ಯುವಘಟಕ ನಡೆಸುತ್ತಿದ್ದ ಮೆರವಣಿಗೆಯಲ್ಲಿದ್ದ ಕೆಲವರು ಕತ್ತಿ, ಲಾಠಿ ಹಾಗೂ ಶಸ್ತ್ರಾಸ್ತ್ರ ಹಿಡಿದು ಸಾಗುತ್ತಿರುವ ವಿಡಿಯೊ ಲಭ್ಯವಿವೆ. ಅಲ್ಪಸಂಖ್ಯಾತ ಸಮುದಾಯದವರನ್ನೇ ಹೆಚ್ಚಾಗಿ ಗುರಿಪಡಿಸಲಾಗಿದೆ’ ಎಂದು ಸಿಪಿಎಂ ಆರೋಪಿಸಿದೆ
- ರಾಜ್ಯದ ಧಾರ್ಮಿಕ ಸ್ಥಳಗಳಲ್ಲಿ ಧ್ವನಿವರ್ಧಕ ಅಳವಡಿಸಲು ಪೊಲೀಸರ ಅನುಮತಿ ಪಡೆಯುವುದು ಕಡ್ಡಾಯ ಎಂದು ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿದೆ.
- ರಾಮ ನವಮಿ ಮತ್ತು ಹನುಮ ಜಯಂತಿ ಸಂದರ್ಭದಲ್ಲಿ ದೇಶದ ವಿವಿಧ ಭಾಗಗಳಲ್ಲಿ ನಡೆದ ಕೋಮು ಸಂಘರ್ಷಗಳ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿಯೊಂದು ಸಲ್ಲಿಕೆಯಾಗಿದೆ

ಪೊಲೀಸರ ಮೇಲೆ ಕಲ್ಲು ತೂರಾಟ

ಹಿಂಸಾಚಾರ ನಡೆದಿದ್ದ ಇಲ್ಲಿನ ಜಹಾಂಗಿರ್‌ಪುರಿಯಲ್ಲಿ ಸೋಮವಾರ ಮತ್ತೆ ಪರಿಸ್ಥಿತಿ ಬಿಗುವಿನಿಂದ ಕೂಡಿತ್ತು. ಬಹುತೇಕ ಅಂಗಡಿಗಳನ್ನು ಮುಚ್ಚಲಾಗಿತ್ತು. ಅಲ್ಲಲ್ಲಿ ಕೆಲವು ಸ್ಥಳೀಯರು ಕಂಡುಬಂದಿದ್ದನ್ನು ಹೊರತುಪಡಿಸಿದರೆ, ಭಾರಿ ಸಂಖ್ಯೆಯ ಪೊಲೀಸ್ ಸಿಬ್ಬಂದಿ ಇಡೀ ಪ್ರದೇಶವನ್ನು ಗಸ್ತು ತಿರುಗುತ್ತಿದ್ದಾರೆ.

ಶನಿವಾರ ನಡೆದ ಹನುಮ ಜಯಂತಿ ಮೆರವಣಿಗೆಯು ಹಿಂಸಾಚಾರಕ್ಕೆ ತಿರುಗಿತ್ತು. ಹಿಂಸಾಚಾರದ ವೇಳೆ ಪಿಸ್ತೂಲ್‌ನಿಂದ ಗುಂಡು ಹಾರಿಸಿದ ಆರೋಪವಿರುವ ವ್ಯಕ್ತಿಯ ಮನೆಗೆ ಸೋಮವಾರ ಬೆಳಿಗ್ಗೆ ತೆರಳಿದ್ದ ಪೊಲೀಸ್ ತನಿಖಾ ತಂಡದ ಮೇಲೆ ಕಲ್ಲು ತೂರಾಟ ನಡೆದಿದೆ. ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಗಾಯಗೊಂಡಿದ್ದಾರೆ.

ಶೋಧ ನಡೆಸಲು ಹಾಗೂ ಕುಟುಂಬದವರ ವಿಚಾರಣೆ ನಡೆಸುವ ಉದ್ದೇಶದಿಂದ ಪೊಲೀಸರು ಸಿ.ಡಿ ಪಾರ್ಕ್ ರಸ್ತೆಯಲ್ಲಿರುವ ಶಂಕಿತನ ಮನೆಗೆ ಭೇಟಿ ನೀಡಿದ್ದರು ಎಂದು ರಂಗಾನಿ ಅವರು ಹೇಳಿದ್ದಾರೆ. ‘ಪೊಲೀಸ್ ತಂಡದ ಮೇಲೆ ಕುಟುಂಬದವರು ಕಲ್ಲು ತೂರಾಟ ನಡೆಸಿದರು. ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಘಟನೆ ಸಂಬಂಧ ಒಬ್ಬ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ’ ಎಂದು ಅವರು ಹೇಳಿದ್ದಾರೆ.

ಈ ಘಟನೆ ಕುರಿತಂತೆ ಸಾಕ್ಷ್ಯ ಕಲೆಹಾಕುತ್ತಿರುವ ಅಪರಾಧ ವಿಭಾಗದ ಪೊಲೀಸರು, ಸಮೀಪದ ಅಂಗಡಿಗಳಿಂದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸುತ್ತಿದ್ದಾರೆ. ಮಸೀದಿ ಸಮೀಪ ಅಂಗಡಿ ಇಟ್ಟುಕೊಂಡಿರುವ ರೋಷನ್ ಎಂಬುವರನ್ನು ಕರೆಸಿದ ಪೊಲೀಸರು, ಅಂಗಡಿಯಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿದ್ದಾರೆ.

ಮಸೀದಿಯಿಂದ 200 ಮೀಟರ್ ದೂರದಲ್ಲಿರುವ ಜಿ ಬ್ಲಾಕ್‌ನಲ್ಲಿ ಕೆಲವು ಅಂಗಡಿಗಳು ಸೋಮವಾರ ತೆರೆದಿದ್ದವು. ಈ ಪ್ರದೇಶದಲ್ಲಿಯೂ ಶನಿವಾರ ಹಿಂಸಾಚಾರ ನಡೆದಿತ್ತು.

ಖರ್ಗೋನ್ ಹಿಂಸೆಗೆ ಒಂದು ಬಲಿ

ಖರ್ಗೋನ್ (ಪಿಟಿಐ): ಮಧ್ಯಪ್ರದೇಶದ ಖರ್ಗೋನ್‌ನಲ್ಲಿ ರಾಮ ನವಮಿ ಆಚರಣೆಯಂದು ನಡೆದಿದ್ದ ಕೋಮು ಗಲಭೆ ವೇಳೆ ಕಾಣೆಯಾಗಿದ್ದ ವ್ಯಕ್ತಿ ಮೃತಪಟ್ಟಿರುವುದನ್ನು ಪೊಲೀಸರು ದೃಢಪಡಿಸಿದ್ದಾರೆ. ಗಲಭೆ ನಡೆದ ಏಳು ದಿನಗಳ ಬಳಿಕ ದೇಹ ಪತ್ತೆ ಆಗಿದೆ.

ಈ ಸಾವನ್ನು ಪೊಲೀಸರು ಇಷ್ಟು ದಿವಸ ಮುಚ್ಚಿಟ್ಟಿದ್ದರು ಎಂದು ಮೃತ ವ್ಯಕ್ತಿಯ ಸಂಬಂಧಿಕರು ಆರೋಪಿಸಿದ್ದಾರೆ.

ಖರ್ಗೋನ್‌ನಲ್ಲಿ ಶೈತ್ಯಗಾರ ವ್ಯವಸ್ಥೆ ಇಲ್ಲದ ಕಾರಣ ಮೃತ ವ್ಯಕ್ತಿ ಇಬ್ರೇಶ್ ಖಾನ್ (30) ಅವರ ಮೃತ ದೇಹವನ್ನು ಇಂದೋರ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಇರಿಸಲಾಗಿತ್ತು. ಎಂಟು ದಿನಗಳ ಬಳಿಕ ದೇಹವನ್ನು ಖರ್ಗೋನ್‌ನ ಆನಂದ್ ನಗರದಕ್ಕೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂಸಾಚಾರ ನಡೆದ ಮರುದಿನವೇ ಇಬ್ರೇಶ್ ಮೃತದೇಹದ ಮರಣೋತ್ತರ ಪರೀಕ್ಷೆ ನಡೆದಿದೆ. ಆ ದಿನವೇ ಕೊಲೆ ಪ್ರಕರಣ ದಾಖಲಿಸಲಾಗಿದೆ ಎಂದು ಮಧ್ಯಪ್ರದೇಶ ಸರ್ಕಾರ ಪ್ರತಿಪಾದಿಸಿದೆ. ಇಬ್ರೇಶ್ ಕಾಣೆ ಆಗಿರುವ ಕುರಿತು ಏಪ್ರಿಲ್ 14ರಂದೇ ಕುಟುಂಬ ದೂರು ದಾಖಲಿಸಿತ್ತು ಎನ್ನಲಾಗಿದೆ.

‘ಅಪ್ಪು’ ಧ್ವನಿಯಲ್ಲೇ ‘ಜೇಮ್ಸ್’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ ‘ಜೇಮ್ಸ್’ ಸಿನಿಮಾ ಅವರ ಧ್ವನಿಯಲ್ಲೇ ಏ.22ರಂದು ಮರು ಬಿಡುಗಡೆ ಆಗಲಿದೆ. ರಾಜ್ಯದ ಹಲವು ಚಿತ್ರಮಂದಿರಗಳಲ್ಲಿ 25 ದಿನಗಳನ್ನು ಪೂರೈಸಿ ಮುನ್ನಡೆಯುತ್ತಿದೆ.

ಪುನೀತ್ ಅವರ ಪಾತ್ರಕ್ಕೆ ಶಿವರಾಜ್‌ಕುಮಾರ್ ಧ್ವನಿ ನೀಡಿದ್ದರು. ಇದೀಗ ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಪುನೀತ್ ಅವರ ಧ್ವನಿಯನ್ನೇ ಮರುಸೃಷ್ಟಿಸಲಾಗಿದೆ. ತೆಲುಗು ನಟ ಪ್ರಭಾಸ್ ಅವರ ಬಿಡ್ ಮಂತ್ರ ಕಂಪನಿಯ ಖ್ಯಾತ ಸೌಂಡ್ ಎಂಜಿನಿಯರ್ ಶ್ರೀನಿವಾಸ್ ರಾವ್ ತಂಡ ಪುನೀತ್ ಅವರ ಧ್ವನಿಗೆ ಮರುಜೀವ ನೀಡಿದೆ.

‘ಪ್ರಸ್ತುತ 67 ಚಿತ್ರಮಂದಿರಗಳಲ್ಲಿ ಜೇಮ್ಸ್ ಪ್ರದರ್ಶನ ಕಾಣುತ್ತಿದ್ದು, ಏ.22ರಿಂದ ಮತ್ತೆ ಸುಮಾರು 60–70 ಚಿತ್ರಮಂದಿರಗಳು ಸೇರ್ಪಡೆಯಾಗಲಿವೆ. ಇವುಗಳೆಲ್ಲದರಲ್ಲೂ ಅಪ್ಪು ಅವರ ಧ್ವನಿಯ ‘ಜೇಮ್ಸ್’ ಮರು ಬಿಡುಗಡೆಯಾಗಲಿದೆ’ ಎಂದು ನಿರ್ದೇಶಕ ಚೇತನ್ ಕುಮಾರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಪ್ಪು’ ಧ್ವನಿ ಮರುಸೃಷ್ಟಿ ಹೇಗಾಯಿತು?

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅವರು ಕಳೆದ ಅ.29ರಂದು ಅಕಾಲಿಕ ನಿಧನ ಹೊಂದಿದ ಸಂದರ್ಭದಲ್ಲಿ ‘ಜೇಮ್ಸ್’ ಚಿತ್ರದ ಡಬ್ಬಿಂಗ್ ಬಾಕಿ ಇತ್ತು. ನಿರ್ದೇಶಕ ಚೇತನ್, ಮಿಮಿಕ್ರಿ ಕಲಾವಿದರಿಂದ ಧ್ವನಿ ಕೊಡುವ ಪ್ರಯತ್ನ ವಿಫಲವಾಯಿತು. ಬಳಿಕ, ಬೇರೆ ಕಲಾವಿದರಿಂದ ಡಬ್ಬಿಂಗ್ ಮಾಡಿಸಲಾಯಿತಾದರೂ, ಸರಿಹೊಂದದ ಕಾರಣ ಕೊನೆಯಲ್ಲಿ ಶಿವರಾಜ್‌ಕುಮಾರ್ ಅವರು ಪುನೀತ್ ಅವರ ಪಾತ್ರಕ್ಕೆ ಧ್ವನಿ ನೀಡಿದರು.

ಶಿವರಾಜ್‌ಕುಮಾರ್ ಅವರು ಡಬ್ಬಿಂಗ್ ಪೂರ್ಣಗೊಳಿಸಿದ ಬಳಿಕ ‘ಪೈಲೆಟ್ ಟ್ರ್ಯಾಕ್’ ಅನ್ನು ಬಿಡ್ ಮಂತ್ರ ಕಂಪನಿಗೆ ನೀಡಲಾಯಿತು. ಜೊತೆಗೆ ಪುನೀತ್ ಅವರು ಹಿಂದಿನ ಸಿನಿಮಾಗಳಿಗೆ ನೀಡಿದ್ದ ಧ್ವನಿ, ಸಂದರ್ಶನ, ಸುದ್ದಿ ಮಾಧ್ಯಮಗಳಿಗೆ ನೀಡಿದ್ದ ಬೈಟ್, ‘ಕನ್ನಡದ ಕೋಟ್ಯಾಧಿಪತಿ’ ರಿಯಾಲಿಟಿ ಶೋನ 15 ಗಂಟೆಗಳ ಧ್ವನಿ ಸಂಗ್ರಹವನ್ನೂ ನೀಡಲಾಗಿತ್ತು. ಇವುಗಳಲ್ಲಿ ಪುನೀತ್ ಅವರು ಬಳಸಿರುವ ಪದಗಳನ್ನು ಸಂಗ್ರಹಿಸಿ, ಜೊತೆಗೆ ಶಿವರಾಜ್‌ಕುಮಾರ್ ಅವರ ಧ್ವನಿಯ ಏರಿಳಿತವನ್ನು ದಾಖಲಿಸಿ ಪುನೀತ್ ಅವರ ಧ್ವನಿಯನ್ನು ಮರುಸೃಷ್ಟಿಸಲಾಗಿದೆ. ತಂಡವು ಸುಮಾರು ಮೂರು ತಿಂಗಳ ಕಾಲ ಅಪ್ಪು ಧ್ವನಿಯನ್ನು ಮರುಸೃಷ್ಟಿಗೆ ಪ್ರಯತ್ನಿಸಿ ಐದನೇ ಬಾರಿ ನೂರಕ್ಕೆ ನೂರು ನೈಜ ಧ್ವನಿ ನೀಡುವಲ್ಲಿ ಯಶಸ್ವಿಯಾಗಿದೆ.

ಮುಂದಿನ ದಿನಗಳಲ್ಲಿಅಪ್ಪು ಅವರ ಧ್ವನಿಯಲ್ಲೇ ತೆಲುಗು, ತಮಿಳು, ಹಿಂದಿ ಹಾಗೂ ಮಲಯಾಳಂನಲ್ಲಿ ಒಟಿಟಿ ಮುಖಾಂತರ ‘ಜೇಮ್ಸ್’ ತೆರೆಕಾಣಲಿದೆ ಎಂದು ಚೇತನ್ ಮಾಹಿತಿ ನೀಡಿದರು.

ವಿವೇಕ ರೈ, ಕುಂ.ವಿಗೆ ‘ಶಿವರಾಮ ಕಾರಂತ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಇಲ್ಲಿನ ಶಿವರಾಮ ಕಾರಂತ ಪ್ರತಿಷ್ಠಾನವು ನೀಡುವ 2021ನೇ ಸಾಲಿನ ‘ಶಿವರಾಮ ಕಾರಂತ’ ಪ್ರಶಸ್ತಿಗೆ ವಿದ್ವಾಂಸ ಪ್ರೊ.ಬಿ.ಎ.ವಿವೇಕ ರೈ ಹಾಗೂ ಸಾಹಿತಿ ಕುಂ. ವೀರಭದ್ರಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹ 20 ಸಾವಿರ ನಗದು ಬಹುಮಾನ ಒಳಗೊಂಡಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ ತಿಳಿಸಿದ್ದಾರೆ.

ಕುಂ.ವೀರಭದ್ರಪ್ಪ

ವಿವೇಕ ರೈ

ಸಂಶೋಧಕ, ವಿಮರ್ಶಕರಾದ ಪ್ರೊ.ಬಿ.ಎ.ವಿವೇಕ ರೈ ಎರಡು ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಗಡಿನಾಡ ಕನ್ನಡ ಶಾಲಾ ಅಧ್ಯಾಪಕರಾಗಿದ್ದ ಕುಂ. ವೀರಭದ್ರಪ್ಪ ಅವರ ಹಲವು ಕಥೆ, ಕವನ ಸಂಕಲನಗಳು, ಕಾದಂಬರಿಗಳು ಪ್ರಕಟವಾಗಿವೆ.

ಮಾಸ್ತಿ ಭವನ: ಶಿಲಾನ್ಯಾಸ ಕಾರ್ಯಕ್ರಮ

‘ಅಗತ್ಯವಿದ್ದರೆ ಮತ್ತಷ್ಟು ಅನುದಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಸ್ತಿ ವೆಂಕಟೇಶ ಅಯ್ಯಂಗಾರ್ ಭವನ ನಿರ್ಮಾಣಕ್ಕೆ ₹3.5 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಅನುದಾನ ಒದಗಿಸಲು ಕ್ರಮ ಕೈಗೊಳ್ಳುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ವತಿಯಿಂದ ಜ್ಞಾನಜ್ಯೋತಿ ಬಡಾವಣೆಯಲ್ಲಿ ಮಾಸ್ತಿ ಭವನಕ್ಕೆ ಸೋಮವಾರ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

‘ಮಾಸ್ತಿಯವರ ಆಶಯದಂತೆ ಸಾಹಿತ್ಯದ ಎಲ್ಲ ಚಟುವಟಿಕೆಗಳನ್ನು ಈ ಭವನದಲ್ಲಿ ನಡೆಸಲಾಗುತ್ತದೆ. ಮಾಸ್ತಿಯವರು ಕನ್ನಡದ ಆಸ್ತಿ. ಆ ಆಸ್ತಿಯನ್ನು ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸಲು ಈ ಭವನ ಸಹಕಾರಿಯಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಮಾಸ್ತಿಯವರು ಬಡ ಕುಟುಂಬದಲ್ಲಿ ಜನಿಸಿದವರು. ತಮ್ಮ ಸಾಹಿತ್ಯ ಕೃಷಿಯ ಮೂಲಕ ಕನ್ನಡಿಗರ ಮನಗೆದ್ದವರು. ಅವರ ಸಾಹಿತ್ಯದಲ್ಲಿ ಹಲವು ವೈಶಿಷ್ಟ್ಯಗಳಿವೆ. ಅವರದ್ದು ವಿಭಿನ್ನ ದೃಷ್ಟಿಕೋನ. ವಾಸ್ತವಾಂಶದ ನೆಲೆಗಟ್ಟಿನಲ್ಲೇ ಎಲ್ಲವನ್ನೂ ವಿಶ್ಲೇಷಿಸಿದ್ದವರು. ಅವರ ವಿಚಾರ ಭಂಡಾರವು ಪ್ರಸ್ತುತ ಸನ್ನಿವೇಶಕ್ಕೆ ಹೇಗೆ ಸಹಕಾರಿಯಾಗುತ್ತದೆ ಎಂಬುದರ ಕುರಿತು ಸಂಶೋಧನೆ ನಡೆಯಬೇಕು. ಆ ಕೆಲಸ ಈ ಭವನದ ಮೂಲಕವೇ ಆಗಲಿ’ ಎಂದು ಅವರು ತಿಳಿಸಿದರು.

‘ಆರ್ಥಿಕ ದೃಷ್ಟಿಕೋನದ ಆಧಾರದಲ್ಲೇ ರಾಜ್ಯವೊಂದರ ಪ್ರಗತಿ ಅಳೆಯಲು ಸಾಧ್ಯವಿಲ್ಲ. ಆರ್ಥಿಕತೆಯ ಜೊತೆಯಲ್ಲಿ ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಮಾನದಂಡಗಳೂ ಮುಖ್ಯವಾಗುತ್ತವೆ. ಸಾಹಿತ್ಯವು ಚಿಂತನೆಯನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮ. ಮಾಸ್ತಿಯವರ ಚಿಂತನೆ, ಬರಹ ಹಾಗೂ ಸಾಹಿತ್ಯ ನನಗೆ ಅತ್ಯಂತ ಪ್ರಿಯವಾದುದು. ನಾವು ವ್ಯಾಪಾರ ಹಾಗೂ ಆರ್ಥಿಕತೆಯಲ್ಲಿ ಪಾಪ ಪುಣ್ಯ ನೋಡುತ್ತಿದ್ದೇವೆ. ಆದರೆ, ತತ್ವಜ್ಞಾನದಲ್ಲಿ ಲಾಭ–ನಷ್ಟ ಹುಡುಕುತ್ತಿದ್ದೇವೆ’ ಎಂದು ಅವರು ಹೇಳಿದರು.

‘ಮಾಸ್ತಿ ಅವರ ವಿಚಾರಗಳು ಕನ್ನಡಕ್ಕಷ್ಟೇ ಸೀಮಿತವಾಗಬಾರದು. ಅವರನ್ನು ಭಾರತದ ಆಸ್ತಿಯನ್ನಾಗಿ ಮಾಡಬೇಕು. ಅದಕ್ಕೆ ನಮ್ಮ ಸರ್ಕಾರ ಬದ್ಧವಿದೆ. ಚಂದ್ರಶೇಖರ ಕಂಬಾರ ಅವರ ಒತ್ತಾಸೆಯಿಂದಾಗಿ ನನ್ನ ಕ್ಷೇತ್ರದಲ್ಲಿ ಜಾನಪದ ವಿಶ್ವವಿದ್ಯಾಲಯ ನಿರ್ಮಾಣ ಮಾಡಲು ಸಾಧ್ಯವಾಗಿದೆ. ಅವರಿಂದ ನಮಗೆ ಮತ್ತಷ್ಟು ಮಾರ್ಗದರ್ಶನದ ಅಗತ್ಯವಿದೆ’ ಎಂದರು.

ಐವರು ಕಾರ್ಮಿಕರ ಸಾವು

ಮಂಗಳೂರು: ಇಲ್ಲಿನ ವಿಶೇಷ ಆರ್ಥಿಕ ವಲಯದಲ್ಲಿರುವ ಮುಂಬೈ ಮೂಲದ ಉಲ್ಕಾ ಮೀನು ಸಂಸ್ಕರಣಾ ಘಟಕದಲ್ಲಿ ತ್ಯಾಜ್ಯ ಸಂಗ್ರಹ ತೊಟ್ಟಿಗೆ ಇಳಿದಿದ್ದ ಐವರು ಕಾರ್ಮಿಕರು ಮೃತಪಟ್ಟಿದ್ದಾರೆ. ಘಟನೆಯ ಬಳಿಕ ಪೊಲೀಸರು ಘಟಕಕ್ಕೆ ಬೀಗ ಹಾಕಿದ್ದಾರೆ.

ಪಶ್ಚಿಮ ಬಂಗಾಳದ ಮೊಹಮ್ಮದ್ ಸ್ಯಾಮುಯೆಲ್ (19), ಉಮರ್ ಫಾರೂಕ್ (27) ಹಾಗೂ ನಿಝಾಮುದ್ದೀನ್ (18) ಭಾನುವಾರ ರಾತ್ರಿ, ಮಿರಾಜುಲ್ ಇಸ್ಲಾಂ (18) ಹಾಗೂ ಶರಾಫತ್ ಅಲಿ (18) ಸೋಮವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತಪಟ್ಟರು. ಅಜಾನ್ ಅಲಿ, ಮೊಹಮ್ಮದ್ ಕರೀಬುಲ್ಲಾ ಹಾಗೂ ಹಫೀಝುಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಭಾನುವಾರ ರಾತ್ರಿ ಈ ಘಟನೆ ನಡೆದಿದೆ. ತೊಟ್ಟಿಯಲ್ಲಿ ರಾಸಾಯನಿಕ ಬಳಕೆಯಾಗಿದೆಯೇ ಎಂಬುದರ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ. ಕಾರ್ಮಿಕರಿಗೆ ನಿರ್ಲಕ್ಷ್ಯ ವಹಿಸಿದ ಬಗ್ಗೆ ಪ್ರಕರಣ ದಾಖಲಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದ್ದಾರೆ.

‘ಪ್ರೊಡಕ್ಷನ್ ಮ್ಯಾನೇಜರ್ ರೂಬಿ ಜೋಸೆಫ್, ವಲಯ ವ್ಯವಸ್ಥಾಪಕ ಕುಬೇರ್ ಗಾಡೆ, ಮೇಲ್ವಿಚಾರಕ ಮುಹಮ್ಮದ್ ಅನ್ವರ್, ಕಾರ್ಮಿಕರ ಉಸ್ತುವಾರಿ ಉಳ್ಳಾಲದ ಆಝಾದ್ ನಗರ ನಿವಾಸಿ ಫಾರೂಕ್‌ರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಹೇಳಿದ್ದಾರೆ.

ಜನವರಿಯಲ್ಲೂ ದುರ್ಘಟನೆ: ಬೈಕಂಪಾಡಿ ಕೈಗಾರಿಕಾ ಕೇಂದ್ರದ ಮೀನು ಸಂಸ್ಕರಣಾ ಘಟಕದಲ್ಲಿ ಜನವರಿಯಲ್ಲಿ ವಿಷಾನಿಲ ಸೋರಿಕೆಯಾಗಿ ಇಪ್ಪತ್ತು ಕಾರ್ಮಿಕರು ಅಸ್ವಸ್ಥರಾಗಿದ್ದರು.

ಕಾಂಗ್ರೆಸ್ ಧೋರಣೆಗೆ ಬಿಜೆಪಿ ಖಂಡನೆ

ಹೊಸಪೇಟೆ (ವಿಜಯನಗರ): ಪ್ರಧಾನಿ ನರೇಂದ್ರ ಮೋದಿಯವರ ಆಡಳಿತಕ್ಕೆ ಮೆಚ್ಚುಗೆ ಹಾಗೂ ವಿರೋಧ ಪಕ್ಷ ಕಾಂಗ್ರೆಸ್ ನಕಾರಾತ್ಮಕ ಧೋರಣೆ ತಾಳುತ್ತಿದೆ ಎಂದು ದೂರಿ ಅದರ ವಿರುದ್ಧ ಬಿಜೆಪಿ ಖಂಡನಾ ನಿರ್ಣಯ ಕೈಗೊಂಡಿದೆ.ಭಾನುವಾರ ನಗರದಲ್ಲಿ ಕೊನೆಗೊಂಡ ಎರಡು ದಿನಗಳ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಈ ನಿರ್ಣಯ ಅಂಗೀಕರಿಸಲಾಗಿದೆ.

ಸುಗಮ ಆಡಳಿತಕ್ಕೆ ಸಹಕಾರ ನೀಡದೇ ಜನರ ದಾರಿ ತಪ್ಪಿಸುವ ಕಾರ್ಯ ಮಾಡಿದೆ. ಹಿಜಾಬ್, ಹಲಾಲ್ ಕಟ್ ವಿಚಾರಗಳ ಆಧರಿಸಿ ಕಾಂಗ್ರೆಸ್ ಗೊಂದಲ ಸೃಷ್ಟಿಸಲು ಪ್ರಯತ್ನಿಸಿರುವುದು ಖಂಡನಾರ್ಹ ಎಂದಿದೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಸತ್ಯವತಿ ಜಿ. ಸೇರಿ ಒಟ್ಟು 17 ಐಎಎಸ್ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಸೋಮವಾರ ವರ್ಗಾವಣೆ ಮಾಡಿದೆ.

ಸತ್ಯವತಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಜೊತೆಗೆ, ಮುಂದಿನ ಆದೇಶದವರೆಗೆ ಕೆಪಿಎಸ್‌ಸಿ ಕಾರ್ಯದರ್ಶಿ ಹುದ್ದೆಯನ್ನು ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ

ವರ್ಗಾವಣೆಯಾದ ಅಧಿಕಾರಿಗಳು	
ಡಾ.ಜಿ. ಕಲ್ಪನಾ	ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ
ಡಾ. ಶ್ರೀವತ್ಸ ಕೃಷ್ಣ	ಪ್ರಧಾನ ಕಾರ್ಯದರ್ಶಿ, ಡಿಪಿಎಆರ್ (ಆಡಳಿತ ಸುಧಾರಣೆ)
ಅಮ್ಲಾನ್ ಆದಿತ್ಯ ಬಿಸ್ವಾಸ್	ವಿಶೇಷ ಅಧಿಕಾರಿ, ಐಎಂಎ. ಹೆಚ್ಚುವರಿಯಾಗಿ ಪ್ರಾದೇಶಿಕ ಆಯುಕ್ತ, ಬೆಳಗಾವಿ ವಿಭಾಗ
ಮುನೀಶ್ ಮೌದ್ಗಿಲ್	ಆಯುಕ್ತ, ಸರ್ವೆ ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆ
ಶಿವಯೋಗಿ ಸಿ. ಕಳಸದ	ಕಾರ್ಯದರ್ಶಿ, ಕೃಷಿ ಇಲಾಖೆ
ಅನ್ಬುಕುಮಾರ್ ವಿ.	ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ
ಡಾ.ಎನ್.ವಿ. ಪ್ರಸಾದ್	ಕಾರ್ಯದರ್ಶಿ, ಸಾರಿಗೆ ಇಲಾಖೆ
ಡಾ. ರೇಜು ಎಂ.ಟಿ	ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ದೀಪಾ ಎಂ.	ವ್ಯವಸ್ಥಾಪಕ ನಿರ್ದೇಶಕಿ, ಕೆಯುಐಡಿಎಫ್‌ಸಿ
ಪಲ್ಲವಿ ಅಕುರಾತಿ	ರಾಜ್ಯ ಯೋಜನಾ ನಿರ್ದೇಶಕಿ, ಸರ್ವ ಶಿಕ್ಷಣ ಅಭಿಯಾನ
ವೆಂಕಟೇಶ್ ಕುಮಾರ್ ಆರ್.	ಕಾರ್ಯದರ್ಶಿ, ಕೆಕೆಆರ್‌ಡಿಬಿ, ಹೆಚ್ಚುವರಿಯಾಗಿ ಪ್ರಾದೇಶಿಕ ಆಯುಕ್ತ, ಕಲಬುರಗಿ ವಿಭಾಗ
ಡಾ. ರಾಕೇಶ್‌ಕುಮಾರ್ ಕೆ	ಆಯುಕ್ತ, ಸಮಾಜ ಕಲ್ಯಾಣ ಇಲಾಖೆ
ರವೀಂದ್ರ ಪಿ.ಎನ್	ವಿಶೇಷ ಆಯುಕ್ತ (ಯೋಜನೆಗಳು), ಬಿಬಿಎಂಪಿ
ಡಾ. ಅವಿನಾಶ್ ಮೆನನ್ ರಾಜೇಂದ್ರನ್	ಜಿಲ್ಲಾಧಿಕಾರಿ, ರಾಮನಗರ
ಚಂದ್ರಶೇಖರ ನಾಯಕ ಎಲ್	ಜಿಲ್ಲಾಧಿಕಾರಿ, ರಾಯಚೂರು
ವಿಜಯಮಹಾಂತೇಶ್ ಬಿ. ದಾನಮ್ಮನವರ್	ಜಿಲ್ಲಾಧಿಕಾರಿ, ವಿಜಯಪುರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,475
ಇಂದಿನ ಅಂತ್ಯ	17,173
▼	302
ದಿನದ ಕನಿಷ್ಠ	17,067

ವಿನಿಮಯ ದರ

$ ಡಾಲರ್	76.29
£ ಪೌಂಡ್	99.23
€ ಯುರೊ	82.31
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1630)
ಸೋಯಾ (ರಿಫೈನ್ಡ್)	₹1570 (1555)
ಸೂರ್ಯಕಾಂತಿ (ರಿಫೈನ್ಡ್)	₹1875 (1790)
ಪಾಮೋಲಿನ್	₹1502 (1502)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1200
ಮಧ್ಯಮ	₹800-1000
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

ಸಂಕ್ಷಿಪ್ತ ಸುದ್ದಿ

ಕಲಬುರಗಿ–ಹೈದರಾಬಾದ್ ಮಧ್ಯೆ ವಿಮಾನ ಸೇವೆ

ಕಲಬುರಗಿ: ಅಲಯನ್ಸ್ ಏರ್ ವಿಮಾನ ಸಂಸ್ಥೆಯು ಸೋಮವಾರದಿಂದ ಕಲಬುರಗಿ–ಹೈದರಾಬಾದ್ ಮಧ್ಯೆ ವಿಮಾನ ಸೇವೆ ಆರಂಭಿಸಿದೆ.

ಹೈದರಾಬಾದ್‌ನಿಂದ ನಿತ್ಯ ಮಧ್ಯಾಹ್ನ 3.40ಕ್ಕೆ ಹೊರಡುವ ವಿಮಾನ ಸಂಜೆ 4.30ಕ್ಕೆ ಕಲಬುರಗಿಗೆ ಬರಲಿದೆ. ಸಂಜೆ 5ಕ್ಕೆ ಕಲಬುರಗಿಯಿಂದ ಹೊರಟು ಸಂಜೆ 5.50ಕ್ಕೆ ಹೈದರಾಬಾದ್ ತಲುಪಲಿದೆ. ಕಲಬುರಗಿಯಿಂದ ಹೈದರಾಬಾದ್‌ಗೆ ₹ 2,356 ಹಾಗೂ ಹೈದರಾಬಾದ್‌ನಿಂದ ಕಲಬುರಗಿಗೆ ₹ 2,846 ಮೂಲ ದರ ನಿಗದಿಪಡಿಸಲಾಗಿದೆ.

ಮಾರುತಿ ಕಾರ್ ಬೆಲೆ ಶೇ 1.9ರವರೆಗೆ ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತಕ್ಷಣದಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿಗಳ ಬೆಲೆಯನ್ನು ಶೇಕಡ 0.9ರಿಂದ ಶೇ 1.9ರವರೆಗೆ ಹೆಚ್ಚಿಸಿದೆ. ದೆಹಲಿಯಲ್ಲಿ ಎಕ್ಸ್ ಷೋರೂಂ ಬೆಲೆ ಶೇ 1.3ರಷ್ಟು ಹೆಚ್ಚಾಗಲಿದೆ ಎಂದಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	26609-30399
ಕೋಕ	16699-29569
ಫ್ಯಾಕ್ಟರಿ	10509-20300
ಹಳೆಚಾಲಿ	46099-50519
ಹೊಸಚಾಲಿ	35699-40199
ಶಿವಮೊಗ್ಗ	
ಬೆಟ್ಟೆ	48109-52200
ಗೊರಬಲು	17500-35399
ರಾಶಿ	43036-48621
ಸರಕು	54009-75100
ಸಾಗರ	
ಬಿಳಿಗೋಟು	15269-32099
ಕೋಕ	13009-34099
ಚಾಲಿ	25399-39169
ಕೆಂಪುಗೋಟು	26919-38969
ರಾಶಿ	36899-48410
ಸಿಪ್ಪೆಗೋಟು	7290-23099
ಸಿದ್ದಾಪುರ	
ಬಿಳಿಗೋಟು	24699-31699
ಚಾಲಿ	48599-48599
ಕೋಕ	22299-30900
ಹೊಸಚಾಲಿ	37899-41099
ಕೆಂಪುಗೋಟು	28899-33199
ರಾಶಿ	45899-48799
ತಟ್ಟಿಬೆಟ್ಟೆ	38691-42300
ಶಿರಸಿ	
ಬೆಟ್ಟೆ	18099-46299
ಬಿಳಿಗೋಟು	22009-32699
ಚಾಲಿ	35169-41131
ರಾಶಿ	41120-48899
ಯಲ್ಲಾಪುರ	
ಬಿಳಿಗೋಟು	26899-33479
ಚಾಲಿ	36299-41169
ಕೋಕ	18899-30699
ಕೆಂಪುಗೋಟು	32368-35009
ರಾಶಿ	47799-53889
ರಾಮನಗರ ರೇಷ್ಮೆಗೂಡು	
ಮಿಶ್ರ ತಳಿ	302-799
ದ್ವಿತಳಿ	319-871

ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮೌಲ್ಯ ಇಳಿಕೆ

ಸೆನ್ಸೆಕ್ಸ್ 1,172 ಅಂಶ ಕುಸಿತ

ಮುಂಬೈ (ಪಿಟಿಐ): ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾದ ಕಾರಣದಿಂದಾಗಿ ಸೋಮವಾರ ದೇಶದ ಷೇರುಪೇಟೆಗಳ ವಹಿವಾಟು ಭಾರಿ ಇಳಿಕೆ ಕಂಡಿತು.

ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ತ್ರೈಮಾಸಿಕ ಸಾಧನೆಯು ಮಾರುಕಟ್ಟೆ ನಿರೀಕ್ಷೆಗಿಂತಲೂ ಕಡಿಮೆ ಇದೆ ಎನ್ನುವ ಕಾರಣಕ್ಕೆ ಈ ಕಂಪನಿಗಳ ಷೇರುಗಳು ಮಾರಾಟದ ಒತ್ತಡ ಎದುರಿಸಿದವು.

ರೂಪಾಯಿ ಮೌಲ್ಯ ಇಳಿಕೆ ಮತ್ತು ಹಣದುಬ್ಬರ ಹೆಚ್ಚಳದ ಮಾಹಿತಿಯು ಕೂಡ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,172 ಅಂಶ ಕುಸಿತ ಕಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 17,200ರ ಮಟ್ಟದಿಂದ ಕೆಳಗಿಳಿಯಿತು.

ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಮತ್ತು ಜಾಗತಿಕ ಮಟ್ಟದಲ್ಲಿ ಹಣದುಬ್ಬರದ ಆತಂಕದಿಂದಾಗಿ ಮುಂಬರುವ ದಿನಗಳಲ್ಲಿ ಮಾರುಕಟ್ಟೆಯು ಇನ್ನಷ್ಟು ಕುಸಿತ ಕಾಣುವ ನಿರೀಕ್ಷೆ ಇದೆ ಎಂದು ಈಕ್ವಿಟಿ99 ಕಂಪನಿಯ ಸಂಶೋಧನಾ ಮುಖ್ಯಸ್ಥ ರಾಹುಲ್ ಶರ್ಮ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರವು ಶೇ 0.18ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 111.5 ಡಾಲರ್‌ಗಳಂತೆ ಮಾರಾಟವಾಯಿತು.

ಸಂಪತ್ತು ಇಳಿಕೆ: ನಕಾರಾತ್ಮಕ ವಹಿವಾಟಿನಿಂದಾಗಿ ಮುಂಬೈ ಷೇರು ಪೇಟೆಯಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 2.58 ಲಕ್ಷ ಕೋಟಿ ಕರಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 269.44 ಲಕ್ಷ ಕೋಟಿಗಳಿಗೆ ಇಳಿಕೆ ಆಯಿತು.

ಇನ್ಫೊಸಿಸ್ ಬಂಡವಾಳ ಮೌಲ್ಯ ₹ 53,509 ಕೋಟಿ ಇಳಿಕೆ

ದಿನದ ವಹಿವಾಟಿನಲ್ಲಿ ಇನ್ಫೊಸಿಸ್ ಷೇರು ಮೌಲ್ಯ ಶೇ 7ಕ್ಕೂ ಹೆಚ್ಚಿನ ಇಳಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹ 53,509.71 ಕೋಟಿಯಷ್ಟು ಕಡಿಮೆ ಆಯಿತು. ಒಟ್ಟಾರೆ ಬಂಡವಾಳ ಮೌಲ್ಯವು ₹ 6.82 ಲಕ್ಷ ಕೋಟಿಗೆ ಇಳಿಕೆ ಆಯಿತು.

ಬಿಎಸ್‌ಇನಲ್ಲಿ ಷೇರು ಮೌಲ್ಯ ಶೇ 7.27ರಷ್ಟು ಇಳಿಕೆ ಆಗಿದ್ದು ಪ್ರತಿ ಷೇರಿನ ಬೆಲೆ ₹ 1,621ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 7.22ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹ 1,622ಕ್ಕೆ ತಲುಪಿತು.

ಎಚ್‌ಡಿಎಫ್‌ಸಿ ಬ್ಯಾಂಕ್ ಷೇರು ಮೌಲ್ಯ ಶೇ 4.74ರಷ್ಟು ಇಳಿಕೆ ಆಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

ಸುದ್ದಿ 2 ನಿಮಿಷ

ಸಕ್ಕರೆ ರಫ್ತು 90 ಲಕ್ಷ ಟನ್‌ಗೆ ತಲುಪುವ ನಿರೀಕ್ಷೆ

ನವದೆಹಲಿ (ಪಿಟಿಐ): ಸಕ್ಕರೆ ರಫ್ತು ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ 90 ಲಕ್ಷ ಟನ್‌ಗೆ ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘ (ಐಎಸ್‌ಎಂಎ) ಹೇಳಿದೆ.

ಭಾರತದ ಸಕ್ಕರೆಗೆ ಬಾಂಗ್ಲಾದೇಶ ಮತ್ತು ಇಂಡೋನೇಷ್ಯಾದಿಂದ ಉತ್ತಮ ಬೇಡಿಕೆ ಬಂದಿರುವುದೇ ಇದಕ್ಕೆ ಕಾರಣ ಎಂದು ತಿಳಿಸಿದೆ. ಸಕ್ಕರೆ ಮಾರುಕಟ್ಟೆಯು ಅಕ್ಟೋಬರ್‌ನಿಂದ ಸೆಪ್ಟೆಂಬರ್ ಅವಧಿಯವರೆಗೆ ಇರುತ್ತದೆ.

ಮಾರುಕಟ್ಟೆ ವರದಿ ಮತ್ತು ಬಂದರು ಮಾಹಿತಿಯ ಪ್ರಕಾರ, ಸಕ್ಕರೆ ಕಾರ್ಖಾನೆಗಳು ಸದ್ಯ 80 ಲಕ್ಷ ಟನ್ ರಫ್ತು ಮಾಡಲು ಒಪ್ಪಂದ ಮಾಡಿಕೊಂಡಿವೆ. ಇದರಲ್ಲಿ 57.17 ಲಕ್ಷ ಟನ್‌ಗಳಷ್ಟನ್ನು 2021ರ ಅಕ್ಟೋಬರ್‌ನಿಂದ 2022ರ ಮಾರ್ಚ್ ಅವಧಿಯಲ್ಲಿ ರಫ್ತು ಮಾಡಲಾಗಿದೆ. ಹಿಂದಿನ ಬಾರಿ ಇದೇ ಅವಧಿಯಲ್ಲಿ 31.85 ಲಕ್ಷ ಟನ್ ಸಕ್ಕರೆ ರಫ್ತು ಮಾಡಲಾಗಿತ್ತು ಎಂದು ಸಂಘವು ಪ್ರಕಟಣೆಯಲ್ಲಿ ತಿಳಿಸಿದೆ.

ಏಪ್ರಿಲ್‌ನಲ್ಲಿ 7 ಲಕ್ಷದಿಂದ 8 ಲಕ್ಷ ಟನ್ ರಫ್ತಾಗಲಿದೆ.

ಐಪಿಒಗೆ ದಾಖಲೆ ಸಲ್ಲಿಸಿದ ಕೇನ್ಸ್

ಬೆಂಗಳೂರು: ಮೈಸೂರು ಮೂಲದ ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹ 650 ಕೋಟಿ ಬಂಡವಾಳ ಸಂಗ್ರಹಿಸುವ ಉದ್ದೇಶದಿಂದ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಕರಡು ದಾಖಲೆಪತ್ರ (ಡಿಆರ್‌ಎಚ್‌ಪಿ) ಸಲ್ಲಿಸಿದೆ.

ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕಾ ವಲಯದಲ್ಲಿ ಈ ಕಂಪನಿ ತೊಡಗಿಸಿಕೊಂಡಿದೆ. ಐಪಿಒ ಸಂದರ್ಭದಲ್ಲಿ ಸಣ್ಣ ಹೂಡಿಕೆದಾರರಿಗೆ ಶೇಕಡ 35ರಷ್ಟು ಷೇರುಗಳು ಲಭ್ಯವಿರಲಿದೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ.

ಸಂಗ್ರಹ ಆಗಲಿರುವ ಬಂಡವಾಳವನ್ನು ಕಂಪನಿಯು ಸಾಲ ಮರುಪಾವತಿಸಲು, ಮೈಸೂರು ಮತ್ತು ಮಾನೇಸರದಲ್ಲಿ ಈಗ ಇರುವ ತಯಾರಿಕಾ ಘಟಕಗಳ ವಿಸ್ತರಣೆಗೆ, ಚಾಮರಾಜನಗರದಲ್ಲಿ ಹೊಸ ಘಟಕ ಆರಂಭಿಸಲು, ತನ್ನ ಅಂಗಸಂಸ್ಥೆಯಾದ ಕೇನ್ಸ್ ಎಲೆಕ್ಟ್ರಾನಿಕ್ಸ್‌ನಲ್ಲಿ ಹೂಡಿಕೆಗೆ, ಕಾರ್ಯಾಚರಣೆ ಬಂಡವಾಳದ ಅಗತ್ಯಗಳಿಗಾಗಿ ಹಾಗೂ ಇತರ ಕಾರ್ಪೊರೇಟ್ ಉದ್ದೇಶಗಳಿಗಾಗಿ ಬಳಸಿಕೊಳ್ಳಲಿದೆ ಎಂದು ಹೇಳಿದೆ.

2020–21ನೆಯ ಹಣಕಾಸು ವರ್ಷದಲ್ಲಿ ಕಂಪನಿಯು ₹ 9.73 ಕೋಟಿ ಲಾಭ ಗಳಿಸಿದೆ. 2021–22ನೆಯ ಹಣಕಾಸಿನ ವರ್ಷದಲ್ಲಿ ಡಿಸೆಂಬರ್ 31ರವರೆಗೆ ಕಂಪನಿಯು ₹ 21.82 ಕೋಟಿ ಲಾಭ ಗಳಿಸಿದೆ.

ಪ್ರಯಾಣಿಕ ವಾಹನ ರಫ್ತು ಶೇ 43ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತದಿಂದ ಪ್ರಯಾಣಿಕ ವಾಹನಗಳ ರಫ್ತು 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2021–22ನೇ ಹಣಕಾಸು ವರ್ಷದಲ್ಲಿ ಶೇಕಡ 43ರಷ್ಟು ಹೆಚ್ಚಾಗಿದೆ. ಅತಿ ಹೆಚ್ಚು ಪ್ರಯಾಣಿಕ ವಾಹನ ರಫ್ತು ಮಾಡಿರುವ ಕಂಪನಿಗಳ ಸಾಲಿನಲ್ಲಿ ಮಾರುತಿ ಸುಜುಕಿ ಇಂಡಿಯಾ ಮೊದಲ ಸ್ಥಾನದಲ್ಲಿದೆ.

2020–21ರಲ್ಲಿ 4.04 ಲಕ್ಷ ಪ್ರಯಾಣಿಕ ವಾಹನಗಳನ್ನು ರಫ್ತು ಮಾಡಲಾಗಿತ್ತು. 2021–22ರಲ್ಲಿ ಇದು 5.77 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಸೋಮವಾರ ಮಾಹಿತಿ ನೀಡಿದೆ.

ಪ್ರಯಾಣಿಕ ಕಾರು ರಫ್ತು ಶೇ 42ರಷ್ಟು ಹೆಚ್ಚಾಗಿದ್ದು 3.74 ಲಕ್ಷಕ್ಕೆ ತಲುಪಿದೆ. ಯುಟಿಲಿಟಿ ವಾಹನಗಳ ರಫ್ತು ಪ್ರಮಾಣವು ಶೇ 46ರಷ್ಟು ಹೆಚ್ಚಾಗಿದೆ.

ಬೇಡಿಕೆ ಹೆಚ್ಚಾಗಿರುವುದು ಹಾಗೂ ರಫ್ತು ಮಾಡುವ ಉತ್ಪನ್ನಗಳಿಗೆ ಸೆಮಿಕಂಡಕ್ಟರ್ ಚಿಪ್ ಸಾಕಷ್ಟು ಲಭ್ಯ ಇರುವುದರಿಂದ ರಫ್ತು ಪ್ರಮಾಣ ಹೆಚ್ಚಾಗಿದೆ ಎಂದು ಮಾರುತಿ ಸುಜುಕಿ ಕಂಪನಿಯ ಸಿಇಒ ಹಿಸಾಶಿ ಟೇಕುಚಿ ತಿಳಿಸಿದ್ದಾರೆ. ರೆನೊ 24,117 ವಾಹನ ಮತ್ತು ಹೋಂಡಾ ಕಾರ್ಸ್ 19,333 ವಾಹನಗಳನ್ನು ರಫ್ತು ಮಾಡಿವೆ.



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ತನಿಖೆ ಚುರುಕು, ದಿವ್ಯಾ ಪತಿ ಸೆರೆ

ಒಂದನೇ ಪುಟದಿಂದ..

ಅಂತರ ಕಾಯ್ದುಕೊಂಡ ಬಿಜೆಪಿ: ಇತ್ತೀಚೆಗೆ ನಗರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ದಿವ್ಯಾ ಮನೆಗೆ ಭೇಟಿ ನೀಡಿದ್ದರು.ದಿವ್ಯಾಹಾಗೂಅವರಪತಿರಾಜೇಶಅವರುಗೃಹಸಚಿವರೊಂದಿಗೆ ತೆಗೆಸಿಕೊಂಡ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದಾಗ ತೆಗೆಸಿಕೊಂಡ ಕೆಲವು ಫೋಟೊಗಳೂ ದಿವ್ಯಾ ಹಾಗರಗಿ ಅವರ ಶಾಲೆಯ ಗೋಡೆಗಳಲ್ಲಿ ಇನ್ನೂ ಇವೆ. ಅಲ್ಲದೇ,ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ದಿವ್ಯಾ ಅವರನ್ನು ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಸದಸ್ಯೆಯನ್ನಾಗಿ ನಾಮಕರಣ ಮಾಡಲಾಗಿತ್ತು.

ಹುಬ್ಬಳ್ಳಿ ಘಟನೆಯ ಹಿಂದೆ ಕೋಮುವಾದ (ಶಿವಮೊಗ್ಗ ವರದಿ): ಹುಬ್ಬಳ್ಳಿಯಲ್ಲಿ ಸ್ಟೇಟಸ್ ನೆಪವಾಗಿಟ್ಟುಕೊಂಡು ಹಿಂಸಾಚಾರಕ್ಕೆ ಇಳಿದದ್ದು ಸರಿಯಲ್ಲ. ಘಟನೆಯ ಹಿಂದೆ ಕೋಮುವಾದ ಕೆಲಸ ಮಾಡುತ್ತಿದೆ. ಯಾರೋ ಕೆಲವರು ಪ್ರಚೋದನೆ ನೀಡುತ್ತಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ದೂರಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೇಶದಾದ್ಯಂತ ಕೆಲವು ವಿಚ್ಛಿದ್ರಕಾರಿ ಶಕ್ತಿಗಳು ವ್ಯವಸ್ಥಿತವಾಗಿ ಇಂತಹ ದುಷ್ಕೃತ್ಯ ನಡೆಸುತ್ತಿವೆ. ಹಳೇ ಹುಬ್ಬಳ್ಳಿಯಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಯಾರೇ ಕಾನೂನು ಕೈಗೆ ತೆಗೆದುಕೊಂಡರೂ ಅವರನ್ನು ಬಿಡುವುದಿಲ್ಲ. ಶಿಕ್ಷೆ ಆಗೇ ಆಗುತ್ತದೆ' ಎಂದು ಹೇಳಿದರು.

ಎಲ್ಲಾ ಸಮುದಾಯದವರೂ ಸಂಯಮ ವಹಿಸಬೇಕು, ಒಟ್ಟಾಗಿ ಬದುಕಬೇಕು. ಶಾಂತಿ, ಸುವ್ಯವಸ್ಥೆ ಕಾಪಾಡಬೇಕು. ಎಲ್ಲಾ ಧರ್ಮದ ಹಿರಿಯರು ಕುಳಿತು ಮಾತನಾಡಬೇಕು- ಎಂದರು.

ಕಲಬುರಗಿಯಲ್ಲಿರುವ ದಿವ್ಯಾ ಹಾಗರಗಿ ಅವರ ಮನೆಗೆ ಈಚೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಭೇಟಿ ನೀಡಿದ್ದರು

ಸಿಐಡಿಗೆ ಮುಕ್ತ ಅವಕಾಶ: ಸಿ.ಎಂ

ಒಂದನೇ ಪುಟದಿಂದ..

'ಬೇರೆ ಪಕ್ಷದ ಸರ್ಕಾರ ಇದ್ದಿದ್ದರೆ ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸುತ್ತಿತ್ತು. ನಾವು ಹಾಗೆ ಮಾಡಿಲ್ಲ. ಸಿಐಡಿ ತನಿಖೆ ಆರಂಭಿಸಿದ್ದು, ಪರೀಕ್ಷೆ ನಡೆದ ಕೇಂದ್ರ, ಅಧೀಕ್ಷಕರ ಹಂತ, ಮೇಲಧಿಕಾರಿಗಳು ಹೀಗೆ ಸಮಗ್ರವಾಗಿ ತನಿಖೆ ನಡೆಸಲು ಸೂಚಿಸಲಾಗಿದೆ. ತಪ್ಪಿತಸ್ಥರು ಯಾರೇ ಆಗಿದ್ದರೂ ಕ್ರಮ ಕೈಗೊಳ್ಳಲಾಗುವುದು' ಎಂದರು.

ನೇಮಕಾತಿಗೆ ಮರು ಪರೀಕ್ಷೆ ನಡೆಸುವಂತೆ ಅಭ್ಯರ್ಥಿಗಳು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಿಐಡಿ ವರದಿ ನೀಡಿದ ಬಳಿಕ ಈ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

ಎಲ್ಲರನ್ನೂ ಬಂಧಿಸಲಾಗಿದೆ: 'ಹುಬ್ಬಳ್ಳಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ ಆರೋಪಿಗಳನ್ನು ಬಂಧಿಸಸಲಾಗಿದೆ. ತನಿಖೆ ಮುಂದುವರಿದಿದ್ದು, ಘಟನೆಯ ಹಿಂದಿರುವವರನ್ನು ಪತ್ತೆ ಹಚ್ಚಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಗಲಭೆ: ಸಹಜ ಸ್ಥಿತಿಯತ್ತ ಹುಬ್ಬಳ್ಳಿ

ಒಂದನೇ ಪುಟದಿಂದ...

ನ್ಯಾಯಾಂಗ ಬಂಧನ: ವಿವಾದಾತ್ಮಕ ಅನಿಮೇಟೆಡ್ ವಿಡಿಯೊವನ್ನು ವಾಟ್ಸ್ ಆ್ಯಪ್ ಸ್ಟೇಟಸ್ ಹಾಕಿಕೊಂಡಿದ್ದ ಆರೋಪಿ ಅಭಿಷೇಕ ಹಿರೇಮಠ ಹಾಗೂ ನಂತರ ನಡೆದ ಗಲಭೆಯ 88 ಆರೋಪಿಗಳಿಗೆ ಇಲ್ಲಿನ 4ನೇ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಏ. 30ರವರೆಗೆ ನ್ಯಾಯಾಂಗ ಬಂಧನಕ್ಕೆ ವಹಿಸಿ ಸೋಮವಾರ ಆದೇಶ ಹೊರಡಿಸಿದೆ.

ಆರೋಪಿಗಳನ್ನು ಇರಿಸಿದ್ದ ಧಾರವಾಡದ ಕೇಂದ್ರ ಕಾರಾಗೃಹದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಪೊಲೀಸರು ನ್ಯಾಯಾಧೀಶರ ಎದುರು ಹಾಜರುಪಡಿಸಿದರು. ಬಂಧಿತ ಅಭಿಷೇಕನನ್ನು ಮಾತ್ರ ಕೋರ್ಟ್‌ಗೆ ನೇರವಾಗಿ ಹಾಜರುಪಡಿಸಿದರು.

ಆರೋಪಿ ಸದ್ಯ ಹುಬ್ಬಳ್ಳಿಯ ಉಪ ಕಾರಾಗೃಹದಲ್ಲಿದ್ದಾನೆ. ಆತನ ಪರ ವಕೀಲರಿಂದ ಜಾಮೀನು ಅರ್ಜಿ ಸಲ್ಲಿಕೆಯಾಗಿದ್ದು, ಮಂಗಳವಾರ ಸರ್ಕಾರಿ ವಕೀಲರಿಂದ ತಕರಾರು ಅರ್ಜಿ ಸಲ್ಲಿಕೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗಲಭೆ ಆರೋಪಿಗಳ ವಿರುದ್ಧ ಕೊಲೆ ಯತ್ನ (ಐಪಿಸಿ 307), ಸರ್ಕಾರ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸುವುದು (ಐಪಿಸಿ 353) ಸೇರಿದಂತೆ 12 ಕಲಂಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

16 ಮಂದಿ ಬಿಡುಗಡೆ: 'ಘಟನೆ ಸಂಬಂಧ ವಶಕ್ಕೆ ಪಡೆದಿದ್ದವರ ಪೈಕಿ, 88 ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ಗಲಭೆಯಲ್ಲಿ ಪಾತ್ರವಿಲ್ಲದ 16 ಮಂದಿಯನ್ನು ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಲಾಭೂ ರಾಮ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿವಾದಾತ್ಮಕ ವಾಟ್ಸ್‌ಆ್ಯಪ್ ಸ್ಟೇಟಸ್ ಹಾಕಿಕೊಂಡಿದ್ದ ಯುವಕನ ಬಂಧನಕ್ಕೆ ಒತ್ತಾಯಿಸಿ, ಏ. 16ರಂದು ರಾತ್ರಿ ಉದ್ರಿಕ್ತರ ಗುಂಪು ಗಲಭೆ ನಡೆಸಿತ್ತು. ಕಲ್ಲು ತೂರಾಟ ನಡೆಸಿ, ವಾಹನಗಳನ್ನು ಜಖಂಗೊಳಿಸಿತ್ತು. ಘಟನೆಯಲ್ಲಿ 12 ಪೊಲೀಸರು ಗಾಯಗೊಂಡಿದ್ದರು.

ಎಡಿಜಿಪಿ ಸರಣಿ ಸಭೆ: ಅಪರಾಧ ವಿಭಾಗದ ಎಡಿಜಿಪಿ ಪ್ರತಾಪ್ ರೆಡ್ಡಿ ಅವರು ಹಳೇ ಹುಬ್ಬಳ್ಳಿ ಠಾಣೆಗೆ ಭೇಟಿ ನೀಡಿ, ಪ್ರಕರಣದ ಮಾಹಿತಿ ಪಡೆದರು. ಪೊಲೀಸ್ ಕಮಿಷನರ್ ಲಾಭೂ ರಾಮ್ ಮತ್ತು ಡಿಸಿಪಿಗಳು ತನಿಖಾ ತಂಡಗಳ ಜೊತೆ ಸರಣಿ ಸಭೆ ನಡೆಸಿದರು.

ಕಾಂಗ್ರೆಸ್ ನಿಯೋಗ ಭೇಟಿ: ಕಾಂಗ್ರೆಸ್ ಶಾಸಕ ಪ್ರಸಾದ ಅಬ್ಬಯ್ಯ, ಮೇಲ್ಮನೆ ಸದಸ್ಯ ಸಲೀಂ ಅಹಮದ್ ಹಾಗೂ ಅಂಜುಮನ್ ಎ ಇಸ್ಲಾಂ ಸಂಸ್ಥೆ ಅಧ್ಯಕ್ಷ ಯೂಸುಫ್ ಸವಣೂರ ಮತ್ತು ಉಪಾಧ್ಯಕ್ಷ ಅಲ್ತಾಫ್ ಕಿತ್ತೂರ ಅವರಿದ್ದ ನಿಯೋಗವು ಅಪರಾಧ ವಿಭಾಗದ ಎಡಿಜಿಪಿ ಹಾಗೂ ಪೊಲೀಸ್ ಕಮಿಷನರ್ ಅವರನ್ನು ಭೇಟಿ ಮಾಡಿತು. ತಪ್ಪಿತಸ್ಥರನ್ನು ಮಾತ್ರ ಬಂಧಿಸಬೇಕು ಎಂದು ಕೋರಿತು.

> **ಬಂಧಿತ ಆರೋಪಿಗಳನ್ನು ಅಮಾಯಕರು ಎಂದು ತನಿಖೆಗೂ ಮುಂಚೆಯೇ ಹೇಗೆ ಹೇಳುವಿರಿ? ಆ ವಿಷಯ ಹೇಗೆ ಗೊತ್ತಾಯಿತು?'**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ಅಮಾಯಕರು ಎಂದು ಸರ್ಟಿಫಿಕೇಟ್ ಕೊಡಲು ಜೆಡಿಎಸ್, ಕಾಂಗ್ರೆಸ್‌ನವರು ತನಿಖೆ ನಡೆಸಿದ್ದಾರೆಯೇ?**
> **ಸಿ.ಟಿ.ರವಿ,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> **ರಾಜ್ಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಗೃಹ ಸಚಿವ ಆರಗ ಜ್ಞಾನೇಂದ್ರ ಬಗ್ಗೆ ಅವರ ಪಕ್ಷದವರೇ ಟೀಕೆ ಮಾಡುತ್ತಿದ್ದಾರೆ**
> **ಸಲೀಂ ಅಹ್ಮದ್**, ವಿಧಾನ ಪರಿಷತ್ ಸದಸ್ಯ

ನಾಣ್ಯ ನಾಪತ್ತೆ: ಸಿಬಿಐ ತನಿಖೆ

ನವದೆಹಲಿ (ಪಿಟಿಐ): ರಾಜಸ್ಥಾನದ ಮೆಹಂದಿಪುರ ಬಾಲಾಜಿಯಲ್ಲಿನ ಎಸ್‌ಬಿಐ ಶಾಖೆಯಿಂದ ₹ 11 ಕೋಟಿ ಮೌಲ್ಯದ ನಾಣ್ಯಗಳು ನಾಪತ್ತೆಯಾದ ಪ್ರಕರಣದ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ.

ಪ್ರಕರಣದ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಎಸ್‌ಬಿಐ ರಾಜಸ್ಥಾನ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಹೈಕೋರ್ಟ್ ಆದೇಶದ ಅನುಸಾರ ಸಿಬಿಐ ತನಿಖೆ ಆರಂಭಿಸಿದೆ.

ಶಾಖೆಯಲ್ಲಿ ನಡೆದ ಪ್ರಾಥಮಿಕ ವಿಚಾರಣೆಯಲ್ಲಿ ಹಣದ ವ್ಯತ್ಯಾಸ ಕಂಡುಬಂತು. ನಂತರದಲ್ಲಿ ಹಣದ ಲೆಕ್ಕಾಚಾರ ನಡೆಸಲಾಯಿತು. ನಾಣ್ಯಗಳು ನಾಪತ್ತೆ ಆಗಿರುವುದು ಪತ್ತೆಯಾಯಿತು.

ಮುಂಬೈ ಧಾರಣೆ

ಶೇಂಗಾ

18-4-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1640)
ಒಂದು ವಾರದ ಡೆಲಿವರಿ	1645 (1635)
ಸೋಯಾ ಕಚ್ಚಾ	15550 (1520)
ಪಾಮ್ ವಾರದ ಡೆಲಿವರಿ	1500 (1500)
ಸೂರ್ಯಕಾಂತಿ ಎಣ್ಣೆ ಕಚ್ಚಾ	1825 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,300 (52,800)
ಬೆಳ್ಳಿ ಕೆ.ಜಿ 70,000 (69,350)

ಆವರಣದಲ್ಲಿ ಶನಿವಾರದ ಧಾರಣೆ

'ಕ್ರಿಪ್ಟೊ' ವಂಚನೆ ಜಾಲ: ₹ 17 ಕೋಟಿ ಜಪ್ತಿ

ಒಂದನೇ ಪುಟದಿಂದ...

ಅದನ್ನು ನಂಬಿದ್ದ ಸಾರ್ವಜನಿಕರು, ಆರೋಪಿಗಳನ್ನು ಸಂಪರ್ಕಿಸಿ ಹಣ ಹೂಡಿಕೆ ಮಾಡಲಾರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಶೇರ್ ಹ್ಯಾಷ್' ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಖಾತೆ ತೆರೆದು ₹ 5 ಸಾವಿರ ಹೂಡಿಕೆ ಮಾಡಿದರೆ, ದಿನಕ್ಕೆ ₹ 49 ಬಡ್ಡಿ ನೀಡಲಾಗುತ್ತಿತ್ತು. ಇದೇ ಕಾರಣಕ್ಕೆ ಸಾವಿರಾರು ಮಂದಿ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಹೂಡಿಕೆ ಮಾಡಲಾರಂಭಿಸಿದ್ದರು. 900 ವಾಟ್ಸಾಪ್ ಗ್ರೂಪ್‌ಗಳನ್ನು ಸೃಷ್ಟಿಸಿದ್ದರು. ಪ್ರತಿ ಗ್ರೂಪ್‌ನಲ್ಲಿ 256 ಸದಸ್ಯರಿದ್ದರು' ಎಂದೂ ತಿಳಿಸಿದರು.

ಆ್ಯಪ್ ಏಕಾಏಕಿ ಬಂದ್: 'ಗೂಗಲ್ ಪ್ಲೇಸ್ಟೋರ್ ಮೂಲಕ ಸಾವಿರಾರು ಮಂದಿ ಶೇರ್‌ಹ್ಯಾಷ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು. 'ಆ್ಯಪ್‌ನಲ್ಲಿ ದೋಷ ಕಂಡುಬಂದಿದ್ದು, ಸದ್ಯದಲ್ಲೇ ಶೇರ್‌ಹ್ಯಾಷ್ 2.0 ಹೆಸರಿನಲ್ಲಿ ಹೊಸ ಆ್ಯಪ್ ಬಿಡುಗಡೆ ಮಾಡುತ್ತೇವೆ' ಎಂಬುದಾಗಿ ಆರೋಪಿಗಳು ಹೂಡಿಕೆದಾರರಿಗೆ ಸಂದೇಶ ಕಳುಹಿಸಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಆ್ಯಪ್ ಬಂದ್ ಮಾಡಿದ್ದ ಆರೋಪಿಗಳು, ಗೂಗಲ್ ಪ್ಲೇಸ್ಟೋರ್‌ನಿಂದಲೂ ತೆಗೆದು ಹಾಕಿದ್ದರು. ಆಗ ಗ್ರಾಹಕರು ಠಾಣೆಗೆ ಬಂದು ದೂರು ನೀಡಿದ್ದರು' ಎಂದೂ ಹೇಳಿದರು.

ಶೀತಲ್ ಬಸ್ತವಾಡ್

ಇಮ್ರಾನ್ ರಿಯಾಜ್

ರೆಹಮತ್ ಉಲ್ ಖಾನ್

ಜಬೀವುಲ್ಲಾ ಖಾನ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

REQUIRED URGENTLY BABY SITTERS, HOUSE MADE/HOME NURSE Male/ Female, 24/12 Hours Duty. Contact: 6366883838, 7022399993

NEED SOCIAL Worker near BTM for NGO. Good Salary. Call 7605058339

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★||ಶ್ರೀಕೇದರನಾಥ||★ ಆರಾಧನೆಯಿಂದ ಆರಾಧನೆಯಿಂದ ಪ್ರೀತಿಪ್ರೇಮ,ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತಪರಿಹಾರ. 9148773459

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ವೈಯಕ್ತಿಕ

Lost

LOST
The GPAs documents have been lost while travelling in a bus near Vijayanagar. In this regard have lodged complaint with Lost Report No.0196186/2022 dt.06/04/2022 finder Contact : 8095390389

ಪ್ರವಾಸ

Travel

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಢ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

24 ವರ್ಷಗಳ ಅನುಭವಿ ಪ್ರವಾಸಿ ಸಂಸ್ಥೆಯಿಂದ 11.06.2022 27.06.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 27.05.2022 04.06.2022 ರಿಂದ 8 ದಿನಗಳ ಶಿಮ್ಲಾ,ಕುಲುಮನಾಲಿ, ಚಂಡಿಘಡ್ 07.05.2022, 16.05.2022 ರಿಂದ 7 ದಿನಗಳ ಕಾಶಿ,ಗಯಾ 30.06.2022 09.07.2022 ರಿಂದ 12/8 ದಿನಗಳ ಅಮರನಾಥ್,ಕಾಶ್ಮೀರ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 080-23385837 8088887677

03.06.2022 18.06.2022 20.06.2022 ಚಾರ್‌ಧಾಮ್ ಪ್ರವಾಸ. 06.07.2022 16.07.2022 ಅಮರನಾಥ್ ಪ್ರವಾಸಗಳು. 01.09.2022, 35 ದಿನಗಳ ಉತ್ತರ ಭಾರತ. 7 ದಿನಗಳ ಕಾಶಿ,ಗಯಾ,ಅಯೋಧ್ಯ, ಇತ್ಯಾದಿ. ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131, 26573421, 9964108171

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

Pilgrimage Tours

29.4.2022 ಚಿಕ್ಕಮಗಳೂರು, ಕೆಮ್ಮಣ್ಣಗುಂಡಿ 13.5.2022 ನಾಗರಹೊಳೆ. ಮಡಿಕೇರಿ 7.6.2022 ಚಾರ್ ಧಾಮ್ ಯಾತ್ರಾ 25.7.2022 ಕಾಶಿ,ಗಯಾ, ಬುದ್ಧಗಯಾ, ಅನುಗ್ರಹಯಾತ್ರ. 9880079351

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೋಲ್ಕತ್ತ ಎದುರಿನ ಪಂದ್ಯ: ಚಾಹಲ್ ಹ್ಯಾಟ್ರಿಕ್, ಜೋಸ್ ಬಟ್ಲರ್ ಶತಕ

ರಾಯಲ್ಸ್‌ಗೆ ಜಯದ ಪುಳಕ

ಮುಂಬೈ (ಪಿಟಿಐ): ಜೋಸ್ ಬಟ್ಲರ್ ಶತಕ ಸಿಡಿಸಿ ಸಂಭ್ರಮಿಸಿದ ಪಂದ್ಯದಲ್ಲಿ ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಹ್ಯಾಟ್ರಿಕ್ ಮೂಲಕ ಮಿಂಚಿದರು. ಇವರಿಬ್ಬರ ಅಮೋಘ ಆಟದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡ ರೋಚಕ ಜಯ ಸಾಧಿಸಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ರಾಜಸ್ಥಾನ ತಂಡ 7 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಜಯ ಗಳಿಸಿತು. ಬಟ್ಲರ್ ಶತಕದ ಬಲದಿಂದ ರಾಜಸ್ಥಾನ 5ಕ್ಕೆ 217 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ಕೋಲ್ಕತ್ತ ತಂಡ ಆ್ಯರನ್ ಫಿಂಚ್ ಮತ್ತು ಶ್ರೇಯಸ್ ಅಯ್ಯರ್ ಅವರ ಅರ್ಧಶತಕಗಳ ಬಲದಿಂದ ಗೆಲುವಿನತ್ತ ಹೆಜ್ಜೆ ಹಾಕಿತ್ತು. ಆದರೆ 17ನೇ ಓವರ್‌ನಲ್ಲಿ ಹ್ಯಾಟ್ರಿಕ್ ಸೇರಿದಂತೆ ನಾಲ್ಕು ವಿಕೆಟ್ ಕಬಳಿಸಿದ ಚಾಹಲ್ ಪಂದ್ಯಕ್ಕೆ ತಿರುವು ನೀಡಿದರು.

ಗರಿಷ್ಠ ಮೊತ್ತ ದಾಖಲಿಸಿದ ರಾಯಲ್ಸ್: ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಿದ ಬಟ್ಲರ್ ಅವರ ಬಲದಿಂದ ರಾಜಸ್ಥಾನ ಈ ಆವೃತ್ತಿಯ ಗರಿಷ್ಠ ಮೊತ್ತ ದಾಖಲಿಸಿತು. ಬೆಂಗಳೂರು ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 216 ರನ್ ಗಳಿಸಿದ್ದು ಈ ವರೆಗಿನ ಗರಿಷ್ಠ ಸ್ಕೋರ್ ಆಗಿತ್ತು. ಕೋಲ್ಕತ್ತ ಎದುರು ಡೆಲ್ಲಿ ಕ್ಯಾಪಿಟಲ್ಸ್ 5ಕ್ಕೆ 215 ರನ್ ಗಳಿಸಿತ್ತು.


ಯಜುವೇಂದ್ರ ಚಾಹಲ್– ಪಿಟಿಐ ಚಿತ್ರ

ಕೋಲ್ಕತ್ತ ಬೌಲರ್‌ಗಳನ್ನು ನಿರಾತಂಕವಾಗಿ ಎದುರಿಸಿದ ಜೋಸ್ ಬಟ್ಲರ್ ಲೀಲಾಜಾಲವಾಗಿ ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಸಿಡಿಸಿದರು. 61 ಎಸೆತಗಳಲ್ಲಿ 103 ರನ್ ಗಳಿಸಿದ ಅವರ ಬ್ಯಾಟಿನಿಂದ 9 ಬೌಂಡರಿ ಮತ್ತು 5 ಸಿಕ್ಸರ್‌ಗಳು ಸಿಡಿದವು.

ದೇವದತ್ತ ಪಡಿಕ್ಕಲ್ ಜೊತೆ ಮೊದಲ ವಿಕೆಟ್‌ಗೆ 97 ರನ್ ಗಳಿಸಿದ ಅವರು ಇನಿಂಗ್ಸ್‌ಗೆ ಭದ್ರ ತಳಪಾಯ ಹಾಕಿಕೊಟ್ಟರು. ಉಮೇಶ್ ಯಾದವ್ ಅವರ ಎಸೆತವೊಂದರಲ್ಲಿ ಅವರು ಗಳಿಸಿದ ಸಿಕ್ಸರ್‌ನಲ್ಲಿ ಚೆಂಡು ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದ ಟೆನಿಸ್ ಕೋರ್ಟ್ ಒಳಗೆ ಹೋಗಿ ಬಿದ್ದಿತು!

ದೇವದತ್ತ ಪಡಿಕ್ಕಲ್ ಔಟಾದ ನಂತರ ಕ್ರೀಸ್‌ಗೆ ಬಂದ ನಾಯಕ ಸಂಜು ಸ್ಯಾಮ್ಸನ್ ಕೂಡ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರು. ಎರಡನೇ ವಿಕೆಟ್‌ಗೆ ಬಟ್ಲರ್ ಮತ್ತು ಸಂಜು 67 ರನ್ ಸೇರಿಸಿದರು. 34 ಎಸೆತಗಳಲ್ಲಿ ಈ ರನ್‌ಗಳು ಬಂದಿದ್ದವು. ಪ್ಯಾಟ್ ಕಮಿನ್ಸ್ ಎಸೆತವನ್ನು ಹುಕ್ ಮಾಡುವ ಪ್ರಯತ್ನದಲ್ಲಿ ವರುಣ್ ಚಕ್ರವರ್ತಿಗೆ ಕ್ಯಾಚ್ ಕೊಡುವ ಮೊದಲು ಬಟ್ಲರ್ ತಂಡದ ಮೊತ್ತವನ್ನು 180ರ ಗಡಿ ದಾಟಿಸಿದ್ದರು.

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 5ಕ್ಕೆ 217 (20 ಓವರ್)
ಬಟ್ಲರ್ ಸಿ ವರುಣ್ ಬಿ ಕಮಿನ್ಸ್ 103 (61 ಎ, 4x9, 6x5), ದೇವದತ್ತ ಬಿ ನಾರಾಯಣ್ 24 (18 ಎ, 4x3, 6x1), ಸಂಜು ಸಿ ಶಿವಂ ಬಿ ರಸೆಲ್ 38 (19 ಎ, 4x3, 4x2), ಶಿಮ್ರೊನ್ ಔಟಾಗದೆ 26 (13 ಎ, 4x2, 6x2), ರಿಯಾನ್ ಸಿ ಶಿವಂ ಬಿ ನಾರಾಯಣ್ 5 (3 ಎ, 4x1), ಕುರುಣ್ ಸಿ ಕಮಿನ್ಸ್ ಬಿ ಶಿವಂ 3 (5 ಎ), ರವಿಚಂದ್ರನ್ ಔಟಾಗದೆ 2 (2 ಎ)
ಇತರೆ (ಬೈ 3, ಲೆಗ್‌ಬೈ 6, ನೋಬಾಲ್ 1, ವೈಡ್ 6) 16
ವಿಕೆಟ್ ಪತನ: 1-97 (ದೇವದತ್ತ ಪಡಿಕ್ಕಲ್, 9.4), 2-164 (ಸಂಜು ಸ್ಯಾಮ್ಸನ್, 15.2), 3-183 (ಜೋಸ್ ಬಟ್ಲರ್, 16.4), 4-189 (ರಿಯಾನ್ ಪರಾಗ್, 17.1), 5-198 (ಕರುಣ್ ನಾಯರ್, 18.5)
ಬೌಲಿಂಗ್: ಉಮೇಶ್ ಯಾದವ್ 4-0-44-0, ಶಿವಂ ಮಾವಿ 4-0-34-1, ವರುಣ್ ಚಕ್ರವರ್ತಿ 2-0-30-0, ಪ್ಯಾಟ್ ಕಮಿನ್ಸ್ 4-0-50-1, ಸುನಿಲ್ ನಾರಾಯಣ್ 4-0-21-2, ಆ್ಯಂಡ್ರೆ ರಸೆಲ್ 2-0-29-1

ಕೋಲ್ಕತ್ತ ನೈಟ್ ರೈಡರ್ಸ್ 210 (19.4 ಓವರ್)
ಫಿಂಚ್ ಸಿ ನಾಯರ್ ಬಿ ಪ್ರಸಿದ್ಧ 58 (28ಎ, 4X9, 6X2), ಸುನಿಲ್ ರನೌಟ್ (ಹೆಟ್ಮೆಯರ್) 0 (0ಎ), ಶ್ರೇಯಸ್ ಎಲ್‌ಬಿಡಬ್ಲ್ಯು ಯಜುವೇಂದ್ರ 85 (51ಎ, 4X7, 6X4), ನಿತೀಶ್ ಸಿ ಬಟ್ಲರ್ ಬಿ ಯಜುವೇಂದ್ರ 18 (11ಎ, 4X1, 6X1), ರಸೆಲ್ ಬಿ ಅಶ್ವಿನ್ 0 (1ಎ), ವೆಂಕಟೇಶ್ ಸಿ ಸ್ಯಾಮ್ಸನ್ ಬಿ ಯಜುವೇಂದ್ರ 6 (7ಎ), ಜಾಕ್ಸನ್ ಸಿ ಪ್ರಸಿದ್ಧ ಬಿ ಮೆಕಾಯ್ 8 (8ಎ), ಶಿವಂ ಸಿ ಪರಾಗ್ ಬಿ ಯಜುವೇಂದ್ರ 0 (1ಎ), ಕಮಿನ್ಸ್ ಸಿ ಸ್ಯಾಮ್ಸನ್ ಬಿ ಯಜುವೇಂದ್ರ 0 (1ಎ), ಉಮೇಶ್ ಸಿ ಮೆಕಾಯ್ 21 (9ಎ, 4X1, 6X2), ವರುಣ್ ಔಟಾಗದೆ 1 (1ಎ))
ಇತರೆ (ವೈಡ್ 13) 13
ವಿಕೆಟ್ ಪತನ: 1-0 (ಸುನಿಲ್ ನಾರಾಯಣ್, 0.1), 2-107 (ಆ್ಯರನ್ ಫಿಂಚ್, 8.6), 3-148 (ನಿತೀಶ್ ರಾಣಾ, 12.6), 4-149 (ಆ್ಯಂಡ್ರೆ ರಸೆಲ್, 13.4), 5-178 (ವೆಂಕಟೇಶ್ ಅಯ್ಯರ್, 16.1), 6-180 (ಶ್ರೇಯಸ್ ಅಯ್ಯರ್, 16.4), 7-180 (ಶಿವಂ ಮಾವಿ, 16.5), 8-180 (ಪ್ಯಾಟ್ ಕಮಿನ್ಸ್, 16.6), 9-209 (ಶೆಲ್ಡನ್ ಜಾಕ್ಸನ್, 19.2), 10-210 (ಉಮೇಶ್ ಯಾದವ್, 19.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-48-0, ಪ್ರಸಿದ್ಧ ಕೃಷ್ಣ 4-0-43-1, ಒಬೇದ್ ಮೆಕಾಯ್ 3.4-0-41-2, ರವಿಚಂದ್ರನ್ ಅಶ್ವಿನ್ 4-0-38-1, ಯಜುವೇಂದ್ರ ಚಾಹಲ್ 4-0-40-5

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 7 ರನ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	6	5	1	0	0	10	0.395
ರಾಜಸ್ಥಾನ	6	4	2	0	0	8	0.380
ಲಖನೌ	6	4	2	0	0	8	0.296
ಬೆಂಗಳೂರು	6	4	2	0	0	8	0.142
ಹೈದರಾಬಾದ್	6	4	2	0	0	8	-0.077
ಕೋಲ್ಕತ್ತ	7	3	4	0	0	6	0.160
ಪಂಜಾಬ್	6	3	3	0	0	6	0.109
ಡೆಲ್ಲಿ	5	2	3	0	0	4	0.219
ಚೆನ್ನೈ	6	1	5	0	0	2	-0.638
ಮುಂಬೈ	6	0	6	0	0	0	-1.048

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	375
ಶ್ರೇಯಸ್	ಕೋಲ್ಕತ್ತ	236
ರಾಹುಲ್	ಲಖನೌ	235

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	17
ನಟರಾಜನ್	ಹೈದರಾಬಾದ್	12
ಕುಲದೀಪ್	ಡೆಲ್ಲಿ	11

ಅಗ್ರಸ್ಥಾನದತ್ತ ಬೆಂಗಳೂರು ಚಿತ್ತ

ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಜಯದ ತವಕ

ನವಿ ಮುಂಬೈ (ಪಿಟಿಐ): ದಿನೇಶ್ ಕಾರ್ತಿಕ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಫಿನಿಶಿಂಗ್ ಸಾಮರ್ಥ್ಯ; ಕೆ.ಎಲ್. ರಾಹುಲ್ ಅವರ ಬ್ಯಾಟಿಂಗ್ ಸೊಬಗು ಮತ್ತು ಕ್ವಿಂಟನ್ ಡಿ ಕಾಕ್ ಹೊಡೆತಗಳ ವೈಭವ...

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳ ನಡುವಿನ ಹಣಾಹಣಿ ಈ ನಾಲ್ವರ ಅಮೋಘ ಫಾರ್ಮ್‌ನಿಂದಾಗಿ ಕುತೂಹಲಕ್ಕೆ ಕಾರಣವಾಗಿದೆ.

ಡೆಲ್ಲಿ ಕ್ಯಾಪಿಟಲ್ಸ್ ಎದುರು ಗೆದ್ದ ಆರ್‌ಸಿಬಿ ಮತ್ತು ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಜಯ ಗಳಿಸಿರುವ ಲಖನೌ ಭರವಸೆಯಿಂದ ಮಂಗಳವಾರ ಕಣಕ್ಕೆ ಇಳಿಯಲಿವೆ. ಎರಡೂ ತಂಡಗಳು ಈ ವರೆಗೆ ಸಮಬಲದ ಸಾಮರ್ಥ್ಯ ಪ್ರದರ್ಶಿಸಿವೆ. ಮುಂದಿನ ಪಂದ್ಯದಲ್ಲಿ ಜಯ ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದತ್ತ ಸಾಗಲು ತಂಡಗಳು ಪ್ರಯತ್ನಿಸಲಿವೆ.

ಆರ್‌ಸಿಬಿಯಲ್ಲಿ ಉತ್ತಮ ಫಿನಿಷರ್‌ಗಳು ಇದ್ದರೂ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸುತ್ತಿದ್ದಾರೆ. ನಾಯಕ ಫಫ್ ಡುಪ್ಲೆಸಿ ಮತ್ತು ಮಾಜಿ ನಾಯಕ ವಿರಾಟ್ ಕೊಹ್ಲಿ ಅವರಿಗೆ ಮಿಂಚಲು ಸಾಧ್ಯವಾಗುತ್ತಿಲ್ಲ. ಕಾರ್ತಿಕ್ ಮತ್ತು ಮ್ಯಾಕ್ಸ್‌ವೆಲ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಜೋಶ್ ಹ್ಯಾಜಲ್‌ವುಡ್ ಮಿಂಚುತ್ತಿದ್ದು ಅವರಿಗೆ ವನಿಂದು ಹಸರಂಗ ಮತ್ತು ಹರ್ಷಲ್ ಪಟೇಲ್ ಅವರ ಬಲವಿದೆ. ಲಖನೌ ತಂಡದ ನಾಯಕ ಕೆ.ಎಲ್.ರಾಹುಲ್ ಮತ್ತು ವಿಕೆಟ್ ಕೀಪರ್ ಕ್ವಿಂಟನ್ ಡಿ ಕಾಕ್ ಯಾವುದೇ ಬೌಲರ್‌ಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆಸ್ಪತ್ರೆಗೆ ಮಿಚೆಲ್

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮಿಚೆಲ್ ಮಾರ್ಷ್‌ಗೆ ಕೋವಿಡ್–19 ಸೋಂಕು ದೃಢಪಟ್ಟಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕನಿಷ್ಠ 10 ದಿನ ತಂಡದಿಂದ ಹೊರಗೆ ಉಳಿಯಬೇಕಾಗಿದೆ. ಸೋಮವಾರ ನಡೆದ ನಾಟಕೀಯ ಬೆಳವಣಿಗೆಗಳಲ್ಲಿ ಮೊದಲು ಮಾರ್ಷ್ ಅವರ ಆರ್‌ಟಿ ಪಿಸಿಆರ್ ಪರೀಕ್ಷಾ ವರದಿ ನೆಗೆಟಿವ್ ಬಂದಿತ್ತು. 2ನೇ ಪರೀಕ್ಷೆಯಲ್ಲಿ ಪಾಸಿಟಿವ್ ಆಗಿತ್ತು.

ಆರ್‌ಸಿಬಿ ಪಂದ್ಯ ವೀಕ್ಷಣೆಗೆ ಮುಂಬೈಗೆ ಪಯಣಿಸಿದ ಬೆಂಗಳೂರು ದಂಪತಿ

ಮನ ಗೆದ್ದ 'ಸಾವಿರ'ದ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಬಾರಿ ಕ್ರೀಡಾಂಗಣದಲ್ಲಿ 'ಲೈವ್' ಆಗಿ ಪಂದ್ಯ ನೋಡಿದ ಅನುಭವದ ಖುಷಿಯನ್ನು ಸಾವಿರ ಪಟ್ಟು ಹೆಚ್ಚಿಸಿದ್ದು ಒಂದೇ ಒಂದು ಫಲಕ...

ಕಳೆದ ಶನಿವಾರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯದಲ್ಲಿ ಪ್ರದರ್ಶನಗೊಂಡ ಆ ಫಲಕ ಈಗ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಅಂದಿನ ಪಂದ್ಯದ ಶ್ರೇಷ್ಠ ಆಟಗಾರನಿಂದಲೇ ಟ್ವಿಟರ್‌ನಲ್ಲಿ ಪ್ರಶಂಸೆಗೆ ಒಳಗಾಗಿದೆ.

ಒಂದು ಫಲಕದ ಮೂಲಕ ಗಮನ ಸೆಳೆದ ಆ ಜೋಡಿ ಬೆಂಗಳೂರಿನ ಶಿಲ್ಪಾ ಶೇಷಾದ್ರಿ ಮತ್ತು ಅರ್ಚಿತ್. ಬಸವನಗುಡಿ ನಿವಾಸಿಗಳಾದ ಈ ದಂಪತಿ ಪಂದ್ಯ ವೀಕ್ಷಿಸಲು ಇಬ್ಬರು ಗೆಳೆಯರೊಂದಿಗೆ ಕಾರಿನಲ್ಲಿ ಮುಂಬೈಗೆ ತೆರಳಿದ್ದರು. ಹೀಗಾಗಿ ಪಂದ್ಯ ನಡೆಯುತ್ತಿದ್ದ ವೇಳೆ 'ಆರ್‌ಸಿಬಿ, ನಿನಗಾಗಿ ಸಾವಿರ ಕಿಲೋಮೀಟರ್ ಪಯಣಿಸಿ ಬಂದಿದ್ದೇವೆ' ಎಂದು ಬರೆದ ಫಲಕ ಪ್ರದರ್ಶಿಸಿದ್ದರು. 'ಈ ಸಲ ಕಪ್ ನಮ್ದೆ' ಎಂಬ ಒಕ್ಕಣೆಯೂ ಅದರಲ್ಲಿತ್ತು.

ಆ ಫಲಕ ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದೆ. ಆಂಗ್ಲ ಮಾಧ್ಯಮಗಳ ವೆಬ್‌ಸೈಟ್‌ಗಳಲ್ಲಿ ಸುದ್ದಿಯೂ ಪ್ರಕಟಗೊಂಡಿತು. ಹಾಗೆ ಒಂದು ಪಂದ್ಯ ಮತ್ತು ಒಂದು ಫಲಕದಿಂದಾಗಿ ಶಿಲ್ಪಾ–ಅರ್ಚಿತ್ ಸಂಚಲನ ಸೃಷ್ಟಿಸಿದರು. ಅಂದು ಪಂದ್ಯದ ಶ್ರೇಷ್ಠ ಪ್ರಶಸ್ತಿ ಪಡೆದ ದಿನೇಶ್ ಕಾರ್ತಿಕ್ ಅವರು ಈ ಕುರಿತ ಟ್ವೀಟ್‌ಗೆ ಉತ್ತರಿಸಿ 'ನಿಮ್ಮ ಪಯಣ ಸಾರ್ಥಕವಾಯಿತು' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಐಪಿಎಲ್ ಆರಂಭವಾದಾಗಿನಿಂದ ಆರ್‌ಸಿಬಿಯನ್ನು ಬೆಂಬಲಿಸುತ್ತಿದ್ದೇವೆ. ಇದೇ ಮೊದಲ ಬಾರಿ ಕ್ರೀಡಾಂಗಣದಲ್ಲಿ ನೇರವಾಗಿ ಪಂದ್ಯ ನೋಡಿದೆ. ಸಚಿನ್ ತೆಂಡೂಲ್ಕರ್ ಸ್ಟ್ಯಾಂಡ್‌ನಲ್ಲಿ ಟಿಕೆಟ್ ಲಭಿಸಿತ್ತು. ಖಾಲಿ ಕೈಯಲ್ಲಿ ಹೋಗುವುದು ಸರಿಯಲ್ಲ ಎಂದುಕೊಂಡು ಮಧ್ಯಾಹ್ನ ಫಲಕ ಪ್ರಿಂಟ್ ಹಾಕಿಸಿಕೊಂಡಿದ್ದೆವು. ಅದು ಇಷ್ಟೊಂದು ಸದ್ದು ಮಾಡುತ್ತದೆ ಎಂದುಕೊಂಡಿರಲಿಲ್ಲ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಶಿಲ್ಪಾ ಹೇಳಿದರು.

ಶಿಲ್ಪಾ, ಬೆಂಗಳೂರಿನ ಐಟಿ ಕಂಪನಿಯೊಂದರ ಉದ್ಯೋಗಿಯಾಗಿದ್ದು ಅರ್ಚಿತ್, ಫ್ಲಿಪ್‌ಕಾರ್ಟ್‌ನಲ್ಲಿ ಹಿರಿಯ ವ್ಯವಸ್ಥಾಪಕ ಹುದ್ದೆಯಲ್ಲಿದ್ದಾರೆ.

ಪಂದ್ಯದ ಸಂದರ್ಭದಲ್ಲಿ ಶಿಲ್ಪಾ (ಎಡ), ಅರ್ಚಿತ್ ಮತ್ತು ಗೆಳೆಯರು –ಟ್ವಿಟರ್ ಚಿತ್ರ

ಉತ್ತರಪ್ರದೇಶ, ಕೇರಳ ಸೇರಿ ವಿವಿಧೆಡೆ 214 ಜನರ ಸಾವು

ಕೋವಿಡ್ ದಿಢೀರ್ ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಒಂದೇ ದಿನದಲ್ಲಿ ಕೋವಿಡ್ ಪ್ರಕರಣಗಳಲ್ಲಿ ದಿಢೀರ್ ಏರಿಕೆ ಕಂಡುಬಂದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಸೋಮವಾರ ಹೇಳಿದೆ.

ಒಂದು ತಿಂಗಳ ಬಳಿಕ ದೇಶದಲ್ಲಿ ಪ್ರತಿನಿತ್ಯ ಹೊಸ ಕೋವಿಡ್ ಪ್ರಕರಣಗಳು ಮತ್ತೊಮ್ಮೆ 2 ಸಾವಿರದ ಗಡಿ ದಾಟಿದೆ. ಭಾನುವಾರ ಒಂದೇ ದಿನ 2,183 ಹೊಸ ಪ್ರಕರಣಗಳು ವರದಿಯಾಗಿವೆ.

ದೆಹಲಿ ಮತ್ತು ಹರಿಯಾಣದಲ್ಲಿ ಕಳೆದ ಒಂದು ವಾರದಿಂದ ಕೋವಿಡ್ ಸೋಂಕು ಹೆಚ್ಚುತ್ತಿರುವುದು ಮತ್ತು ಕೇರಳ ಐದು ದಿನಗಳ ನಂತರ ನೀಡಿದ ಸಂಚಿತ ವರದಿಗಳ ಕಾರಣದಿಂದಾಗಿ ದೈನಂದಿನ ಪ್ರಕರಣಗಳ ಸಂಖ್ಯೆಯಲ್ಲಿ ದಿಢೀರ್ ಏರಿಕೆ ಕಂಡುಬಂದಿದೆ.

ಕೋವಿಡ್ ಪ್ರಕರಣಗಳ ದೈನಂದಿನ ವರದಿ ಸಲ್ಲಿಸಿದ ಕೇರಳದ ಕ್ರಮಕ್ಕೆ ಕೇಂದ್ರ ಸರ್ಕಾರ ತೀವ್ರ ಅಸಮಾಧಾನವನ್ನೂ ವ್ಯಕ್ತಪಡಿಸಿದೆ. ಪ್ರಕರಣಗಳ ದೈನಂದಿನ ವರದಿ ಸಲ್ಲಿಸುವುದು ಕಡ್ಡಾಯ ಮತ್ತು ಇದನ್ನು ಯಾವುದೇ ಕಾರಣಕ್ಕೂ ತಪ್ಪಿಸಬಾರದು ಎಂದು ಕೇಂದ್ರವು, ಎಲ್ಲ ರಾಜ್ಯಗಳಿಗೂ ಜ್ಞಾಪಿಸಿದೆ.

'ಸಾಂಕ್ರಾಮಿಕ ರೋಗದ ಪರಿಸ್ಥಿತಿ ಕುರಿತ ತಿಳಿವಳಿಕೆಗೆ ದೈನಂದಿನ ಅಂಕಿ–ಅಂಶದ ಮಾಹಿತಿ ಅಗತ್ಯ. ಕೋವಿಡ್ ಪತ್ತೆ ಹಚ್ಚುವಿಕೆ ಮತ್ತು ಮೇಲ್ವಿಚಾರಣೆ ಮಾತ್ರವಲ್ಲದೆ ಕೇಂದ್ರ, ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಕಾರ್ಯತಂತ್ರ ಮತ್ತು ಯೋಜನೆಗಳ ಅನುಷ್ಠಾನಕ್ಕೂ ಇದು ಸಹಾಯಕ' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಅವರು, ಕೇರಳದ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜನ್ ಎನ್. ಖೋಬ್ರಗಡೆ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಸೋಮವಾರ ಕೋವಿಡ್‌ನ 2,183 ಹೊಸ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಒಟ್ಟು ಪ್ರಕರಣಗಳ ಸಂಖ್ಯೆ 4.30 ಕೋಟಿಗೆ ಏರಿಕೆಯಾಗಿದೆ. ಆದರೆ, ಸಕ್ರಿಯ ಪ್ರಕರಣಗಳ ಸಂಖ್ಯೆ 11,542ಕ್ಕೆ ಇಳಿದಿದೆ ಎಂದು ಸಚಿವಾಲಯ ತಿಳಿಸಿದೆ. ಕೋವಿಡ್‌ನಿಂದಾಗಿ ಕೇರಳದಲ್ಲಿ 213 ಜನರು ಹಾಗೂ ಉತ್ತರಪ್ರದೇಶದಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದಲ್ಲಿ 1.47ಲಕ್ಷ, ಕೇರಳದಲ್ಲಿ 68,615, ಕರ್ನಾಟಕದಲ್ಲಿ 40,057, ತಮಿಳುನಾಡಿನಲ್ಲಿ 38,025, ದೆಹಲಿಯಲ್ಲಿ 6,158, ಉತ್ತರಪ್ರದೇಶದಲ್ಲಿ 23,500 ಮತ್ತು ಪಶ್ಚಿಮ ಬಂಗಾಳದಲ್ಲಿ 21,200 ಸೇರಿ ದೇಶದಲ್ಲಿ ಇದುವರೆಗೆ ಒಟ್ಟು 5,21,965 ಜನರು ಮೃತರಾಗಿದ್ದಾರೆ.

ಕೋವಿಡ್ ಚೇತರಿಕೆ ಪ್ರಮಾಣವು ಶೇ 98.76 ಇದೆ. ಚೇತರಿಸಿಕೊಂಡವರ ಸಂಖ್ಯೆ 4.25 ಕೋಟಿಗೆ ಏರಿದ್ದು, ಸಾವಿನ ಪ್ರಮಾಣ ಶೇ 1.21ರಷ್ಟಿದೆ ಎಂದೂ ಸಚಿವಾಲಯವು ಮಾಹಿತಿ ನೀಡಿದೆ.

ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಕೋವಿಡ್ ಲಸಿಕೆ ಅಭಿಯಾನದ ಅಡಿ ಈವರೆಗೆ 186.54 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

2021ರ ಮೇ 4ರಂದು ಕೋವಿಡ್ ಪ್ರಕರಣ ಸಂಖ್ಯೆ 2 ಕೋಟಿಗೆ ತಲುಪಿತ್ತು. ಅದೇ ವರ್ಷ ಜೂನ್ 23ರಂದು ಒಟ್ಟು ಪ್ರಕರಣಗಳ ಸಂಖ್ಯೆ 3 ಕೋಟಿಗೆ ಮುಟ್ಟಿತ್ತು.

ಶಾಂಘೈ: ಲಾಕ್‌ಡೌನ್ ಬಳಿಕ ಕೋವಿಡ್‌ನಿಂದ ಮೊದಲ ಸಾವು

ಬೀಜಿಂಗ್: ಕೋವಿಡ್ ವ್ಯಾಪಿಸುವುದನ್ನು ತಡೆಯಲು ಲಾಕ್‌ಡೌನ್‌ಗೆ ಒಳಗಾಗಿರುವ ಶಾಂಘೈ ನಗರದಲ್ಲಿ ಕೊರೊನಾ ವೈರಸ್ ಸೋಂಕಿನಿಂದ ಮೂವರು ಸಾವಿಗೀಡಾಗಿರುವುದಾಗಿ ವರದಿಯಾಗಿದೆ. ಲಾಕ್‌ಡೌನ್ ಶುರುವಾದ ನಂತರ ಕೋವಿಡ್‌ನಿಂದಾಗಿ ಮೊದಲ ಬಾರಿಗೆ ಸಾವು ಸಂಭವಿಸಿದೆ.

ಕೋವಿಡ್ ಕಾರಣಗಳಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 89 ವರ್ಷ ಮತ್ತು 91 ವರ್ಷದ ಇಬ್ಬರು ಮಹಿಳೆಯರು ಹಾಗೂ 91 ವರ್ಷ ವಯಸ್ಸಿನ ಒಬ್ಬ ಪುರುಷ ಮೃತಪಟ್ಟಿದ್ದಾರೆ. ಅವರು ಹೃದಯ ಸಂಬಂಧಿತ ಕಾಯಿಲೆ, ಮಧುಮೇಹ ಹಾಗೂ ಅಧಿಕ ರಕ್ತದೊತ್ತಡದಿಂದಲೂ ಬಳಲುತ್ತಿದ್ದರು. ಅಲ್ಲದೆ ಇವರ್‍ಯಾರೂ ಕೋವಿಡ್ ಲಸಿಕೆ ಪಡೆದಿರಲಿಲ್ಲ ಎನ್ನಲಾಗಿದೆ.

ಚೀನಾದಲ್ಲಿ ಭಾನುವಾರ ಒಟ್ಟಾರೆ 2723 ಕೊರೊನಾ ಪ್ರಕರಣಗಳು ಪತ್ತೆಯಾಗಿದ್ದು, ಇದರಲ್ಲಿ 2417 ಕೋವಿಡ್ ಪ್ರಕರಣಗಳು ಶಾಂಘೈ ನಗರವೊಂದರಲ್ಲೇ ಪತ್ತೆಯಾಗಿವೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಮಾಹಿತಿ ನೀಡಿದೆ.

ಉತ್ತರ ಪ್ರದೇಶದಲ್ಲಿ ಮಾಸ್ಕ್ ಕಡ್ಡಾಯ

ಲಖನೌ(ಪಿಟಿಐ): ದೆಹಲಿಯಲ್ಲಿ ಕೋವಿಡ್ 19 ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ, ಉತ್ತರ ಪ್ರದೇಶ ರಾಜಧಾನಿ ಲಖನೌ ಹಾಗೂ ರಾಷ್ಟ್ರ ರಾಜಧಾನಿ ವ್ಯಾಪ್ತಿಯ 6 ಜಿಲ್ಲೆಗಳಲ್ಲಿ ಮಾಸ್ಕ್ ಧರಿಸುವುದನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರ ಕಡ್ಡಾಯಗೊಳಿಸಿದೆ.

ಕಳೆದ 24 ತಾಸುಗಳಲ್ಲಿ ಗೌತಮ ಬುದ್ಧ ನಗರದಲ್ಲಿ 65, ಗಾಜಿಯಾಬಾದ್‌ನಲ್ಲಿ 20 ಹಾಗೂ ಲಖನೌದಲ್ಲಿ 10 ಮಂದಿಗೆ ಸೋಂಕು ದೃಢಪಟ್ಟಿದೆ. ಹೀಗಾಗಿ ಪರಿಸ್ಥಿತಿ ಮೇಲೆ ಹೆಚ್ಚಿನ ನಿಗಾ ವಹಿಸಲು ಯೋಗಿ ಆದಿತ್ಯನಾಥ್ ಆದೇಶಿಸಿದ್ದಾರೆ.

'ಹಿಂದೂ ದಂಪತಿ 4 ಮಕ್ಕಳಿಗೆ ಜನ್ಮ ನೀಡಲಿ'

ಕಾನ್ಪುರ/ಲಖನೌ(ಪಿಟಿಐ): 'ಪ್ರತಿ ಹಿಂದೂ ದಂಪತಿ ನಾಲ್ಕು ಮಕ್ಕಳನ್ನು ಹೆತ್ತು, ಅವರಲ್ಲಿ ಇಬ್ಬರನ್ನು ದೇಶಕ್ಕೆ ಅರ್ಪಿಸ ಬೇಕು' ಎಂದು ಒತ್ತಾಯಿಸಿರುವ ಹಿಂದುತ್ವದ ಪ್ರತಿಪಾದಕಿ ಸಾಧ್ವಿ ರಿತಂಬರ 'ಭಾರತವು ಶೀಘ್ರದಲ್ಲೇ 'ಹಿಂದೂ ರಾಷ್ಟ್ರ' ಆಗಲಿದೆ' ಎಂದು ಹೇಳಿದ್ದಾರೆ.

ದೆಹಲಿಯ ಜಹಾಂಗಿರ್‌ಪುರಿಯಲ್ಲಿ ಶನಿವಾರ ನಡೆದ ಕೋಮು ಹಿಂಸಾಚಾರವನ್ನು ಉಲ್ಲೇಖಿಸಿದ ಅವರು, 'ಹನುಮ ಜಯಂತಿಯ ಶೋಭಾ ಯಾತ್ರೆಯ (ಮೆರವಣಿಗೆ) ಮೇಲೆ ದಾಳಿ ಮಾಡಿದವರು ದೇಶವು ಸಾಧಿಸಿದ ಪ್ರಗತಿಯ ಬಗ್ಗೆ ಅಸೂಯೆ ಹೊಂದಿದ್ದಾರೆ' ಎಂದೂ ಹೇಳಿದ್ದಾರೆ.


ಸಾಧ್ವಿ ರಿತಂಬರಾ

ನಿರಾಲಾ ನಗರದಲ್ಲಿ ರಾಮ ಮಹೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಹಿಂದೂ ಮಹಿಳೆಯರು 'ನಾವಿಬ್ಬರು ನಮಗಿಬ್ಬರು' (ಹಮ್ ದೋ, ಹಮಾರೆ ದೋ) ಎನ್ನುವ ತತ್ವವನ್ನು ಅನುಸರಿಸುತ್ತಿದ್ದಾರೆ. ಆದರೆ, ನಾನು ವಿನಂತಿಸಿಕೊಳ್ಳುವುದೇನೆಂದರೆ, ಎಲ್ಲ ಹಿಂದೂ ದಂಪತಿ ನಾಲ್ವರು ಮಕ್ಕಳನ್ನು ಹೆತ್ತು, ಅವರಲ್ಲಿ ಇಬ್ಬರನ್ನು ದೇಶಕ್ಕೆ ಅರ್ಪಿಸಬೇಕು. ಉಳಿದ ಇಬ್ಬರನ್ನು ಕುಟುಂಬಕ್ಕೆ ಮೀಸಲಿಡಬೇಕು' ಎಂದರು.

'ಜನಸಂಖ್ಯೆಯ ಅಸಮತೋಲನವಾಗದಂತೆ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು. ಜನಸಂಖ್ಯಾ ಅಸಮತೋಲನ ಉಂಟಾದರೆ ದೇಶದ ಭವಿಷ್ಯ ಚೆನ್ನಾಗಿರುವುದಿಲ್ಲ' ಎಂದು ಅವರು ಸೋಮವಾರ ಪಿಟಿಐಗೆ ತಿಳಿಸಿದ್ದಾರೆ.

ತಮ್ಮ ಮಕ್ಕಳನ್ನು ಆರ್‌ಎಸ್‌ಎಸ್‌ಗೆ ಅರ್ಪಿಸುವಂತೆ ಪೋಷಕರನ್ನು ಒತ್ತಾಯಿಸುತ್ತೀರಾ ಎನ್ನುವ ಪ್ರಶ್ನೆಗೆ, 'ಹೌದು. ಅವರನ್ನು ಆರ್‌ಎಸ್‌ಎಸ್‌ಗೆ ಅರ್ಪಿಸುವಂತೆ ನಾನು ಕೇಳಿದ್ದೇನೆ. ಅವರನ್ನು ವಿಎಚ್‌ಪಿ ಕಾರ್ಯಕರ್ತರನ್ನಾಗಿ ಮಾಡಿ ಮತ್ತು ರಾಷ್ಟ್ರಕ್ಕೆ ಸಮರ್ಪಿಸಬೇಕು' ಎಂದೂ ಅವರು ಉತ್ತರಿಸಿದ್ದಾರೆ.

ಅಂಚೆ ಕಚೇರಿಯಲ್ಲೇ ರೈಲ್ವೆ ಟಿಕೆಟ್ ಬುಕ್ಕಿಂಗ್

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ಪ್ರಯಾಣಿಕರು ಇನ್ನು ಮುಂದೆ ತಮ್ಮ ಹತ್ತಿರದ ಅಂಚೆ ಕಚೇರಿಗಳಲ್ಲೇ ರೈಲ್ವೆ ಟಿಕೆಟ್ ಕಾಯ್ದಿರಿಸಬಹುದಾಗಿದೆ. ರೈಲು ಪ್ರಯಾಣಿಕರಿಗೆ ತಮ್ಮ ಹತ್ತಿರದಲ್ಲೇ ಟಿಕೆಟ್ ಕಾಯ್ದಿರಿಸಲು ಸಾಧ್ಯವಾಗಿಸುವ ನಿಟ್ಟಿನಲ್ಲಿದೇಶದಾದ್ಯಂತ 45,000 ಅಂಚೆ ಕಚೇರಿಗಳಲ್ಲಿ ರೈಲ್ವೆ ಟಿಕೆಟ್ ಸೌಲಭ್ಯವನ್ನು ಆರಂಭಿಸಲಾಗಿದೆ.

ಈ ಬಗ್ಗೆ ಸೋಮವಾರ ಮಾತನಾಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, 'ದೇಶದಾದ್ಯಂತ ಒಟ್ಟಾರೆ 1.50 ಲಕ್ಷಕ್ಕೂ ಹೆಚ್ಚು ಅಂಚೆ ಕಚೇರಿಗಳಿವೆ. ಈ ಪೈಕಿ 45 ಸಾವಿರ ಅಂಚೆ ಕಚೇರಿಗಳಲ್ಲಿ ರೈಲ್ವೆ ಟಿಕೆಟ್‌ಗಳನ್ನು ಪಡೆಯಬಹುದು. ರೈಲ್ವೆ ನಿಲ್ದಾಣಗಳಲ್ಲಿ ಗ್ರಾಹಕರ ದಟ್ಟಣೆ ಕಡಿಮೆ ಮಾಡಲು ಇದು ಸಹಕಾರಿಯಾಗಲಿದೆ' ಎಂದು ಹೇಳಿದರು.

ಒಂದನೇ ಪುಟದಿಂದ...

ಚಿಲ್ಲರೆ ಹಣದುಬ್ಬರ ಹೆಚ್ಚಬಹುದು

ತಯಾರಿಕಾ ಚಟುವಟಿಕೆಗಳಿಗೆ ಅಗತ್ಯವಿರುವ ವಸ್ತುಗಳು ಸಗಟು ಹಣದುಬ್ಬರ ಪ್ರಮಾಣ ಆಧರಿಸಿರುವ ಕಾರಣ, ಮುಂದಿನ ದಿನಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಇನ್ನಷ್ಟು ಹೆಚ್ಚಳ ಆಗುವ ಸಾಧ್ಯತೆ ಇದೆ. ಸಗಟು ಹಣದುಬ್ಬರದ ಪ್ರಮಾಣ ಮಾತ್ರವೇ ಅಲ್ಲದೆ, ಚಿಲ್ಲರೆ ಹಣದುಬ್ಬರ ಪ್ರಮಾಣದ ಏರಿಕೆಯು ಹಿಂದಿನ ವರ್ಷದ ಹೋಲಿಕೆ ತಿಂಗಳಿನ ಮಟ್ಟವನ್ನು ಆಧರಿಸಿಯೂ ನಿರ್ಧಾರವಾಗಲಿದೆ.

ಎಂ. ಗೋವಿಂದ ರಾವ್
ಬ್ರಿಕ್‌ವರ್ಕ್ ರೇಟಿಂಗ್ಸ್‌ನ ಮುಖ್ಯ ಆರ್ಥಿಕ ಸಲಹೆಗಾರ

ನಿರೀಕ್ಷೆಗಿಂತಲೂ ಜಾಸ್ತಿ

ಮುಂಗಾರು ಮಳೆಯು ವಾಡಿಕೆಯಂತೆ ಸುರಿದರೂ, ಆಹಾರ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತಿರುವ ಅಡುಗೆ ಎಣ್ಣೆಯ ಚಿಲ್ಲರೆ ಬೆಲೆ ಇಳಿಕೆ ಆಗಲಿಕ್ಕಿಲ್ಲ. ಸಗಟು ಹಣದುಬ್ಬರ ಪ್ರಮಾಣವು ಮಾರ್ಚ್‌ನಲ್ಲಿ ನಿರೀಕ್ಷೆಗಿಂತಲೂ ಜಾಸ್ತಿ ಆಗಿದೆ. ಆಹಾರ ಮತ್ತು ಪಾನೀಯ ವಿಭಾಗದಲ್ಲಿನ ಹಣದುಬ್ಬರ ಕಡಿಮೆ ಆಗಿರುವುದು ತುಸು ಸಮಾಧಾನ ತರಿಸಿದೆ. ಪ್ರಸಕ್ತ ತಿಂಗಳಿನಲ್ಲಿ ಸಗಟು ಹಣದುಬ್ಬರವು ಶೇ 13.5–15ರ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ.

ಅದಿತಿ ನಾಯರ್, ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ

ಪಾರ್ಟಿಗೇಟ್ ಹಗರಣ: ಬ್ರಿಟನ್ ಪ್ರಧಾನಿಗೆ ಕಂಟಕ

ಲಂಡನ್(ಪಿಟಿಐ): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಭಾರತದ ಪ್ರವಾಸಕ್ಕೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ, ಅವರು 'ಪಾರ್ಟಿಗೇಟ್'ಗೆ (ಕೊರೊನಾ ಲಾಕ್‌ಡೌನ್ ಉಲ್ಲಂಘಿಸಿ ಸಂಭ್ರಮದಲ್ಲಿ ತೊಡಗುವುದು) ಸಂಬಂಧಿಸಿದ ಹೊಸ ಹಗರಣಗಳಲ್ಲಿ ಸಿಲುಕಿಕೊಂಡಿದ್ದಾರೆ.

2020ರಲ್ಲಿ ಅವರ ಹುಟ್ಟುಹಬ್ಬದ ಪ್ರಯುಕ್ತ ಅವರ ಪತ್ನಿ ಕ್ಯಾರಿ ಅವರು ಸಂಪುಟದ ಕೊಠಡಿಗೆ ಕೇಕ್ ತಂದು ಕತ್ತರಿಸಿದ ಪ್ರಕರಣದಲ್ಲಿ ಜಾನ್ಸನ್ ಅವರು ಈಗಾಗಲೇ ದಂಡ ಪಾವತಿಸಿದ್ದಾರೆ. ಇದೇ ಪ್ರಕರಣದಲ್ಲಿ ಬ್ರಿಟನ್ ಚಾನ್ಸಲರ್ ರಿಷಿ ಸುನಾಕ್ ಅವರಿಗೂ ದಂಡ ಹಾಕಲಾಗಿದೆ.

ಆದರೆ ಬ್ರಿಟನ್ ಪೊಲೀಸರು ತನಿಖೆ ನಡೆಸುತ್ತಿರುವ 12 ಲಾಕ್‌ಡೌನ್ ಪಾರ್ಟಿಗಳ ಪೈಕಿ ಸುಮಾರು 6 ಪಾರ್ಟಿಗಳು ಜಾನ್ಸನ್ ಅವರಿಗೆ ಸಂಬಂಧಿಸಿದ್ದು ಎಂದು ಮೂಲಗಳನ್ನು ಆಧರಿಸಿ ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಈ ವರದಿಗಳನ್ನು ಆಧಾರವಾಗಿಟ್ಟುಕೊಂಡು ಪ್ರಧಾನಿ ಬೋರಿಸ್ ಜಾನ್ಸನ್ ವಿರುದ್ಧ ಪ್ರತಿಪಕ್ಷಗಳು ವಾಗ್ದಾಳಿ ನಡೆಸಿವೆ.

ಪ್ರತಿಭಟನೆ ನಡುವೆಯೂ ನೂತನ ಸಂಪುಟ ರಚನೆ

ಶ್ರೀಲಂಕಾ: 17 ಸಚಿವರ ಸೇರ್ಪಡೆ

ಕೊಲಂಬೊ(ಪಿಟಿಐ): ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು 17 ಸಚಿವರನ್ನು ನೇಮಕ ಮಾಡುವ ಮೂಲಕ ನೂತನ ಸಂಪುಟವನ್ನು ರಚಿಸಿದ್ದಾರೆ. ದೇಶದ ಆರ್ಥಿಕ ಬಿಕ್ಕಟ್ಟು ವಿಚಾರಕ್ಕೆ ಸಂಬಂಧಿಸಿ ಗೊಟಬಯ ಅವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆಗಳು ನಡೆಯುತ್ತಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಮಹಿಂದ ರಾಜಪಕ್ಸ ಅವರು ಪ್ರಧಾನಿಯಾಗಿ ಮುಂದುವರಿಯಲಿದ್ದು, ಯುವಕರು ಮತ್ತು ಹೊಸಬರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಲಾಗಿದೆ ಎಂದು ವರದಿಯಾಗಿದೆ. ಅಧ್ಯಕ್ಷ ಗೊಟಬಯ ವಿರುದ್ಧ ನಡೆ ಯುತ್ತಿರುವ ಪ್ರತಿಭಟನೆಗಳಲ್ಲಿ ರಾಷ್ಟ್ರಗೀತೆಯನ್ನು ತಮಿಳು ಭಾಷೆಯಲ್ಲಿ ಹಾಡಲಾಗುತ್ತಿದೆ ಎಂದು ನ್ಯೂಸ್‌ವೈರ್ ವರದಿ ಮಾಡಿದೆ.

ಷೇರು ವಿನಿಮಯ ಕೇಂದ್ರ ಬಂದ್: ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ಶ್ರೀಲಂಕಾದ ಕೊಲಂಬೊ ಷೇರು ವಿನಿಮಯ ಕೇಂದ್ರದಲ್ಲಿ (ಸಿಎಸ್‌ಇ) ಸೋಮವಾರದಿಂದ ಐದು ದಿನ ವಹಿವಾಟು ಸ್ಥಗಿತಗೊಳಿಸಲಾಗಿದೆ. ಈ ಮೂಲಕ ಸತತ ಎರಡನೇ ವಾರ ಸಿಎಸ್‌ಇ ವಹಿವಾಟು ಸ್ಥಗಿತವಾಗಿದೆ.

ಸಾಂಪ್ರದಾಯಿಕ ಹೊಸ ವರ್ಷದ ದಿನದಂದು ಬಡ್ಡಿ ದರದ ಏರಿಕೆ ಮತ್ತು ವಿದೇಶಿ ಸಾಲವನ್ನು ತೀರಿಸಲಾಗದು ಎಂಬ ತೀರ್ಮಾನವನ್ನು ಸರ್ಕಾರ ಪ್ರಕಟಿಸಿತ್ತು. ಬಡ್ಡಿ ದರ ಪ್ರಮಾಣವನ್ನು ದೇಶದ ಸೆಂಟ್ರಲ್ ಬ್ಯಾಂಕ್ ಶೇಕಡ 14.5ಕ್ಕೆ ಏರಿಸಲಾಗಿದೆ.

ಲೀಟರ್ ಪೆಟ್ರೋಲ್‌ಗೆ ₹367

ಕೊಲಂಬೊ(ಎಎಫ್‌ಪಿ): ಶ್ರೀಲಂಕಾದಲ್ಲಿ ಇಂಧನ, ಆಹಾರ ಹಾಗೂ ಅತ್ಯಗತ್ಯ ಔಷಧಗಳಿಗೆ ಕೊರತೆ ಎದುರಾಗಿದ್ದು, ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಸರ್ಕಾರವು ಹಣಕಾಸು ನೆರವು ಕೋರಲು ಮುಂದಾಗಿದೆ. ಅದರ ಬೆನ್ನಲ್ಲೇ ಸೋಮವಾರ ರಿಟೇಲ್ ತೈಲ ಮಾರಾಟ ಗಾರರು ಇಂಧನ ದರದಲ್ಲಿ ಏರಿಕೆ ಮಾಡಿದ್ದಾರೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ಸ್ಥಳೀಯ ಘಟಕವಾಗಿರುವ ಲಂಕಾ ಐಒಸಿ, ಪ್ರತಿ ಲೀಟರ್ ಡೀಸೆಲ್ ದರವನ್ನು 75 ರೂಪಾಯಿ ಮತ್ತು ಪೆಟ್ರೋಲ್ ದರವನ್ನು 35 ರೂಪಾಯಿ ಹೆಚ್ಚಿಸಿದೆ. ಇದರಿಂದಾಗಿ ಪ್ರತಿ ಲೀಟರ್ ಪೆಟ್ರೋಲ್ ದರ ₹367 ಮತ್ತು ಡೀಸೆಲ್ ದರ ₹327 ಮುಟ್ಟಿದೆ.

ಈ ವರ್ಷ ಪೆಟ್ರೋಲ್ ದರ ಶೇಕಡ 90ರಷ್ಟು ಹಾಗೂ ಡೀಸೆಲ್ ದರ ಶೇಕಡ 138ರಷ್ಟು ಹೆಚ್ಚಳ ಕಂಡಿದೆ. ಶ್ರೀಲಂಕಾ ದಲ್ಲಿ ಸಾರ್ವಜನಿಕ ಸಾರಿಗೆಗಾಗಿ ಡೀಸೆಲ್ ಅತಿ ಹೆಚ್ಚು ಬಳಕೆಯಲ್ಲಿದೆ.

ತೀವ್ರ ಆರ್ಥಿಕ ಹಿಂಜರಿತಕ್ಕೆ ಒಳ ಗಾಗಿರುವ ಶ್ರೀಲಂಕಾದಲ್ಲಿ ಇಂದು ಒಂದೇ ದಿನದಲ್ಲಿ ತೈಲ ದರವನ್ನು ಶೇಕಡ 35ರಷ್ಟು ಹೆಚ್ಚಳ ಮಾಡಿದ್ದಾರೆ.

ಆರ್ಥಿಕತೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಶ್ರೀಲಂಕಾದ ಹಣಕಾಸು ಸಚಿವ ಅಲಿ ಸಾಬ್ರಿ ಅವರನ್ನು ಒಳಗೊಂಡ ನಿಯೋಗವು ವಾಷಿಂಗ್ಟನ್‌ನಲ್ಲಿ ಐಎಂಎಫ್‌ನಿಂದ ಹಣಕಾಸು ಸಹಕಾರ ಕೋರಲಿದೆ.
ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು 300 ಕೋಟಿ ಡಾಲರ್‌ನಿಂದ 400 ಕೋಟಿ ಡಾಲರ್‌ನಷ್ಟು ಸಹಕಾರ ಕೋರಲಿದೆ.

ಶ್ರೀಲಂಕಾದ ಕೊಲಂಬೊ ಷೇರು ವಿನಿಮಯ ಕೇಂದ್ರದಲ್ಲಿ (ಸಿಎಸ್‌ಇ) ಸೋಮವಾರದಿಂದ ಐದು ದಿನ ವಹಿವಾಟು ಸ್ಥಗಿತಗೊಳಿಸಲಾಗಿದೆ. ಈ ಮೂಲಕ ಸತತ ಎರಡನೇ ವಾರ ಸಿಎಸ್‌ಇ ವಹಿವಾಟು ಸ್ಥಗಿತವಾಗಿದೆ.

ಆ್ಯಮ್‌ವೇ ಇಂಡಿಯಾದ ₹ 757.77 ಕೋಟಿ ಆಸ್ತಿ ಜಪ್ತಿ

ನವದೆಹಲಿ: ಬಹುಹಂತದ ಮಾರುಕಟ್ಟೆ ಯೋಜನೆಯ ತನಿಖೆಗೆ ಸಂಬಂಧಿಸಿದಂತೆ ಆ್ಯಮ್‌ವೇ ಇಂಡಿಯಾಕ್ಕೆ ಸೇರಿದ ₹757.77 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಜಪ್ತಿ ಮಾಡಿದೆ.

ಆ್ಯಮ್‌ವೇ ಇಂಡಿಯಾಕ್ಕೆ ಸೇರಿದ ಆಸ್ತಿಗಳಲ್ಲಿ ತಮಿಳುನಾಡಿನ ದಿಂಡಿಗಲ್ ಜಿಲ್ಲೆಯ ಆ್ಯಮ್‌ವೇಯ ಭೂಮಿ ಮತ್ತು ಕಾರ್ಖಾನೆ ಕಟ್ಟಡ, ಯಂತ್ರೋಪಕರಣಗಳು, ವಾಹನಗಳು, ಬ್ಯಾಂಕ್ ಖಾತೆಗಳು ಮತ್ತು ಸ್ಥಿರ ಠೇವಣಿ ಸೇರಿವೆ ಎಂದು ಇ.ಡಿ ಸೋಮವಾರ ನೀಡಿರುವ ಹೇಳಿಕೆಯಲ್ಲಿ ತಿಳಿಸಿದೆ.

ಜಪ್ತಿ ಮಾಡಿರುವ ಆಸ್ತಿಗಳಲ್ಲಿ ₹411.83 ಕೋಟಿ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿಗಳು ಹಾಗೂ ಆ್ಯಮ್‌ವೇಗೆ ಸೇರಿದ 36 ವಿವಿಧ ಖಾತೆಗಳಿಂದ ₹ 345.94 ಕೋಟಿ ಬ್ಯಾಂಕ್ ಬ್ಯಾಲೆನ್ಸ್ ಕೂಡಾ ಸೇರಿದೆ ಎಂದೂ ಇ.ಡಿ ಮಾಹಿತಿ ನೀಡಿದೆ.

ಇ.ಡಿ ನೀಡಿರುವ ಮಾಹಿತಿಯ ಪ್ರಕಾರ, 'ಆ್ಯಮ್‌ವೇ ಇಂಡಿಯಾ ಕಂಪನಿಯು ನೇರ ಮಾರಾಟದ ಬಹುಹಂತದ ಮಾರ್ಕೆಟಿಂಗ್ ನೆಟ್‌ವರ್ಕ್‌ನ ಸೋಗಿನಲ್ಲಿ ವಂಚನೆ ನಡೆಸುತ್ತಿರುವುದು ತನಿಖೆಯ ವೇಳೆ ಬೆಳಕಿಗೆ ಬಂದಿದೆ. 'ಕಂಪನಿಯು ನೀಡುವ ಹೆಚ್ಚಿನ ಉತ್ಪನ್ನಗಳ ಬೆಲೆಗಳು ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರತಿಷ್ಠಿತ ತಯಾರಕರ ಪರ್ಯಾಯ ಜನಪ್ರಿಯ ಉತ್ಪನ್ನಗಳಿಗೆ ಹೋಲಿಸಿದರೆ ವಿಪರೀತವಾಗಿ ಹೆಚ್ಚಾಗಿದ್ದವು' ಎಂಬುದನ್ನೂ ಇ.ಡಿ ಗಮನಿಸಿದೆ

'ನಿಜವಾದ ಸಂಗತಿ ತಿಳಿಯದೇ ಜನಸಾಮಾನ್ಯರು ಕಂಪನಿಯ ಸದಸ್ಯರಾಗಿ, ದುಬಾರಿ ಬೆಲೆಗೆ ಉತ್ಪನ್ನಗಳನ್ನು ಖರೀದಿಸಿ, ತಾವು ಕಷ್ಟಪಟ್ಟು ಗಳಿಸಿದ ಹಣವನ್ನು ಕಳೆದುಕೊಳ್ಳುತ್ತಿದ್ದಾರೆ' ಎಂದೂ ಇ.ಡಿ ತಿಳಿಸಿದೆ.

ಕೃಷಿ ಪೋರ್ಟಲ್‌ಗೆ ಚಾಲನೆ

ನವದೆಹಲಿ (ಪಿಟಿಐ): ಕೃಷಿ ವಲಯದಲ್ಲಿ ಆಮದು– ರಫ್ತು ವ್ಯವಹಾರದಲ್ಲಿ ಸರಣೀಕರಣ ಮತ್ತು ಪಾರದರ್ಶಕತೆ ತರಲು ರೂಪಿಸಿರುವ ಎರಡು ಹೊಸ ಪೋರ್ಟಲ್‌ಗಳನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಸೋಮವಾರ ಬಿಡುಗಡೆ ಮಾಡಿದರು.

ಒಂದು ಪೋರ್ಟಲ್ ಕೀಟನಾಶಕ ನೋಂದಣಿಗೆ ಸಂಬಂಧಿಸಿದ್ದರೆ, ಮತ್ತೊಂದು ಪೋರ್ಟಲ್ ಕೃಷಿ ಉತ್ಪನ್ನಗಳು ಮತ್ತು ಸಸ್ಯಗಳ ಆಮದು–ರಫ್ತು ದಾಖಲಾತಿಗೆ ಸಂಬಂಧಿಸಿದ್ದಾಗಿದೆ.

ಸಿಆರ್‌ಒಪಿ (ಕೀಟನಾಶಕಗಳ ಸಮಗ್ರ ನೋಂದಣಿ) ಮತ್ತು ಪಿಕ್ಯೂಎಂಎಸ್ (ಸಸ್ಯ ಕ್ವಾರಂಟೈನ್ ನಿರ್ವಹಣಾ ವ್ಯವಸ್ಥೆ) ಈ ಎರಡು ಪೋರ್ಟಲ್‌ಗಳನ್ನು ಸಚಿವರು ಪುಸಾ ಸಂಕೀರ್ಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಸಚಿವರು, ಕೃಷಿ ವಲಯವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಪಿಒಕೆ ಪ್ರಧಾನಿಯಾಗಿ ಸರ್ದಾರ್ ತನ್ವೀರ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪದಚ್ಯುತ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ ತೆಹ್ರೀಕ್-ಎ-ಇನ್ಸಾಫ್ ಪಕ್ಷದ ಪ್ರಾಂತೀಯ ಅಧ್ಯಕ್ಷ ಸರ್ದಾರ್ ತನ್ವೀರ್ ಇಲಿಯಾಸ್ ಅವರು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ.

ಈ ಚುನಾವಣೆಯಲ್ಲಿ ಇಲಿಯಾಸ್ ವಿರುದ್ಧ ಪ್ರತಿಪಕ್ಷಗಳಾದ ಪಿಪಿಪಿ ಮತ್ತು ಪಿಎಂಎಲ್-ಎನ್ ಪಕ್ಷಗಳು ಜಂಟಿಯಾಗಿ ಚೌಧರಿ ಯಾಸಿನ್ ಅವರನ್ನು ಕಣಕ್ಕಿಳಿಸಿದ್ದವು. ಆದರೆ, ಈ ಚುನಾವಣೆಯನ್ನು ಪ್ರತಿಪಕ್ಷಗಳು ಬಹಿಷ್ಕರಿಸಿದ್ದವು. ಈ ಹಿನ್ನೆಲೆಯಲ್ಲಿ ಇಲಿಯಾಸ್ ಅವರು 33 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.

ನೇಪಾಳ: ಸರ್ಕಾರಿ ಏಜೆನ್ಸಿಗಳ ಇಂಧನ ಭತ್ಯೆ ಶೇ 20 ಕಡಿತ

ಕಠ್ಮಂಡು(ಪಿಟಿಐ): ಜಾಗತಿಕ ಮಟ್ಟದಲ್ಲಿ ಇಂಧನ ದರಗಳ ಏರಿಕೆ ಹಾಗೂ ವಿದೇಶಿ ವಿನಿಮಯದ ಬಿಕ್ಕಟ್ಟು ಎದುರಿಸುತ್ತಿರುವ ನೇಪಾಳ ಸರ್ಕಾರವು, ತನ್ನ ಸಚಿವಾಲಯಗಳು ಮತ್ತು ಸರ್ಕಾರಿ ಸ್ವಾಮ್ಯದ ಕಂಪನಿಗಳ ನೌಕರರಿಗೆ ನೀಡಲಾಗುತ್ತಿದ್ದ ಇಂಧನ ಭತ್ಯೆಯನ್ನು ಶೇ 20ರಷ್ಟು ಕಡಿತ ಮಾಡಿದೆ. ಏಪ್ರಿಲ್ 13ರಂದು ಕೌನ್ಸಿಲ್ ಸಚಿವರ ಜತೆಗಿನ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ವಿತ್ತ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ನನ್ನ ಉಡುಗೊರೆ, ನನ್ನ ಆಯ್ಕೆ'

ಇಸ್ಲಾಮಾಬಾದ್ (ಪಿಟಿಐ): 'ವಿದೇಶಗಳಿಂದ ನನಗೆ ಬಂದಿದ್ದ ಉಡುಗೊರೆಗಳನ್ನು ಇಟ್ಟುಕೊಳ್ಳ ಬೇಕೇ ಅಥವಾ ಬೇಡವೇ ಎಂಬುದು ನನ್ನ ಆಯ್ಕೆ' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

ಪಾಕಿಸ್ತಾನ ಸರ್ಕಾರದ ಭಂಡಾರದಲ್ಲಿರುವ ಉಡುಗೊರೆಗಳನ್ನು ಮಾರಾಟ ಮಾಡಿದ ವಿವಾದಗಳ ಬಗ್ಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ಸರ್ಕಾರದ ಭಂಡಾರದಲ್ಲಿರುವ ಉಡುಗೊರೆಗಳನ್ನು ಮಾರಾಟ ಮಾಡಿರುವುದಾಗಿ ಪ್ರತಿಪಕ್ಷ ಮುಸ್ಲಿಂ ಲೀಗ್-ನವಾಜ್(-ಪಿಎಂಎಲ್-ಎನ್) ಪಕ್ಷ ಮಾಡಿರುವ ಆರೋಪ ಆಧಾರರಹಿತ. ಸರ್ಕಾರದ ಖಜಾನೆಯಿಂದ ಏನೆಲ್ಲಾ ಪಡೆದಿದ್ದೇನೆ ಎಂಬುದಕ್ಕೆ ದಾಖಲೆಗಳಿವೆ. ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದಕ್ಕೆ ಸಾಕ್ಷಿ ಇರುವವರು ಮುಂದೆ ಬರಬೇಕು ಎಂದು ಸವಾಲು ಹಾಕಿದರು.

ಸರ್ಕಾರದ ಭಂಡಾರದಲ್ಲಿದ್ದ ಉಡುಗೊರೆಗಳನ್ನು ಆ ಉಡುಗೊರೆಯ ಶೇ 50ರಷ್ಟು ಹಣ ಪಾವತಿಸಿ, ಖರೀದಿಸಿರುವುದಾಗಿಯೂ ಅವರು ಹೇಳಿದರು.

ಪ್ರಶಸ್ತಿಯೊಂದಿಗೆ ಎಚ್‌ಬಿಆರ್ ಬಾಲಕರ ಬ್ಯಾಸ್ಕೆಟ್‌ಬಾಲ್ ತಂಡ: (ಎಡದಿಂದ) ನಿಂತವರು– ಆರುಷ್, ಶೌರ್ಯ, ಉತ್ಕರ್ಷ್, ನರೇಶ್ (ಕೋಚ್), ರಿಷಿತ್, ಆದಿತ್ಯ, ನಿಖಿಲ್ ಮತ್ತು ಸಂವೇಗ್. ಕುಳಿತವರು– ದನಿಶ್, ಕೆನೆತ್, ಅಭಯ್, ಚತ್ಮುರ, ರಿಧಮ್

ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ ಎಂಸಿಎಚ್‌ಎಸ್ ತಂಡ: ಎಡದಿಂದ (ನಿಂತವರು)– ಅವನಿಕಾ ರಾಜ್, ಅದಿತಿ, ಶ್ರೀದುಲಾ, ವಿನೋದ್ ರಾಜ್ (ಸಹಾಯಕ ಕೋಚ್), ಲೋಹಿತ್ ಚಂದ್ರ (ಕೋಚ್), ಅವಿಷಿ ದಿವಾ, ಅಹಾನ. ಕುಳಿತವರು– ಸಮ್ಮೈರಾ, ದಿಯಾ, ಸಾನ್ವಿ, ಜಿಯಾ ಮತ್ತು ಅನುಷಾ– ಪ್ರಜಾವಾಣಿ ಚಿತ್ರಗಳು

ಎಚ್‌ಬಿಆರ್ ತಂಡ ಚಾಂಪಿಯನ್

ರಾಜ್ಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್: ಎಂಸಿಎಚ್‌ಎಸ್‌ಗೆ ಬಾಲಕಿಯರ ವಿಭಾಗದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಬಾಣಸವಾಡಿ ರೆಸಿಡೆಂಟ್ಸ್ (ಎಚ್‌ಬಿಆರ್) ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ಮೆಟ್ರೊ ಕಾರ್ಪೊರೇಷನ್ ಹೌಸಿಂಗ್ ಸೊಸೈಟಿ (ಎಂಸಿಎಚ್‌ಎಸ್) ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ರಾಜ್ಯ ಸಬ್‌ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಬಾಲಕರ ಫೈನಲ್‌ನಲ್ಲಿ ಎಚ್‌ಬಿಆರ್ 62–50ರಿಂದ ಎಂ.ಎನ್.ಕೆ. ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಎದುರು ಜಯಿಸಿತು. ರಿಷಿತ್ (20 ಪಾಯಿಂಟ್ಸ್), ಸಂವೇಗ್ (21) ಮತ್ತು ಚತ್ಮುರ (13) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಎಂ.ಎನ್.ಕೆ. ರಾವ್ ತಂಡದ ದರ್ಶ್ 18 ಪಾಯಿಂಟ್ಸ್ ಕಲೆಹಾಕಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಭಾರತ್ ಎಸ್‌ಯು 44–40ರಿಂದ ಬೆಂಗಳೂರು ಸ್ಪೋರ್ಟಿಂಗ್ ತಂಡವನ್ನು ಸೋಲಿಸಿತು. ಭಾರತ್ ಪರ ಸಂಜಿತ್ ಎ. 17 ಪಾಯಿಂಟ್ಸ್ ಗಳಿಸಿದರು.

ಬಾಲಕರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಎಂಸಿಎಚ್‌ಎಸ್ 48–47ರಿಂದ ಕೋರಮಂಗಲ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ವಿಜೇತ ತಂಡದ ಅದಿತಿ 29 ಪಾಯಿಂಟ್ಸ್ ಗಳಿಸಿದರು. ಕೋರಮಂಗಲ ಪರ ಜಯಶ್ರೀ 19 ಮತ್ತು ರುತ್ ಜೇಕಬ್ 15 ಪಾಯಿಂಟ್ಸ್ ದಾಖಲಿಸಿದರು. ಮೂರನೇ ಸ್ಥಾನವು ಅಪ್ಪಯ್ಯ ಬ್ಯಾಸ್ಕೆಟ್‌ಬಾಲ್ ಕ್ಲಬ್ ಪಾಲಾಯಿತು. ಈ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಅಪ್ಪಯ್ಯ 43–32ರಿಂದ ನ್ಯಾಷನಲ್ಸ್ ಮೈಸೂರು ತಂಡವನ್ನು ಸೋಲಿಸಿತು. ಪ್ರಶಸ್ತಿ ವಿಜೇತ ಎರಡೂ ವಿಭಾಗದ ತಂಡಗಳಿಗೆ ತಲಾ ₹ 20 ಸಾವಿರ, ರನ್ನರ್ಸ್‌ಅಪ್ ₹ 10 ಸಾವಿರ ಮತ್ತು 3ನೇ ಸ್ಥಾನ ಗಳಿಸಿದವರಿಗೆ ತಲಾ ₹ 5 ಸಾವಿರ ಬಹುಮಾನ ನೀಡಲಾಯಿತು.

ಗುಕೇಶ್‌ಗೆ ಪ್ರಶಸ್ತಿ

ಕ್ಯಾಸಿಲಾ ಲಾ ಮಾಂಚ, ಸ್ಪೇನ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಲಾ ರೋಡಾ ಅಂತರರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ರಾತ್ರಿ ಮುಕ್ತಾಯಗೊಂಡ ಟೂರ್ನಿಯ ಒಂಬತ್ತು ಸುತ್ತುಗಳಲ್ಲಿ ಎಂಟು ಪಾಯಿಂಟ್ ಕಲೆ ಹಾಕುವಲ್ಲಿ ಅವರು ಯಶಸ್ವಿಯಾದರು.

ಚೆನ್ನೈನ 15 ವರ್ಷದ ಗುಕೇಶ್ ಎಲ್ಲ ಒಂಬತ್ತು ಸುತ್ತುಗಳಲ್ಲೂ ಅಜೇಯರಾಗಿದ್ದರು. ಕೊನೆಯ ಸುತ್ತಿನಲ್ಲಿ ಇಸ್ರೇಲ್‌ನ ವಿಕ್ಟರ್ ಮಿಖಾಲೆವ್‌ಸ್ಕಿ ಎದುರು ಜಯ ಗಳಿಸಿದರು. ಈ ಮೂಲಕ ಅರ್ಮೇನಿಯದ ಹೈಕ್ ಎಂ ಮಾರ್ಟಿರೊಸ್ಯಾನ್ ಅವರಿಗಿಂತ ಸ್ಪಷ್ಟ ಮುನ್ನಡೆ ಸಾಧಿಸಿದರು. ಮಾರ್ಟಿರೊಸ್ಯಾನ್ 7.5 ಪಾಯಿಂಟ್ ಕಲೆ ಹಾಕಿದ್ದರು. ಭಾರತದ ಮತ್ತೊಬ್ಬ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಗ್ನಾನಂದ 7 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನ ಗಳಿಸಿದರು. ರೌನಕ್ ಸಾಧ್ವಾನಿ ಕೂಡ 7 ಪಾಯಿಂಟ್ ಗಳಿಸಿದ್ದರು. ಆದರೆ ಉತ್ತಮ ಟೈ ಬ್ರೇಕ್ ಸ್ಕೋರ್ ಆಧಾರದಲ್ಲಿ ಪ್ರಗ್ನಾನಂದ 3ನೇ ಸ್ಥಾನ ಗಳಿಸಿದರು.

ಗುಕೇಶ್ –ಟ್ವಿಟರ್ ಚಿತ್ರ

ಟಿ20: ಕರ್ನಾಟಕ ಮಹಿಳೆಯರಿಗೆ ಸೋಲು

ಬೆಂಗಳೂರು: ಅಮನ್‌ಜೋತ್ ಕೌರ್ (7ಕ್ಕೆ 3) ಹಾಗೂ ರಜನಿ ದೇವಿ (13ಕ್ಕೆ 3) ಅವರ ಬೌಲಿಂಗ್ ದಾಳಿಗೆ ನಲುಗಿದ ಕರ್ನಾಟಕ ತಂಡವು ರಾಷ್ಟ್ರೀಯ ಮಹಿಳಾ ಸೀನಿಯರ್ ಟಿ20 ಟ್ರೋಫಿ ಟೂರ್ನಿಯಲ್ಲಿ ಸೋಲನುಭವಿಸಿತು.

ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಚಂಡೀಗಡ ತಂಡವು ಕರ್ನಾಟಕದ ಎದುರು ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಕರ್ನಾಟಕ 65 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ನಿಕಿ ಪ್ರಸಾದ್ (ಔಟಾಗದೆ 26) ತಂಡದ ಪರ ಗರಿಷ್ಠ ಸ್ಕೋರ್ ದಾಖಲಿಸಿದರು. ಚಂಡೀಗಡ 17 ಓವರ್‌ಗಳಲ್ಲಿ ಗುರಿ ತಲುಪಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 17.1 ಓವರ್‌ಗಳಲ್ಲಿ 65 (ವೇದಾ ಕೃಷ್ಣಮೂರ್ತಿ 11, ನಿಕಿ ಪ್ರಸಾದ್ ಔಟಾಗದೆ 26; ನಂದನಿ ಶರ್ಮಾ 18ಕ್ಕೆ 2, ಅಮನ್‌ಜೋತ್ ಕೌರ್ 7ಕ್ಕೆ 3, ರಜನಿ ದೇವಿ 13ಕ್ಕೆ 3). ಚಂಡೀಗಡ: 17 ಓವರ್‌ಗಳಲ್ಲಿ 4 ವಿಕೆಟ್‌ಗೆ 67 (ಪರುಷಿ ಪ್ರಭಾಕರ್ 16, ಅಮನ್‌ಜೋತ್ ಕೌರ್ 19; ಮೋನಿಕಾ ಪಟೇಲ್ 11ಕ್ಕೆ 1, ಶುಭಾ ಸತೀಶ್ 24ಕ್ಕೆ 2, ವಿ. ಚಂದು 9ಕ್ಕೆ 1).

ಶೆಫಾಲಿ ಪಡೆಗೆ ಜಯ

23 ಎಸೆತಗಳಲ್ಲಿ 50 ರನ್ ಗಳಿಸಿದ ಶೆಫಾಲಿ ವರ್ಮಾ ಹರಿಯಾಣ ತಂಡಕ್ಕೆ ಗೆಲುವು ತಂದುಕೊಟ್ಟರು. ರಾಂಚಿಯಲ್ಲಿ ನಡೆದ ಪಂದ್ಯದಲ್ಲಿ ಅವರ ನಾಯಕತ್ವದ ತಂಡವು ಮೂರು ವಿಕೆಟ್‌ಗಳಿಂದ ಹರ್ಮನ್‌ಪ್ರೀತ್ ಕೌರ್ ಸಾರಥ್ಯದ ಪಂಜಾಬ್ ತಂಡಕ್ಕೆ ಸೋಲುಣಿಸಿತು.

ನೆಟ್‌ಬಾಲ್: ರಾಜ್ಯ ತಂಡಗಳಿಗೆ ಸಾಕ್ಷಾತ್, ಶಿವಲೀಲಾ ಸಾರಥ್ಯ

ಬೆಂಗಳೂರು: ಫೆಡರೇಷನ್ ಕಪ್ ಟೂರ್ನಿಗೆ ಕರ್ನಾಟಕ ಪುರುಷ ಮತ್ತು ಮಹಿಳೆಯರ ನೆಟ್‌ಬಾಲ್ ತಂಡಗಳನ್ನು ಪ್ರಕಟಿಸಲಾಗಿದೆ.

ಇದೇ 21ರಿಂದ 24ರವರೆಗೆ ಟೂರ್ನಿಯು ಹರಿಯಾಣದ ಭಿವಾನಿಯಲ್ಲಿ ನಡೆಯಲಿದ್ದು, ರಾಜ್ಯದ ಪುರುಷರ ತಂಡಕ್ಕೆ ಸಾಕ್ಷಾತ್ ಗೌಡ ಮತ್ತು ಮಹಿಳಾ ತಂಡವನ್ನು ಶಿವಲೀಲಾ ಎಸ್. ಅವರು ಮುನ್ನಡೆಸಲಿದ್ದಾರೆ.

ಪುರುಷರ ತಂಡ: ಸಾಕ್ಷಾತ್ ಗೌಡ (ನಾಯಕ), ಮನೋಜ್ ಕೆ. (ಉಪನಾಯಕ), ಅಶ್ವತ್ಥ ನಾಯಕ ಎಂ, ಸುಜನ್, ಆಕಾಶ್ ಎಸ್., ರೋಹಿತ್ ಪಿ ಧುಮಗೊಂಡ, ಪವನ್ ಎಂ, ಶ್ರೇಯಸ್ ಬಿ. ಎಸ್, ಹರ್ಷವರ್ಧನ್ ಜಿ, ವಿನೋದ್ ಕುಮಾರ್ ಬಿ, ಪ್ರಜ್ವಲ್ ಎಸ್, ಅನಿಕೇತ್ ಭೋವಿ. ಕೋಚ್: ರಾಮಕೃಷ್ಣಯ್ಯ ಎನ್.

ಮಹಿಳಾ ತಂಡ: ಶಿವಲೀಲಾ ಎಸ್. (ನಾಯಕಿ), ಗಗನಾ ಕೆ. ಎಸ್. (ಉಪ ನಾಯಕಿ), ಸುರಭಿ ಬಿ.ಆರ್, ದೀಪಾ ಟಿ. ಆರ್, ಎಂ.ಮಹಾಲಕ್ಷ್ಮಿ, ಲಾಯಾ ಕೆ. ಬಿ, ಭಾವನಾ. ಆರ್, ಪ್ರಿಯಾ. ಎಂ, ವಿದ್ಯಾಶ್ರೀ ಜೆ, ಕುಶಲಾ ಎನ್. ಭೂಷಣ್, ಯಶಸ್ವಿನಿ.ಎಂ, ಸಚಿತಾ ಎಸ್. ಎಂ. ಕೋಚ್: ರಂಜಿತಾ ಬಿ ಜೆ.

ಈಜು: ವೇದಾಂತ್‌ಗೆ ಚಿನ್ನ

ನವದೆಹಲಿ: ಈಜುಕೊಳದಲ್ಲಿ ಮತ್ತೊಮ್ಮೆ ಮಿಂಚು ಹರಿಸಿದ ವೇದಾಂತ್, ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ನಡೆಯುತ್ತಿರುವ ಡ್ಯಾನಿಷ್ ಓಪನ್ ಈಜು ಕೂಟದಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದಾರೆ. ಅವರು ನಟ ಆರ್.ಮಾಧವನ್ ಅವರ ಪುತ್ರ.

ಭಾನುವಾರ ರಾತ್ರಿ ನಡೆದ 800 ಮೀಟರ್ಸ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ವೇದಾಂತ್ 8 ನಿಮಿಷ 17.28 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಇದಕ್ಕೂ ಮೊದಲು 1500 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಬೆಳ್ಳಿ ಗಳಿಸಿದ್ದರು. 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯನ್ನೂ ಮಾಡಿದ್ದರು.

16 ವರ್ಷದ ವೇದಾಂತ್ 1500 ಮೀಟರ್ಸ್ ಗುರಿಯನ್ನು 15 ನಿಮಿಷ 57.86 ಸೆಕೆಂಡುಗಳಲ್ಲಿ ತಲುಪಿದ್ದರು. ಮಗನ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ನಟ ಮಾದವನ್ ಸಾಮಾಜಿಕ ಮಾಧ್ಯಮಗಳಲ್ಲಿ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

ವೇದಾಂತ್ ಮಾಧವನ್ –ಟ್ವಿಟರ್ ಚಿತ್ರ

ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿ: ಪ್ರಮೋದ್ ಮೇಲೆ ನಿರೀಕ್ಷೆ

ನವದೆಹಲಿ (ಪಿಟಿಐ): ಪ್ರಮೋದ್ ಭಗತ್ ಮತ್ತು ಸುಕಾಂತ್ ಕದಂ ಸಾವೊ ಪೌಲೊದಲ್ಲಿ ಮಂಗಳವಾರದಿಂದ ನಡೆಯಲಿರುವ ಬ್ರೆಜಿಲ್ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಪರವಾಗಿ ಭರವಸೆ ಮೂಡಿಸಿದ್ದಾರೆ.

ಪ್ರಮೋದ್

ಎರಡು ವರ್ಷಗಳ ನಂತರ ಬಿಡಬ್ಲ್ಯುಎಫ್ ಪ್ಯಾರಾ ಬ್ಯಾಡ್ಮಿಂಟನ್ ಅಂತರರಾಷ್ಟ್ರೀಯ ಲೆವೆಲ್–2 ಟೂರ್ನಿ ನಡೆಯುತ್ತಿದ್ದು ವಿಶ್ವ ಕ್ರಮಾಂಕದ ಒಂದನೇ ಸ್ಥಾನದಲ್ಲಿರುವ ಪ್ರಮೋದ್ ಮತ್ತು ಮೂರನೇ ಕ್ರಮಾಂಕದ ಸುಕಾಂತ್ ಪ್ರಶಸ್ತಿ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಪ್ರಮೋದ್ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಸ್ಪ್ಯಾನಿಷ್ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದ್ದರು. ಸುಕಾಂತ್ ಸ್ಪೇನ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. ಮನೋಜ್ ಸರ್ಕಾರ್, ತರುಣ್ ಧಿಲ್ಲೋನ್, ಪಾರುಲ್ ಪರ್ಮಾರ್, ನಿತೇಶ್ ರಾಣಾ, ಮಾನಸಿ ಜೋಶಿ, ಪಾಲಕ್ ಕೊಹ್ಲಿ ಮತ್ತು ನಿತ್ಯಶ್ರೀ ಮುಂತಾದವರು ಕಣದಲ್ಲಿರುವ ಭಾರತದ ಇತರ ಅಥ್ಲೀಟ್‌ಗಳು.

ಪೆರೆಸ್ ಜೆಪ್ಚಿರ್ಚಿರ್ –ಎಎಫ್‌ಪಿ ಚಿತ್ರ

ಮ್ಯಾರಥಾನ್: ಪೆರೆಸ್‌ಗೆ ಚಾಂಪಿಯನ್

ಬೋಸ್ಟನ್ (ಎಪಿ): ಒಲಿಂಪಿಕ್ ಚಾಂಪಿಯನ್ ಪೆರೆಸ್ ಜೆಪ್ಚಿರ್ಚಿರ್ ಅವರು ಬೋಸ್ಟನ್ ಮ್ಯಾರಥಾನ್‌ನ ಮಹಿಳೆಯರ ವಿಭಾಗದ ಚಾಂಪಿ ಯನ್ ಪಟ್ಟ ತಮ್ಮದಾಗಿಸಿಕೊಂಡರು. ಸೋಮವಾರ ನಡೆದ 50ನೇ ಆವೃತ್ತಿಯ ಮ್ಯಾರಥಾನ್‌ನಲ್ಲಿ ಕೆನ್ಯಾದ 28 ವರ್ಷ ವಯಸ್ಸಿನ ಪೆರೆಸ್ 2 ತಾಸು 21 ನಿಮಿಷ 1 ಸೆಕೆಂಡಿನಲ್ಲಿ ಗುರಿ ತಲುಪಿದರು. ಇಥಿಯೋಪಿಯಾದ ಅಬಾಬೆಲ್ ಯೆಶಾನೆ ಎರಡನೇ ಸ್ಥಾನ ಗಳಿಸಿದರು.

ಪುರುಷರ ವಿಭಾಗದಲ್ಲೂ ಕೆನ್ಯಾ ಪ್ರಶಸ್ತಿ ಗೆದ್ದಿತು. ಇವಾನ್ಸ್ ಚೆಬೆಟ್ 2 ತಾಸು 6 ನಿ.51 ಸೆಕೆಂಡುಗಳಲ್ಲಿ ಗುರಿ ಸೇರಿದರು. ತಾಂಜಾನಿಯಾದ ಗ್ಯಾಬ್ರಿಯೆಲ್ ಗೀ 30 ಸೆಕೆಂಡುಗಳ ಅಂತರದಲ್ಲಿ ಹಿಂದೆ ಉಳಿದು 2ನೇ ಸ್ಥಾನ ಗಳಿಸಿದರು.

ಎಐಟಿಎ ಟೆನಿಸ್: ಅಶ್ವಿನ್ ಶುಭಾರಂಭ

ಬೆಂಗಳೂರು: ಮೂರನೇ ಶ್ರೇಯಾಂಕದ ಕ್ರಿಶ್ ಪೊರ್ವಾಲ್ ಅವರಿಗೆ ಸೋಲುಣಿಸಿದ ಉದ್ಯಾನನಗರಿಯ ಆಟಗಾರ ಅಶ್ವಿನ್ ಶಿವಶಂಕರ್ ಎಐಟಿಎ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು.

ಸೋಮವಾರ ಇಲ್ಲಿ ಆರಂಭವಾದ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಅಶ್ವಿನ್ ಅವರಿಗೆ 6–2, 6–1ರಿಂದ ಗುಜರಾತ್‌ನ ಕ್ರಿಶ್ ವಿರುದ್ಧ ಜಯ ಒಲಿಯಿತು.

ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಕರ್ನಾಟಕದ ಮನದೀಪ್ ರೆಡ್ಡಿ ಕುದುಮಾಲ 6-1, 6-1ರಿಂದ ತಮಿಳುನಾಡಿನ ಪರೀಕ್ಷಿತ್ ವಿರುದ್ಧ, ವಿಷ್ಣು ಬಾಲಚಂದ್ರ 6-2, 6-3ರಿಂದ ದೈವಿಕ್ ಶೆಟ್ಟಿ ವಿರುದ್ಧ, ವಿಶಾಲ್ ವಾಸುದೇವ್ 6-1, 6-3ರಿಂದ ಶೌರ್ಯ ಭಟ್ಟಾಚಾರ್ಯ ಎದುರು ಜಯ ಸಾಧಿಸಿ ಮುನ್ನಡೆದರು.

ಚೇತೇಶ್ವರ್ ಪೂಜಾರ –ಟ್ವಿಟರ್ ಚಿತ್ರ

ಕೌಂಟಿ ಕ್ರಿಕೆಟ್: ಪೂಜಾರ ದ್ವಿಶತಕದ ಸೊಬಗು

ಡರ್ಬಿ (ಪಿಟಿಐ): ಭಾರತ ತಂಡಕ್ಕೆ ಮರಳುವ ತವಕದಲ್ಲಿರುವ ಅನುಭವಿ ಬ್ಯಾಟರ್ ಚೇತೇಶ್ವರ್ ಪೂಜಾರ ಕೌಂಟಿ ಕ್ರಿಕೆಟ್‌ನಲ್ಲಿ ದ್ವಿಶತಕ ಸಿಡಿಸಿದ್ದಾರೆ.

ಸಸೆಕ್ಸ್ ಪರ ಪದಾರ್ಪಣೆ ಮಾಡಿದ ಮೊದಲ ಪಂದ್ಯದಲ್ಲೇ ಡರ್ಬಿಶೈರ್ ಎದುರು ಎರಡನೇ ಇನಿಂಗ್ಸ್‌ನಲ್ಲಿ 387 ಎಸೆತಗಳನ್ನು ಎದುರಿಸಿದ ಅವರು ಔಟಾಗದೆ 201 ರನ್ ಗಳಿಸಿದರು. 23 ಬಾರಿ ಚೆಂಡನ್ನು ಬೌಂಡರಿ ಗೆರೆ ದಾಟಿಸಿದರು. ನಾಯಕ ಟಾಮ್ ಹೇನ್ಸ್ ಹಾಗೂ ಪೂಜಾರ ಮೂರನೇ ವಿಕೆಟ್ ಜೊತೆಯಾಟದಲ್ಲಿ 351 ರನ್ ಗಳಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಪೂಜಾರ 15 ಎಸೆತಗಳನ್ನು ಎದುರಿಸಿ ಕೇವಲ ಆರು ರನ್ ಗಳಿಸಿದ್ದರು.

ಭಾನುವಾರ ಈ ಪಂದ್ಯವು ಡ್ರಾನಲ್ಲಿ ಅಂತ್ಯವಾಯಿತು.

ದಕ್ಷಿಣ ಆಫ್ರಿಕಾದಲ್ಲಿ ನಡೆದ ಸರಣಿಯ ಬಳಿಕ ಭಾರತ ತಂಡದಿಂದ ಪೂಜಾರ ಅವರನ್ನು ಕೈಬಿಡಲಾಗಿತ್ತು. ಭಾರತದಲ್ಲಿ ನಡೆದ ಶ್ರೀಲಂಕಾ ಎದುರಿನ ಸರಣಿಯ ಬಳಿಕ ಅಜಿಂಕ್ಯ ರಹಾನೆ ಅವರನ್ನೂ ತಂಡಕ್ಕೆ ಪರಿಗಣಿಸಿರಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಡರ್ಬಿಶೈರ್ 133 ಓವರ್‌ಗಳಲ್ಲಿ 8ಕ್ಕೆ 505 ಡಿಕ್ಲೇರ್. ಸಸೆಕ್ಸ್: 56.3 ಓವರ್‌ಗಳಲ್ಲಿ 174. ಎರಡನೇ ಇನಿಂಗ್ಸ್: ಸಸೆಕ್ಸ್ (ಫಾಲೋ ಆನ್) 176.1 ಓವರ್‌ಗಳಲ್ಲಿ 513 (ಟಾಮ್ ಹೇನ್ಸ್ 243, ಚೇತೇಶ್ವರ್ ಪೂಜಾರ ಔಟಾಗದೆ 201; ಸ್ಯಾಮ್ ಕೊನರ್ಸ್ 67ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ.